ಕನ್ನಡಿಗರ ಮನೆ ಮನೆಯ ವಾರಪತ್ರಿಕೆ 19-4-92, ರೂ. 4-

ರಾಗಸಂಗಮ



ಈ ವಾರದ
ಸಂಪೂರ್ಣ ಕಾದಂಬರಿ
ಶಾಂತಿ ತೀರ
ಚಕ್ಕಿಲಂ ವಿಜಯಲಕ್ಷ್ಮಿ /
ಎಸ್. ಡಿ. ಕುಮಾರ್

ಕಳೆದ 13 ಸಂಚಿಕೆಗಳಿಂದಲೂ
ದ್ವಿವರ್ಣದಲ್ಲಿ ಮುದ್ರಣವಾಗುತ್ತಿದ್ದ
ನಿಮ್ಮೆಲ್ಲರ ಮೆಚ್ಚುಗೆಯ
ಚಲನಚಿತ್ರ ವಾರಪತ್ರಿಕೆ

ಸಿನಿರೇಖಾ

ಇದೀಗ
14ನೆಯ ಸಂಚಿಕೆಯಿಂದ
ಅಂದರೆ
5–4–1992ರ ಸಂಚಿಕೆಯಿಂದ
ಉತ್ತಮ ಮಟ್ಟದ ಹಾಳೆಯಲ್ಲಿ
ಚತುರ್ವರ್ಣದಲ್ಲಿ
ಮುದ್ರಣವಾದ ಹೊದಿಕೆಯೊಂದಿಗೆ
ಹೊರ ಬೀಳುತ್ತದೆ.
ಡೆಮ್ಮಿ ಆಕಾರದ 12 ಪುಟಗಳು
ಬೆಲೆ ರೂ. 3–00
ಪ್ರತೀ ಶುಕ್ರವಾರದಂದು ಬಿಡುಗಡೆಯಾಗುತ್ತದೆ
ಎಲ್ಲ **'ರಾಗಸಂಗಮ'** ವಿತರಕರಲ್ಲಿ ಲಭ್ಯ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 19-4-92 | ರಾಗ : 8

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ
ಎನ್. ಸುಂದರ್ ರಾಜನ್

ಕಲೆ
ಜೆ...

ಸಂಪಾದಕಿ
ಕಮಲಾ ಸುಂದರ್ ರಾಜನ್

ಮುಖಪುಟ
ರೂಪಾ ಗಂಗೂಲಿ

ಸಹಾಯಕ ಸಂಪಾದಕಿ
ಎಸ್. ರೇಖಾ

ವರ್ಣ ಪಾರದರ್ಶಿಕೆ
ಕೆ. ಪ್ರವೀಣ ನಾಯಕ್

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
13 ಸಂಚಿಕೆಗಳು (3 ತಿಂಗಳು)	ರೂ. 60
ಬಿಡಿ ಪ್ರತಿಯ ಬೆಲೆ	ರೂ. 4.50

ಕಾದಂಬರಿ

ವಿಭಾಗ



చక్కిలం విజయలక్ష్మి

ಸಂಪೂರ್ಣ ಕಾದಂಬರಿ

ಶಾಂತಿ ತೀರ

ತೆಲುಗು ಮೂಲ :
ಚಕ್ಕಿಲಂ ವಿಜಯಲಕ್ಷ್ಮಿ

ಕನ್ನಡಕ್ಕೆ :
ಎಸ್. ಡಿ. ಕುಮಾರ್




ವಸಂತ

"ಮದುವೆಗೆ ಹೋದ ನರೇಂದ್ರ ವಾಪಾಸು ಬರಲಿಲ್ವೆ, ನಿನಗೆ ಮೋಸ ಮಾಡಿದನೆ? ಏನು, ಆತ ಅಪಘಾತಕ್ಕೀಡಾದನೇ? ಮಧೂ, ನೀನು ಬೊಟ್ಟು ಇಡದಿರುವ ಕಾರಣ ಫ್ಯಾಶನ್ ಅಲ್ಲ. ನೀನು..."



ಮಾಧವಿ

"ಈ ದನಿ ಕೇಳಿದಂತಿದೆ. ಸಂಶಯವೇ ಇಲ್ಲ ಇದು ನರೇನ್‌ನದೇ ದನಿ. ಒಬ್ಬರ ದನಿಯಂತೆ ಇನ್ನೊಬ್ಬರದೂ ಇರಬಹುದು. ಆದರೆ ದನಿಯಲ್ಲಷ್ಟೆ ಅಲ್ಲ, ಇವರ ರೂಪಗಳಲ್ಲೂ ಸಾಮ್ಯತೆಯಿದೆಯಲ್ಲ?"



ಶ್ರೀಧರ್

"ಬನ್ನಿ ಹೋಗೋಣ, ವಸಂತಳಿಗೆ ಪ್ರಜ್ಞೆ ಮರುಕಳಿಸುತ್ತಿದೆ. ಅವಳು ಮಾಧವಿಗಾಗಿ ತಾನು ನೋವು ತಿಂದಳು. ಈಗ ನಿಮ್ಮಿಬ್ಬರನ್ನು ನೋಡಿದರೆ ಆ ಜೀವ ನಲಿದೀತು. ನಿಮಗಾಗಿ ಕಾಯ್ತಿದ್ದಾಳೆ ಬನ್ನಿ."

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಒಂದು

ಮಹಡಿಯ ಮೇಲಲ್ಲೋ, ಯಾವುದೋ ಕೆಲಸದಲ್ಲಿ ಮುಳುಗಿದ್ದ ವಸಂತಳಿಗೆ ಗಂಡ ಶ್ರೀಧರನ ಕೂಗು ಕೇಳಿಸುತ್ತದೆ.

"ವಸೂ, ಲೇಯ್ ವಸೂ."

ಗಂಡನ ಕೂಗಿನಲ್ಲಿ ಧ್ವನಿಸಿದ ಉತ್ಸಾಹ ಗಮನಿಸಿ, ಮಾಡುತ್ತಿರುವ ಕೆಲಸ ಬಿಟ್ಟು ಇಪ್ಪತ್ತೆರಡು ಮೆಟ್ಟಲುಗಳನ್ನು ಚಕಚಕನೆ ಇಳಿದು ಬಂದು ಪತಿರಾಯನ ಮುಂದೆ ನಿಲ್ಲುತ್ತಾಳೆ ವಸಂತ.

"ಬಂದು ಎಷ್ಟೊತ್ತಾಯ್ತು?"

ವಸಂತಳ ಸಮೀಪ ಸರಿದು ಅವಳ ಭುಜಗಳ ಮೇಲೆ ಕೈ ಇರಿಸಿ ಅವಳ ಕಣ್ಣುಗಳಲ್ಲಿ ದಿಟ್ಟಿಸುತ್ತಾನೆ ಶ್ರೀಧರ.

"ಹೈದರಾಬಾದ್‌ನಿಂದ ನಿನಗೇನೋ ತರಲಿಕ್ಕೆ ಹೇಳಿದ್ದ ನೆನಪಿದೆಯಾ?"

ಶ್ರೀಧರ್‌ನ ತೋಳುಗಳ ಮೇಲೆ ತನ್ನ ಕೈ ಇರಿಸಿ "ನೀವು ಸೇಫ್ ಆಗಿ ಬಂದ್ರೆ ಸಾಕೂಂತ ಹೇಳ್ದೆ."

"ಕರೆಕ್ಟ್. ಆದರೂ ನಾನು ನಿನಗೇನಾದರೂ ತರ್‍ತೀನಿಂತ ಹೇಳಿದ್ದೆ, ಹೌದಾ?"

"ಹೇಳಿದ್ರಿ, ಕೊಂಡಪಲ್ಲಿ ಗೊಂಬೆಯನ್ನೋ, ಜಪಾನ್ ಗೊಂಬೆಯನ್ನೋ ತಂದಿರ್‍ತೀರಿ."

"ಎರಡೂ ಅಲ್ಲ, ನೀನು ಊಹಿಸಲಾಗದ ದೊಡ್ಡ ಉಡುಗೊರೆಯೊಂದನ್ನು ತಂದಿದ್ದೇನೆ." ವಸಂತಳ ನುಣುಪು ಕೆನ್ನೆಯ ಮೇಲೆ ಚಿಟಕಿ ಹಾಕಿದ ಶ್ರೀಧರ್.

"ನಾನು ಆಶಿಸದಿರುವ ಉಡುಗೊರೆ ನನಗೆಂತಾ ಸಂತೋಷ ಕೊಡುತ್ತೆ ಹೇಳಿ."

"ಬರಿ ಸಂತೋಷ ಕೊಡುತ್ತೋ ಅಥವಾ ಸಂತೋಷದಲ್ಲಿ ಮುಳುಗಿ ಹೋಗ್ತೀಯೋ ಯಾರಿಗೇನು ಗೊತ್ತು."

ಮುಸುಮುಸು ನಗುತ್ತ ಆತುರದಿಂದ ಗಂಡನ ಅಂಗಿಯ ಜೇಬಿನಲ್ಲಿ ತಡಕಾಡುತ್ತಾಳೆ. ಏನೂ ಸಿಗುವುದಿಲ್ಲ ಅವಳಿಗೆ. ಪಕಪಕ ನಕ್ಕುಬಿಟ್ಟ ಶ್ರೀಧರ್.

"ನಾನು ತಂದಿರೋ ಉಡುಗೊರೆ ಈ ಪಾಕೆಟ್‌ನಲ್ಲಿ ಹಿಡಿಸೋಷ್ಟು ಚಿಕ್ಕದಲ್ವೆ ಹುಚ್ಚಿ."

"ಏನು ಹಿಮಾಲಯದಷ್ಟು ದೊಡ್ಡದಾ?"

"ಅಷ್ಟು ದೊಡ್ಡದಲ್ಲ ಗಿಫ್ಟ್." ಮುಖವನ್ನು ಮುಂದಕ್ಕೆ ತಂದ ತುಂಟ ಪತಿದೇವ. "ನಾನು ಕೊಡೋ ಉಡುಗೊರೆಗೆ ನನಗೇನು ಕೊಡ್ತೀ?"

"ತುಂಬಾ ಚೆನ್ನಾಗಿದೆ ನಿಮ್ಮ ಡಿಮ್ಯಾಂಡು, ನನ್ನಲ್ಲೇನಿದೆ ಕೊಡೋಕ್ಕೆ?"

"ಏನಿದೆ ಅಂದ್ರೆ..." ಮಿಂಚಿನ ವೇಗದಲ್ಲಿ ಅವಳ ಗುಲಾಬಿ ಪಕಳೆಯಷ್ಟು ಮೃದುವಾದ ಮುಖವನ್ನು ಅಂಗೈಯಲ್ಲಿ ಹಿಡಿದು, ತುಟಿಗಳಿಗೆ ಗಾಢವಾಗಿ ಚುಂಬಿಸಿದಾಗ, ಅವನಿಂದ ಬಿಡಿಸಿಕೊಂಡು ನಸುಗೋಪ ತೋರಿದಳು ವಸಂತ.

"ಛೀ ಛೀ ತುಂಟಾಟಕ್ಕೊಂದು ವೇಳೆಗೀಳೆ ಇಲ್ವಾ?"

"ಇಟ್ಸ್ ಆಲ್‌ರೈಟ್ ವಸು" ಎಂದು ಬಾಗಿಲತ್ತ ತಿರುಗಿ ಮೆಲ್ಲಗೆ ಚಪ್ಪಾಳೆ ತಟ್ಟಿದ ಶ್ರೀಧರ. ಅವನು ಸಿಗ್ನಲ್ ಕೇಳಿಸುವವರೆಗೂ ಬಾಗಿಲಾಚೆ ನಿಂತಿದ್ದ ಮಾಧವಿ ಈಗ ನಿಧಾನವಾಗಿ ಹೊಸ್ತಿಲು ದಾಟಿ ಒಳಗೆ ಬಂದಳು. ಕ್ಷಣ ಕಾಲ ವಿಸ್ಮಯ, ವಸಂತಳಿಗೆ. ಆಮೇಲೆ ಮುಂದಕ್ಕೆ ಧಾವಿಸಿ ಮಾಧವಿಯನ್ನು ತಬ್ಬಿಕೊಂಡು "ಚೆನ್ನಾಗಿದ್ದೀಯ ಮಧೂ?"

ವಸಂತಳಿಗೆ ಆನಂದವನ್ನು ಅದುಮಿಡಲಾಗುತ್ತಿಲ್ಲ. ಇದನ್ನು ಗಮನಿಸಿದ ಶ್ರೀಧರ. "ನನ್ ತಂಗೀನ ಒಳಕ್ಕೆ ಕರ್‍ಕೊಂಡು ಹೋಗ್ತೀಯೋ ಅಥವಾ ಅವಳು ನಾನೇ ಅನ್ನೋ ಭ್ರಮೇಲಿ..."

"ನೀವು ಸುಮ್ನೆ ಇರೀಂದ್ರೆ." ಗಂಡನತ್ತ ಮತ್ತೆ ನಸುಕೋಪ ಬೀರುತ್ತಾಳೆ ವಸಂತ.

"ಹೇಗಿದೆ ನನ್ನ ಉಡುಗೊರೆ?" ಹೆಂಡ್ತಿಯ ಸೊಂಟ ತಿವಿದ ತುಂಟ ಗಂಡ. ಉತ್ತರಿಸಲಿಲ್ಲ ಮೆಚ್ಚುಗೆಯ ನೋಟ ಬೀರಿದಳು. ಕೆಲವೊಮ್ಮೆ ಮಾತಿಗಿಂತ ಭಾವ ಪ್ರಕಟಣೆ ಹೆಚ್ಚು ಪರಿಣಾಮಕಾರಿಯಾಗಿ ಅಭಿಪ್ರಾಯ ಮೂಡಿಸುತ್ತದೆ.

ಹೆಂಡ್ತಿಯ ಮುಖದಲ್ಲಿ ತುಳುಕಾಡುವ ದೀಪ್ತಿಯನ್ನು ಗಮನಿಸಿ ಶ್ರೀಧರನೂ ಖುಶಿಗೊಳ್ಳುತ್ತಾನೆ. ತಾನು ಮಾಡಿದ್ದು ಸರಿಯಾದ ಕೆಲಸವೇ ಎನ್ನಿಸಿತು.

"ಸಂತೋಷದಲ್ಲಿ ನಿನ್ ಗಂಡನ್ನ ವಿಚಾರಿಸಿಕೊಳ್ಳೋಕ್ಕೆ ಮರೀಬೇಡ. ಸ್ನಾನ, ಪಾನಗಳನ್ನು ಮರೆತುಬಿಡಬೇಡ." ಮಹಡಿ ಪಾವಟಿಗೆಗಳತ್ತ ನಡೆದ ಶ್ರೀಧರ್ ಗಂಡ ಹೋದ ಮೇಲೆ ವಸಂತಳಿಗೆ ತಾನಿಲ್ಲಿಯವರೆವಿಗೂ ಮಾಧವಿ ಇಲ್ಲಿದ್ದಾಳಲ್ಲ ಎಂದು ಮರೆತು ಶ್ರೀಧರ್‌ನೊಂದಿಗೇ ಮಾತಾಡ್ತಿದ್ದೆ ಎನ್ನುವುದು ಗಮನಕ್ಕೆ ಬಂದು ನೊಂದುಕೊಂಡಳು.

ಅವನತಮುಖಿಯಾಗಿ ಮೌನದ ಶಿಖರ ಹೊತ್ತು ನಿಂತಿರುವ ಮಾಧವಿಯ ಕೈ ಹಿಡಿದು, ಹಾಲಿಗೆ ಕರೆದೊಯ್ದು ಸೋಫಾದ ಮೇಲೆ ಕೂರಿಸಿದಳು. ಪಕ್ಕದಲ್ಲಿ ಕುಳಿತಳು. ಆದರೂ ಮಾಧವಿ ತುಟಿ ಒಡೆಯಲಿಲ್ಲ. ವಸಂತಳ ಕಡೆಗೂ ದೃಷ್ಟಿ ಹಾಯಿಸಲಿಲ್ಲ. ನೆಲವನ್ನೇ ನೋಡುತ್ತ ಕುಳಿತಳು. ಯಾವ ಗಹನ ಯೋಚನೆ?

ಮೂರು ವರ್ಷಗಳ ಹಿಂದಿನ ಮಾಧವಿಗೂ, ಇಂದಿನ ಮಾಧವಿಗೂ ಯಾವ ವ್ಯತ್ಯಾಸವೂ ಇಲ್ಲ. ಅದೇ ಮುಗ್ಧತ್ವ, ಮೃದುತ್ವ. ಚೆಲುವು ಹಿಂದಿಗಿಂತ ದ್ವಿಗುಣಗೊಂಡಿದೆ. ಆದರೆ ಸ್ಪಷ್ಟವಾಗಿ ಗೋಚರವಾಗುತ್ತಿರುವ ವ್ಯತ್ಯಾಸಗಳೆಂದರೆರೆ ತುಂಟ ಮೀನಿನಂತೆ ಎಗರಿ ಕುಣಿವ ಆಕೆಯ ನಯನಗಳು ಭಾರದಿಂದ ವಾಲಿಕೊಂಡಿರುವುದು. ಎಳೆ ಗುಲಾಬಿ ಬಣ್ಣದ ಕೆನ್ನೆಗಳು ಕೆಂಪಡರಿದ್ದರೆ ಸುಕ್ಕಾಗದ ಮಂದಹಾಸದಿಂದ ನಳನಳಿಸುತ್ತಿದ ಕಡುಗೆಂಪು ತುಟಿಗಳಲ್ಲಿ ಅಸ್ಪಷ್ಟ ಕಂಪನ, ಮುಖದಲ್ಲಿ ಅವ್ಯಕ್ತ ನೋವೊಂದು ಛಾಪು ಮೂಡಿಸಿದೆ. ಯಾಕೆ ಹೀಗೆ?

ಕೆಲವರ್ಷಗಳಿಂದ ತನ್ನೊಂದಿಗೆ ಅತ್ಯಂತ ಆತ್ಮೀಯ ಸಂಬಂಧವಿಟ್ಟುಕೊಂಡಿರುವ ಮಾಧವಿಯಲ್ಲಿ ಯಾಕಿಷ್ಟು ಹಠಾತ್ ಬದಲಾವಣೆ? ಗಲಗಲ ತೊರೆ ಮೂರ್ತಿವೆತ್ತಂತೆ ಸದಾ ಹಸನ್ಮುಖಿಯಾಗಿದ್ದು ಎಲ್ಲರನ್ನೂ ನಗಿಸುತ್ತಿದ್ದ ಮಾಧವಿ ಇವಳೇನಾ, ಲಕ್ಷಾಂತರ ಹೆಣ್ಣುಗಳಲ್ಲಿ ಒಬ್ಬಳಿಗೆ ಮಾತ್ರ ಅಪರೂಪವಾಗಿ ದೊರಕುವ ಅದ್ಭುತ ಸೌಂದರ್ಯ ಮಾಧವಿಯದು. ಅದಕ್ಕೆ ಜೊತೆಯಾಗಿ ಕಲ್ಮಶರಹಿತ ವ್ಯಕ್ತಿತ್ವ. ಅಂಥವಳು ಯಾಕೆ ಹೀಗಾದಳು?

ವಸಂತಳ ಕಾಳಜಿ ಮಿಳಿತ ಯೋಚನೆ ಕಡಿದದ್ದು ಕೆಲಸದ ಹುಡುಗಿ ಲಕ್ಷ್ಮಿಯ ಧ್ವನಿ ಕೇಳಿಸಿದಾಗ "ಸ್ನಾನಕ್ಕೆ ನೀರು ರೆಡಿಯಾಗೈತೆ ಅಮ್ಮೋರೆ."

"ಸ್ನಾನ ಮಾಡ್ತೀಯ ಮಧೂ." ಮಾಧವಿಯನ್ನು ಸ್ನಾನದ ಕೋಣೆಗೆ ಕಳಿಸಿ, ಮಹಡಿಯತ್ತ ಸರಸರ ಹೆಜ್ಜೆ ಹಾಕುತ್ತಾಳೆ ವಸಂತ. ಪ್ರಯಾಣದ ಆಯಾಸದಿಂದಲೇ ಇರಬೇಕು, ಬಟ್ಟೆ ಕೂಡ ಬದಲಾಯಿಸದೆ ತಲೆಯ ಕೆಳಗೆ ಎರಡೂ ಕೈ ಇಟ್ಟುಕೊಂಡು ಛಾವಣಿಯನ್ನು ನೋಡುತ್ತ ಮಲಗಿದ್ದ ಶ್ರೀಧರನ ಪಕ್ಕದಲ್ಲಿ ಕುಳಿತಳು ಹಲವು ಅನುಮಾನಗಳನ್ನು ತಲೆಯಲ್ಲಿ ತುಂಬಿಕೊಂಡ ವಸಂತ.

"ಮಾಧವಿ..." ಅನುಮಾನ ಪೂರ್ಣಗೊಳ್ಳಲಿಲ್ಲ. ಹೆಸರಿಗಷ್ಟೇ ನಿಂತು ಹೋದಾಗ ಶ್ರೀಧರ್ ಎದ್ದು ಕುಳಿತು ಕೇಳಿದ.

"ಅವಳನ್ನ ಏನಾದರೂ ಕೇಳಿದ್ಯಾ?"

"ಇಲ್ಲ."

"ನನಗ್ಗೊತ್ತಿದೆ, ನೀನು ಆತುರಪಡೋದಿಲ್ಲಾಂತ."

ಶ್ರೀಧರನ ಸಮಾಧಾನ ಅವಳಿಗೆ ತೃಪ್ತಿ ತರಲಿಲ್ಲ. ಮತ್ತೆ ಪ್ರಶ್ನಾರ್ಥಕವಾಗಿ ನೋಡಿದಳು.

"ನಿನ್ನೆಲ್ಲ ಅನುಮಾನಗಳಿಗೆ ಆಮೇಲೆ ನಾನು ಸಮಾಧಾನ ಕೊಡ್ತೇನೆ." ಕಿರುನಕ್ಕ ಶ್ರೀಧರ. "ಮೊದಲು ಹೋಗಿ ಮಾಧವೀನ ವಿಚಾರಿಸಿಕೊ. ಪಾಪ ಅವಳು ತನ್ನ ಜೊತೇಲಿ ಬಟ್ಟೆಬರೆ ತಂದ ಹಾಗಿಲ್ಲ. ಸದ್ಯಕ್ಕೆ ನಿನ್ನ ಬಟ್ಟೆ ಕೊಡು."

"ಅದು ನನಗೂ ಗೊತ್ತಿದೆ ಬಿಡಿ. ಆದರೆ ಅವಳ ವಿಷಯ ಏನೂಂತಲೇ ಅರ್ಥವಾಗ್ತಿಲ್ಲವಲ್ಲ."

"ನನಗೂ ಸರಿಯಾಗಿ ಗೊತ್ತಾಗ್ತಿಲ್ಲ. ಆದರೆ ಅವಳನ್ನು ಏನೋ ಹಿಂಸೆ ಮಾಡ್ತಿದೆ. ತುಂಬ ದುಃಖದಲ್ಲಿದ್ದಾಳೆ ಅನ್ನೋದನ್ನ ಮಾತ್ರ ನಾನು ಗ್ರಹಿಸಿದ್ದೇನೆ. ಬಹುಶಾ ನೀನೂ ಅದನ್ನು ಗಮನಿಸಿರುತ್ತಿ. ಸತ್ಯ ಏನೂಂತ ಗೊತ್ತಾಗೋವರೆಗೂ ಅವಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು ನಾವು. ಸಾವಿರ ಕಣ್ಣುಗಳಿಂದ ಕಾಪಾಡಿಕೊಳ್ಳೋಣ." ಹಾಸಿಗೆ ಇಳಿದು ಉಡುಪು ಬದಲಾಯಿಸಿಕೊಳ್ಳತೊಡಗಿದ ಶ್ರೀಧರ.

ಗೊಂದಲದ ಸ್ಥಿತಿಯಲ್ಲೇ ಕೆಳಗಿಳಿದು ಬಂದಳು ವಸಂತ.

ಅವತ್ತು ರಾತ್ರಿ ತಮ್ಮ ಕೋಣೆಯಲ್ಲೇ ಮಾಧವಿಗೂ ಹಾಸಿಗೆ ಹಾಸಿದಾಗ ನಕ್ಕು ಹೇಳುತ್ತಾಳೆ ಮಾಧವಿ "ನಾನು ಹಾಲ್‌ನಲ್ಲೇ ಮಲಗ್ತೇನೆ ವಸೂ." ಆ ಮನೆಗೆ ಬಂದ ಮೇಲೆ ಮಾಧವಿ ಆಡಿದ ಮೊದಲ ಮಾತದು.

ಸಮಾಧಾನಿಸದೆ ನಕ್ಕು ಶ್ರೀಧರನ ಕೋಣೆಗೆ ಹೋದಳು ವಸಂತ. ಅವಳಿಗಾಗಿಯೇ ಕಾಯುತ್ತಿದ್ದ ಶ್ರೀಧರ ಅವಳನ್ನು ಅಪ್ಪಿಕೊಂಡು "ಮಹಾರಾಣಿಗೆ ಈಗ ಸಿಗ್ತಾ ಬಿಡುವು?"

ಅನ್ಯಮನಸ್ಕಳಾಗುತ್ತಾಳೆ ವಸಂತ "ಮಾಧವಿನ ನೋಡ್ತಿದ್ರೆ ನನಗೆ ಕರುಳು ಹಿಂಡಿದ ಹಾಗಾಗುತ್ತದೆ."

"ನನಗೂ ಅಷ್ಟೇ ವಸೂ" ಎಂದು ಹೇಳಿದ ಶ್ರೀಧರ.

"ರೈಲಿನಲ್ಲಿ ವಾಪಾಸು ಬರುವಾಗ ನಾನು ಮೆಡಿಕಲ್ ಜರ್ನಲ್ ಓದುತ್ತ ಕುಳಿತಿದ್ದೆ. ಯಾವುದೋ ನಿಲ್ದಾಣದಲ್ಲಿ ಎರಡು ನಿಮಿಷ ನಿಂತು ಮತ್ತೆ ರೈಲು ಹೊರಟಾಗ ಕತ್ತೆತ್ತಿದೆ. ನನ್ನೆದುರು ತಲೆತಗ್ಗಿಸಿ ಕುಳಿತಿದ್ದಳು ಒಬ್ಬಳು. ತಲೆತುಂಬ ಸೆರಗು ಹೊದೆದುಕೊಂಡಿದ್ದಳು. ಅವಳುಟ್ಟಿದ್ದ ಕಪ್ಪು ಸೀರೆಯ ಮರೆಯಲ್ಲಿದ್ದ ಚಂದ್ರಬಿಂಬದಂತಾ ಅವಳ ಮುಖದಲ್ಲಿ ಕವಿದಿದ್ದ ನಿರಾಸೆಯನ್ನು ನಾನು ಗಮನಿಸಿದೆ. ಜೊತೆಗ್ಯಾರೂ ಇಲ್ಲದೆ, ಸಾಮಾನು ಸರಂಜಾಮು ಕೂಡ ಇಲ್ಲದೆ ಎಲ್ಲಿಗೆ ಪಯಣಿಸುತ್ತಿದ್ದಾಳೋ. ಕುತೂಹಲದಿಂದ ಅವಳನ್ನೇ ಗಮನಿಸುತ್ತ ಕುಳಿತಾಗ ಇದ್ದಕ್ಕಿದಂತೆ ಅವಳ ಮುಖದ ಮೇಲಿನ ಸೆರಗು ಜಾರಿ ಅವಳ ಮುಖ ತುಸು ಕಂಡಿತು. ಅವಳು ಮಾಧವಿ! ಇದು ಸಾಧ್ಯವೇ ಇವಳು ನನ್ನ ತಂಗಿ ಮಾಧವಿ ಎಂಬುದನ್ನು ಯಾಕೋ ನನ್ನ ಅಂತರಾಳ ಒಪ್ಪಲಿಲ್ಲ.

"ಅಷ್ಟರಲ್ಲಿ ಇನ್ನೊಂದು ಅನುಮಾನ ಬಂತು. ಒಂದೇ ರೂಪಿನ ಇಬ್ಬರಿರುವುದು ಸಾಧ್ಯವಿದೆಯೆ? ಗೊಂದಲದಲ್ಲಿ ಬಿದ್ದೆ. ಆಗಲೇ ಟಿ. ಸಿ. ಬಂದ ನನ್ನ ಕಂಪಾರ್ಟ್‌ಮೆಂಟಿಗೆ. ಮೊದಲು ಆ ಹೆಣ್ಣಿನ ಹತ್ತಿರ ಹೋಗಿ ಟಿಕೆಟ್ ಕೊಡಿ ಎಂದು ಕೇಳಿದ. ಅವಳು ಉತ್ತರ ಕೊಡಲಿಲ್ಲ. ಮತ್ತೆ ಮತ್ತೆ ಕೇಳಿದ ಟಿ. ಸಿ. ಅವಳಿಂದ ಯಾವ ಉತ್ತರವೂ ಬಾರದಿದ್ದಾಗ, ಬೇಸರದಿಂದ ಗದರಿಕೊಂಡ. ಪಾಪ ಆ ಹುಡುಗಿಯ ಹತ್ತಿರ ದುಡ್ಡಿಲ್ಲ ಎಂಬುದನ್ನು ಗ್ರಹಿಸಿದ ನಾನು ನನ್ನ ಪ್ಯಾಕೆಟ್‌ನಿಂದ ದುಡ್ಡು ತೆಗೆದು ಟಿ. ಸಿ.ಯ ಕೈಗೆ ಕೊಟ್ಟೆ ಆ ಹುಡುಗಿಯ ಮುಖವನ್ನು, ನನ್ನ ಮುಖವನ್ನು ಅಚ್ಚರಿಯಿಂದ ನೋಡಿದ ಟಿ. ಸಿ. ಮತ್ತವಳನ್ನು ಕೇಳಿದ 'ಎಲ್ಲಿಗೆ ಹೋಗಬೇಕು' ಅಂತ. ಅದಕ್ಕೂ ಉತ್ತರಿಸಲಿಲ್ಲ ತಲೆ



ಬಾಗಿಸಿದವಳು. ಕೊನೆಗೆ ನಾನೇ ಧೈರ್ಯ ಮಾಡಿ ಈ ಊರಿನ ಹೆಸರು ಹೇಳಿದೆ. ನನ್ನ ಧ್ವನಿ ಕೇಳಿ ತಟ್ಟನೆ ಕತ್ತೆತ್ತಿ ನನ್ನ ಮುಖ ನೋಡಿ ಮತ್ತೆ ತಲೆ ಬಾಗಿಸಿಕೊಂಡಳು. ಆ ಕ್ಷಣಾರ್ಧದಲ್ಲಿ ಕೆಳಗುರುಳಲು ಸಿದ್ಧವಾದ ಕಣ್ಣಿಳ ಕಂಬನಿಯನ್ನು, ಮುಖದಲ್ಲಿ ಅಚ್ಚರಿಯನ್ನೂ ನೋಡಿದೆ ನಾನು. ನಿಸ್ಸಂದೇಹವಾಗಿ ಇವಳು ಮಾಧವೀನೆ ಅಂತ ಅನ್ನಿಸಿತು. ಟಿ. ಸಿ. ತನ್ನ ಕರ್ತವ್ಯ ಮುಗಿಸಿ ಹೊರಟುಹೋದಮೇಲೆ ನನ್ನ ಆತಂಕ ಹತ್ತಿಕ್ಕಲಾಗದೆ 'ಮಾಧವಿ' ಅಂತ ಕರೆದೆ. ಅವಳು 'ಅಣ್ಣ' ಅಂತ ಮಾತ್ರ ಹೇಳಿ ಸುಮ್ಮನಾಗಿಬಿಟ್ಟಳು. ಅವಳನ್ನು ಮತ್ತೆ ನಾನೇನೂ ಕೇಳಲಿಲ್ಲ. ಯಾಕೆಂದರೆ ಅವಳ ಮೌನ, ಆ ಗಾಂಭೀರ್ಯ ನನ್ನನ್ನು ದಂಗು ಬಡಿಸಿತು. ಅವಳನ್ನು ಏನೂ ಕೇಳದೆ ಇಲ್ಲಿಗೆ ಕರೆದುಕೊಂಡು ಬಂದೆ.''

ಶ್ರೀಧರ್ ಹೇಳಿ ಮುಗಿಸಿದಾಗ ವಸಂತ ಯೋಚನಾ ಮಗ್ನಳಾಗಿಬಿಟ್ಟಿದ್ದಳು.

''ಏನೇ ವಸೂ ಯೋಚಿಸುತ್ತಿದ್ದೀಯ?''

''ಮಾಧವಿ ಬಗ್ಗೇನೆ.''

''ಅವಳ ಮನೇಲಿ ಅವಳಿಗೆ ಏನಾದರೂ ಅಂದಿದ್ದಾರೋ ಏನೋ?''

''ಹಾಗಾಗಿರಲಿಕ್ಕಿಲ್ಲ. ಮಾಧವಿ ಅಂದ್ರೆ ಅವರ ಮನೇಲಿ ಎಲ್ಲರಿಗೂ ತುಂಬಾ ಪ್ರೀತಿ. ಅವಳನ್ನು ಯಾವತ್ತೂ ಬಯ್ದದ್ದಿಲ್ಲ. ಮನೇಲಿ ಬಯ್ಸಿಕೊಂಡು ಮನೆ ಬಿಟ್ಟು ಬರೋಷ್ಟು ತಪ್ಪು ಕೆಲಸ ಮಾಡುವಂಥವಳಲ್ಲ ಮಾಧವಿ.''

''ಬಹುಶಾ ಲವ್‌ಗಿವ್ ವ್ಯವಹಾರವೇನಾದರೂ...'' ತುಟಿಯಂಚಿನಲ್ಲಿ ನಕ್ಕ ಶ್ರೀಧರ್.

ಕಿರುಕೋಪ ತೋರಿದಳು ವಸಂತ. ''ಅವಳೇನು ಪುಕ್ಕಲು ಹುಡುಗಿಯಲ್ಲ ಮನೆಬಿಟ್ಟು ಬರೋಕ್ಕೆ. ಒಂದು ವೇಳೆ ಯಾರನ್ನಾದರೂ ಪ್ರೀತಿಸಿಗೀತಿಸಿ ಇದ್ದಿದ್ದರೆ, ಪ್ರೀತಿಸಿದವನನ್ನು ಮದುವೆಯಾಗ್ತಿದ್ದಳೇ ಹೊರತು ಹೀಗೆ ಮನೆಬಿಟ್ಟು ಬರ್ತಿರಲಿಲ್ಲ.''

''ಹಾಗಾದರೆ ಮಾಧವಿಯದು ಜಸ್ಟ್ ಜಾಲಿ ಟ್ರಿಪ್ ಅಂತ ಅಂದುಕೊಳ್ಳಬೇಕೇನು?''

ವಸಂತಳಿಂದ ಉತ್ತರವಿಲ್ಲ. ಅಸಹಾಯಕಳಂತೆ ಇದ್ದುಬಿಡುತ್ತಾಳೆ.

''ಒಂದಂತೂ ನಿಜ ವಸೂ, ಮನೇಲಿ ಏನೂ ಆಗದೆ ಯಾಕೆ ಮನೆಬಿಟ್ಟು ಬರ್ತಿದ್ಲು? ನಿಧಾನವಾಗಿ ತಿಳುಕೊಂಡು ಅವಳನ್ನು ಮತ್ತೆ ಮನೆಗೆ ಸೇರಿಸೋಣ. ಮಾಧವಿ ಕೇವಲ ನಿನ್ನ ಗೆಳತಿಯಷ್ಟೇ ಅಲ್ಲ, ನನ್ನ ತಂಗಿ ಕೂಡ.''

''ನನ್ನ ಗೆಳತಿ ಅಂದ್ರೆ ನಿಮಗ್ಯಾಕೆ ಇಷ್ಟು ಅಭಿಮಾನ?'' ಗಂಡನ ಕೊರಳನ್ನು ಬಳಸಿದಳು ವಸಂತ.

''ನಾನು ಮತ್ತೆ ಹೇಳಬೇಕಾ?'' ವಸಂತಳ ಮುಖವನ್ನು ಎತ್ತಿ ಹಿಡಿದು ಅಂದ ಶ್ರೀಧರ್. ''ಅವಳು ಬರೀ ನಿನ್ನ ತಂಗಿಯಷ್ಟೇ ಅಲ್ಲ, ನನ್ನ ತಂಗಿ.'' ಹೇಳಿ ಮತ್ತೆ ಅವಳ ತುಟಿಗಳಿಗೆ ಒತ್ತಿ ಬಿಟ್ಟ ಗಾಢ ಚುಂಬನ ಮುದ್ರೆಯನ್ನು.

ಆದರೆ ವಸಂತ ಹಾಸಿಗೆ ಇಳಿದು ಬಿಡುತ್ತಾಳೆ. ''ಐಯಾಂ ಸಾರಿ, ಇವತ್ತು ನಿಮಗೆ ವಿರಹ ಗೀತೆಯೇ ಗಟ್ಟಿ. ನಾಳೆಯಿಂದ ಡ್ಯೂಯೆಟ್ ಹಾಡೋಣ.''

* * * * *

ವಸಂತ ಹಾಲ್‌ಗೆ ಬಂದಾಗ ಹಾಲಿನಲ್ಲಿ ಹಾಸಿರುವ ಹಾಸಿಗೆಯ ಮೇಲೆ ಮಲಗಿ ಸೂರನ್ನೇ ದಿಟ್ಟಿಸುತ್ತಿದ್ದಾಳೆ ಮಾಧವಿ. ತನ್ನ ಪಕ್ಕದಲ್ಲಿ ಬಂದು ನಿಂತ ವಸಂತಳ ಕೈ ಹಿಡಿದು 'ಬಾ ವಸೂ' ಎಂದು ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾಳೆ. ತನ್ನ ಅಂತರಾಳದ ತಳಮಳವನ್ನು ಹೊರ ಹಾಕಲಾಗದೆ ಚಡಪಡಿಸುತ್ತಿರುವ ಮಾಧವಿಯನ್ನು ಕೂಡಲೇ ಏನೂ ಕೇಳಬಾರದೆಂದುಕೊಂಡು ಅವಳ ಅಂಗೈಯನ್ನು ತನ್ನ ಕೈಲಿಟ್ಟುಕೊಂಡು ''ಮನೇಲಿ ಎಲ್ಲರೂ ಆರೋಗ್ಯವಾಗಿದ್ದಾರಾ ಮಾಧೂ?''

ಮಾಧವಿಯ ಮುಖ ಕಪ್ಪಿಟ್ಟಿತೊಂದುಕ್ಷಣ. ''ಆರೋಗ್ಯವಾಗಿದ್ದಾರೆ.'' ಒಣ ನಗೆ ನಕ್ಕಳು.

"ಎಲ್ಲರನ್ನೂ ನೋಡಿ ತುಂಬ ದಿನಗಳಾಗಿವೆ. ನನ್ನ ಮದುವೆಯಾಗುತ್ತಲೇ ಅಪ್ಪನಿಗೆ ಟ್ರಾನ್ಸ್‌ಫರ್ ಆದುದರಿಂದ ನಾನು ಮತ್ತೆ ಆ ಕಡೆ ಬರಲಾಗಲಿಲ್ಲ. ಅಂದ ಹಾಗೆ ನಮ್ಮ ಫ್ರೆಂಡ್ಸ್ ಎಲ್ಲರೂ ಹೇಗಿದ್ದಾರೆ? ನಮ್ಮ ಜಿಗ್ರಿ ದೋಸ್ತ್ ಟುನ್‌ಟುನ್‌ಗೆ ಮದುವೆ ಆಯ್ತಾ?''

ಕ್ರಮೇಣ ಅವರಿಬ್ಬರ ಸಂಭಾಷಣೆ ಅವರ ಬಾಲ್ಯದತ್ತ, ಗೆಳತಿಯರ ಬಗೆಗೆ, ಕಾಲೇಜು ಜೀವನದತ್ತ ಸರಿಯಿತು.

*   *   *   *   *

ಮರುದಿನ ಮಧ್ಯರಾತ್ರಿ ಶ್ರೀಧರ ಅಪ್ರಯತ್ನವಾಗಿ ತನ್ನ ಪಕ್ಕದಲ್ಲಿ ಮಲಗಿರುವ ವಸಂತಳ ಮೇಲೆ ಎಡಗೈ ಹಾಕಲು ಹೋದಾಗ ಅಲ್ಲಿ ಅವಳಿಲ್ಲದಿರುವುದನ್ನು ನೋಡಿ ಕಣ್ಣು ತೆರೆದು ಕೋಣೆಯಲ್ಲಿ ಕಣ್ಣಾಡಿಸುತ್ತಾನೆ. ವಸಂತ ಕಿಟಕಿಯ ಮುಂದೆ ನಿಂತಿದ್ದಾಳೆ.

ಹಾಸಿಗೆ ಇಳಿದು ಕಿಟಕಿಯತ್ತ ಹೆಜ್ಜೆ ಹಾಕುತ್ತಾನೆ. ಕಿಟಕಿಯ ಸರಳು ಹಿಡಿದು ತೋಟದತ್ತ ನೋಡುತ್ತಿರುವ ವಸಂತ ತನ್ನ ಭುಜದ ಮೇಲೆ ಗಂಡನ ಮೃದು ಸ್ಪರ್ಶ ತಾಗಿದಾಗ ಗಂಡನಿಗೆ ತೋಟದತ್ತ ನೋಟ ಹರಿಸುವಂತೆ ಹೇಳುತ್ತಾಳೆ ಪಿಸುದನಿಯಲ್ಲಿ.

ಹೊರಗೆ ಮಲ್ಲಿಗೆ, ಜಾಜಿ, ಗುಲಾಬಿಗಳ ಪುಟ್ಟ ಕೈದೋಟ. ಅಲ್ಲಲ್ಲಿ ಜೀರುಂಡೆಗಳ ಶಬ್ದ ಮೌನಭೇದಿಯಂತೆ. ಎಲ್ಲವನ್ನೂ ತನ್ನ ಆಹ್ಲಾದತ್ವದಿಂದ ತೋಯಿಸುತ್ತಿರುವ ಬೆಳದಿಂಗಳು. ಕೈದೋಟದ ನಡುವೆ ಪುಟ್ಟ ಬೆಂಚೊಂದರ ಮೇಲೆ ಕುಳಿತಿರುವ ಮಾಧವಿಯ ನೋಟ ಶೂನ್ಯದತ್ತ ನೆಟ್ಟಿತ್ತು. ಕೆದರು ಕೂದಲು, ಸ್ಥಾನಪಲ್ಲಟಗೊಂಡ ಸೆರಗು. ವಾಸ್ತವದ ಪ್ರಜ್ಞೆ ಇರಲಿಲ್ಲ ಅವಳಿಗೆ. ಬೆಳದಿಂಗಳ ಬೆಳಕಲ್ಲಿ ಇನ್ನೂ ಒಂದನ್ನು ನಿಚ್ಚಳವಾಗಿ ನೋಡುತ್ತಾರೆ ಮಾಧವಿ, ಶ್ರೀಧರ್. ಅದು ಮಾಧವಿಯ ಕಣ್ಣುಗಳಿಂದ ಕೋಡಿಯಾಗುತ್ತಿರುವ ಕಂಬನಿ.

*   *   *   *   *

ಅವತ್ತಿಗೆ ಮಾಧವಿ ಆ ಮನೆಗೆ ಬಂದು ಸರಿಯಾಗಿ ಒಂದು ವಾರ. ವಸಂತಳಿಗೊಂದು ಅನುಮಾನ. ಅದನ್ನು ಗಂಡನ ಮುಂದೆ ತೋಡಿಕೊಂಡಳು "ಮಾಧೂನ ಮನಸ್ಸಿನಲ್ಲಷ್ಟೇ ಅಲ್ಲದೆ ದೇಹದಲ್ಲೂ ಕೊಂಚ ನನಗೇನೋ ಬದಲಾವಣೆ ಕಾಣ್ತಿದೆ.''

ಈ ವಿಷಯ ತನಗೆ ಮೊದಲೇ ತಿಳಿದಿತ್ತು ಎಂಬಂತೆ ನಸುನಕ್ಕ ಶ್ರೀಧರ್. "ಹೆಣ್ಣಾಗಿ ನೀನು ಅಷ್ಟು ಗ್ರಹಿಸಲಿಲ್ವಾ, ಆದರೂ ನೀನು ನೋಡುವ ದೃಷ್ಟಿ ಬೇರೆ, ನಾನು ನೋಡುವ ದೃಷ್ಟಿಯೇ ಬೇರೆ. ಆದುದರಿಂದ ನಿನಗೆ ನನ್ನ ರೀತಿ ವೈಜ್ಞಾನಿಕ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ.''

"ಎಷ್ಟಾದರೂ ನೀವು ಡಾಕ್ಟರ್ ಅಲ್ವೇ ಹೇಳಿ.''

"ಆಕೆಯ ದೇಹದಲ್ಲಾಗ್ತಿರೋ ಬದಲಾವಣೇನ ಗಮನಿಸಿದರೆ ನನಗನ್ನಿಸೋದಿಷ್ಟೇ, ಅವಳು ಗರ್ಭಿಣಿ.''

"ಓ ಗಾಡ್!'' ದಿಗ್ಮೂಢಳಾಗಿಬಿಟ್ಟಳು ವಸಂತ. "ನೀವು ನೀವು... ಏ... ನು ಹೇಳ್ತಿದ್ದೀರಿ?''

"ಗೊತ್ತಿದೆ. ಮಾಧವಿ ಈಗ ಗರ್ಭಿಣಿ!'' ದೃಢದನಿಯಲ್ಲಿ ಹೇಳಿದ.

ವಸಂತಳ ಮುಖ ಬಿಳುಚಿಕೊಂಡಿತು. ಮತ್ತೆ ಮಾತು ಹೊರಡಲಿಲ್ಲ ಅವಳ ಬಾಯಿಂದ. ಈ ಸ್ಥಿತಿಯಲ್ಲಿ ಒಂದು ನಿಮಿಷವಿದ್ದು ಅನಂತರ.

"ಅವರ ಮನೆಯವರನ್ನು ಕರೆಸಿಬಿಡೋಣರೀ.''

"ನಿನಗೇನು ತಲೆ ಕೆಟ್ಟಿಲ್ಲ ತಾನೆ, ಈಗ ಮಾಧವಿ ಪುಟ್ಟ ಹುಡುಗಿಯೇನಲ್ಲ.'' ನಿಮ್ಮ ಕಾಣೆಯಾಗಿರುವ ಮಗು ಇಲ್ಲಿದ್ದಾಳೆ, ಬಂದು ಕರ್‍ಕೊಂಡು ಹೋಗಿ' ಅಂತ ಹೇಳಿ ಕಳಿಸೋಕ್ಕೆ. ಪ್ರಸ್ತುತದ ಸ್ಥಿತಿ ಹೇಗಿದೆಂತ ತಿಳುಕೊಳ್ದೆ ಅಂತಾ ಮೂರ್ಖ ಕೆಲಸ ಮಾಡಲಿಕ್ಕೆ ನಾವು ಪ್ರಯತ್ನಿಸಬಾರ್ದು

ವಸೂ. ಮಾಧವಿ ಏಳೆಂಟು ವಯಸ್ಸಿನ ಪುಟ್ಟ ಹುಡುಗಿಯಂತೆ ದಾರಿ ತಪ್ಪಿ ನಮ್ಮ ಮನೆಗೇನೂ ಬಂದಿಲ್ಲ. ಬೇಕೆಂದೇ ಅವಳ ಮನೆಯನ್ನು ತೊರೆದು ಬಂದಿದ್ದಾಳೆ. ಇಂತಾ ಗಂಭೀರ ಸ್ಥಿತಿಯಲ್ಲಿ ಅವಳಿಗೆ ತಿಳೀದೆ ಅವಳ ಮನೆಯವರಿಗೆ ಹೇಳಿ ಕಳಿಸಿದ್ರೆ ಅವಳ ನಂಬಿಕೆಗೆ ದ್ರೋಹ ಬಗೆದಂತಾಗುತ್ತೆ. ಇವತ್ತಲ್ಲ ನಾಳೆ ಸತ್ಯ ಏನೂಂತ ಎಲ್ಲರಿಗೂ ತಿಳೀಲೇಬೇಕು. ಆಗ ನಾವು ಅದರ ಬಗ್ಗೆ ಯೋಚಿಸಿದರಾಯ್ತು.''

"ಬೇರೆ ಏನೂ ಮಾಡೋಕ್ಕೆ ಆಗೋದಿಲ್ವಾ?'' ಅಧೀರಗೊಂಡವಳ ಪ್ರಶ್ನೆ.

"ಇಲ್ಲ ವಸೂ ಅವಳೀಗಿರೋ ಸ್ಥಿತಿಯಲ್ಲಿ ನಾವಿದ್ದು ಯೋಚಿಸಿದರೆ ನಮಗೆ ಅವಳ ಸಂಕಟ ಅರ್ಥವಾಗುತ್ತೆ.''

ಎರಡು

"ರೀ ಬನ್ರೀ ಒಂದ್ನಿಮಿಷ ಬನ್ನಿ.'' ಗಾಬರಿಯಿಂದ ಕೇಳಿ ಬಂದ ವಸಂತಳ ಧ್ವನಿ ಕೇಳಿ ನಿಲುವುಗನ್ನಡಿಯ ಮುಂದೆ ನಿಂತು ತಲೆ ಬಾಚಿಕೊಳ್ಳುತ್ತಿದ್ದ ಶ್ರೀಧರ್ ಲಗುಬಗನೆ ಹಾಲ್‌ಗೆ ಬರುವಷ್ಟರಲ್ಲಿ, ಹಾಲಿನ ಸೋಫಾದಲ್ಲಿ ವಸಂತ, ಕೆಲಸದ ಹುಡುಗಿ ಲಕ್ಷ್ಮಿ ಸೇರಿ ಮಾಧವಿಯನ್ನು ಸೋಫಾದ ಮೇಲೆ ಮಲಗಿಸಿಯಾಗಿತ್ತು.

ಮಾಧವಿ ಪ್ರಜ್ಞಾಶೂನ್ಯಳಾಗಿದ್ದಳು.

ಐದು ನಿಮಿಷ ಶ್ರೀಧರ್ ಪ್ರಥಮ ಚಿಕಿತ್ಸೆ ನಡೆಸಿದುದರ ಫಲವಾಗಿ ಮೇಲೆದ್ದಳು ಮಾಧವಿ, ಭಾರ ಕಣ್ಣವೆ. ಕಣ್ಣು ತೆರೆದ ಕೂಡಲೇ ಎರಡೂ ಬದಿಗಳಲ್ಲಿ ಕಳವಳ ಭಾವ ಹೊತ್ತ ಶ್ರೀಧರ್, ವಸಂತ. ಮೆಲ್ಲಗೆ ಏಳಲೆತ್ನಿಸುತ್ತಾಳೆ. ಆದರೆ ಸಾಧ್ಯವಾಗುವುದಿಲ್ಲ. ಮತ್ತೆ ಕಣ್ಣು ಮುಚ್ಚಿಕೊಂಡಳು. ಕಣ್ಣೀರು ಕೆನ್ನೆ ತೋಯಿಸಿತು. ಶ್ರೀಧರ್ ವಸಂತಳಿಗೆ ಕಣ್ಸನ್ನೆ ಮಾಡಿದ ನೀನು ಅಡುಗೆ ಮನೆಗೆ ಹೋಗು ಎಂಬಂತೆ. ಅವಳು ಅಡುಗೆ ಮನೆಗೆ ಹೋಗುತ್ತಲೇ 'ಮಾಧವಿ' ಎಂದು ಮೃದುವಾಗಿ ಕರೆದ ಶ್ರೀಧರ್.

ಕಣ್ಣು ತೆರೆಯುತ್ತಾಳೆ ಧೃತಿಗೆಟ್ಟ ಹುಡುಗಿ.

"ನೋಡು ಮಾಧೂ, ನಾನು ಡಾಕ್ಟರು, ನಿನಗೆ ಅಣ್ಣನಂಥವನು. ನಾನು ಹೇಳೋದನ್ನು ಕೇಳು, ಅನ್ಯತಾ ಭಾವಿಸಬೇಡ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಒಳಿತು ಕೆಡಕು ಎನ್ನುವವು ಸಹಜವಾಗಿ ಘಟಿಸುವಂಥವುಗಳು. ಒಳಿತು ಆದಾಗ ಮಾತ್ರ ತುಂಬ ಹಿರಿ ಹಿರಿ ಹಿಗ್ಗಿಬಿಡುತ್ತಾರೆ. ಅದೇ ಕೆಡಕು ಆದಾಗ ಮಾತ್ರ ತುಂಬ ಕುಗ್ಗಿ ಹೋಗಿಬಿಡುತ್ತಾರೆ. ಹಾಗೆಯೇ ಕೆಲವೊಮ್ಮೆ ಅಖಂಡ ನೋವನ್ನು ಒಬ್ಬನೇ ಒಬ್ಬ ವ್ಯಕ್ತಿ ಸಹಿಸುವುದು ದುಸ್ತರವಾಗಿಬಿಡಲೂಬಹುದು. ನಿನ್ನ ದೈಹಿಕ ನೋವು, ಸಂಕಟವನ್ನು ನಾನು ಹಂಚಿಕೊಳ್ಳಲು ಸಾಧ್ಯವಾಗದೆ ಇರಬಹುದು. ಆದರೆ ನಿನ್ನ ಮನಸ್ಸಿನ ನೋವನ್ನು ನಮ್ಮಂತಾ ಆಪ್ತರೊಂದಿಗೆ ಹಂಚಿಕೊಂಡಲ್ಲಿ ನಿನ್ನ ದುಃಖ ಶಮನವಾಗಬಹುದೂಂತ ನನ್ನ ಅಭಿಪ್ರಾಯ.'' ಆತ್ಮೀಯ ಅಣ್ಣನಿಂದ ಬಂದ ಸಾಂತ್ವನದ ನುಡಿ ಅವಳಿಗೆಷ್ಟೋ ಸಮಾಧಾನ ತಂದಿತು.

"ನನ್ನ ಸದ್ಯದ ಸ್ಥಿತಿಯನ್ನು ನೀವು ಯಾವತ್ತೋ ಗ್ರಹಿಸಿದಿರಿ ಅಂತ ನನಗೆ ಅರ್ಥವಾಗಿದೆ. ನಿಮ್ಮಿಂದ ಸತ್ಯವನ್ನು ಮರೆಮಾಚಿಡುವ ಅಗತ್ಯ ನನಗೆ ಕಾಣ್ತಿಲ್ಲ. ನಾನು ನನ್ನ ಈಗಿನ ಸ್ಥಿತಿಯ ಬಗ್ಗೆ ಕೊರಗ್ತಿಲ್ಲ. ಯಾಕೆಂದರೆ ಅದನ್ನು ಅಕ್ರಮವಾಗಿ ಪಡೆದಿಲ್ಲ.'' ಅವಳ ಧ್ವನಿ ನಡುಗಿತು.

"ಆದರೆ ನನಗೆ ಬೇಸರವಾಗಿರುವ ಸಂಗತಿ ಏನೆಂದರೆ ಈ ನನ್ನ ಗರ್ಭಧಾರಣೆಯ ಬಗ್ಗೆ ನಾನು ಹೀಗೆ ಸಮಜಾಯಿಸಿ ನೀಡಬೇಕಾಗಿ ಬಂದಿರುವುದೇ.'' ಕೈಗಳಿಂದ ಮುಖ ಮುಚ್ಚಿಕೊಂಡು

ಮುಲುಮುಲು ಬಿಕ್ಕುತ್ತಾಳೆ ತನ್ನ ತಪ್ಪಿಲ್ಲದೆ ಗರ್ಭ ಧರಿಸಿದವಳು.

"ನಿನ್ನಿಂದ ಸಮಜಾಯಿಸಿ ಕೇಳುವಷ್ಟು ಅವಿವೇಕಿ ನಾನಲ್ಲ ಮಾಧೂ. ನೀನು ಹಾದಿ ತಪ್ಪಿದವಳೂಂತ ನಾವು ಹೇಳ್ತಿಲ್ಲ, ಈಗ ನೀನಿರುವ ಸ್ಥಿತಿಯಲ್ಲಿ ಅನಗತ್ಯವಾಗಿ ಕೊರಗಬಾರದು. ಅದು ನಿನ್ನ ಆರೋಗ್ಯದ ದೃಷ್ಟಿಯಿಂದ ಸರಿಯಲ್ಲ."

* * * * *

ತಾಸಿನ ಅನಂತರ ತಾಸು.

ದಿನದ ಅನಂತರ ದಿನ.

ವಾರದ ಹಿಂದೆ ಓಡುವ ಮತ್ತೊಂದು ವಾರ.

ಆಮೇಲೆ ನವಮಾಸ, ಕಾಲ ಚಕ್ರದೊಂದಿಗೆ ಗುಡುಗುತ್ತ ಭೂತಕಾಲದವಾದಾಗ ಮಾಧವಿ ಗುಂಡು ಗುಂಡಾದ ಗಂಡು ಮಗುವೊಂದಕ್ಕೆ ಜನ್ಮ ನೀಡಿದಳು. ಮಾಧವಿಯಲ್ಲೊಂದು ಬದಲಾವಣೆಯಾಗಿತ್ತು. ಹಿಂದಿನಂತೆ ಆಗಾಗ ಕಣ್ಣೀರಿಡುವುದಿಲ್ಲ. ಮುಖದಲ್ಲಿ ನೋವಿನ ನೆರಳು ಅಸ್ಪಷ್ಟವಾಗಿ ಆಡ್ಡಾಡುತ್ತದಷ್ಟೇ.

ತನ್ನ ಪುಟ್ಟ ಮೃದು ಕೈ ಕಾಲುಗಳನ್ನು ಬಡಿಯುತ್ತ, ತಾಯಿಯ ಮೊಲೆ ಹಾಲಿಗಾಗಿ ಎಳೆ ಕೈ ಬೆರಳುಗಳನ್ನು ಬಾಯಲ್ಲಿರಿಸಿಕೊಂಡು ಚೀಪುವ ಪುಟ್ಟ ಕಂದನ, ಬೊಗಸೆ ಕಂಗಳಲ್ಲಿ ಯಾವುದೋ ನೆನಪನ್ನು ಕೆದಕುತ್ತಾಳೆ. ಕೆದಕುವಷ್ಟು ಹೃದಯ ಹಿಂಡುವ ನೋವು, ಹಾಗೆಯೇ ಎಂತಾದ್ದೋ ತೃಪ್ತಿ. ಪುಟ್ಟನ ಹಣೆಗೆ ಹೂವಿನ ಚುಂಬನ ನೀಡುತ್ತಾಳೆ. "ನಾವು ದುರದೃಷ್ಟವಂತರು ಕಣೋ" ಎಂದು ನಿಡುಸುಯ್ಯುತ್ತಾಳೆ.

* * * * *

ಮಗುವಿಗೆ ಜನ್ಮ ನೀಡಿ ಆರು ತಿಂಗಳು ಕಳೆದ ಮೇಲೆ ಅದೊಂದು ದಿನ ಸಂಜೆ ಚಹ ಚಪ್ಪರಿಸುವಾಗ ಮಾಧವಿಯಿಂದ ಬಂತೊಂದು ಬೇಡಿಕೆ.

"ನನಗೊಂದು ಕೆಲ್ಸ ಕೊಡ್ಸಿ."

ಚಕಿತನಾದ ಶ್ರೀಧರ್. ವಸಂತಳ ಸ್ಥಿತಿಯೂ ಅದೇ.

"ಏನು ಹೇಳ್ತಿದ್ದೀ ನೀನು?"

"ಹೌದಣ್ಣ, ನನಗೊಂದು ಕೆಲ್ಸ ಕೊಡ್ಸಿ."

"ನಿನಗೇನು ಕಡಿಮೆಯಾಗಿದೆ ಇಲ್ಲಿ?" ಗದರಿಕೊಳ್ಳುತ್ತಾಳೆ ವಸಂತ.

"ನಿಮ್ಮಂಥವರು ಸಿಕ್ಕಿರುವುದು ನನ್ನ ಅದೃಷ್ಟ ವಸು. ಮನೇಲಿ ಸುಮ್ನೆ ಕೂತ್ಕೋಬೇಕು ಅಂದ್ರೆ ತುಂಬ ಬೇಸರವಾಗುತ್ತಣ್ಣ, ಕೆಲಸಗಳನ್ನೂ ವಸುನೇ ಮಾಡಿಬಿಡ್ತಾಳೆ."

"ಯಾಕೆ ವಸು, ಮಾಧೂನ ಒಂಟಿಯಾಗಿ ಬಿಟ್ಟು ನೀನೇ ಎಲ್ಲ ಮಾಡೋದು. ನಾಳೆಯಿಂದ ಹೀಗಾಗಬಾರದು ನೋಡು." ಹೆಂಡ್ತಿಗೆ ಹೇಳುತ್ತಾನೆ ವೈದ್ಯ ಗಂಡ. ನಸುನಗುತ್ತಲೇ ತಲೆ ಆಡಿಸಿದಳು ವಸಂತ.

ಆ ಹೊತ್ತಿಗೆ ಕೆಲಸದ ಬಗ್ಗೆ ಕೋರಿಕೆ ಮಂಡಿಸಿ ಅಷ್ಟಕ್ಕೇ ಸುಮ್ಮನಾಗಲಿಲ್ಲ ಮಾಧವಿ. ಸಮಯ ದೊರೆತಾಗಲೆಲ್ಲ ಆ ಬಗ್ಗೆ ಪ್ರಸ್ತಾಪ ಮಾಡುತ್ತ ಒತ್ತಡ ಹೇರಲಾರಂಭಿಸಿದಳು. ಅವಳ ಒತ್ತಡ ತಡೆಯಲಾರದೆ, ತನ್ನ ಮಿತ್ರನೊಬ್ಬ ಪ್ರಿನ್ಸಿಪಾಲ್ ಆಗಿರುವ ಕಾನ್ವೆಂಟ್ ಒಂದರಲ್ಲಿ ಅವಳಿಗೆ ಟೀಚರ್ ಕೆಲಸ ಕೊಡಿಸಿದ ಶ್ರೀಧರ್.

ಬೆಳಗ್ಗೆ ಎದ್ದು ಸ್ನಾನ ಮುಗಿಸಿ, ತಿಂಡಿ, ಅಡುಗೆ ಸಿದ್ಧಪಡಿಸಿ ಒಂಬತ್ತು ಗಂಟೆಗೆ ಶಾಲೆಗೆ ಹೋದರೆ ಮಾಧವಿ ವಾಪಾಸಾಗುವುದು ಸಂಜೆ ಐದು ಗಂಟೆಗೆ.

ಆ ದಿನ ರಾತ್ರಿ ಮಾಧವಿಗೆ ನಿದ್ದೆ ಸುಳಿಯಲೇ ಇಲ್ಲ ಹತ್ತಿರ. ವಾಲ್ ಕ್ಲಾಕ್ ಹನ್ನೆರಡು

ಹೊಡೆದರೂ ನಿದ್ದೆ ಬರಲಿಲ್ಲ ಮಾಧವಿಗೆ. ಅವಳ ಪಕ್ಕದಲ್ಲಿ ಪುಟ್ಟ ಮಲಗಿದ್ದಾನೆ. ಮುಗ್ಧ ಮುಖ: ಪ್ರಶಾಂತವಾಗಿ ನಿದ್ದೆ ಮಾಡುತ್ತಿರುವ ಪುಟ್ಟನನ್ನು ಗಮನಿಸುತ್ತಾಳೆ ತಾಯಿ. ಗುಂಗುರಾದ ಕಪ್ಪು ಒತ್ತು ಕೂದಲು, ಮಂದಹಾಸದ ಎಳೆ ತುಟಿ, ಗುಳಿ ಬೀಳುವ ಕೆನ್ನೆ, ಆ ಕೆನ್ನೆಯನ್ನು ನಯವಾಗಿ ತೀಡುತ್ತಾಳೆ ಮಾಧವಿ. ಹಿಂದೊಮ್ಮೆ ತನ್ನ ಕೆನ್ನೆ ಸವರಿದ ಆ ಪುರುಷ ಹಸ್ತದ ಹೊಗಳಿಕೆ ನೆನಪಾಯಿತವಳಿಗೆ.

"ಮಾಧೂ, ಗುಲಾಬಿ ನಿನ್ನ ಕೆನ್ನೆಯಷ್ಟು ಮೃದುವಾಗಿರಬಹುದು. ಆದರೆ ನೀನು ನಕ್ಕಾಗ ನಿನ್ನ ಕೆನ್ನೆಗಳ ಚೆಲುವಿಗೆ ಯಾವುದೂ ಸಾಟಿ ಇಲ್ಲ."

'ಪುಟ್ಟನ ಕೆನ್ನೆಗಳನ್ನು ಬಿಟ್ಟರೆ ಬೇರೆಲ್ಲ ಹೋಲಿಕೆ ಅವರದ್ದೇ' ಎನಿಸಿತು ಅವಳಿಗೆ. ಈ ಸಾಮ್ಯ ಅವಳಿಗೆ ತೃಪ್ತಿ ಕೊಟ್ಟಿತು ಕೂಡ. ಹೊರಗೆ ಧಾರೆಯಾಗುತ್ತಿರುವ ಬೆಳದಿಂಗಳ ಚಂದ್ರಮನನ್ನು ನೋಡಿ ಎದ್ದು ಹೋಗಿ ಬಾಲ್ಕನಿಯಲ್ಲಿ ನಿಂತಳು. ಆಗಲೇ ಅವಳಿಗೆ ವಸಂತಳ ಕೋಣೆಯಿಂದ ಕೇಳಿಸಿತು ಈ ಸಂಭಾಷಣೆ.

"ಅಮ್ಮನಿಂದ ಕಾಗದ ಬಂದಿದೇರಿ."

"ಏನು ಬರೆದಿದ್ದಾರೆ?"

"ಮುಂದಿನ ವಾರ ಇಲ್ಲಿಗೆ ಬರ್ತಾಳಂತೆ!" ವಸಂತಳ ಧ್ವನಿಯಲ್ಲಿ ಆತಂಕ.

"ಒಳ್ಳೇದೇ ಆಯ್ತು. ನೀನು ಬಾ ಅಂತ ಆಕೆ ಎಷ್ಟು ಕಾಗದ ಬರೆದ್ರೂ ಹೋಗೋಕ್ಕೆ ನಿನಗೆ ಟೈಮಿಲ್ಲ." ನಕ್ಕ ಶ್ರೀಧರ್.

"ಆ ಮಾತೆಲ್ಲ ಈಗ್ಯಾಕೆ, ಅಮ್ಮ ಬಂದ್ರೆ ಏನ್ಮಾಡೋದೂಂತ ನನಗೆ ಭಯ ಆಗ್ತಿದೆ."

ಪಕಪಕ ನಕ್ಕು ಬಿಡುತ್ತಾನೆ ಶ್ರೀಧರ್ "ನಿಮ್ಮಮ್ಮ ಬಂದ್ರೆ ನೀನ್ಯಾಕೆ ಹೆದರಬೇಕು, ಎವರೆಸ್ಟ್ ಹತ್ತಿದಷ್ಟು ಖುಶಿಯಾಗಿರು."

"ನಿಮಗೆ ತಿಳುವಳಿಕೇನೆ ಸಾಲ್ದು." ಗೊಣಗುತ್ತಾಳೆ ವಸಂತ.

"ನನ್ನ ತಿಳುವಳಿಕೆಗೆ ಏನಾಯ್ತು?"

"ನಾನು ಹೇಳ್ತಿರೋದು ಮಾಧವಿ ಬಗ್ಗೆ."

ಬೆಳದಿಂಗಳ ಅನುಭೂತಿಯಲ್ಲಿ ತಲ್ಲೀನಳಾಗಿ ನಿಂತಿರುವ ಮಾಧವಿಗೆ ಸಿಡಿಲು ಹೊಡೆದಂತಾಯಿತು.

"ಮಾಧವಿಗೇನಾಗಿದೆ ಈಗ?"

ಶ್ರೀಧರ್‌ನ ಪ್ರಶ್ನೆಗೆ ದನಿ ತಗ್ಗಿಸಿದಳು ವಸಂತ "ಅಮ್ಮನಿಗೆ ಮಾಧವಿ ಯಾರೂಂತ ಗೊತ್ತಿದೆ. ಅವಳ್ಯಾಕೆ ಇಲ್ಲಿದ್ದಾಳೆ, ಈ ಮಗು ಯಾರ್ದು, ಅವಳ ಗಂಡ ಎಲ್ಲಿ ಅಂತ ನೇರವಾಗಿ ಅಮ್ಮ ಕೇಳಿಬಿಡ್ತಾಳೆ. ಆಗ ಮಾಧವಿ ನೊಂದುಕೊಳ್ಳೋದಿಲ್ವಾ?"

"ನಿನ್ನ ಮಾತು ಸರಿ ವಸೂ." ಶ್ರೀಧರ್ ಕೂಡ ಆತಂಕಗೊಂಡ.

"ಮತ್ತೆ ಈಗೇನು ಮಾಡೋದು?"

"ಅದಕ್ಕೆ ನಾನೊಂದು ಉಪಾಯ ಹುಡುಕಿದ್ದೇನೆ."

"ಪ್ರೊಸಿಡ್."

"ಇನ್ನೆರಡು ಮೂರು ದಿನಗಳಲ್ಲಿ ನಾವು ಸೌತ್ ಇಂಡಿಯಾ ಪ್ರವಾಸಕ್ಕೆ ಹೋಗ್ತಿದ್ದೀವೀಂತ ನಾಳೆಯೇ ಪತ್ರ ಬರೆಯುತ್ತೇನೆ. ಆ ಕಾಗದ ಅಮ್ಮನನ್ನು ಮುಟ್ಟುವಷ್ಟರಲ್ಲಿ ನಾವು ಪ್ರವಾಸದಲ್ಲಿರ್ತೇವೆ, ಹೇಗಿದೆ ನನ್ನ ಐಡಿಯಾ."

"ಐ ಒಪ್ ಆಗಿದೆ." ಇಬ್ಬರೂ ಹಾಯಾಗಿ ನಕ್ಕ ಧ್ವನಿ ಕೇಳಿ ನಿಡಿದಾಗಿ ನಿಟ್ಟುಸಿರು ಹಾಕಿ ತನ್ನ ಕೋಣೆಗೆ ಬಂದಳು ಮಾಧವಿ.

"ಕಷ್ಟ ಕಾರ್ಪಣ್ಯ ನಮಗಷ್ಟೇ ಅಲ್ಲ, ನಮ್ಮ ನೆರಳಲ್ಲಿ ಸಹ ಇವೆ ಕಣೋ."

"ಹಾಗೇ ಸುತ್ತಾಡಿ ಬರೋಣ ಬರ್ತೀಯಾ?''

ಚಕಿತಳಾದಳು ವಸಂತ.

ತನ್ನ ಮನೆಗೆ ಮಾಧವಿ ಬಂದು ಒಂದು ವರ್ಷ ಮೇಲ್ಪಟ್ಟಾಗಿದೆ. ಮಾಧವಿಯ ಹೃದಯಭಾರ ಹಗುರಗೊಳಿಸಲು ತಾನೇ ಅವಳನ್ನು ತಿರುಗಾಡಲು ಕರೆದ ಸಂದರ್ಭಗಳೆಷ್ಟೋ. ಯಾವುದಕ್ಕೂ ಒಪ್ಪುತ್ತಿರಲಿಲ್ಲ ಮಾಧವಿ. ಕೊನೆಯ ಪಕ್ಷ ಸಿನಿಮಾಕ್ಕೂ ಕೂಡ ಬರ್ತಿರಲಿಲ್ಲ. ಅಂಥವಳು ಈಗ ತನ್ನಷ್ಟಕ್ಕೆ ತಾನೇ 'ತಿರುಗಾಡಿಕೊಂಡು ಬರೋಣ ಬರ್ತೀಯ' ಅಂತ ಕರೆಯುತ್ತಿರುವುದು ನೋಡಿ ವಸಂತಳಿಗೆ ಸಂಭ್ರಮಾಶ್ಚರ್ಯ. 'ಥ್ಯಾಂಕ್ ಗಾಡ್. ಮಾಧವಿ ಕ್ರಮೇಣ ಬದಲಾಯಿಸುತ್ತಿದ್ದಾಳೆ. ಹಿಂದಿನಂತಾಗಲಿರುವ ಸೂಚನೆ ಇದೇನೋ'

"ಈಗ್ಲೇ ಬಂದೆ ಮಧೂ.'' ಹೇಳಿ ಸೀರೆ ಬದಲಾಯಿಸಲು ಕೋಣೆಗೆ ಓಡುತ್ತಾಳೆ ವಸಂತ.

* * * * *

ಇಬ್ಬರೂ ಎರಡು ಫರ್ಲಾಂಗ್ ದೂರ ನಡೆದು ಮೈದಾನದಂತಾ ಪ್ರದೇಶ ದಾಟಿ, ಮೈದಾನದ ಪೂರ್ವದಲ್ಲಿರುವ ಮನೆಯೊಂದರ ಸಮೀಪ ಬಂದರು. ಮರದ ಗೇಟಿನಿಂದ ನಾಲ್ಕು ಗಜಗಳಷ್ಟು ಕಿರುಕಾಲುದಾರಿಯ ಆಚೆ ಮನೆ. ಕಾಲುದಾರಿಯ ಇಕ್ಕೆಲಗಳಲ್ಲಿ ಥಳಥಳಿಸುವ ಹೂದೋಟ. ಕಿರು ಕಾಲು ಹಾದಿಯಲ್ಲಿ ನಡೆದು ಮನೆಯ ಬಾಗಿಲ ಮುಂದೆ ನಿಂತಳು ಮಾಧವಿ. ವಿಸ್ಮಯದಿಂದಲೇ ಹಿಂಬಾಲಿಸುತ್ತಾಳೆ ವಸಂತ. ಹಜಾರ, ಒಂದು ಮಲಗುವ ಕೋಣೆ, ಅಡುಗೆ ಕೋಣೆ, ಸ್ನಾನದ ಕೋಣೆ ಇರುವ ಮನೆ ಅದು. ಹಿತ್ತಲಲ್ಲಿ ಭಾವಿ ಇದೆ. ಮನೆಗೆ ಆಗಷ್ಟೇ ಸುಣ್ಣ ಹಚ್ಚಿದಂತಿತ್ತು. ಹದವಾದ ಸುಣ್ಣದ ಪರಿಮಳ. ಯಾವ ಸಾಮಾನೂ ಇಲ್ಲದ ಕಾಲಿ ಮನೆ. ಇಲ್ಲಿಗೆ ಮಾಧವಿ ತನ್ನನ್ನು ಕರೆದುಕೊಂಡು ಬಂದ ಉದ್ದೇಶವೇನು?

"ಈ ಮನೇಲಿ ಯಾರೂ ಇಲ್ವ ಮಧೂ?''

"ಇಲ್ಲ, ಇನ್ನು ಸ್ವಲ್ಪ ಹೊತ್ತಿಗೆಲ್ಲ ಬರ್ತಾರೆ.''

"ಯಾರು ಬರ್ತಾರೆ?''

"ನಾನೇ.''

"ಅಂದ್ರೆ ನೀನಿಲ್ಲಿಗೆ ಬರ್ತೀಯ?'' ಗಂಟಿಕ್ಕಿತು ವಸಂತಳ ಹುಬ್ಬು.

"ಹೌದು'' ಕಿಟಕಿಯಿಂದಾಚೆ ನೋಡುತ್ತಿದ್ದ ಮಾಧವಿ ಇತ್ತ ತಿರುಗಿ,

"ನಾನು ಈ ಮನೇನ ಬಾಡಿಗೆಗೆ ತಗೊಂಡಿದ್ದೇನೆ.''

"ನನಗೂ ಕೂಡ ಹೇಳದೆ ಇಷ್ಟೆಲ್ಲ ಘನಕಾರ್ಯ ಮಾಡ್ತೀಯ ಅಂತ ನಾನಂದುಕೊಂಡಿರಲಿಲ್ಲ.'' ತೀವ್ರ ದಾಟಿಯಲ್ಲಿ ಹೇಳುತ್ತಾಳೆ ವಸಂತ.

"ಇದೇನು ದೊಡ್ಡ ಕೆಲಸ ಅಲ್ಲ ಅಂತ ಅಂದುಕೊಂಡಿರೋದಕ್ಕೆ ನಿನಗೆ ಹೇಳಲಿಲ್ಲ.'' ನಕ್ಕಳು ಮಾಧವಿ.

"ಏನೇ ಆಗಲಿ, ನೀನು ಬೇರೆ ಮನೆ ಮಾಡೋಷ್ಟು ಸಮಸ್ಯೆ ಏನು ಬಂತು ನಿನಗೆ?''

"ಏನಂತಾ ದೊಡ್ಡ ಸಮಸ್ಯೆ ಅಲ್ಲ, ಅಲ್ಲಿ ನಾನು ಪ್ರಶಾಂತವಾಗಿ ಇರಲು ಸಾಧ್ಯವಿಲ್ಲ ಎನಿಸಿತು. ಆ ಪೇಶೆಂಟುಗಳು, ಅವರ ಗಲಾಟೆ ಅಬ್ಬಬ್ಬ ತಲೆ ಚಿಟ್ಟು ಹಿಡಿಸಿಬಿಟ್ಟಿದ್ದರಿಂದ್ಲೇ ನಾನೀ ಮನೇನ ಬಾಡಿಗೆಗೆ ತಗೊಳ್ಳಬೇಕಾಗಿ ಬಂತು.''

"ಸುಳ್ಳು ಸುಳ್ಳು ಹೇಳಬೇಡ ಮಧೂ.'' ತಲೆ ಬಾಗಿಸಿ ನಿಂತ ಮಾಧವಿಯ ಹತ್ತಿರ ಸರಿದು ಗಲ್ಲ ಹಿಡಿದೆತ್ತಿ ಕೇಳುತ್ತಾಳೆ "ನಮ್ಮ ಸಂಸಾರದಲ್ಲಿ ನೀನು ಶಿವಪೂಜೆಯಲ್ಲಿ ಕರಡಿಗೆ ಬಿಟ್ಟ ಹಾಗೆ ಅಂತ ನೀನು ಭ್ರಮಿಸಿದ್ದೀ, ನೀನು ಹೀಗೆ ಪ್ರತ್ಯೇಕವಾಗಿರಲು ನಾನೊಪ್ಪೋದಿಲ್ಲ. ನಿಮ್ಮಣ್ಣ ಕೂಡ ತುಂಬ

ನೊಂದುಕೋತಾರೆ.''

"ವಸೂ ನನ್ನ ಮಾತನ್ನು ನಂಬು, ನಾನು ಪ್ರತ್ಯೇಕ ಮನೆ ಮಾಡಿರೋದ್ರಲ್ಲಿ ದುರುದ್ದೇಶವೇನೂ ಇಲ್ಲ. ನೀನೇ ಏನೇನೋ ಊಹಿಸಿಕೊಂಡು ಸಂಕಟಪಡ್ತಿದ್ದೀ. ನನಗೆ ಈ ಮನೆ ತುಂಬ ಹಿಡಿಸಿದೆ, ಇದರಲ್ಲಿ ಸ್ವಲ್ಪ ದಿವಸ ಇದ್ದು ಹೋಗೋಣ ಅಂತ ತಗೊಂಡೆ. ಅದೂ ಅಲ್ದೆ ಈ ಮನೆ ನನ್ನ ಕಾನ್ವೆಂಟಿಗೂ ತುಂಬ ಹತ್ತಿರವಿದೆ, ನನಗೇನಾದರೂ ತೊಂದರೆ ಬಂದರೆ ಹೇಗೂ ನೀನಿದ್ದೀ ಇದ್ದೀಯಲ್ಲ. ವಸೂ, ಚಿಕ್ಕ ಮಗುವಿನಂತೆ ಹಟ ಮಾಡ್ಬೇಡ. ಮನೆ ಬದಲಾಯಿಸಿ ಬಿಟ್ಟ ಮಾತ್ರಕ್ಕೆ ನಾವು ದೂರವಾಗಿ ಬಿಡ್ತೀವಾ?''

"ಏನು ಹೇಳ್ತಿದ್ದೀ ನೀನು'' ವಸಂತಳ ಧ್ವನಿ ಕಂಪಿಸಿತು. "ನಾನು ನಿನ್ನ ಮೇಲೆ ಅನುಕಂಪ ತೋರಿಸುತ್ತಿದ್ದೀನಾ?''

"ಹೌದು ಇಲ್ದೆ ಇದ್ದಿದ್ರೆ...''

ಮಧ್ಯದಲ್ಲೇ ತಡೆದಳು ವಸಂತ "ಸರಿ ಮಧು, ನಿನಗಿಷ್ಟ ಬಂದಷ್ಟು ದಿವಸ ಇಲ್ಲಿರು, ನಾವು ನಿನ್ನ ಮೇಲೆ ಅನುಕಂಪ ತೋರಿಸೋದಲ್ಲ, ನಮ್ಮ ಮೇಲೆ ನಿನಗೆ ಅನುಕಂಪ ಬಂದಾಗ ನನ್ನ ಮನೆಗೆ ಬಾ.'' ಅಳುತ್ತಲೇ ಹೇಳಿ ತನ್ನ ಮನೆಯ ಹಾದಿ ಹಿಡಿದಳು ವಸಂತ.

ಮಾಧವಿ ಮನೆಗೆ ಬಂದ ಮೇಲೂ ಅವಳೊಟ್ಟಿಗೆ ಮಾತಾಡಲಿಲ್ಲ. ರಾತ್ರಿ ಶ್ರೀಧರ್‌ನಿಗೆ ಹೇಳಿದಾಗ ಶ್ರೀಧರ್ ಮಾಧವಿಯ ಕೆಲಸವನ್ನು ಮೆಚ್ಚಿಕೊಂಡ. "ಮಾಧವಿ ಒಳ್ಳೇ ಕೆಲ್ಸ ಮಾಡಿದ್ದಾಳೆ.''

"ಯಾಕೆ, ಅವಳು ನಿಮಗೇನು ತೊಂದರೆ ಕೊಟ್ಟಿದ್ದಾಳೆ?''

"ಇದರಲ್ಲಿ ತೊಂದರೆ, ಸಮಸ್ಯೆ ಮುಂತಾದವುಗಳ ಪ್ರಶ್ನೆಯೇ ಇಲ್ಲ. ಮೇಲಾಗಿ ಮಾಧವಿ ನಮ್ಮ ಮನೇಲಿ ತಾನೇ ಎಷ್ಟು ದಿನಾಂತ ಇರ್ತಾಳೆ. ನಾವೆಷ್ಟೇ ಚೆನ್ನಾಗಿ ನೋಡಿಕೊಂಡ್ರೂ ಅವಳಿಗೆ ಈ ಮನೆ ಪಂಜರದ ಹಾಗೇ ಇರುತ್ತೆ. ಅದು ಸಹಜವೂ ಕೂಡ'' ಎಳೆ ಎಳೆಯಾಗಿ ಸಮಸ್ಯೆಯ ಸ್ವರೂಪವನ್ನು ಅವಳ ಮುಂದೆ ಬಿಡಿಸಿಡುತ್ತಾನೆ ಶ್ರೀಧರ್. "ಅವಳ ತಂದೆ ತಾಯಿ ಅಥವಾ ಗಂಡನಿಗೆ ಅವಳನ್ನು ಒಪ್ಪಿಸುವ ಅವಕಾಶವೂ ನಮಗಿರಲಿಲ್ಲ. ಇಷ್ಟಕ್ಕೂ ಮಾಧವಿಯ ಗಂಡ ಯಾರು, ಅವಳ್ಯಾಕೆ ಎಲ್ಲರನ್ನೂ ಬಿಟ್ಟು ಬಂದಳು ಎನ್ನುವುದು ನಮಗೆ ಗೊತ್ತಿಲ್ಲ. ವಾಸ್ತವತೆ ಹೀಗಿರುವಾಗ ಅವಳನ್ನು ನಮ್ಮ ಮನೆಯಲ್ಲೇ ಇಟ್ಟುಕೊಂಡರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅವಳು ಏನೇ ಮಾಡಲಿ ಅದನ್ನು ನೋಡುತ್ತ ಇರಬೇಕಾದ ಪ್ರೇಕ್ಷಕರು ಮಾತ್ರ ನಾವು. ಇವತ್ತಲ್ಲ ನಾಳೆ ಅವಳ ಜೀವನದ ಶಿಲ್ಪಿ ಅವಳೇ. ನಾವೀಗ ಅವಳನ್ನು ತಡೆದರೆ ಅವಳ ಭವಿಷ್ಯಕ್ಕೆ ತಡೆ ಹಾಕಿದವರಾಗಿಬಿಡುತ್ತೇವೆ. ಮಾಧವಿಗೆ ಹೋಗಲು ಬಿಡೋಣ. ಅವಳ ಬದುಕು ಅವಳದು.''

ಶ್ರೀಧರ್‌ನ ಮಾತುಗಳಲ್ಲಿ ಸತ್ಯದ ತದ್ರೂಪಿತ್ತು. ಹೆಣ್ಣೊಬ್ಬಳ ಪರಿತಾಪದ ಬಗ್ಗೆ ನಿಜವಾದ ಕಾಳಜಿ ಇತ್ತು. ಮತ್ತೊಬ್ಬರ ಸ್ವಾತಂತ್ರ್ಯವನ್ನು ತಡೆಯಲು ನಮಗೆ ಯಾವ ಹಕ್ಕೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಆತ.

ಮತ್ತೆರಡು ದಿನಗಳ ಬಳಿಕ ಸಂಜೆ ಮಾಧವಿ ಶಾಲೆಯಿಂದ ಬಂದಾಗ, ಹಾಲ್‌ನ ಸೋಫಾದಲ್ಲಿ ಕುಳಿತು ಆಳು ರಂಗಯ್ಯ ತಂದ ಸಾಮಾನು, ದಿನಸಿಗಳ ಪಟ್ಟಿಯನ್ನು ಚೆಕ್ ಮಾಡುತ್ತಿದ್ದಳು ವಸಂತ. ಹೋದವಳೇ ಹಾಸಿಗೆಯ ಮೇಲೆ ಮಲಗಿ ದಣಿವಾರಿಸಿಕೊಳ್ಳುತ್ತಿರುವಾಗ ವಸಂತ ಬಂದುದನ್ನು ನೋಡಿ ಎದ್ದು ಕುಳಿತು "ಬಾ ವಸೂ'' ಎಂದಳು.

"ನಿನಗೆ ಸಂಸಾರ ತಾಪತ್ರಯದ ಬಗ್ಗೆ ಸರಿಯಾದ ಅನುಭವವಿಲ್ಲಾಂತ ನಾನೇ ನಿನ್ನ ಹೊಸ ಸಂಸಾರಕ್ಕೆ ಅಗತ್ಯವಾದ ದಿನಸಿ ಸಾಮಾನು ತರಿಸಿದ್ದೇನೆ.'' ಹೇಳಿ ಹೊರಟು ಹೋದಳು ವಸಂತ.

ಮಾರನೆಯ ದಿನವೇ ಮಾಧವಿ ಹೊಸ ಮನೆಗೆ ಸೇರಿಕೊಂಡಳು. ಹೊಸ ಮನೆಗೆ ಹೋಗುತ್ತಲೇ ಅವಳಿಗೆ ಎರಡು ದಿವಸ ರಜೆ ಸಿಕ್ಕಿತು. ಸೆಕೆಂಡ್ ಶನಿವಾರ ಮತ್ತು ಭಾನುವಾರ. ಆ ಎರಡು ದಿನ ತಾನು ಶಾಲೆಗೆ ಹೋದರೆ ಪುಟ್ಟನನ್ನು ನೋಡಿಕೊಳ್ಳುವವರು ಯಾರು ಎಂಬ ಆಲೋಚನೆಯೇ ಬರಲಿಲ್ಲ. ಸೋಮವಾರ ಬೆಳಿಗ್ಗೆ ಸ್ನಾನ ಮುಗಿಸಿ ಸೀರೆ ಉಡುವಾಗ ಮಗುವಿನ ಪ್ರಶ್ನೆ ಉದ್ಭವಿಸಿತು.

'ಇವತ್ತೂ ರಜೆ ಹಾಕಿ ಯಾರಿಗಾದ್ರೂ ಮಗೂನ ಒಪ್ಪಿಸಬೇಕು' ಎಂದುಕೊಳ್ಳುತ್ತಿರುವಾಗಲೇ ಮನೆಯಾಚೆಯಿಂದ ಕೇಳಿಸಿತು ವಸಂತಳ ಮನೆ ಕೆಲಸದ ಹುಡುಗಿ ಲಕ್ಷ್ಮೀಯ ಧ್ವನಿ "ಅಮ್ನೋರೆ, ಅಮ್ನೋರೆ." ಹೊರಬಂದ ಮಾಧವಿ "ಏನು ಲಕ್ಷ್ಮಿ ಬಂದದ್ದು" ಎಂದು ಕೇಳುವ ಮುಂಚೆಯೇ ಹೇಳಿದಳು ಲಕ್ಷ್ಮೀ.

"ನೀವು ಸ್ಕೂಲಿಗೆ ಓತ್ತೀರಾಂತ ಮಗೂನ ಎತ್ಕಂಡ್ ಬರ್ಲಿಕ್ಕೆ ಏಳಿಕಳಿಸವ್ರೆ."

'ಯೂ ಆರ್ ರಿಯಲೀ ಗ್ರೇಟ್ ವಸೂ' ತನ್ನಲ್ಲೇ ಹೇಳಿಕೊಂಡಳು ಮಾಧವಿ. ಮಗುವನ್ನು ಲಕ್ಷ್ಮೀಗೆ ಒಪ್ಪಿಸಿ ಶಾಲೆಗೆ ಹೊರಟು ಹೋಗುತ್ತಾಳೆ. 'ಯಾವ ಜನ್ಮದ ಅನುಬಂಧವೋ ಇವತ್ತು ತನ್ನ ಸೋದರಿಯಂತೆ ತನ್ನನ್ನು ನೋಡಿಕೊಳ್ಳುತ್ತಿದ್ದಾಳೆ. ಒಂದು ವೇಳೆ ವಸಂತ, ಶ್ರೀಧರ್‌ರ ಪ್ರೀತಿ ವಾತ್ಸಲ್ಯ ಇಲ್ಲದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಂಡಿದ್ದರೂ ಆಶ್ಚರ್ಯವಿಲ್ಲ. ತನ್ನ ಮೇಲೆ ಅವರಿಬ್ಬರೂ ಅಷ್ಟೊಂದು ಮಮಕಾರ ಇಟ್ಟುಕೊಂಡಿದ್ದರೂ ಅವರ ಮನೆಯನ್ನು ನಿರ್ದಾಕ್ಷಿಣ್ಯವಾಗಿ ತೊರೆದು ಬಂದು ಬಿಟ್ಟವಳು ತಾನು. ಇದರಲ್ಲಿ ತನ್ನ ತಪ್ಪೇನೂ ಇಲ್ಲ. ತಪ್ಪಿದ್ದರೂ, ಇಲ್ಲದಿದ್ದರೂ ಆ ಮನೆಯವರಿಗೆ ತಾನು ಪರೋಕ್ಷವಾಗಿ ಆದರೂ ಸಮಸ್ಯೆ ಆಗಕೂಡದು. ಆದುದರಿಂದಲೇ ತಾನೀ ನಿರ್ಧಾರ ತಗೊಂಡದ್ದು.'

ಮಾಧವಿ ಸಂಜೆ ಶಾಲೆಯಿಂದ ವಾಪಾಸು ಬಂದ ಹತ್ತು ನಿಮಿಷಗಳಿಗೆ ಮಗುವನ್ನೆತ್ತಿಕೊಂಡು ಬಂದಳು ಲಕ್ಷ್ಮಿ. ಲಕ್ಷ್ಮಿಗೆ ಇರಲಿಕ್ಕೆ ಹೇಳಿ ತಾನೂ ಬೇಗ ಬೇಗ ಸೀರೆ ಬದಲಾಯಿಸಿಕೊಂಡು ಲಕ್ಮಿಯೊಟ್ಟಿಗೆ ವಸಂತಳ ಮನೆಗೆ ಹೋದಳು.

ವಸಂತಳ ಮನೆಯಲ್ಲೇ ಎಂಟೂವರೆವರೆಗೂ ಇದ್ದು ಆಮೇಲೆ ಮನೆಗೆ ವಾಪಾಸಾದಳು. ತನ್ನ ಮನೆಯ ನೌಕರ ಅರವತ್ತು ವರ್ಷದ ರಂಗಯ್ಯ ತಾತನನ್ನು ಅವತ್ತಿನಿಂದ ಮಾಧವಿಯ ಮನೆಯಲ್ಲೇ ಮಲಗುವ ವ್ಯವಸ್ಥೆ ಮಾಡಿದಳು. ವಸಂತ ಎಷ್ಟಾದರೂ ಒಂಟಿ ಹಕ್ಕಿ ಅಲ್ಲವೆ ಎನ್ನುವ ಕಾಳಜಿಯಿಂದ.

ವಸಂತಳ ಅನಂತ ಪ್ರೀತಿಗೆ ಮೂಕಳಾಗುತ್ತಾಳೆ ಮಾಧವಿ.

ಮೂರು

ಅವತ್ತು ಭಾನುವಾರ ಸ್ನಾನ, ತಿಂಡಿ ಮುಗಿಸಿದ ಮೇಲೆ ಇವತ್ತು ರಜೆ, ಏನು ಮಾಡಬೇಕೆಂದು ಸ್ವಲ್ಪ ಹೊತ್ತು ತಲೆ ಕೆಡಿಸಿಕೊಂಡು ಕೊನೆಗೆ ಮನೆಯ ಮುಂದಿನ ತೋಟದ ಜೀರ್ಣೋದ್ಧಾರ ಮಾಡೋಣ ಎಂಬ ಸಂಕಲ್ಪಕ್ಕೆ ಬಂದಳು ಮಾಧವಿ.

ಸಂಕಲ್ಪವನ್ನು ಕೂಡಲೇ ಕ್ರಿಯೆಗೆ ಬದಲಾಯಿಸಿದಳು. ನೀರಿಲ್ಲದೆ ಒಣಗಿದ ಗಿಡ, ಬಳ್ಳಿ ಎಲ್ಲವನ್ನೂ ಕಿತ್ತೆಸೆದಳು. ಹಾರೆಯಿಂದ ಸಾಕಪ್ಪಾ ಸಾಕು ಎನ್ನಿಸುವವರೆಗೂ ಮಣ್ಣಗೆದು ನೀರು ಚೆಲ್ಲಿದಳು. ಇಷ್ಟು ಮಾಡುವಷ್ಟರಲ್ಲಿ ಸಂಜೆ ಆಯಿತು. ಮರುದಿನ ಆದರಿಂದಾಚೆಯ ದಿನ ಕೂಡ ಶಾಲೆಯಿಂದ ಬರುತ್ತಲೇ ತೋಟದ ಉಳಿದ ಕೆಲಸ ಮುಗಿಸಿದಾಗ ಆದಕ್ಕೊಂದು ಒನಪು ಬಂತು. ಮಲ್ಲಿಗೆ, ಜಾಜಿ, ಸಂಪಿಗೆ, ಕನಕಾಂಬರ, ಗುಲಾಬಿಗಳ ತೋಟ ಹತ್ತೇ ದಿನಗಳಲ್ಲಿ ನಳನಳಿಸಿತು. ಕಸ ಕಡ್ಡಿಗಳಿಂದ ಕಚಡಾವಾಗಿದ್ದ ಜಾಗದಲ್ಲಿ ಈಗ ಹಸಿರು ತೋಟ. ಪುಟ್ಟ ಪುಟ್ಟ ಗಿಡಗಳಲ್ಲಿ ಮೆಲ್ಲಮೆಲ್ಲಗೆ ಕಣ್ಣು ಬಿಡುವ ಎಳೆ ಎಲೆಗಳನ್ನು ನೋಡಿದರೆ ಮಾಧವಿಯಲ್ಲಿ ಏನೋ ಉತ್ಸಾಹ.

ಈಗಲೋ ಆಗಲೋ ಎಂದು ಜರ್ಜರಿತಗೊಂಡಿದ್ದ ರಿಪೇಸು ಗೇಟನ್ನು ದುರಸ್ತಿ ಮಾಡಿಸಿದಳು. ದ್ವಾರಗಳಿಗೆ ತೆಳು ಪರದೆ, ವರಾಂಡಾದ ನಡುವೆ ಪುಟ್ಟ ದುಂಡು ಮೇಜು, ಮೇಜಿನ ಮೇಲೆ ಹೂದಾನಿ, ಕುರ್ಚಿ ಇನ್ನಿಷ್ಟು ಜೀವ ಪಡೆದವು ಆ ಮನೆಯಲ್ಲಿ. ಮನೆ ತುಂಬ ಓರಣವಾದ ಮೇಲೆ ಆವಳಿಗೆ ಹೀಗೂ ಅನ್ನಿಸಿತು, ಇದೇ ರೀತಿ ನನ್ನ ಜೀವನವನ್ನು ನಾನು ಓರಣ ಮಾಡಿಕೊಳ್ಳಲು ಸಾಧ್ಯವಿದೆಯೇ?

* * * * *

ಪುಟ್ಟನನ್ನು ಎದೆಯ ಮೇಲೆ ಮಲಗಿಸಿಕೊಂಡು, ತಾನೂ ಮಲಗಿರುವ ಮಾಧವಿಯ ಕಣ್ಣು ತುಂಬಿಕೊಂಡಿರುವ ಅಂತರಾಳದ ನೋವು ಕಣ್ಣೀರ ರೂಪದಲ್ಲಿ ಕೆನ್ನೆಗಳ ಮೇಲಿಂದ ಇಳಿಯುತ್ತಿದೆ. ತುಂಬ ನಿಶ್ಯಬ್ದವಾಗಿ ತನ್ನ ನಡುಗುವ ತುಟಿಗಳನ್ನು ಪುಟ್ಟನ ಎಳೆತೋಳಿಗೆ ಮಾಧವಿ, ಅದುಮಿ! ಹಿಡಿದಿದ್ದರೆ, ಅವನು ತಲೆಯಿಂದ ಅಮ್ಮನ ಕೆನ್ನೆಗೆ ಮೃದುವಾಗಿ ತಟ್ಟುತ್ತಿದ್ದಾನೆ. ಇದ್ದಕ್ಕಿದ್ದಂತೆ ಯಾರೋ ಕೆನ್ನೆಯ ಮೇಲೆ ಜಾರುವ ಕಂಬನಿ ಒರೆಸಿದಂತಾಗಿ ಮುಚ್ಚಿರುವ ಕಣ್ಣು ತೆರೆದಳು ಮಾಧವಿ, ವಸಂತ!

ಮಾಧವಿಯ ಎದೆಯ ಮೇಲೆ ಆಟವಾಡುವ ಪುಟ್ಟನನ್ನು ಎತ್ತಿಕೊಂಡು ಕೂರುತ್ತಾಳೆ. ಮಾಧವಿ ಕೂಡ ಎದ್ದು ಕುಳಿತ ಮೇಲೆ,

"ನನಗೆ ಗೊತ್ತಿತ್ತು ಮಾಧೂ, ನೀನು ಒಂಟಿಯಾಗಿದ್ರೆ ನಿನಗೆ ಕೊರಗು ತಪ್ಪಿದ್ದ ಲ್ಲಾಂತ."

ಒಣನಗು ನಕ್ಕು "ಇದು ನನ್ನ ಮನದ ನೋವಲ್ಲ. ಹೇಳಬೇಕೆಂದರೆ ನನಗೇ ಹಿಂದಿನಷ್ಟು ಕೊರಗಿಲ್ಲ. ಅಲ್ಪ ಸ್ವಲ್ಪ ಉಳಿದಿರುವ ಸಂಕಟವನ್ನು ಕಣ್ಣೀರ ಮೂಲಕ ಹೊರಗೋಡಿಸುತ್ತಿದ್ದೇನೆ."

"ಚೆನ್ನಾಗಿ ಸಮರ್ಥಿಸಿಕೊಳ್ತೀ, ನಿನ್ನ ದುಃಖ, ಸಂಕಟದಲ್ಲಿ ಪಾಲು ಪಡೆಯುವ ಅರ್ಹತೆ ನಮಗಿಲ್ಲಾಂತ ನಿನ್ನ ಅಭಿಪ್ರಾಯವೇನು?"

"ಅಲ್ಲ ಕಣ್ಣೀರನ್ನು, ಕಷ್ಟಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಬಾರದು. ಸಂತೋಷ ಹಂಚಿಕೊಳ್ಳಬಹುದೇನೋ."

"ಹಾಗಾದ್ರೆ ನಮ್ಮ ಸಂತೋಷದಲ್ಲಿ ನೀನೂ ಒಬ್ಬಳಾಗು."



"ಆಯ್ತು ವಸೂ."

"ಇತರರ ಸಂತೋಷದಿಂದ ಜೀವ ಪಡೆದು ಇನ್ನೂ ಅದೆಷ್ಟು ದಿವಸ ನೀನು ಬದುಕ ಬೇಕೆಂದಿದ್ದೀಯೋ ನನಗರ್ಥವಾಗ್ತಿಲ್ಲ ಮಧೂ. ನಡಿ ಮನೆಗೆ ಹೋಗೋಣ."

"ಈಗ ಸ್ಕೂಲಿಗೆ ಹೋಗೋ ಟೈಮು, ಈಗ ಮನೆಗೆ ಬಂದ್ರೆ, ಸ್ಕೂಲಿಗೆ ಯಾರು ಹೋಗ್ತಾರೆ?"

"ಇವತ್ತೊಂದು ದಿನ ರಜ ಹಾಕು ಪರವಾಗಿಲ್ಲ."

ವಸಂತಳ ಒತ್ತಾಯಕ್ಕೆ ಮಣಿಯದೆ ಬೇರೆ ದಾರಿ ಕಾಣಲಿಲ್ಲ ಮಾಧವಿಗೆ. ಪಬ್ಲಿಕ್ ಬೂತ್ ಒಂದರಿಂದ ಶಾಲೆಗೆ ಫೋನಾಯಿಸಿ, ತಾನಿವತ್ತು ಬರುತ್ತಿಲ್ಲವೆಂದು ಹೇಳಿ, ವಸಂತ ಮಗುವಿನೊಂದಿಗೆ ಬಂದಾಗ ಶ್ರೀಧರ್ ಸೋಫಾದಲ್ಲಿ ಕುಳಿತು ದಿನಪತ್ರಿಕೆ ನೋಡುತ್ತಿದ್ದ. ವಸಂತಳ ತೋಳಲ್ಲಿ ಪುಟ್ಟನನ್ನು ನೋಡಿ "ಏನೋ ಪುಟ್ಟೂ ನಿನ್ನತ್ತೆ ಬೆಳಿಗ್ಗೆ ಕೋಳಿ ಕೂಗೋ ಮುಂಚೇನೆ ಬಂದು ಗಡಿಬಿಡಿ ಮಾಡಿಬಿಟ್ಲೂ." ನಕ್ಕ.

ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಗುಡುಗುಡು ಓಡಾಡುವ ನೌಕರರನ್ನು ನೋಡಿ ಮಾಧವಿಗೂ ಕುತೂಹಲ.

"ಏನಣ್ಣಾ ಇಷ್ಟೊಂದು ಹಂಗಾಮಾ ನಡೀತಿದೆ?"

"ಏನು ಹಂಗಾಮಾನೋ ಏನೋ, ಇವತ್ತು ವಸಂತ ಹುಟ್ಟಾಳೆ ಅಂತ ಪೇಪರ್‌ನಲ್ಲಿ ಹಾಕಿದ್ದಾರೆ."

ಗಂಭೀರ ಮುಖವಿಕ್ಕಿ ಹೇಳಿದ ಗಂಡನತ್ತ ಹುಸುಗೋಪದಿಂದ ನೋಡಿದಳು ವಸಂತ.

"ಮದುವೆಯಾಗಿ ಇಷ್ಟು ವಯಸ್ಸಾದರೂ ನಿಮ್ಮ ಸರಸ ಮಾತ್ರ ನಿಂತಿಲ್ಲ."

"ಹಾಗಾದ್ರೆ ಇವತ್ತು ವಸೂಳ ಬರ್ತ್‌ಡೇನಾ" ಹೇಳಿ ವಸಂತಳತ್ತ ತಿರುಗಿ "ನನಗ್ಯಾಕೆ ಹೇಳ್ಲಿಲ್ಲ." ಮುನಿಸಿಕೊಂಡಳು ಮಾಧವಿ.

"ನನಗೆ ಹೇಳಿದ್ದು ಕೂಡ ಇವತ್ತು ಬೆಳಗ್ಗೇನೆ, ಯಾವತ್ತೂ ಇಲ್ಲದಿದ್ದ ಕಯಾಲಿ ಇವತ್ತು ಬಂದಿದೆ ಇವಳಿಗೆ." ಛೇಡಿಸುತ್ತಾನೆ ಶ್ರೀಧರ್.

ವಸಂತ ಸುಮ್ಮನೆ ನಕ್ಕಳು.

"ಯಾವ ಕಯಾಲಿ" ವಿಸ್ಮಿತಳಾದಳು ಮಾಧವಿ.

"ಹುಟ್ಟುಹಬ್ಬ ಆಚರಿಸೋ ಕಯಾಲಿ." ಮಧ್ಯ ಪ್ರವೇಶಿಸಿ ಕೇಳಿದಳು ವಸಂತ.

"ಒಂದು ವೇಳೆ ನಾನು ನಿನಗೆ ನನ್ನ ಹುಟ್ಟುಹಬ್ಬದ ವಿಷಯ ಮೊದಲೇ ಹೇಳಿದ್ರೆ ನೀನು ನನಗೆ ಉಡುಗೊರೆ ತರ್ತಿದ್ಯಾ?"

"ಖಂಡಿತವಾಗಿ ತರ್ತಿದ್ದೆ."

"ಈಗ ಮಾತ್ರ ನಾನು ಸುಮ್ನೆ ಬಿಟ್ಟು ಬಿಡ್ತೀನಿ ಅಂತ ಅಂದುಕೊಂಡಿದ್ದೀಯೇನು? ನಾನೀವರ್ಷ ಜನ್ಮ ದಿನ ಆಚರಿಸಿಕೊಳ್ತಿರೋದಕ್ಕೆ ಕಾರಣ ನೀನು ಕೊಡಲಿರುವ ಉಡುಗೊರೆಯೇ!"

"ಈಗ ನನ್ ಹತ್ರ ಅಂತಾ ಉಡುಗೊರೆ ಯಾವುದಿದೆ?" ಮತ್ತೆ ಚಕಿತತೆ.

"ಇದೆ, ಅದು ನಾನು ಕೇಳೋವರೆಗೂ ನಿನಗೆ ಅರ್ಥವಾಗೋದಿಲ್ಲ."

"ಅಪ್ಪಿ ತಪ್ಪಿ ಪುಟ್ಟನನ್ನು ಕೇಳಿಬಿಟ್ಟೀಯ?" ನಗುತ್ತಲೇ ಎಚ್ಚರಿಸಿದ ಶ್ರೀಧರ್.

"ನಾನೇನೂ ಸ್ವಾರ್ಥಿಯಲ್ಲ, ನನಗೂ ಗೊತ್ತಿದೆ ಏನು ಕೇಳಬೇಕು, ಏನು ಕೇಳಬಾರದೂಂತ."

"ಹಾಗಾದ್ರೆ ಕೇಳು ಅದೇನು ಬೇಕೋ" ಕುತೂಹಲದಿಂದ ಮಾಧವಿ ಕೇಳುತ್ತಲೇ, ಕೈ ಮುಂದಕ್ಕೆ ಮಾಡಿದಳು ವಸಂತ. ಹಿಂದೆ ಮುಂದೆ ನೋಡದೆ ಪ್ರಮಾಣ ಮಾಡಿಬಿಟ್ಟಳು ಮಾಧವಿ.

"ನನ್ನ ಹತ್ತಿರ ನೀನು ಕೇಳುವ ಉಡುಗೊರೆ ಯಾವುದಿದ್ದರೂ ಸರಿ ಕೊಟ್ಟುಬಿಡುತ್ತೇನೆ."

"ಥ್ಯಾಂಕ್ಸ್ ನನಗೀಗ ಬೇಡ ಉಡುಗೊರೆ, ಸಂಜೆ ಕೇಳುತ್ತೇನೆ."

* * * * *

ಮುಸ್ಸಂಜೆಯ ತಿಳಿ ಬಂಗಾರದ ಬೆಳಕು ತೋಟದಲ್ಲಿ ಬೆತ್ತದ ಕುರ್ಚಿಯ ಮೇಲೆ ಕುಳಿತಿರುವ ವಸಂತ, ಮಾಧವಿ, ಹಸಿರು ಲಾನು ಎಲ್ಲವನ್ನು ತೀಡುತ್ತಿದೆ. ಸ್ನಾನ ಮಾಡಿಸುತ್ತಿದೆ. ಪುಟ್ಟ ಗುಡುಗುಡು ಓಡುತ್ತ ಮಣ್ಣಿನಲ್ಲಿ ಆಟವಾಡುತ್ತಿದ್ದಾನೆ.

ಮಾಧವಿಯ ಮುಖ ವೇದನೆಯಿಂದ ತುಂಬಿರುವುದನ್ನು ಗಮನಿಸಿದಳು ವಸಂತ. ಸಂಜೆಯ ವಾತಾವರಣ ಆಹ್ಲಾದಕರವಾಗಿದ್ದರೂ, ಮುದನೀಡದ ನೆನಪುಗಳ ಬೆನ್ನಟ್ಟುವ ಸಾಹಸ ನಡೆಸುತ್ತಿರುವಂತೆ ಸಾಹಸ ನಡೆಸುತ್ತಿರುವಂತೆ ಶೂನ್ಯದತ್ತ ನೆಟ್ಟಿತ್ತು ಮಾಧವಿಯ ದೃಷ್ಟಿ. ಕಳಾಹೀನ ಕಣ್ಣಂಚುಗಳಲ್ಲಿ ಜಾರಲು ಸಿದ್ಧವಾಗಿರುವ ನೀರ ಬಿಂದುವಿನ ಮೇಲೆ ಸುವರ್ಣ ಬಣ್ಣದ ಸೂರ್ಯ ರಶ್ಮಿ ಪ್ರತಿಫಲಿಸುತ್ತಿದೆ. ವಸಂತಳಿಗೂ ಅಳುಕು. ಮಾಧವಿಯ ಆನಂದವನ್ನು ತಾನು ಬೇಕೆಂದೇ ಛಿದ್ರಗೊಳಿಸುತ್ತಿದ್ದೇನೇನೋ ಎಂಬುದೇ ಆ ಅಳುಕು. ಆದರೂ ಬೇರೆ ದಾರಿಯಿಲ್ಲದೆ ಮಾಧವಿಯ ಹೃದಯವನ್ನು ತೀರಾ ಘಾಸಿಗೊಳಿಸಿರುವ ಆ ಗತ ಬದುಕನ್ನು ತಿಳಿದುಕೊಳ್ಳಲೇಬೇಕು. ಇವತ್ತೊಂದು ದಿನ ಇವಳು ಯಾವ ರೀತಿಯ ಸಂಕಟಕ್ಕೆ ಒಳಗಾದರೂ ಸರಿಯೆ.

"ಮಧೂ."

ಶೂನ್ಯದಿಂದ ವಸಂತಳತ್ತ ನೋಟ ಬದಲಿಸಿದಳು ಮಾಧವಿ. ಕಂಬನಿ ಎಳೆಗಳ ಒಳಗೇ ಮಡುಗಟ್ಟಲಾರಂಭಿಸಿದುದರಿಂದ, ನೀರು ಜಾರದ ಕೆನ್ನೆಗಳಲ್ಲಿ ಮುದವಿರಲಿಲ್ಲ. ಅದರುವ ತುಟಿಗಳನ್ನು ಹಲ್ಲುಗಳಿಂದ ಒತ್ತಿ ಹಿಡಿದು ನಸು ನಕ್ಕಳು ಮಾಧವಿ. ನಗುವಿನಲ್ಲಿ ವಿಷಾದವೂ ಸ್ಪಷ್ಟವಾದಾಗ ವಸಂತಳ ಹೃದಯ ಚಡಪಡಿಸಿ ನಿನಗಷ್ಟೊಂದು ನೋವಿದ್ರೆ ಹೇಳಬೇಡ ಬಿಡು ಎನ್ನಲು ಹೋಗಿ ಕೊನೆಗಳಿಗೆಯಲ್ಲಿ ಸುಮ್ಮನಾದಳು. ಆದರೂ "ನಿನ್ನನ್ನು ಇನ್ನಷ್ಟು ನೋಯಿಸುವುದು ನನ್ನ ಉದ್ದೇಶವಲ್ಲ. ನನ್ನ ಜನ್ಮದಿನದ ಸಲುವಾಗಿ ನೀನೇನು ಕೇಳಿದರೂ ಕೊಡುತ್ತೇನೆ ಅಂತ ನೀನು ಹೇಳಿದ್ದರಿಂದಲೇ ನಿನ್ನ ಗತ ಜೀವನದ ಬಗ್ಗೆ ಕೇಳಿದೆ." ಸಂಪೂರ್ಣ ಮನಸ್ಸಿನಿಂದ ಹೇಳುತ್ತಾಳೆ. "ನಿನ್ನ ನೋವಲ್ಲಿ ನನಗೂ ಪಾಲಿರಲಿ ಎಂಬ ಉದ್ದೇಶದಿಂದ ಮಾತ್ರ ಒತ್ತಾಯ ಮಾಡಿರೋದು ನಾನು."

"ಆದರೆ ನನ್ನ ನೋವನ್ನು ಹೇಳಿಕೊಂಡ ಮಾತ್ರಕ್ಕೆ ಅದು ದೂರವಾಗುವುದಿಲ್ಲ."

"ಇದು ನಿನ್ನ ತಪ್ಪು ಅಭಿಪ್ರಾಯ. ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದ್ದೇ ಇರುತ್ತೆ."

"ನೋ ನನ್ನ ಮಾತಿನ ಮೇಲೆ ನಿನಗೆ ನಂಬಿಕೆ ಇರದಿದ್ರೆ ಆ ಪುಟ್ಟನ ಮೇಲೆ ಪ್ರಮಾಣ ಮಾಡಿ ಹೇಳ್ತಿದ್ದೇನೆ, ನನ್ನ ಸಮಸ್ಯೆಗೆ ಪರಿಹಾರವೇ ಇಲ್ಲ. ಪರಿಹಾರ ಅನ್ನೋದು ಇದ್ರೆ ಅದು ನಾನು ನಿಮ್ಮಲ್ಲಿಗೆ ಬಂದಾಗಲೇ ಮುಗೀತು. ನನ್ನ ಬಾಳಿಗೆ ಇದಕ್ಕಿಂತ ಶಾಂತಿಯುತವಾದ ಪರಿಹಾರ ಇನ್ನೊಂದಿಲ್ಲ."

ವಸಂತಳ ಕೈಯನ್ನು ಮೃದುವಾಗಿ ಒತ್ತಿ ಮತ್ತೆ "ನಿಮ್ಮ ಆತ್ಮೀಯತೆಗೆ ನಾನು ಚಿರಋಣಿ. ನನ್ನ ಬದುಕು ಇದೇ ರೀತಿ ಕೊನೆಗೊಂಡುಬಿಟ್ಟರೆ ನನಗಷ್ಟೇ ಸಾಕು. ಅಲ್ಲೋಲಕಲ್ಲೋಲ ಸಮುದ್ರದಂತಾ ಜೀವನ ಸಾಗರದಲ್ಲಿ ಹೊಯ್ದಾಡುವ ನನ್ನ ಬದುಕಿನ ನಾವೆಗೆ ನೀವೇ ಶಾಂತಿ ತೀರ."

ಕೊನೆಯ ವಾಕ್ಯ ಹೇಳುವಾಗ ಅವಳ ಧ್ವನಿ ಗದ್ಗದಿತಗೊಂಡಿತು.

"ನಮ್ಮ ಮೇಲೆ ನಿನಗಿಷ್ಟು ಅಭಿಮಾನವಿರುವುದು ನೋಡಿ ನಾನು ಮೂಕಳಾಗಿದ್ದೇನೆ ಮಧೂ, ನಿನ್ನ ಅಲ್ಲೋಲಕಲ್ಲೋಲ ಬದುಕಿನ ಬಗ್ಗೆ ತಿಳಿದುಕೊಳ್ಳಲು ನನಗೆ ಅರ್ಹತೆ ಇಲ್ವಾ?"

"ಇದರಲ್ಲಿ ಅರ್ಹತೆ ಅನರ್ಹತೆ ಪ್ರಶ್ನೆ ಎಲ್ಲಿದೆ?"

"ಯಾಕಿಲ್ಲ, ನಮ್ಮ ಮನಸ್ಸಿಗೆ ಸಣ್ಣಗಾಯವಾದರೂ ನಮ್ಮ ಆತ್ಮೀಯರಿಗೆ ಅದನ್ನು ಕೂಡಲೇ

ಹೇಳುತ್ತೇವೆ. ಹಾಗೆ ಮಾಡುವುದರಿಂದ ನಮ್ಮ ದುಃಖ ತುಸು ಕಡಿಮೆಯಾಗುತ್ತೆ. ಇದಕ್ಕೆ ಯಾವುದೇ ಲಾಜಿಕಲ್ ಕಾರಣ ಕೊಡುವುದು ಕಷ್ಟ ನಿನ್ನಲ್ಲಿ ಎಷ್ಟೇ ಸಂಕಟವಿದ್ದರೂ ಅದನ್ನು ನನ್ನೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಸುಮಾರು ಒಂದೂವರೆ ವರ್ಷ ಕಳೆದಿದ್ದರೂ ನಾನೊಬ್ಬಳು ನಿನ್ನ ಹಿತ ಬಯಸುವವಳಿದ್ದೀನಿ ಎನ್ನುವುದು ನಿನ್ನ ಮನಸ್ಸಿಗೆ ಬಂದಿಲ್ಲ.''

ಶುಷ್ಕವಾಗಿ ನಕ್ಕಳು ಮಾಧವಿ. "ನಿನ್ನ ಅಭಿಪ್ರಾಯ, ಕೋಪ ಅಸಮಂಜಸವಾದುದೇನೂ ಅಲ್ಲ. ಆದರೂ ನನ್ನ ಬದುಕಿನಲ್ಲಿ ನಡೆದು ಹೋದ ಆ ದುರಂತ ತುಂಬ ಅಸಹಜವಾದುದು. ಅದರ ಬಗ್ಗೆ ನಿನಗೆ ಹೇಳಿ ನಾನು ತಾತ್ಕಾಲಿಕ ಉಪಶಮನ ಪಡೆದರೂ ಅದರ ಪ್ರಭಾವದಿಂದ ನೀನು ಮತ್ತೆ ಕೊರಗುವೆ. ನೀನು ತಡೆದುಕೊಳ್ಳಲಾರೆ. ನಿನ್ನ ಸ್ವಭಾವ ಆ ಕ್ರೌರ್ಯವನ್ನು ಭರಿಸುವುದಿಲ್ಲ.''

ಅರೆ ಕ್ಷಣ ಯೋಚಿಸಿ ಅನಂತರ ಮೇಲೆದ್ದಳು ವಸಂತ "ಹಾಗಾದರೆ ನಡಿ ಹೋಗೋಣ.''

"ಕೂತ್ಕೋ'' ವಸಂತಳ ಕೈ ಹಿಡಿದು ಕೂರಿಸಿದಳು ಮಾಧವಿ "ಇಷ್ಟೆಲ್ಲ ಚರ್ಚೆ ಆದ ಮೇಲೆ ನನ್ನ ದುರಂತದ ಬಗ್ಗೆ ಇನ್ನೂ ಮುಚ್ಚಿಡುವುದರಲ್ಲಿ ಯಾವ ಅರ್ಥವೂ ಇಲ್ಲ. ನಿನಗೆ ತಿಳಿಯುವುದೇ ಒಳಿತು. ಇಲ್ಲಿಯವರೆವಿಗೂ ನನ್ನ ದುರಂತ ಕಥೆಯನ್ನು ಬಲವಾಗಿ ಅದುಮಿ ಹಿಡಿದಿದ್ದೆ. ಇವತ್ತು ನಿನ್ನ ಒತ್ತಾಯದಿಂದ ಆ ಹಿಡಿತ ತುಂಬ ಸಡಿಲವಾಗಿದೆ. ಕೂತ್ಕೋ ವಸೂ ಹೇಳ್ತೇನೆ.''

"ಬೇಡ ಬಿಡು ಮಧೂ, ನಿನಗೀಗ ಇರುವ ಅಲ್ಪ ಶಾಂತಿಯನ್ನು ಕೆಡಿಸುವ ಕಠಿಣ ಮನಸ್ಕಳು ನಾನಲ್ಲ. ಬಾ ಹೋಗೋಣ.''

"ನನ್ನ ಬದುಕಿಗೆ ಶಾಂತೀನಾ.'' ವಿಷಾದಗೊಂಡಿತು ಮಾಧವಿಯ ಮನ.

ಕೆಲವು ನಿಮಿಷಗಳವರೆಗೆ ಅವರಿಬ್ಬರ ನಡುವೆ ಮೌನವೇ ಮಾತಾಯಿತು.

ಮರಗಳ ಮರೆಯಿಂದ ಈಚೆಗೆ ತನ್ನ ಕಿರಣಗಳನ್ನು ತೂರಿಸಲೆತ್ನಿಸುವ ಸೂರ್ಯನನ್ನು ನೋಡುತ್ತ "ಕತ್ತಲ ಅನಂತರ ಬೆಳಕು ಬರುತ್ತಂತೆ. ಈಗ ಅಸ್ತಮಿಸುವ ಸೂರ್ಯದೇವ ನಾಳೆ ಮತ್ತೆ ಹುಟ್ಟುತ್ತಾನೆ. ನಮ್ಮ ಬದುಕು ಕೂಡ ಕತ್ತಲ ಬೆಳಕಿನ ಮಿಶ್ರಣ ಎನ್ನುತ್ತಾರೆ. ಆದರೆ ನನ್ನ ಬದುಕು ಮಾತ್ರ ಗಾಢಾಂಧಕಾರದಲ್ಲಿ ಮುಳುಗಿಬಿಟ್ಟಿದೆ'' ಅಂದಳು ಮಾಧವಿ.

"ಆದರೆ ಈ ಕತ್ತಲು ಸದಾ ಶಾಶ್ವತವಲ್ಲ.'' ನಿಡುಸುಯ್ದು- ಮುಂದುವರಿಸಿದಳು ಮಾಧವಿ "ನಾನು ಕಾಲೇಜು ಓದುವಾಗ ನನ್ನ ಮೆಚ್ಚಿನ ಗೆಳತಿ ಜಯಶ್ರೀ. ಯಾವುದೋ ದೂರದ ಹಳ್ಳಿ ಜಯಶ್ರೀಯದು. ಅವಳು ಹಾಸ್ಟಲ್‌ನಲ್ಲಿದ್ದಳು. ಅವಳಣ್ಣ ಆನಂದ್ ಅಗ್ರಿಕಲ್ಚರಲ್ ಕಚೇರಿಯಲ್ಲಿ ಡೆಮಾನ್‌ಸ್ಟ್ರೇಟರ್. ಹೊರಗೆಲ್ಲೋ ರೂಮು ತಗೊಂಡಿದ್ದ. ಅವರ ತಾಯಿಗೆ ದೇಹಾರೋಗ್ಯ ಸರಿ ಇಲ್ಲದಿದ್ದುದರಿಂದ ಆಕೆ ಹಳ್ಳಿಯಲ್ಲೇ ಉಳಿದುಕೊಂಡಳು. ಎಷ್ಟು ಬೇಗ ಆನಂದ್‌ನಿಗೆ ಮದುವೆ ಆದರೆ ಅಷ್ಟು ಒಳ್ಳೇದು ಅಂತ ಜಯಶ್ರೀ ಅಭಿಪ್ರಾಯಪಟ್ಟಿದ್ದಳು.

"ಆಗಾಗ ಜಯಶ್ರೀಯೊಟ್ಟಿಗೆ ನಾನವಳ ಅಣ್ಣನ ರೂಮಿಗೆ ಹೋಗ್ತಿದ್ದೆ. ತುಂಬ ಸಲಿಗೆಯಿಂದ ಮಾತಾಡಿಸುತ್ತಿದ್ದ. ಪ್ರತಿ ಭಾನುವಾರ ಆತ ಕೂಡ ಹಾಸ್ಟಲ್‌ಗೆ ಬಂದು ಜಯಶ್ರೀಯನ್ನು ನೋಡ್ತಿದ್ದ. ಬೆಳಿಗ್ಗೆ ಆತ ಹಾಸ್ಟಲ್ಲಿಗೆ ಬರದಿದ್ರೆ ಅವತ್ತು ಸಂಜೆ ಜಯಶ್ರೀ ಅವನ ಕೋಣೆಗೆ ಹೋಗಬೇಕು. ಅದು ಅವರಿಬ್ಬರ ನಡುವೆ ಇದ್ದ ಕಂಡೀಶನ್. ಹಾಗೆ ಅವಳು ಅಣ್ಣನ ರೂಮಿಗೆ ಹೋದಾಗಲೆಲ್ಲ ನನ್ನನ್ನೂ ಕರೆದೊಯ್ಯುತ್ತಿದ್ದಳು.

"ಒಂದು ದಿನ ನಾವಿಬ್ಬರೂ ಸಂಜೆ ಆನಂದ್‌ನ ಕೋಣೆಗೆ ಹೋದಾಗ ಆತ ಸ್ನಾನದ ಕೋಣೆಯಲ್ಲಿದ್ದ. ಹೋಗುತ್ತಲೇ ಅಣ್ಣನಿಗೆ ಸಹಸ್ರನಾಮ ಮಾಡಿದಳು "ನಿನಗೀಗಲೇ ಇಷ್ಟೊಂದು ಡಿಮ್ಯಾಂಡ್ ಆಗಿ ಬಿಟ್ಟರೆ ಇನ್ನು ಮದುವೆ ಆದ ಮೇಲೆ ನಿನ್ನ ಅಡ್ರೆಸ್ ಹುಡುಕೋದೇ ಕಷ್ಟವೇನೋ. ನಿನ್ನ ಸೋದರ ಪ್ರೇಮಕ್ಕೆ ನಾನು ಪರೀಕ್ಷೆ ಇಡ್ತೇನೆ, ನಾನಿನ್ಮೇಲೆ ಇಲ್ಲಿಗೆ ಬರೋದೇ ಇಲ್ಲ.

ಹಾಸ್ಟೆಲ್‌ನಲ್ಲೇ ಇರ್ತೇನೆ. ಆಗ ನೀನೆಷ್ಟು ಸಲ ಬಂದು ಹೋಗ್ತೀಯೋ ಗೊತ್ತಾಗಿ ಬಿಡುತ್ತೆ.''

"ಯಾಕೆ ಸುಳ್ಳು ಹೇಳ್ತೀ. ಮೂರು ವಾರಗಳಿಂದ ನಾನೇ ಬರಬೇಕಾಗಿತ್ತಾ? ಅಪ್ಪನಿಗೆ ಕಾಗದ ಹಾಕ್ತೇನೆ. ದಿನನಿತ್ಯ ಸಂಜೆ ಹಾಸ್ಟೆಲ್‌ನಲ್ಲಿ ಅಟೆಂಡೆನ್ಸ್ ಕೊಡು ಅಂತ ಹೇಳಿ ಬರೀತೇನೆ ಅಪ್ಪನಿಗೆ, ಆಗಲೇ ನಿನಗೆ ಬುದ್ಧಿ ಬರೋದು.''

"ಬೇಕಾದ್ರೆ ಎಕ್ಸಟ್ರಾ ಪೋಸ್ಟಲ್ ಚಾರ್ಜು ನಾನು ಕೊಡ್ತೇನೆ. ಎಕ್ಸ್‌ಪ್ರೆಸ್ ಟೆಲಿಗ್ರಾಮ್ ಕೊಟ್ಟು ಬಿಡು. ಪ್ರತಿವಾರ ಈ ಬೇಕಾರ್ ಭೇಟಿ ನನಗಂತೂ ತುಂಬ ಬೇಸರವಾಗಿ ಬಿಟ್ಟಿದೆ.'' ನಾನೂ ಹೇಳಿದೆ ಆನಂದ್‌ನಿಗೆ.

"ನಾವಿಬ್ರೂ ಕಾಗೆ ಗೂಗೆ ತರಾ ಗಂಟಲು ಕಿರುಚಿ ಮಾತಾಡ್ತಿದ್ರೂ ಬಾಯಿ ಬಿಡ್ತಾನೇನೋ ನೋಡು.'' ಮೂದಲಿಸಿದಳು ಜಯಶ್ರೀ "ಅವಳು ಯಾವಳು ಇವನಿಗೆ ಹೆಂಡ್ತಿಯಾಗಿ ಬರ್ತಾಳೋ ಏನೋ, ಇವನು ಸ್ನಾನ ಮುಗಿಸಿ ಬರೋಷ್ಟರಲ್ಲಿ ಅವಳು ಮುದುಕಿಯಾಗಿ ಬಿಟ್ಟಿರ್ತಾಳೆ.''

"ಹೋಗ್ಲಿ ಮುದುಕೀನೇ ಇವನಿಗೆ ಕಟ್ಟಿಬಿಟ್ರೆ ಹೇಗೆ'' ನಾನು ನಗು ತಡೆದುಕೊಳ್ಳುತ್ತಲೇ ಕೇಳಿದೆ.

"ಆಗ ಇವನು ಸ್ನಾನ ಮುಗಿಸಿ ಬರೋದ್ರಲ್ಲಿ ಅವಳು ಸತ್ತು ಇನ್ನೊಂದು ಜನ್ಮ ಎತ್ತಿರುತ್ತಾಳೆ.''

ಆದರೆ ಸ್ನಾನದ ಕೋಣೆಯಿಂದ ಕೇಳಿ ಬರುತ್ತಿದ್ದುದು ಕೇವಲ ನಲ್ಲಿಯ ನೀರಿನ ಸದ್ದು ಮಾತ್ರ, ಆನಂದ್ ಮಾತಾಡಲಿಲ್ಲ.

"ಲೋ ಸೋದರಾನಂದ, ಬಾಗಿಲು ತೆಗೀತಿಯ ಅಥವಾ ಬಾಗಿಲು ಮುರಿದು ಒಳಗೆ ಬರೋಣವಾ.'' ಬಾಗಿಲ ಮೇಲೆ ದಬದಬ ಕೈಯಿಂದ ಗುದ್ದಿದಳು ಜಯಶ್ರೀ.

ಕೆಲ ಕ್ಷಣಗಳ ಅನಂತರ ಬಾಗಿಲು ತೆರೆದುಕೊಂಡು ಹೊರ ಬಂತು ವ್ಯಕ್ತಿಯೊಂದು. ನಾವಿಬ್ಬರೂ ಆ ವ್ಯಕ್ತಿಯನ್ನು ನೋಡುತ್ತಲೇ ನಾಚಿ ನೀರಾಗಿ ಬಿಟ್ವಿ. ಜಯಶ್ರೀ ತಟ್ಟನೆ ಬಾತ್‌ರೂಮಿನೊಳಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡು ನನಗೆ ಮಾತ್ರ ಹೇಳಿದಳು 'ಈಗ್ಲೇ ಬಂದೆ ಕಣೆ, ಮುಖ ತೊಳ್ಕೊಂಡು.'

ಸ್ನಾನದ ಮನೆಯಿಂದ ಹೊರಬಂದ ಆತ ಅಲ್ಲೇ ನಿಂತು ಟವಲಿನಿಂದ ದೇಹ ಒರೆಸಿಕೊಳ್ಳಲಾರಂಭಿಸಿದ. ಸಂಕೋಚದಿಂದ ತತ್ತರಿಸುತ್ತಿದ್ದ ನಾನು ಹಾಗೂ ಹೀಗೂ ಮಾಡಿ ಧೈರ್ಯದಿಂದ ಆತನತ್ತ ತಿರುಗಿದೆ. ಆತ ಚೌಕುಳಿ ಲುಂಗಿ ಸುತ್ತಿಕೊಂಡಿದ್ದ. ಬನಿಯನ್ ರಹಿತ, ರೋಮಸಹಿತ ಎದೆ, ವಿಶಾಲ ಭುಜ, ಕೂದಲು ಕಪ್ಪಗೆ ಒತ್ತಾಗಿತ್ತು. ಅವನನ್ನೇ ನೋಡುತ್ತಿದ್ದ ನಾನು ಬೆಚ್ಚಿ ಬಿದ್ದೆ. ಯಾಕೆಂದರೆ ಆತನ ಮುಂದಿನ ಡ್ರೆಸ್ಸಿಂಗ್ ಟೇಬಲಿನ ಮೇಲಿಟ್ಟಿದ್ದ ಕನ್ನಡಿಯೊಂದರ ಮೂಲಕ ಆತನ ಎರಡು ಕಣ್ಣುಗಳು ನನ್ನನ್ನೇ ಗಮನಿಸುತ್ತಿದ್ದವು. ನನಗಂತೂ ತುಂಬ ಸಿಟ್ಟು ಬಂತು, ಆದರೆ ಆ ಸಿಟ್ಟು ಕೂಡ ಹೆಚ್ಚು ಸಮಯವಿರಲಿಲ್ಲ. ಅವನು ನನ್ನನ್ನು ನೋಡಿದರೇನಾಯಿತು, ನಾನವನನ್ನು ನೋಡ್ತಿದ್ದೀನಲ್ಲ. ಕೂಡಲೇ ಪಕ್ಕಕ್ಕೆ ತಿರುಗಿ ನಿಂತೆ. ಈಗಂತೂ ಇಬ್ಬಂದಿ ಸ್ಥಿತಿಯಲ್ಲಿ ನಿಂತುಬಿಟ್ಟೆ ಐದಾರು ನಿಮಿಷದ ಹಿಂದೆ ಸ್ನಾನದ ಕೊಟಡಿಗೆ ಹೋದ ಜಯಶ್ರೀ ಇನ್ನೂ ಹೊರಬಂದಿರಲಿಲ್ಲ. ಈ ಮಹಾನುಭಾವ ಯಾರೋ ಗೊತ್ತಿಲ್ಲ. ಕೊನೇಪಕ್ಷ ಸಂಸ್ಕಾರವಿರುವವನಂತೆ ಔಪಚಾರಿಕವಾಗಿ ಆದರೂ ಮಾತಾಡಿಸುತ್ತಿದ್ದನಲ್ಲ.

ಹೀಗೆ ಚಡಪಡಿಸುತ್ತಿರುವಾಗ ಆನಂದನ ನೆನಪು ತಾಗಿತು. ಹೌದು, ಇಷ್ಟಕ್ಕೂ ಆನಂದ್ ಎಲ್ಲಿ? ಬಹುಶಃ ಈ ರೂಮನ್ನು ಖಾಲಿ ಮಾಡಿದ್ದಾನಾ. ವಾರೆಗಣ್ಣಿಂದ ಕೋಣೆಯನ್ನು ಅವಲೋಕಿಸಿದೆ. ಥ್ಯಾಂಕ್ ಗಾಡ್ ಎಲ್ಲ ಆನಂದ್‌ನ ವಸ್ತುಗಳು ಹಾಗೆಯೇ ಇದ್ದವು. ಎಲ್ಲಿ ಹೋಗಿದ್ದಾನೋ ಏನೋ? ಇವಳೇನು ಇಷ್ಟು ಹೊತ್ತಾದರೂ ಬಾತ್‌ರೂಮಿನಿಂದ ಬರಲಿಲ್ಲವಲ್ಲ, ನೀರಿನ ಶಬ್ದವೂ ಕೇಳಿಸುತ್ತಿಲ್ಲ. ಬಹುಶಾ ನಾಚಿಕೆಯಿಂದ ಆತ್ಮಹತ್ಯೆ ಮಾಡಿಕೊಂಡು ಬಿಟ್ಟಿದ್ದಾಳೋ ಏನೋ, ನಾನು ಆ ಜಾಗದಿಂದ ಹೊರಗೆ ಹೋಗಲು ಯತ್ನಿಸುತ್ತಿರುವಾಗ ಕೋಣೆಯೊಳಕ್ಕೆ ಬಂದ ಆನಂದ್.

"ನೀರೇನ್ ನಮ್ಮ ಶೂರ್ಪನಖಿ ಬಂದಿದ್ದಾಳಾ?''

ನಾನು ಬಾಯಿತೆರೆದು ಹೇಳುವುದರಲ್ಲಿ ದಢಾರನೆ ಬಾಗಿಲು ತೆರೆದುಕೊಂಡು ಬಂದಳು ಜಯಶ್ರೀ "ಈಗ ಬೆಳಗಾಗಿದೆಯ ರಾವಣಾಸುರ?" ಹೆದರಿದಂತೆ ಹೇಳಿದ ಆನಂದ್ "ನೀನು ಬಾಯಿ ತೆಗೀಬೇಡಮ್ಮ, ಭಯದಿಂದ ಸತ್ತು ಹೋಗ್ತೇನೆ."

"ಇನ್ನೇನು ಬಯ್ತಾರೆ ಬಿಡು ಆನಂದ್." ನೀರೇನ್ ಎಂಬ ವ್ಯಕ್ತಿ ಹೇಳಿದ. "ನಿನಗೆ ಏನೇನು ಬಯ್ಯಬೇಕೂಂತಿದ್ರೋ ಅದನ್ನೆಲ್ಲ ನನಗೇ ಹೇಳಿದ್ದಾಗಿದೆ. ಏನೂ ಬ್ಯಾಲನ್ಸ್ ಇಲ್ಲ."

"ಈ ಸೊಣಕಲ ಕಡ್ಡೀನ ಅಷ್ಟೆಲ್ಲ ಬಯ್ದು ಬಿಟ್ರಾ?" ಸಹಾನುಭೂತಿ ಪ್ರಕಟಿಸಿದ ಆನಂದ್. ನೀರೇನ್‌ನನ್ನು ಸೊಣಕಲು ಅಂತ ಕರೆದುದಕ್ಕೆ ನನಗೆ ನಗು ತಡೆಯಲಾಗಲಿಲ್ಲ. ದೃಢವಾದ ಮೈಕಟ್ಟಿನ ನರೇನ್ ಸೊಣಕಲ್ಲನಲ್ಲ, ದಾರಾಸಿಂಗ್ ಅಂತ ಹೇಳಬಹುದೆನ್ನಿಸಿತು.

"ಐಯಾಂ ಸಾರಿ. ಇಲ್ಲಿಯವರೆವಿಗೂ ಇವನ ಪರಿಚಯವೇ ಮಾಡಿಸಲಿಲ್ಲವಲ್ಲ, ಇವನ ಹೆಸರು ನರೇಂದ್ರ. ನಾನು ನರೇನ್ ಅಂತ ಕರೀತೇನೆ. ಬಿ. ಇ. ಅಂತಿಮ ವರ್ಷ ಓದ್ತಿದ್ದಾನೆ. ನನ್ನ ಕ್ಲೋಸ್ ಫ್ರೆಂಡ್ ಪ್ರಕಾಶನ ಸಂಬಂಧಿ. ಇಷ್ಟು ದಿವಸ ಅವನ ಮನೇಲೇ ಇದ್ದ, ಈಗವರು ವರ್ಗವಾಗಿ ಹೊರಟು ಹೋಗಿರೋದ್ರಿಂದ ನನ್ನ ರೂಮಲ್ಲೇ ಇರಲಿಕ್ಕೆ ಹೇಳಿದ್ದೇನೆ." ಅಪರಿಚಿತನನ್ನು ಪರಿಚಿತನನ್ನಾಗಿ ಮಾಡಿದ ಆನಂದ್.

"ನರೇನ್ ಇವಳು ನನ್ ತಂಗಿ ಶೂರ್ಪನಖಿ ಅರ್ಥಾತ್ ಜಯಶ್ರೀ. ಈಕೆ ಮಾಧವಿ, ಜಯಶ್ರೀಯ ಕ್ಲಾಸ್‌ಮೇಟ್."

ನರೇಂದ್ರ ಕಿರುನಗೆ ನಕ್ಕು "ಹಲೋ" ಎಂದ. ನನ್ನಲ್ಲಿ ನಾಚಿಕೆ ಇನ್ನೂ ಸಾಕಷ್ಟು ಪ್ರಮಾಣದಲ್ಲಿದ್ದುದರಿಂದ ನಾನು ಪ್ರತಿಯಾಗಿ ಹಲೋ ಎನ್ನಲಿಲ್ಲ. ತಲೆಬಾಗಿಸಿ ನಿಂತುಬಿಟ್ಟೆ ವಿಚಿತ್ರವೆಂದರೆ ಜಯಶ್ರೀ ಕೂಡ ಪ್ರತಿಯಾಗಿ ನಮಸ್ಕರಿಸಲಿಲ್ಲ. ಕಿಟಕಿಯಾಚೆ ನೋಡುತ್ತಿದ್ದಳು.

ಅಷ್ಟರಲ್ಲಿ ಆನಂದ್ "ಆಗ್ಲೇ ಅದೇನೋ ಬಯ್ದರೂಂತ ಹೇಳ್ದೆ" ಎಂದು ಕೇಳಿದಾಗ ನರೇಂದ್ರ ಪಕಪಕ ನಕ್ಕು ಹೇಳಿದ.

"ಆ್ೀ ನಾನು ಬಾತ್ ರೂಮಿನಲ್ಲಿದ್ದೆ, ಒಳಗಿರೋದು ನೀನು ಅಂತ ಭಾವಿಸಿ ನನಗೆ ಸಹಸ್ರನಾಮ ಮಾಡಿಬಿಟ್ಟರು."

"ಓಹೋ ಹಾಗೋ ವಿಷಯ, ಅದಕ್ಕೇ ಇರಬೇಕು, ಇಬ್ಬರೂ ಚಳಿಜ್ವರ ಬಂದಿರೋವ್ರ ತರಾ ಗಡಗಡ ನಡುಗ್ತಿರೋದು."

. ಜಯಶ್ರೀ ತಟ್ಟನೆ ಹೇಳಿದಳು "ನಾವೇನೂ ಗಡಗಡ ನಡುಗ್ತಿಲ್ಲ." ನರೇಂದ್ರನತ್ತ ತಿರುಗಿ "ದಯವಿಟ್ಟು ಕ್ಷಮಿಸಿ" ಎಂದಾಗ, ಆತ "ಪರವಾಗಿಲ್ಲ" ಎಂದುಬಿಟ್ಟ. ನಾನು ಕ್ಷಮೆ ಯಾಚಿಸಲಿಲ್ಲ, ಸ್ವಲ್ಪ ಹೊತ್ತಿನಲ್ಲೇ ಜಯಶ್ರೀ ತನ್ನ ಸಂಕೋಚಕಟ್ಟೆ ಭೇದಿಸಿಕೊಂಡು ನರೇಂದ್ರನೊಂದಿಗೆ ತುಂಬ ಸಲಿಗೆಯಿಂದ ಮಾತಾಡಲಾರಂಭಿಸಿದಳು. ಹೇಳಬೇಕೆಂದರೆ ಜಯಶ್ರೀಗಿಂತ ನಾನೇ ಹೆಚ್ಚು ಬೇಗ ಜನರೊಂದಿಗೆ ಬೆರೆಯುವವಳು. ಆದರೂ ಯಾಕೋ ನಾನು ನರೇಂದ್ರನೊಂದಿಗೆ ಹೆಚ್ಚು ಬೆರೆಯಲಿಲ್ಲ. ಆಗಾಗ ನೆಪಮಾತ್ರಕ್ಕೆ ನನ್ನ ಮಾತು ಸೇರಿಸುತ್ತ ಆತನನ್ನು ಗಮನಿಸುತ್ತಿದ್ದೆ. ಮಾತಿನ ಮಧ್ಯೆ ನರೇಂದ್ರ ನಗುವಾಗ ಮುತ್ತಿನ ಪೆಟ್ಟಿಗೆಯ ಮುಚ್ಚಳ ತೆರೆದಂತಿತ್ತು. ಕಡುಗೆಂಪು ಬೊಗಸೆಗಳಿಂದ ಮಲ್ಲಿಗೆಗಳನ್ನು ಜಾರಿಸಿದಾಗ ಬಂದು ಹೃದಯವನ್ನು ಸ್ಪರ್ಶಿಸುವಂತೆ ಪುಳಕಗೊಳಿಸುತ್ತಿತ್ತು. ಗಂಡಸರ ನಗುವಲ್ಲೂ ಕೂಡ ಇಷ್ಟೊಂದು ಸೌಂದರ್ಯ, ಆಕರ್ಷಣೆ ಇರಬಹುದೂಂತ ನರೇಂದ್ರನ ಎದುರಿಗೆ ಕುಳಿತಾಗಲೇ ನನಗೆ ಅನುಭವವಾದದ್ದು.

ಮಾತು ಮುಗಿಸಿ ಬರುವಾಗ ಜಯಶ್ರೀ ಆನಂದನಿಗೆ ವಾರ್ನಿಂಗ್ ಕೊಟ್ಟಳು. "ಮುಂದಿನ ಭಾನುವಾರದಿಂದ ನೀನೇ ಹಾಸ್ಟಲಿಗೆ ಬರಬೇಕು, ನಾನು ಬರೋದಿಲ್ಲ."

"ಓಕೆ ಸಿಸ್ಟರ್, ನಾನೇ ಬರ್ತೇನೆ, ಆಯ್ತು?"

"ವೆರಿಗುಡ್."

ನಾವಿಬ್ಬರೂ ವಾಪಾಸು ಬಂದುಬಿಟ್ಟೆವು. ಅನಂತರ ಎರಡೂ ಭಾನುವಾರ ಆನಂದ್ ಬಂದು ಹೋದ ಅಂತ ಜಯಶ್ರೀ ಹೇಳಿದಳು. ಮೂರನೆಯ ಭಾನುವಾರ ಆತ ಬರಲಿಲ್ಲವಾದುದರಿಂದ ನನ್ನ ಮನೆಗೆ ಬಂದು ಇವತ್ತು ಸಂಜೆ ಅವನ ರೂಮಿಗೆ ಹೋಗೋಣ ಎಂದು ಕರೆದಾಗ ನನಗೆ ಮೈಯಲ್ಲಿ ಅನಾರೋಗ್ಯವಿದ್ದುದರಿಂದ ಹೋಗಲಾಗಲಿಲ್ಲ. ಆಮೇಲೆ ಫಸ್ಟ್‌ಟರ್ಮ್ ಪರೀಕ್ಷೆ, ಅದರ ಅನಂತರ ದಸರ ರಜೆ, ರಜೆಗೆ ಜಯಶ್ರೀ ತನ್ನ ಹಳ್ಳಿಗೆ ಹೋಗಿಬಿಟ್ಟರೆ ನಾನು ಎಲ್ಲಿಗೂ ಹೋಗಲಿಲ್ಲ. ಕಾಲೇಜು ಮತ್ತೆ ತೆರೆದ ಮೇಲೂ ಅವಳು ಬರಲಿಲ್ಲ. ಹತ್ತು ದಿವಸದ ಅನಂತರ ಬಂದಳು. ಬರುವಾಗ ಸುಮ್ಮನೆ ಬರಲಿಲ್ಲ, ತೀವ್ರ ಜ್ವರವನ್ನು ಹೊತ್ತು ತಂದಿದ್ದಳು.

ನಗರಕ್ಕೆ ಬಂದ ಮೂರನೆಯ ದಿನ ಅಂದರೆ ಶನಿವಾರ ಜಯಶ್ರೀಗೆ ತುಂಬ ತೀವ್ರವಾಗಿತ್ತು ಜ್ವರ. ನನ್ನ ಮನೆಗೆ ಬಾರೆ ಅಂತ ಕರೆದರೆ ಒಪ್ಪಲಿಲ್ಲ. ಕತ್ತಲಾಗುವವರೆಗೂ ಅವಳ ರೂಮಿನಲ್ಲಿದ್ದು ಮನೆಗೆ ಬಂದುಬಿಟ್ಟೆ. ಮರುದಿನ ಭಾನುವಾರ ಹತ್ತು ಗಂಟೆಗೆ ಹಾಸ್ಟಲಿಗೆ ಹೋದೆ ಮತ್ತೆ. ಅವಳಿಗೆ ಜ್ವರ ಕಡಿಮೆಯಾಗುವ ಸೂಚನೆ ಕಾಣಲಿಲ್ಲ. ನನ್ನನ್ನು ನೋಡುತ್ತಲೇ "ನೋಡಿದ್ಯೇನೆ ಅವನು ಬರಲೇ ಇಲ್ಲ" ಎಂದಳು.

"ಏನೋ ಅರ್ಜೆಂಟ್ ಕೆಲಸ ತಾಗಿರುತ್ತೆ, ಬಹುಶಾ ಸಂಜೆ ಬರ್‍ತಾನೆ ಬಿಡು."

"ನನಗೂ ಜ್ವರ ಬಾಧೆ, ನಾನು ಹೋಗಲಿಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಹೋದ್ರೆ ಇಷ್ಟೊಂದು ಜ್ವರ ಇಟ್ಕೊಂಡು ಹೋಗಿದ್ದಕ್ಕೆ ಬಯ್ದುಬಿಡ್ತಾನೆ." ಈ ಅಣ್ಣ ತಂಗಿ ಒಬ್ಬರನ್ನೊಬ್ಬರು ದೂರುತ್ತಾರೆ, ಛೇಡಿಸಿಕೊಳ್ಳುತ್ತಾರೆ, ಟೀಕಿಸುತ್ತಾರೆ. ಆದರೂ ಒಬ್ಬರೆಂದರೆ ಮತ್ತೊಬ್ಬರಿಗೆ ಪಂಚಪ್ರಾಣ. ಅವರಿಬ್ಬರನ್ನು ನೋಡುವಾಗ ನನಗೂ ಅನ್ನಿಸುತ್ತಿತ್ತು 'ಅಂತಾ ಅಣ್ಣ ನನಗೂ ಒಬ್ಬ ಇದ್ದಿದ್ದರೆ...'

"ಅವನು ಈ ವಾರ ಬರದಿದ್ರೆ ಮುಂದಿನ ವಾರ ಬರ್‍ತಾನೆ ಬಿಡು. ಅದಕ್ಯಾಕೆ ಇಷ್ಟೊಂದು ಚಿಂತೆ."

"ಅಷ್ಟರವರೆಗೂ ಕಾಯೋಕ್ಕೆ ಆಗೋದಿಲ್ಲ ಕಣೆ. ನಾಳೆ ಅವನ ಹುಟ್ಟುಹಬ್ಬ."

"ಹುಟ್ಟುಹಬ್ಬ ಆದ್ರೆ ಏನಾಯ್ತು?"

"ನಾನಿಲ್ಲಿಗೆ ಬರುವಾಗ ಅಮ್ಮ ಅವನಿಗೊಂದು ಜೊತೆ ಪಂಚೆ ಕೊಟ್ಟಿದ್ದಳು. ಅದನ್ನು ಅವನು ಅವನ ಹುಟ್ಟುಹಬ್ಬದ ದಿವಸ ಉಟ್ಕೋಬೇಕಂತೆ. ಪ್ಲೀಸ್ ನಂಗೊಂದು ಸಹಾಯ ಮಾಡ್ತಿಯಾ?"

"ಹೇಳು."

"ಪಂಚೇನ ತಗೊಂಡು ಹೋಗಿ ಅವನಿಗೆ ಕೊಟ್ಟು ಬರ್‍ತಿಯಾ."

"ನಿಮ್ಮಣ್ಣನಿಗೇನು ಬೇರೆ ಪಂಚೆಗಳು ಗತೀನೆ ಇಲ್ವಾ?"

"ನನ್ನ ಉದ್ದೇಶ ಅದಲ್ಲ. ವರ್ಷ ವರ್ಷ ಅವನ ಹುಟ್ಟುಹಬ್ಬಕ್ಕೆ ಅಮ್ಮ ಪಂಚೆ, ಶಲ್ಯ ಕಳಿಸುತ್ತಾಳೆ, ಇವನು ಉಟ್ಕೊಳ್ತಾನೆ. ಅದು ಅಮ್ಮನ ಸೆಂಟಿಮೆಂಟ್. ಪ್ಲೀಸ್ ಈ ಸಹಾಯ ಮಾಡಿಬಿಡೇ ಮಧೂ."

ಅವರ ಅಮ್ಮನ ಸೆಂಟಿಮೆಂಟನ್ನು ಮುರಿಯಲು ಯಾಕೋ ನನಗಿಷ್ಟವಾಗಲಿಲ್ಲ. ಸರಿ ಎಂದು ಜಯಶ್ರೀಯಿಂದ ಜರಿ ಅಂಚಿನ ಪಂಚೆ, ಶಲ್ಯ ಇಸಿದುಕೊಂಡು ಆನಂದ್‌ನ ರೂಮಿಗೆ ಬಂದಾಗ, ರೂಮಿನ ಬಾಗಿಲಿಗೆ ಬೀಗ ಹಾಕಿತ್ತು. ಶಿವ ಶಿವ ಅಂತ ರೂಮಿನ ಮುಂದೆಯೇ ಕಾದು ನಿಂತಿದ್ದಾಗ ನರೇಂದ್ರ ಸೈಕಲ್‌ನಲ್ಲಿ ಬಂದ. ಆತನನ್ನು ನೋಡುತ್ತಲೇ ನನ್ನಲ್ಲಿ ಮತ್ತೆಂಥದೋ ಪುಳಕ.

ಸೈಕಲ್ ಸ್ಟ್ಯಾಂಡ್ ಹಾಕಿ "ಹಲೋ" ಅಂತ ಹೇಳಿದ ನರೇಂದ್ರ. ನಾನು ಕೂಡ "ಹಲೋ" ಎಂದೆ. ಆದರೆ ನನಗೇ ಗೊತ್ತಿಲ್ಲದಂತೆ ನನ್ನ ಮಾತು ತಡಬಡಿಸಿತು.

ಅನಂತರ ರೂಮಿನ ಬೀಗ ತೆರೆದು "ಬನ್ನಿ ಒಳಗೆ" ಅಂದ. ಸಂಕೋಚದಿಂದಲೇ ಒಳ ನಡೆದೆ.

"ಕೂತ್ಕೊಳ್ಳಿ ಪ್ಲೀಸ್."

ನಾನು ಕುಳಿತುಕೊಂಡ ಮೇಲೆ ಎರಡು ಬಟ್ಟಲುಗಳಲ್ಲಿ ಕಾಫಿ ಸುರಿದು ತಂದು ನನಗೊಂದು ಬಟ್ಟಲು ಕೊಟ್ಟ. ಕಾಫಿ ಕುಡಿಯುವಾಗ ನಮ್ಮ ನಡುವೆ ಮಾತಿರಲಿಲ್ಲ. ಕುಡಿದು ಮುಗಿಸಿದ ಮೇಲೆ ನರೇಂದ್ರನೇ,

"ನಾನು ನಿಮ್ಮ ಬಗ್ಗೆ ಕೇಳಿದ ಪ್ರಕಾರ ನೀವು ತುಂಬ ಧೈರ್ಯವಂತೆ, ಮಾತಲ್ಲಿ ನಿಮ್ಮನ್ನು ಯಾರೂ ಗೆಲ್ಲಲು ಸಾಧ್ಯವಿಲ್ಲಾಂತೆ."

ನನಗೆ ಸಿಟ್ಟು ಬರಲಿಲ್ಲ ಅಥವಾ ಅಸಮಾಧಾನ ಕೂಡ ಆಗಲಿಲ್ಲ. ನಸುನಗುತ್ತ ಇದ್ದುಬಿಟ್ಟೆ.

"ನೀವು ಒಪ್ಪಿಕೊಂಡರೂ, ಬಿಟ್ಟರೂ ಒಂದಂತೂ ನಿಜ" ಎಂದ ಮತ್ತೆ.

"ಯಾವುದು?"

"ಬಾಯಿಂದ ಎಲ್ಲರೂ ಮಾತಾಡಬಲ್ಲರು, ಆದರೆ ಕಣ್ಣಿಂದ ಮಾತಾಡಲು ಯಾರಿಗೂ ಸಾಧ್ಯವಿಲ್ಲ. ಆದರೆ ನೀವು ಮಾತ್ರ ಕಣ್ಣಿಂದ ಕೂಡ ಮಾತಾಡುವಿರಿ."

ನಾನು ಮತ್ತೆ ಏನೂ ಹೇಳಲಿಲ್ಲ 'ತುಂಬ ತುಂಟನೆಂದುಕೊಂಡೆ. ಅವತ್ತು ನಮ್ಮ ಬಯ್ಗುಳವನ್ನು ತುಟಿಪಿಟಿಕ್ ಎನ್ನದೆ ತಾಳಿಕೊಂಡ ಅಮಾಯಕ ನರೇಂದ್ರನಿಗೂ, ಈ ತುಂಟ ನರೇಂದ್ರನಿಗೂ ಎಷ್ಟೊಂದು ವ್ಯತ್ಯಾಸವಿದೆ' ಎನ್ನಿಸಿತು. ನನ್ನ ಯೋಚನಾ ಮಿಳಿತ ಮೌನವನ್ನು ಗ್ರಹಿಸಿದ ನರೇಂದ್ರ. "ಯಾಕೆ ಸಿಟ್ಟು ಬಂತಾ?"

"ಇಲ್ಲ ಇಲ್ಲ, ಹೌದು." ತೊದಲಿಬಿಟ್ಟೆ ನಾನು. ಆತ ಪಕಪಕ ನಕ್ಕುಬಿಟ್ಟ. ನಾನು ತಲೆ ಬಾಗಿಸಿಬಿಟ್ಟೆ. ನರೇಂದ್ರನಿಗೆ ಏನನ್ನಿಸಿತೋ ಏನೋ ತನ್ನ ತುಂಟಾಟ ಬಿಟ್ಟು ಗಂಭೀರ ಧ್ವನಿಯಲ್ಲಿ.

"ಅಂದಹಾಗೆ ನಿಮ್ಮ ಕೈಲಿರೋ ಪ್ಯಾಕೆಟ್ ನೋಡಿದ್ರೆ ನೀವು ಯಾವುದೋ ಕೆಲಸದ ಮೇಲೆ ಬಂದಿರೋ ಹಾಗೆ ಕಾಣುತ್ತೆ."

ನಿರಾಳಗೊಂಡೆ ನಾನು "ಆನಂದ್ ಯಾವಾಗ ಬರ್ತಾರೆ?"

"ಇವತ್ತು ಬೆಳಿಗ್ಗೆ ಊರಿಗೆ ಹೋದ, ಅವರ ಅಮ್ಮನಿಂದ ತನ್ನ ಹುಟ್ಟುಹಬ್ಬದ ಉಡುಗೊರೆ ತರೋದಕ್ಕೆ."

"ಎಂತಾ ಕೆಲ್ಸ ಆಯ್ತು." ನಾನು ಹೇಳಿದೆ. "ಜಯ ಇಲ್ಲಿಗೆ ಬಂದು ಹತ್ತಿರ ಹತ್ತಿರ ಹತ್ತು ದಿವಸ ಆಯ್ತು. ಅವಳ ತಾಯಿ ಆ ಉಡುಗೊರೆ ಬಟ್ಟೇನ ಜಯಶ್ರೀಗೆ ಕೊಟ್ಟು ಕಳಿಸಿದ್ದಾರೆ. ಅವಳು ನನಗೆ ಕೊಟ್ಟು ಅಣ್ಣನಿಗೆ ಕೊಟ್ಟು ಬಾ ಅಂದಳು."

"ಜಯಶ್ರೀ ಇಲ್ಲಿಗೆ ಬಂದಿರೋ ವಿಷಯವೇ ಅವನಿಗೆ ಗೊತ್ತಿಲ್ಲ. ಆದರೂ ನಾನವನಿಗೆ ಇವತ್ತು ಬೆಳಿಗ್ಗೆ ಹೇಳಿದ್ದೆ, ಒಂದ್ ಸಲ ಹಾಸ್ಟಲ್‌ಗೆ ಹೋಗಿ ನೋಡು ಮಾರಾಯ ಅಂತ. ಅವನು ನನ್ನ ಮಾತು ಕೇಳಲಿಲ್ಲ. ಅವಳು ನಗರಕ್ಕೆ ಬಂದೇ ಇಲ್ಲ, ಊರಲ್ಲೇ ಇದ್ದಾಳೆ. ಇಲ್ಲಿಗೆ ಬರೋ ಮುಂಚೆ ನನಗೆ ಕಾಗದ ಹಾಕ್ತಿದ್ಲು ಅಂತ ಹೇಳಿ ಊರಿಗೆ ಹೊರಟು ಹೋದ.

"ಜಯಶ್ರೀಗೆ ತುಂಬ ಜ್ವರ ಇದೆ, ಹಳ್ಳಿಲಿದ್ದಾಗಲೇ ಅವಳಿಗೆ ಸ್ವಲ್ಪ ಜ್ವರ ಇತ್ತಂತೆ. ಆದರೂ ಕಾಲೇಜ್ ಎಲ್ಲಿ ಮಿಸ್ಸಾಗುತ್ತೋಅಂತ ಅವಳು ಇಲ್ಲಿಗೆ ಬಂದುಬಿಟ್ಟಳಂತೆ. ಕಾಗದ ಹಾಕೋಕ್ಕೆ ಮರೆತು ಹೋಯ್ತಂತೆ."

"ಈಗ ಹೇಗಿದೆ?" ಆತಂಕದಿಂದ ಕೇಳಿದ ನರೇಂದ್ರ.

"ಹಾಗೆಯೇ ಇದೆ. ಪ್ರಾಣಕ್ಕೇನೂ ಅಪಾಯವಿಲ್ಲ. ಈ ಬಟ್ಟೆಯನ್ನು ಅಣ್ಣನಿಗೆ ಕೊಟ್ಟು ಬಾ ಅಂತ ಹೇಳಿದ್ದಕ್ಕೆ ನಾನು ಬಂದೆ." ಬಟ್ಟೆಯ ಪ್ಯಾಕೆಟ್ಟನ್ನು ನರೇಂದ್ರನಿಗೆ ಕೊಟ್ಟು ನಾನೆದ್ದು ನಿಂತಾಗ ಆತ ನಕ್ಕು

ಹೇಳಿದ.

"ಮತ್ತೆ ಬರ್ತೀನಿ ಅಂತ ಹೇಳಿ."

ನಾನು ಮಾತಾಡದೆ ವಾರೆಗಣ್ಣಿಂದ ಆತನ ಮುಖ ದಿಟ್ಟಿಸಿ 'ನಿನ್ನ ಉದ್ದೇಶವೇನು?' ಎಂಬಂತೆ ನೋಡಿದೆ.

"ನಾನು ಮತ್ತೆ ಬರ್ತೀನಿ ಅಂತ ಹೇಳಿ ಎಂದುದರ ಉದ್ದೇಶವಿಷ್ಟೆ ಮಾಧವಿಯವರೇ, ನಿಮ್ಮ ಈ ಭೇಟಿ, ಕೊನೆಯ ಭೇಟಿ ಆಗಿಬಿಡಬಾರದು ದಟ್ಸಾಲ್."

"ಥ್ಯಾಂಕ್ಸ್" ಎಂದು ನಾನು ಅಲ್ಲಿಂದ ಬಂದುಬಿಟ್ಟೆ. ಆನಂದ್ ಹಳ್ಳಿಗೆ ಹೋಗಿದ್ದಾನೆ ಅಂತ ಜಯಶ್ರೀಗೆ ತಿಳಿಸಿದಾಗ ಅವಳು ತುಂಬ ನೊಂದುಕೊಂಡಳು.

* *

* * *

ಮೂರನೆಯ ದಿನ ಮುಂಜಾನೆ ಹಾಸ್ಟಲ್ಲಿಗೆ ಹೋಗುವುದರೊಳಗಾಗಿ ಆನಂದ್ ಹಳ್ಳಿಯಿಂದ ಆಗಮಿಸಿ ಆಗಿತ್ತು. ನಿನ್ನೆ ರಾತ್ರಿ ರೈಲಿಗೆ ಬಂದಿದ್ದನಂತೆ. ನಾನು ಹೋದಾಗ ಆನಂದ್‌ನ ಕಿವಿ ಹಿಡಿದಿದ್ದಳು ತಂಗಿ.

'ರಾಗಸಂಗಮ'

ಲಾಟರಿ ಡ್ರಾ – ೧೧೪ರ ವಿಜೇತರು



ಯು. ಎಸ್. ಸೌಜನ್ಯ

ಗುಡ್ಡೆ ಅಂಗಡಿ – 576 113,

ದಕ್ಷಿಣ ಕನ್ನಡ ಜಿಲ್ಲೆ.

"ನಿನಗೆ ನಿನ್ನ ಹೆಂಡ್ತಿಯಿಂದ ಲಾತ ಹೊಡೆಸ್ತೇನೆ ನೋಡ್ತಿರು."

"ಓಕೆ ಜಯ, ನಿನಗೆ ಏನು ಇಷ್ಟ ಇದೆಯೋ ಅದನ್ನೇ ಮಾಡು."

"ಏನು ಬೆಳಿಗ್ಗೆ ಬೆಳಿಗ್ಗೇನೆ ಅಣ್ಣ ತಂಗಿ ಕಾದಾಡ್ತಿದ್ದೀರಿ?" ನಾನು ಮಧ್ಯೆ ಪ್ರವೇಶಿಸಿ ಕೇಳಿದೆ.

"ಲೇ ಮಾಧು ಇವತ್ತಿಗಾಯ್ತು, ಇನ್ನು ಮುಂದೆ ಅಣ್ಣ ತಂಗಿ ಅಂತ ಕರೀಬೇಡ. ಶತ್ರುಗಳು ಅಂತ ಕರಿ." ಸರ್ಪಿಣಿಯಂತೆ ಬುಸುಗುಟ್ಟಿದಳು ಜಯಶ್ರೀ. ಅವಳು ನೋಡದಂತೆ 'ದಯವಿಟ್ಟು ಇವಳ ಸಲಹೇನ ಒಪ್ಪಿಕೊಂಡು ಬಿಡು. ಇಲ್ಲದಿದ್ರೆ ಜನ್ನಷ್ಟು ತರಲೆ ಎಬ್ಬಿಸಿಬಿಡ್ತಾಳೆ' ಎಂದು ಕೈಯಿಂದ ಸೂಚಿಸಿದ ಆನಂದ್.

ನಾನು ಎರಡೂ ಕೈ ಜೋಡಿಸಿ "ಆಯ್ತು ಮಾರಾಯ್ತಿ" ಎಂದೆ.

ಶಾಂತಗೊಂಡಳು ಜಯಶ್ರೀ. ಅನಂತರ ಅವಳ ಬಳಿಗೆ ಸಾರಿದು "ಇವತ್ತು ಹೇಗಿದೆ?"

"ಪರವಾಗಿಲ್ಲ ಕಣೆ." ನನಗೆ ಹೇಳಿ ಅಣ್ಣನಿಗೆ ಛೇಡಿಸಿದಳು "ತನ್ನ ತಂಗಿ ಜ್ವರದಿಂದ ನರಳ್ತಿದ್ದಾಗ ಇವನಿಗೆ ಅವಳ ನೆನಪಾಗಲಿಲ್ಲ. ಈಗ ಹೇಗೂ ವಾಸಿಯಾಗಿರೋದ್ರಿಂದ ಒಂದು ಆಸ್ಪತ್ರೇಲಿ ಅಡ್ಮಿಟ್ ಆಗು, ಇಲ್ಲ ನನ್ನ ರೂಮಲ್ಲಿ ಬಂದಿರು ಅಂತ ಹೇಳ್ತಿದ್ದಾನೆ ನೋಡು."

"ನಾನು ಹೇಳ್ತಿರೋದ್ರಲ್ಲಿ ಏನಾದರೂ ತಪ್ಪಿದಿಯಾ ಹೇಳು ಮಧೂ." ಆನಂದ್ ತನ್ನ ಸಲಹೆಯನ್ನು ಸಮರ್ಥಿಸಿಕೊಂಡ. "ಇವಳಿಗೆ ಇನ್ನೂ ಜ್ವರ ಇದೆ ಕಡಿಮೆಯಾಗಿಲ್ಲ, ಇಂತಾ ಸ್ಥಿತಿಯಲ್ಲಿ ನಾನಿವಳನ್ನು ಬಿಟ್ಟು ನನ್ನ ರೂಮಲ್ಲಿ ಹೇಗಿರಲಿ ಹೇಳು. ಆಸ್ಪತ್ರೆ ಅಥವಾ ನನ್ನ ಹತ್ತಿರ ಇದ್ರೆ ಇವಳಿಗೆ

ಸರಿಯಾಗಿ ಟ್ರೀಟ್‌ಮೆಂಟ್ ಕೊಡಿಸಬಹುದು. ಅದೂ ಅಲ್ದೆ ದಿನನಿತ್ಯ ಹೀಗೆ ಹಾಸ್ಟಲ್‌ಗೆ ಬರೋದು ಚೆನ್ನಾಗಿ ಕಾಣೋದಿಲ್ಲ.''

"ಒಂದು ರೀತೀಲಿ ನಿಮ್ಮಣ್ಣ ಹೇಳ್ತಿರೋದು ನಿಜವೇ ಕಣೆ.'' ನಾನು ಆನಂದ್‌ನ ವಾದವನ್ನು ಸಮರ್ಥಿಸಿದಾಗ ಅವಳು ತುಸು ಉರಿದೆದ್ದಳು.

"ಅಂತೂ ನಾನು ಆ ಯಮಲೋಕ ಅಥವಾ ಆ ಬ್ರಹ್ಮಾಚಾರಿಯ ಗುಹೆಯಲ್ಲೋ ಬಿದ್ದು ಸಾಯಬೇಕೂಂತ ನಿಮ್ಮೆಲ್ಲರ ಆಸೆ ತಾನೆ. ಆ ತಲೆನೋವೇ ಬೇಡ.''

"ಹಾಗಾದ್ರೆ ಊರಿಗೆ ಹೋಗೋಣ ನಡಿ.'' ಹೇಳಿದ ಆನಂದ್.

"ಐ ಕಾಂಟ್.'' ತಲೆ ನಕಾರಾತ್ಮವಾಗಿ ಆಡಿಸಿದಳು ಜಯಶ್ರೀ.

"ಸರಿ ನಿನ್ನಿಷ್ಟ ನನಗೆ ಹೊತ್ತಾಯ್ತು.'' ಹೇಳಿ ನನಗೆ ಹೊರಬರಲಿಕ್ಕೆ ಕಣ್ಣಲ್ಲೇ ಸಂಕೇತ ನೀಡಿ ಹೊರಬಂದ ಆನಂದ್.

"ಕಾಲೇಜಿಗೆ ಟೈಮಾಯ್ತು, ನಾನು ಬರ್ತೀನಿ ಕಣೆ'' ಎಂದು ನಾನೂ ಹೊರ ಬಂದೆ.

"ಹೇಗಾದರೂ ಮಾಡಿ ಅವಳನ್ನು ನನ್ ರೂಮಿಗೆ ಕರ್ಕೊಂಡು ಬಾ ಮಧೂ. ನೀನೇ ನೋಡಿದ್ಯಲ್ಲ ಅವಳ ದೇಹ ಹೇಗೆ ಬಾಣಲೆ ತರಾ ಸುಡ್ತಿದಿಯೋ ಅಂತ.'' ಆನಂದ್ ರಿಕ್ವೆಸ್ಟ್ ಮಾಡಿಕೊಂಡಾಗ ನಾನು ಒಪ್ಪಿಕೊಳ್ಳದಿರಲಾಗಲಿಲ್ಲ. ಎಷ್ಟಾದರೂ ಜಯಶ್ರೀ ನನ್ನ ಆಪ್ತ ಗೆಳತಿ. ಅವಳ ಅನಾರೋಗ್ಯ ನನ್ನ ಅನಾರೋಗ್ಯವೇ ತಾನೆ.

"ನೀವದರ ಬಗ್ಗೆ ವರಿ ಆಗೋದು ಬೇಡ. ಇವತ್ತು ಸಂಜೆ ನಾನವಳನ್ನು ನಿಮ್ಮ ರೂಮಿಗೆ ಕರ್ಕೊಂಡೇ ಬರ್ತೇನೆ. ಅನಂತರ ನಾವು ಆಸ್ಪತ್ರೆಯ ಬಗ್ಗೆ ಯೋಚಿಸೋಣ.''

"ತುಂಬಾ ಥ್ಯಾಂಕ್ಸ್.'' ಆನಂದ್ ಹೇಳಿದಾಗ ಅವನ ಧ್ವನಿಯಲ್ಲಿ ತುಂಬ ನಿರಾಳವಿತ್ತು.

ಅವತ್ತು ಸಂಜೆ ನಾನು ಆನಂದ್‌ನ ರೂಮಿಗೆ ಹೋಗಲಾಗಲಿಲ್ಲ, ಮರುದಿನ ಸಂಜೆ ಹೋದೆ. ಜೊತೆಯಲ್ಲಿ ಅವಳನ್ನು ಕರೆದೊಯ್ದೆ. ನಾವು ಹೋಗುವಷ್ಟರಲ್ಲಿ ಆನಂದ್ ರೂಮನ್ನು ಚೊಕ್ಕಗೊಳಿಸಿದ್ದ ಕೆಲಸದಾಕೆಯಿಂದ. ಎರಡು ಕೋಣೆಗಳನ್ನು ನೀರಿಂದ ತೊಳೆಸಿ, ಕಿಟಕಿಯ ಬದಿಗೆ ಜರುಗಿಸಿದ್ದ ಮಂಚವನ್ನು. ಮಂಚದ ಮೇಲೆ ಮೆತ್ತ, ದೊಡ್ಡ ಸೊಳ್ಳೆ ಪರದೆ. ಮಂಚದ ಪಕ್ಕದಲ್ಲೊಂದು ಪುಟ್ಟ ಸ್ಟೂಲು, ಸ್ಟೂಲಿನ ಮೇಲೆ ನೀಳ ಗಾಜಿನ ಲೋಟ ಪ್ಲಾಸ್ಕು, ಥರ್ಮಾಮೀಟರು. ಮಂಚದ ಹಿಂದೆ ಟೇಬಲ್ ಫ್ಯಾನು.

ಆ ಕೋಣೆಯನ್ನು ಅವಲೋಕಿಸುವಾಗ ನನ್ನ ಆತುರದ ಕಣ್ಣುಗಳು ಇನ್ನೊಂದು ವಿಷಯವನ್ನು ಕೂಡ ಗಮನಿಸಿದವು. ಅದು ಈ ಘುಂಟ ನರೇಂದ್ರ ಅಲ್ಲಿ ಇಲ್ಲದಿರುವುದು, ನರೇಂದ್ರನ ಇಲ್ಲದಿರುವಿಕೆ ನನಗೆ ಭಾರಿ ನಿರಾಸೆಯನ್ನೇ ತಂದಿತೆಂದು ಹೇಳಬೇಕು.

ಆಮೇಲೆ ಮಾತಿನ ನಡುವೆ ನನಗೆ ತಿಳಿದದ್ದು ಇಷ್ಟು ನರೇಂದ್ರನ ಊರಿಂದ ತಂತಿ ಸಂದೇಶವೊಂದು ಬಂತಂತೆ. 'ಸ್ಟಾರ್ಟ್ ಇಮಿಡಿಯಟ್ಲಿ ಗ್ರ್ಯಾಂಡ್‌ಪಾ' ಅಂತ ಟೆಲಿಗ್ರಾಂ ನೋಡಿ ತತ್‌ಕ್ಷಣ ತನ್ನ ಊರಿನ ಬಸ್ಸು ಹಿಡಿದು ಹೊರಟು ಹೋದನಂತೆ ನರೇಂದ್ರ. ನರೇಂದ್ರನಿಗೆ ಆ ತಾತಾನೇ ಅಪ್ಪ, ಅಮ್ಮ, ತಂಗಿ, ಅಣ್ಣ, ಅಕ್ಕ ಮತ್ತು ತಮ್ಮ. ಚಂಡಶಾಸನನಾದ ತಾತನೆಂದರೆ ನರೇಂದ್ರ ಗಡಗಡ ನಡುಗುತ್ತಾನೆಂದು ಆನಂದ್ ಹೇಳಿದಾಗ ಜಯಶ್ರೀ, ಈ ಕಾಲದಲ್ಲೂ ಇಂಥವರಿದ್ದಾರಾ ಎಂದು ಪಿರಿಪಿರಿ ನಕ್ಕು ಬಿಟ್ಟಳು. ನನಗೂ ನಗು ಬಂತು.

ಹಾಗೆಯೇ ಅಯ್ಯೋ ಪಾಪ ಎನಿಸಿತು ಕೂಡ.

ನಾಲ್ಕು

ನೆಪಮಾತ್ರಕ್ಕೆಂಬಂತೆ ನಾಲ್ಕು ದಿನ ಅಣ್ಣನ ರೂಮಿನಲ್ಲಿದ್ದು ಆಮೇಲೆ ಮತ್ತೆ ಹಾಸ್ಟಲ್ ಜೀವನಕ್ಕೆ ಹಿಂದಿರುಗಿದಳು ಜಯಶ್ರೀ. ಅವಳು ಅಲ್ಲಿದ್ದ ನಾಲ್ಕು ದಿನಗಳೂ ನಾನು ಅವಳನ್ನು ನೋಡಲು ಹೋದೆ. ನರೇಂದ್ರನಿಗಾಗಿ ನನ್ನ ಕಣ್ಣು ಹುಡುಕಾಡಿತು, ಆದರೆ ಆತ ಕಾಣಲಿಲ್ಲ. ಎಲ್ಲಿ ಹೋದ ಊರಿಂದ ವಾಪಾಸಾಗಿದ್ದಾನೋ ಇಲ್ಲವೋ?

ಜಯಶ್ರೀ ಹಾಸ್ಟಲ್ಲಿಗೆ ವಾಪಾಸಾದ ಮೇಲಂತೂ ನನಗೆ ಆನಂದ್‌ನ ಕೋಣೆಗೆ ಹೋಗುವ ಅವಕಾಶ ಸಿಗಲಿಲ್ಲ. ನನ್ನ ಮನ ನನಗೆ ತಿಳಿಯದಂತೆ ನರೇಂದ್ರನಿಗಾಗಿ ಹಂಬಲಿಸತೊಡಗಿತು.

ನಿರ್ಮಲ ನದಿಯುತಿರುವ ನನ್ನ ಮನಸ್ಸಲ್ಲಿ ಯಾಕೆ ನರೇಂದ್ರ ಸಣ್ಣ ಕಂಪನವೆಬ್ಬಿಸುತ್ತಿದ್ದಾನೆ? ನಾನೇಕೆ ಆತನ ಸಾಮೀಪ್ಯಕ್ಕಾಗಿ ಚಡಪಡಿಸುತ್ತಿದ್ದೇನೆ.

ಮೂರು ವರ್ಷಗಳ ನನ್ನ ಕಾಲೇಜು ವಿದ್ಯಾರ್ಥಿನಿ ಜೀವನದಲ್ಲಿ ನಾನು ಲೆಕ್ಕವಿಲ್ಲದಷ್ಟು ಪ್ರೇಮ ಪತ್ರಗಳನ್ನು ಪಡೆದುಕೊಂಡೆ. ಕೆಲವರಂತೂ ನೇರವಾಗಿ ತಮ್ಮ ಪ್ರೇಮವನ್ನು ವ್ಯಕ್ತಪಡಿಸಿಬಿಟ್ಟಿದ್ದರು ಕೂಡ. ಆದರೆ ನಾನು ಯಾರ ಪ್ರೇಮ ಬಲೆಗೂ ಸಿಗಲಿಲ್ಲ. ದೂರ ಉಳಿದುಬಿಟ್ಟೆ.

ಹೇಳಿಕೊಳ್ಳುವಂತಾ ಚೆಲುವನಲ್ಲದ, ದೀರ್ಘ ಪರಿಚಯವೂ ಇಲ್ಲದ ನರೇಂದ್ರ ತನ್ನ ತುಂಟ ಮಾತುಗಳಿಂದ, ನೋಟದಿಂದ ಅವನ ಪ್ರೇಮಪಾಶದಲ್ಲಿ ನನ್ನನ್ನು ಬಂಧಿಸಿಬಿಟ್ಟಿದ್ದಾನಲ್ಲ, ಬದುಕು ಎಷ್ಟೊಂದು ಅಚ್ಚರಿಗಳ ದಾರಿ ಎಂದುಕೊಂಡೆ.

ನರೇಂದ್ರನ ಕುರಿತಾದ ತಹತಹಿಕೆಯಲ್ಲೇ ಅರುವತ್ತು ದಿವಸ ಕಾಲ ನೂಕಿದೆ ನಾನು. ಅದೊಂದು ದಿನ ಸೋಮವಾರದ ಬೆಳಿಗ್ಗೆ ಕಾಲೇಜಿನಲ್ಲಿ ನನಗೆ ಹೇಳಿದಳು ಜಯಶ್ರೀ.

"ನನ್ನಣ್ಣ ರಾವಣಾಸುರ, ನಿನ್ನೆ ನರೇಂದ್ರನನ್ನು ಹಾಸ್ಟಲ್‌ಗೆ ಕರ್ಕೊಂಡು ಬಂದಿದ್ದ ಕಣೆ."

ನರೇಂದ್ರನ ಹೆಸರು ಕೇಳುತ್ತಲೇ ಬೆಚ್ಚಿ ಬಿದ್ದೆ ನಾನು. ಅದನ್ನು ಗಮನಿಸಿದಳು ಜಯಶ್ರೀ.

"ಯಾಕೆ ಹಾಗೆ ಬೆಚ್ಚಿ ಬೀಳ್ತಿದ್ದೀ?"

"ಯಾಕೂ ಇಲ್ಲ." ನನ್ನ ಆತುರಕ್ಕೆ ತಡೆಹಾಕುವ ಯತ್ನ ನಡೆಸಿದೆ ನಾನು.

"ಇಷ್ಟಕ್ಕೂ ಅವನು ನಿನ್ನೆ ಬಂದದ್ದು ನಿನ್ನನ್ನು ನೋಡೋದಕ್ಕೆ ಇರಬೇಕೇನೋ?"

ಜಯಶ್ರೀ ಹೆಮ್ಮೆಮಿಳಿತ ಪ್ರಶ್ನೆಗೆ ನಾನು ಭುಜ ಕುಣಿಸುತ್ತಲೇ ಉತ್ತರಿಸಿದೆ.

"ನಿನ್ನನ್ನು ನೋಡೋಕ್ಕಾದರೂ ಬಂದಿರ್ತಾನೆ ಅಥವಾ ಹಾಸ್ಟಲ್‌ನಲ್ಲಿರೋ ಬೇರೆ ಹುಡುಗಿಯರನ್ನಾದರೂ ನೋಡಲಿಕ್ಕೆ."

ನನ್ನ ಮಾತನ್ನು ಕತ್ತರಿಸಿ "ನರೇಂದ್ರ ರೋಡ್ ರೋಮಿಯೋ ಅಲ್ಲ" ಮೂದಲಿಸಿದಳು.

"ನಿನಗೆ ಹೇಗೆ ಗೊತ್ತಾಯ್ತು?" ಜಯಶ್ರೀ ನರೇಂದ್ರನ ವ್ಯಕ್ತಿತ್ವದ ಬಗ್ಗೆ ಒಳ್ಳೆಯ ಮಾತನ್ನಾಡಿದ್ದು ನನಗೂ ಸ್ವಲ್ಪ ಖುಶಿ ತಂದಿತ್ತು.

"ಅಂದಹಾಗೆ ಈಗ ನೆನಪಾಯ್ತು ಮಧೂ, ನರೇಂದ್ರ ನನ್ನನ್ನು ಕೇಳಿದ ನಿನ್ನ ಫ್ರೆಂಡ್ ಮಧು ಬರಲಿಲ್ಲ ಅಂತ. ಅವನು ನನ್ನನ್ನು ಆ ಪ್ರಶ್ನೆ ಕೇಳುವಾಗ ನಾನು ನಮ್ಮಣ್ಣನೊಂದಿಗೆ ಮಾಮೂಲಿ ಕಚ್ಚಾಟದಲ್ಲಿದ್ದೆ." ನಕ್ಕು ಹೇಳಿ ಮತ್ತೆ ಅನುಮಾನದಿಂದ ಕೇಳಿದಳು ನನ್ನನ್ನು "ಏನೇ ಕಥೆ, ಅವನು ನಿನ್ನ ಬಗ್ಗೆ ಕೇಳಿದ್ನಲ್ಲ?"

"ನನಗೇನು ಗೊತ್ತು?" ನನ್ನ ಮನ ಊಹಾಲೋಕದಲ್ಲಿ ತೇಲತೊಡಗಿತು.

"ನನಗೇನೋ ಅನುಮಾನ ಮಧೂ." ಮತ್ತೆ ಚುಡಾಯಿಸಿದಳು ಬಿಡದೇ. "ನೀವಿಬ್ರೂ ಏನಾರ 'ಅಫೈರ್' ಶುರು ಮಾಡ್ಕೊಂಡಿದ್ದೀರಾ."

"ಛೆ ಛೇ ಸುಮ್ನಿರೇ ಸಾಕು." ಅಷ್ಟರಲ್ಲಿ ಕರೆಗಂಟೆ ಕಿರುಗುಟ್ಟತೊಡಗಿದಾಗ ತರಗತಿಯತ್ತ ಹೆಜ್ಜೆ ಹಾಕಿದೆ ನಾನು.

"ಕಾಮಾಲೆ ಕಣ್ಣಿಗೆ ಎಲ್ಲವೂ ಹಳದಿಯಾಗಿಯೇ ಕಾಣುತ್ತಂತೆ. ನಮ್ಮಿಬ್ಬರ ನಡುವೆ ನೀನು ಊಹಿಸುವಂತಾ ಅಫೈರ್ ಅಥವಾ ಗಿಫೈರ್ ಯಾವುದೂ ಇಲ್ಲ."

"ನಿನ್ನ ಉದಾಹರಣೆಗಳು ಸಾಕು ಮರಿ, ಬೆಂಕಿ, ಸತ್ಯ ಯಾವತ್ತೂ ಮುಚ್ಚಿಡೋಕ್ಕಾಗೋಲ್ಲ. ಒಂದಲ್ಲ ಒಂದು ದಿನ ನೀನು ನಿನ್ನ ಪ್ರೇಮಕಥೆಯನ್ನು ನನಗೆ ಹೇಳಲೇಬೇಕು. ಯೂ ಮಸ್ಟ್ ಟೆಲ್ ಮಿ ದ ಸ್ಟೋರಿ."

ಈ ಘಟನೆ ನಡೆದ ಒಂದು ವಾರದ ಅನಂತರ. ಸಂಜೆ ಹೊಸದಾಗಿ ನಿರ್ಮಾಣಗೊಂಡ ತಿರುಮಲವಾಸ ತಿಮ್ಮಪ್ಪನ ದೇವಾಲಯ ನೋಡಿ ಬರೋಣವೆಂದು ಜಯಶ್ರೀ ಕರೆದಾಗ ನಾನು ಒಲ್ಲೆ ಎನ್ನಲಿಲ್ಲ. ದೇವಾಲಯ ಸುತ್ತು ಹಾಕಿ, ಅಲಯದ ಹಿಂಭಾಗದ ತೋಟದಲ್ಲಿ ಕುಳಿತೆವು. ಕೂರುತ್ತಲೇ ಗಾಬರಿಯಿಂದ ಎದ್ದು ನಿಂತಳು ಜಯಶ್ರೀ. ಯಾಕೆ ಅಂತ ಕೇಳಿದೆ ನಾನು.

"ದೇವಾಲಯದೊಳಗೆ ಹ್ಯಾಂಡ್ ಬ್ಯಾಗನ್ನು ಮರೆತು ಬಂದೆ." ಹೇಳಿ ದೇವಾಲಯದೊಳಕ್ಕೆ ಹೊರಟು ಹೋದಳು ಜಯಶ್ರೀ. ನಾನು ಅವಳು ಹೋದ ದಾರಿಯನ್ನೇ ನೋಡುತ್ತ ಕುಳಿತಿದ್ದಾಗ ನನ್ನ ಹಿಂದಿನಿಂದ ಕೇಳಿಸಿತೊಂದು ಧ್ವನಿ.

"ಹಲೋ." ಚಕಿತಳಾಗಿ ಹಿಂದಿರುಗಿದಾಗ ನರೇಂದ್ರ ನಿಂತಿದ್ದ!

"ನೀವಿಲ್ಲಿಗೆ..." ನನ್ನ ಮಾತು ಅರ್ಧದಲ್ಲೇ ನಿಂತಿತು.

"ದೇವಸ್ಥಾನ ನೋಡಿ ಹೋಗೋಣಾಂತ ಬಂದೆ." ನಕ್ಕು ಹೇಳಿದ ನರೇಂದ್ರನ ಕಣ್ಣುಗಳು ಫಳಫಳ ಹೊಳೆಯುತ್ತಿದ್ದವು. ಅವನೇ ಮತ್ತೆ ಹೇಳಿದ.

"ದೇವಸ್ಥಾನಕ್ಕೆ ಬಂದ್ರೆ ನನಗೆ ದೇವತೆ ದರ್ಶನ ಕೊಟ್ಟಳು."

"ಇಲ್ಲಿರೋದು ದೇವತೆ ಅಲ್ಲ, ದೇವರು." ನರೇಂದ್ರ ನನ್ನನ್ನು ಉದ್ದೇಶಿಸಿ ಹೇಳಿದ್ದಾನೆಂದು ನನಗೆ ಅರ್ಥವಾದರೂ ನಾನು ಹೇಳಿದೆ.

"ನೀವು ತಪ್ಪು ಹೇಳ್ತಿದ್ದೀರಿ ಮೇಡಂ. ದೇವರು ಒಬ್ಬಂಟಿಗನಲ್ಲ, ಅದರಲ್ಲೂ ತಿಮ್ಮಪ್ಪ ಒಂಟಿ ದೇವರಲ್ಲ."

"ಆದರೆ ತಿಮ್ಮಪ್ಪ ಕೂಡ ಕೆಲ ಕಾಲ ಒಂಟಿತನವನ್ನು ಅನುಭವಿಸಿದ್ದಾನಲ್ವೆ?"

"ನಿಮ್ಮ ಮಾತು ಸರಿ, ಆದರೆ ಈಗ ಅದು ಅನ್ವಯಿಸುವುದಿಲ್ಲ. ಶತಮಾನಗಳ ಹಿಂದೆ ನಡೆದ ಪುರಾಣವದು."

"ಹಾಗಾದರೆ ನಿಮ್ಮ ದೃಷ್ಟಿಯಲ್ಲಿ ದೇವರೆನ್ನುವವನು ಒಂಟಿ ಜೀವಿ ಅಲ್ಲ, ಸತಿ ಸಮೇತನಾ?"

"ಹೌದು." ನನ್ನ ಕಣ್ಣಲ್ಲಿ ನೇರವಾಗಿ ನೋಟ ತೂರಿ "ನಮ್ಮಿಬ್ಬರ ಅಭಿಪ್ರಾಯ ಒಂದೇ ಆಗಬೇಕು. ಯಾಕೆಂದ್ರೆ ನಾನು ನಿಮ್ಮನ್ನು..." ನಾನು ನಾಚಿಕೆಯಿಂದ ಅವನತಮುಖಿಯಾದೆ "ನೀವು ಏನು ಹೇಳ್ತಿದ್ದೀರಿ?"

"ಐ ಲವ್ ಯು ಮಾಧವಿ." ನರೇಂದ್ರನ ಮಾತುಗಳಲ್ಲಿ ಹೊಸ ಧ್ವನಿ, ನೂತನ ಅರ್ಥ, ನಾನು ಮೆಲ್ಲಗೆ ಕತ್ತೆತ್ತಿದೆ. ನನ್ನನ್ನೇ ನೋಡುತ್ತ ನನ್ನ ಪಕ್ಕದಲ್ಲಿ ಕುಳಿತಿದ್ದ ನರೇಂದ್ರ.

"ನಿಮ್ಮನ್ನು ನಾನು ಅದೆಷ್ಟು ಪ್ರೀತಿಸುತ್ತಿದ್ದೀನೋ, ಅದನ್ನು ಮಾತಲ್ಲಿ ಹೇಳಲು ಸಾಧ್ಯವಿಲ್ಲ ಎನಿಸುತ್ತೆ ಮಾಧವಿ." ಅವನ ಕಣ್ಣುಗಳಲ್ಲಿ ಆರಾಧನೆಯ ಭಾವ. "ಈ ಜಗತ್ತಿನಲ್ಲಿ ನಿಮ್ಮನ್ನು

ಹೊರತುಪಡಿಸಿ ನನಗೆ ಬೇರೆ ಏನೂ ಬೇಡಾಂತ ಅನ್ನಿಸುತ್ತೆ. ನನ್ನ ಜೀವಕ್ಕಿಂತಲೂ ಹೆಚ್ಚಾಗಿ ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆ.''

"ನನಗೇನು ಹೇಳಬೇಕೋ ಗೊತ್ತಾಗ್ತಿಲ್ಲ'' ಎಂದೆ ನಾನು ಮತ್ತೆ ತಲೆ ಬಾಗಿಸಿ.

"ನಿಮ್ಮನ್ನು ನೋಡಿದ ಮೇಲೆ, ನನ್ನಲ್ಲುಂಟಾದ ಚಡಪಡಿಕೆಗೆ ಆಕರ್ಷಣೆ ಅಥವಾ ಪ್ರೀತಿ ಇನ್ನೇನು ಕರೆದರೂ ತಪ್ಪಿಲ್ಲ. ಅಂತೂ ನಿಮ್ಮ ರೂಪ, ವ್ಯಕ್ತಿತ್ವ ನನ್ನನ್ನು ಅಷ್ಟೊಂದಾಗಿ ಸೆಳೆದುಬಿಟ್ಟಿದೆ. ನನ್ನ ಹೃದಯಕ್ಕೆ ಇಷ್ಟೊಂದು ಗಾಢವಾದ ಲಗ್ಗೆ ಹಾಕಿದ ವ್ಯಕ್ತಿಯಾಗಲಿ, ವಿಷಯವಾಗಲಿ ಇಲ್ಲಿಯವರೆವಿಗೂ ಬೇರೊಂದು ಇಲ್ಲ ಮಾಧವಿ. ನಿಮ್ಮನ್ನು ನೋಡಬೇಕು ನೋಡಬೇಕೂಂತ ಅದೆಷ್ಟು ಚಡಪಡಿಸಿಬಿಟ್ಟೆನೋ ಅದು ನನಗೊಬ್ಬನಿಗೆ ಮಾತ್ರ ಗೊತ್ತಿದೆ ಅಷ್ಟೇ. ಹೇಳಿ ಮಾಧವಿ, ನಿಮಗೆ ನನ್ನ ಪ್ರೀತಿ ಒಪ್ಪಿಗೆ ಇದೆಯಾ?'' ಭಾವುಕನಾಗಿ ಬಿಟ್ಟ ನರೇಂದ್ರ.

ನನ್ನಿಂದ ಮತ್ತೆ ಮಾತು ಹೊರಡಲಿಲ್ಲ.

"ಪ್ಲೀಸ್ ಹೇಳಿ ಮಾಧವಿ. ಐ ಲವ್ ಯು, ಡು ಯು ಲವ್ ಮಿ?''

ಕೊನೆಯ ಪ್ರಶ್ನೆ ಕೇಳುವಾಗ ಅವನ ಧ್ವನಿ ಕಂಪಿಸಿತು. ನಾನು ಮಾತ್ರ ಬಾಗಿಸಿದ ತಲೆ ಎತ್ತಲಿಲ್ಲ, ಬಲಗೈ ತೋರು ಬೆರಳಿಂದ ಕೆಳಗಿನ ಮರಳಲ್ಲಿ ಹೀಗೆ ಬರೆದೆ.

'ಈಗ ತಿಮ್ಮಪ್ಪ ದೇವರು ಒಂಟಿಯಲ್ಲ, ಸಂಗಾತಿ ಇದ್ದಾಳೆ ಆತನಿಗೆ.'

ಈ ವಾಕ್ಯ ಓದುತ್ತಲೇ ಅವನ ಮುಖ ಕಳಕಳಿಸಿತು. ನನ್ನ ಕೈ ಹಿಡಿದು ಮೃದುವಾಗಿ ಒತ್ತಿ ಹಿಡಿದ. ನಾನು ತನ್ಮಯತ್ವದಿಂದ ಕಣ್ಣು ಮುಚ್ಚಿ ಕುಳಿತೆ. ಆಮೇಲೆ ಸಾಕಷ್ಟು ಸಮಯ ನಾವಿಬ್ಬರೂ ಪ್ರಫುಲ್ಲರಾಗಿ ಕುಳಿತಿದ್ದೆವು. ಕತ್ತಲು ಮೂಡುವವರೆಗೂ ಜಯಶ್ರೀಗಾಗಿ ಕಾದೆ, ಅವಳು ಬರಲಿಲ್ಲ. ಅನಂತರ ಮನೆಗೆ ಬಂದುಬಿಟ್ಟೆ.

ಮರುದಿನ ಜಯಶ್ರೀ ಬ್ಯಾಗ್ ಮತ್ತು ಬ್ಯಾಗೇಜ್ ಸಮೇತ ನನ್ನ ಮನೆಗೆ ಬಂದಾಗ ಅವಳ ಮೇಲೆ ಕೂಗಾಡಿದೆ ನಾನು.

"ನಿನ್ನೆ ನನ್ನನ್ನು ಒಂಟಿಯಾಗಿ ಬಿಟ್ಟು ಎಲ್ಲಿ ಹೋಗಿದ್ದೇ?''

"ನಿನ್ನನ್ನು ಸ್ವರ್ಗದಲ್ಲಿ ಬಿಟ್ಟು ಹೋಗಿದ್ದೂ ಯಾಕೆ ಇಷ್ಟು ಕೋಪ?'' ನನಗೆ ಅಚ್ಚರಿಯಾಯಿತು. ಬಹುಶಾ ಇವಳು ತಾನು, ನರೇಂದ್ರ ಮಾತಾಡುತ್ತಿರುವುದನ್ನು ನೋಡಿರುತ್ತಾಳೆ.

"ನೀವಿಬ್ರೂ ಏನೇನು ಮಾತಾಡಿಕೊಂಡ್ರೆ? ಡ್ಯೂಯೆಟ್ ಹಾಡಲಿಲ್ವಾ? ಆದರೂ ನಮ್ಮ ದೇಶದಲ್ಲಿ ಡ್ಯೂಯೆಟ್ ಹಾಡೋ ಅದೃಷ್ಟ ಯಾರಿಗಿರುತ್ತೆ ಹೇಳು.''

"ಹಾಗಾದ್ರೆ ನಿನ್ನೆ ನಾವಿಬ್ಬರೂ ಮಾತಾಡಲಿಕ್ಕೆ ಅವಕಾಶ ಕೊಟ್ಟು ಹೊರಟು ಹೋದೆಯಾ?''

"ಸ್ಟಾಪ್ ಮಿಸ್ ಮಾಧೂ, ನಾನೇನೂ ಉದ್ದೇಶಪೂರ್ವಕವಾಗಿ ನಿಮಗೆ ಏಕಾಂತ ಕರುಣಿಸಲಿಲ್ಲ. ನಾನು ದೇವಸ್ಥಾನದೊಳಗಿಂದ ಹ್ಯಾಂಡ್‌ಬ್ಯಾಂಗ್ ಎತ್ತಿಕೊಂಡು ಬಂದಾಗ ನೀವಿಬ್ರೂ ತುಂಬ ಮಜಬೂತಾಗಿ ಮಾತಾಡ್ತಾ ಕೂತಿದ್ರಿ. ಸರಿ ನಿಮ್ಮ ಸಂತೋಷಕ್ಕೆ ನಾನ್ಯಾಕೆ ಅಡಚಣೆಯುಂಟುಮಾಡಬೇಕೆಂದು ವಾಪಾಸು ಹೊರಟು ಹೋದೆ. ಆದರೆ ನನ್ನ ಒಂದೇ ಒಂದು ಕೊರಗು ಏನಪ್ಪಾ ಅಂದ್ರೆ ನಿಮ್ಮ ಸುಂದರ ಸಮಾಗಮಕ್ಕೆ ನಾನು ಸೂತ್ರಧಾರೆಯಾಗಲಿಲ್ಲವಲ್ಲ ಅಂತ. ಆದರೂ ಪರವಾಗಿಲ್ಲ ಬಿಡು.'' ತನ್ನನ್ನೇ ಸಮಾಧಾನ ಪಡಿಸಿಕೊಳ್ಳುವಂತೆ "ನಾನೇ ತಾನೆ ನಿನ್ನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದರಿಂದ ತಾನೇ ನೀನು ನರೇಂದ್ರನನ್ನು ಭೇಟಿಯಾಗಲು ಸಾಧ್ಯವಾಯಿತು ಲಲಲ್ಲಲ್ಲ...ಲಾ...'' ರಾಗವೆಳೆದಳು ಜಯಶ್ರೀ.

"ಜೋರಾಗಿ ಮಾತಾಡಬೇಡ್ವೆ ಶೂರ್ಪನಖಿ.'' ನಾನವಳನ್ನು ಗೋಗರೆಯಬೇಕಾಯಿತು.

"ಯಾಕೆ?'' ಎಂದವಳಿಗೆ ನಾನು ಎದ್ದು ಹೋಗಿ ಕಿಟಕಿಯ ಬಾಗಿಲು ಮುಚ್ಚಿ ಬಂದು ಹೇಳಿದೆ.

"ನಮ್ಮ ಬೀದಿಯಲ್ಲಿ ಗಾರ್ದಭ ಗಣ್ಯ ವ್ಯಕ್ತಿಗಳು ತುಂಬ ಮಂದಿ ಇದ್ದಾರೆ. ನಿನ್ನ ಹಾಡು ಕೇಳಿ ಎಲ್ಲ ಓಡೋಡಿ ಬಂದು ಇಲ್ಲಿ ಜಮಾಯಿಸಿ ಬಿಟ್ರೆ ಕಷ್ಟ."

"ಬರಲಿ ಬಿಡು. ನನಗ್ಯಾವ ತೊಂದರೆಯೂ ಇಲ್ಲ, ಆದರೆ ಅದರಿಂದ ನಿನಗೇನಾದರೂ ತೊಂದರೆ ಆಗಬಹುದೇನೋ."

"ನನಗ್ಯಾವ ತೊಂದರೇಯೂ ಇಲ್ಲ ಮಾತಾಯಿ. ಆದರೆ ಅಕ್ಕಪಕ್ಕದವರು ಕತ್ತೆಗಳನ್ನು ನೋಡಿ, ನನ್ನನ್ನು ಒಂದು ಕತ್ತೆ ಅಂತ ತಿಳಿದುಕೊಂಡು ಬಿಟ್ಟರೆ ಮಾತ್ರ ಕಷ್ಟವಾಗಿ ಬಿಡುತ್ತೆ."

"ಅದರಲ್ಲಿ ಎಂತಾ ಕಷ್ಟವಿದೆಯೇ ಕತ್ತೆ." ಕೊಂಕು ನುಡಿದಳು ಜಯಶ್ರೀ.

"ವಸುದೇವನಂಥವನಿಂದ ಪಾದ ಹಿಡಿಸಿಕೊಂಡ ಪೂಜ್ಯ ಜಾತಿಗೆ ಸೇರಿದ್ದು ತಾನೆ ಕತ್ತೆ ಜಾತಿ."

"ನನ್ನಂತಾ ಅಲ್ಪಳಿಗೆ ಆ ಪೂಜ್ಯ ಜಾತಿಯ ಅದೃಷ್ಟ ಎಲ್ಲಿದೆ?"

"ನಿನ್ನ ಹಣೆಬರಹ ಅನುಭವಿಸು. ಅಂದ ಹಾಗೆ ಕತ್ತೆಗಳು ಕಿಟಕಿ ತೂರಿ ಒಳಗೆ ಬರಬಹುದು ಅಂತಿಯಾ?" ಮುಗ್ಧಳಂತೆ ಮುಖವಿಕ್ಕಿದಳು ಜಯಶ್ರೀ.

"ಅಮ್ಮ ಅತ್ತೆಯವರ ಗಾತ್ರ ಅಯ್ ಮೀನ್ ಗಾನ ಮಾಧುರ್ಯಕ್ಕೆ ಮನಸೋತು ಯಾವ ದಿಕ್ಕಿನಿಂದ ಈ ಮನೆಗೆ ದಾಳಿ ಇಡಬೇಕೆಂದು ಒದ್ದಾಡಿ ಕೊನೆಗೆ ಈ ಕಿಟಕಿ ಬಾಗಿಲುಗಳನ್ನು ಮುರಿದು ನುಗ್ಗಿ..."

"ಮಾಧವಿ ಸಾಕ್ ಮಾಡು ನಿನ್ನ ಡ್ರಾಮಾ ಡೈಲಾಗು" ಎಂದಾಕೆ, ನನ್ನನ್ನು ಅಟ್ಟಿಸಿಕೊಂಡು ಬಂದಳು. ನಾನವಳ ಕೈಗೆ ಸಿಗದಂತೆ ಮನೆಯಲ್ಲೆಲ್ಲ ಓಡಾಡಿದೆ. ನಮ್ಮಿಬ್ಬರ ತುಂಟ ಗಲಾಟೆ ಕೇಳಿ ಅಡುಗೆ ಮನೆಯಲ್ಲಿದ್ದ ಅಮ್ಮ ಜೋರುದನಿಯಲ್ಲಿ ಕೂಗಾಡಿದರು. ನಾವಿಬ್ಬರೂ ನಮ್ಮ ತುಂಟಾಟ ನಿಲ್ಲಿಸಿ ನೆಲದ ಮೇಲೆ ಕುಕ್ಕರು ಬಡಿದೆವು.

ನೆಲದ ಮೇಲೆ ಕುಳಿತ ಮೇಲೂ ಅವಳು ನನ್ನನ್ನು ಬಿಡಲಿಲ್ಲ, ನನ್ನ ಕಿವಿ ಹಿಡಿದು ನುಲಿಯುತ್ತ "ಈಗ ಹೇಳು, ಅವನು ನಿನಗೆ ಏನು ಮಾಡ್ದ ಅಂತ?"

"ಏನು ಪೋಲಿ ಮಾತಾಡ್ತಿಯೆ, ಛೀ ಛೀ." ನಾನು ಬೇಸರಿಸಿಕೊಂಡೆ. ಆದರೂ ಅವಳು ಬಿಡಬೇಕಲ್ಲ.

"ನೀನು ಹೇಳೋವರೆಗೂ ನಾನು ಬಿಡೋದಿಲ್ಲ" ಎಂದು ಇನ್ನಷ್ಟು ಜೋರಾಗಿ ಕಿವಿ ಹಿಂಡಿದಾಗ, ನಾನು ಬೇರೆ ದಾರಿ ಕಾಣದೆ ಅವಳ ತೊಡೆಯನ್ನು ಜಿಗುಟಿ "ಅವನು ನನಗೆ ಮಾಡಿದ್ದು ಇದೇ ಜಯಶ್ರೀ" ಎಂದು ಹೇಳಿದೆ.

*   *   *   *   *

ಅವತ್ತೆಲ್ಲ ನಮ್ಮ ಮನೆಯಲ್ಲೇ ತಂಗಿದ್ದು ಮರುದಿನ ತನ್ನ ಹಳ್ಳಿಯ ಬಸ್ಸು ಹಿಡಿದಳು ಜಯಶ್ರೀ. ನನ್ನ ಮತ್ತು ನರೇಂದ್ರನ ಪ್ರೇಮ ವ್ಯವಹಾರದ ಬಗ್ಗೆ ಆನಂದ್‌ನಿಗೂ ತಿಳಿದುಬಿಟ್ಟಿತು. ಈಗ ನಮಗ್ಯಾವ ಅಡೆತಡೆಗಳೂ ಇರಲಿಲ್ಲ. ಬೀಜವಾಗಿದ್ದ ಪ್ರೇಮ, ಮೊಳಕೆ ಒಡೆದು ಮರವಾಗಲಾರಂಭಿಸಿದಾಗ ನಾನು ನರೇಂದ್ರನನ್ನು 'ನರೇನ್' ಅಂತ ಕರೆಯುವುದು, ಅವನು ನನ್ನನ್ನು 'ಮಧು' ಅಂತ ಕರೆಯುವುದು ಅಭ್ಯಾಸವಾಗಿ ಬಿಟ್ಟಿತು.

ಈ ಪ್ರೇಮ ಒಂದು ರೀತಿಯಲ್ಲಿ ಜೀವನದಿಗೆ ಸಮನಾದದ್ದು. ಕೆಡುಕು, ಒಳಿತು ಎಲ್ಲವನ್ನೂ ತನ್ನ ಗರ್ಭದಲ್ಲಿ ಸೇರಿಸಿಕೊಂಡು ನಿರ್ಮಲವಾಗಿ, ಹಿತ ಸದ್ದು ಮಾಡುತ್ತ ಸಾಗುತ್ತದೆ. ನದಿಯ ಪಯಣಕ್ಕೆ ಕೊನೆಯೇ ಇಲ್ಲ. ಅದು ನಿಲ್ಲುವುದೂ ಇಲ್ಲ. ಗಂಡಸಿನ ಪ್ರೇಮದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಹೆಣ್ಣಿನ ಪ್ರೇಮದ ಬಗ್ಗೆ ಹೇಳಬೇಕೆಂದರೆ ಅವಳ ಪ್ರೇಮಕ್ಕೂ ಜೀವನದಿಗೂ ಯಾವ ವ್ಯತ್ಯಾಸವೂ ಇಲ್ಲ. ಹೆಣ್ಣಿನ ಪ್ರೇಮ ಅವಳ ಹೃದಯಾಂತರಾಳದಿಂದ ಪುಟಿದು, ಗಂಡಸೆಂಬ

ಸಮುದ್ರದಲ್ಲಿ ಸಾರ್ಥಕತೆ ಪಡೆಯುತ್ತದೆ.

ನಮ್ಮ ಮಾನಸಿಕ ಪ್ರೇಮದ ನಡುವೆ ದೈಹಿಕ ಆಕರ್ಷಣೆ ಹೆಡೆ ಬಿಚ್ಚುವ ಮೊದಲೇ ನಾವು ರಿಜಿಸ್ಟರ್ ಮದುವೆ ಆದೆವು.

ನಮ್ಮ ತಂದೆ ತಾಯಿಯಿಂದ ಯಾವ ವಿರೋಧವೂ ಬರಲಿಲ್ಲ, ಆದರೆ ನರೇಂದ್ರನ ತಾತ ಚಂಡಶಾಸನ ಮತ್ತು ನಿಷ್ಠುರ ವ್ಯಕ್ತಿಯಾದುದರಿಂದ, ನಮ್ಮ ವಾರ್ಷಿಕ ಪರೀಕ್ಷೆ ಮುಗಿಯುವವರೆಗೂ ಅವರಿಗೆ ಈ ವಿಷಯ ತಿಳಿಸಬಾರದೆಂದು ನಿರ್ಧರಿಸಿದೆವು ನಾವು.

ವಾರ್ಷಿಕ ಪರೀಕ್ಷೆಗಳಿಗೆ ಇನ್ನೂ ಎರಡು ತಿಂಗಳು ಬಾಕಿ ಇರುವಂತೆ ಒಂದು ದುರ್ಘಟನೆಯ ಕಾರಣ ಎಲ್ಲ ಕಾಲೇಜುಗಳು ಸ್ಟ್ರೈಕ್ ಮೂಲಕ ಬಂದ್ ಮಾಡಲ್ಪಟ್ಟವು. ನಮ್ಮ ಭೇಟಿ ಮಾತ್ರ ನಿಲ್ಲಲಿಲ್ಲ. ನರೇಂದ್ರ ಪ್ರತ್ಯೇಕವಾಗಿ ರೂಮ್ ಮಾಡಿದ ಕಾರಣ ನಮ್ಮಿಬ್ಬರ ಭೇಟಿ ಹಿಂದೆಂದಿಗಿಂತ ಹೆಚ್ಚು ಹೆಚ್ಚಾಗಿ ಆಗತೊಡಗಿತು.

ಹಿರಿಯರು ಹೇಳಿದ ಒಂದು ಗಾದೆ ನೆನಪಾಗುತ್ತ ತಾನೊಂದು ಬಗೆದರೆ, ದೈವವೊಂದು ಬಗೆಯುತ್ತಂತೆ. ನಮ್ಮಿಬ್ಬರ ವಿಷಯದಲ್ಲಿ ಆದದ್ದೂ ಅದೇ. ಸರಿಯಾಗಿ ಮತ್ತೆ ಕಾಲೇಜಿನ ಬಾಗಿಲು ತೆರೆದಾಗ ಸತ್ಯವೊಂದು ನನಗೆ ತಿಳಿಯಿತು, ನಾನು ಹೊರಗಾಗಿರಲಿಲ್ಲ. ಅಂದರೆ ನಾನು ಗರ್ಭ ಧರಿಸಿದ್ದೆ. ಈ ವಿಷಯ ನರೇಂದ್ರನಿಗೆ ಹೇಳಿದಾಗ ಆತ ಕುಣಿದಾಡಿ ಬಿಟ್ಟ, ನನ್ನನ್ನೂ ಎತ್ತಿ ಕುಣಿಸಿಬಿಟ್ಟ.

"ಇನ್ನೊಂದೆರಡು ತಿಂಗಳು ತಡ್ಕೋ, ತಾತನಿಗೆ ಹೇಳ್ತೇನೆ ಒಂದು ವೇಳೆ ಅವರು ಕೇಳದಿದ್ರೆ, ನಿನ್ನನ್ನೆತ್ತಿಕೊಂಡು ಹೋಗಿ ಆ ಅಂತಃಪುರದಲ್ಲಿ ಇಡುತ್ತೇನೆ. ಹಾಯಾಗಿ ಮಹಾರಾಣಿಯಾಗಿರು. ಒಂಬತ್ತು ತಿಂಗಳು ಹಾಗೂ ಹೀಗೂ ಸುಧಾರಿಸಿಕೋ. ಆಮೇಲೆ ಪುಟ್ಟನೊಬ್ಬ ನಿನ್ನ ಗರ್ಭದಿಂದ ಬಂದು ನನ್ ತಾತನ ಚೂಪು ಮೀಸೆ ಹಿಡುಕೊಂಡು ಆಟ ಆಡ್ತಾನೆ."

"ಎರಡು ತಿಂಗಳು ಹೇಗೆ ಸುಮ್ಮನಿರಲಿ ನಾನು?" ನಾನು ಆತಂಕದಿಂದ ಹೇಳಿದೆ. "ಮೂರು ತಿಂಗಳಾಗಿಬಿಟ್ಟರೆ ಮನೇಲಿ ಗೊತ್ತಾಗಿಬಿಡುತ್ತೆ. ಆಗ ನಾನು ಸತ್ಯ ಹೇಳಲೇಬೇಕಾಗುತ್ತೆ. ಗಲಾಟೆ ಆಗುತ್ತೆ, ನಿಮ್ಮ ತಾತನೊಂದಿಗೆ ಮಾತಾಡ್ತಾರೆ, ಆಗಲಾದ್ರೂ ನಿಮ್ಮ ತಾತನಿಗೆ ತಿಳಿದೇ ತಿಳಿಯುತ್ತಲ್ಲ."

"ನಮ್ಮ ವಿವಾಹ ನಿನ್ನ ಮನೆಯವರಿಗೆ ಸಮಸ್ಯೆ ಅಲ್ಲದಿದ್ದರೂ ನನ್ನ ತಾತನಿಗೆ ಮಾತ್ರ ಸಮಸ್ಯೆಯೇ. ಕಾರಣ ನಮ್ಮಿಬ್ಬರದು ಕುಲಾಂತರ ವಿವಾಹ. ಮೇಲು ಕೀಳು ಜಾತಿಯ ಅಡ್ಡ ಗೋಡೆ ನಮ್ಮ ನಡುವೆ ಎದ್ದು ನಿಂತಿದೆ. ಅದನ್ನು ನನ್ನ ಸಂಪ್ರದಾಯಸ್ಥ ತಾತ ಎಳ್ಳಷ್ಟೂ ಸಹಿಸುವುದಿಲ್ಲ. ಪರೀಕ್ಷೆ ಮುಗಿದ ಮೇಲೆ ಈ ವಿಷಯ ತಾತನಿಗೆ ಹೇಳ್ತೇನೆ. ಅವರು ಒಪ್ಪಿಕೊಂಡಲ್ಲಿ ನಮ್ಮಷ್ಟು ಅದೃಷ್ಟವಂತರು ಯಾರೂ ಇರುವುದಿಲ್ಲ. ಒಂದು ವೇಳೆ ಒಪ್ಪಿಕೊಳ್ಳಲಿಲ್ಲ ಅಂತ ಭಾವಿಸೋಣ, ಆಗಲೂ ನಮಗ್ಯಾವ ತೊಂದರೆಯೂ ಇಲ್ಲ. ನಮ್ಮ ದಾರಿ ನಮ್ಮದು, ನಮ್ಮ ಬದುಕು ಕೂಡ ನಮ್ಮದು. ಆಗಿ ಹೋದ ಮದುವೆಯನ್ನು ಅವರು ರದ್ದು ಪಡಿಸಲಾರರು. ನನ್ನನ್ನು ಮನೆ ಬಿಟ್ಟು ಹೋಗೊ ಅಂತ ಹೇಳಬಹುದಷ್ಟೇ. ಆಮೇಲೆ ಇದ್ದೇ ಇದೆ ಕೆಲಸಕ್ಕಾಗಿ ಹುಡುಕಾಟ, ಒಂದು ವೇಳೆ ನಾನೀಗಲೇ ನಮ್ಮಿಬ್ಬರ ರಿಜಿಸ್ಟರ್ಡ್ ಮದುವೆಯ ಬಗ್ಗೆ ಹೇಳಿಬಿಟ್ಟರೆ, ತಾತ ಆರ್ಥಿಕ ರೀತಿಯ ಸಮಸ್ಯೆ ಕ್ರಿಯೇಟ್ ಮಾಡಿಬಿಡಲೂಬಹುದು. ಪರೀಕ್ಷೆಗೆ ಕೂರಲಾಗುವುದಿಲ್ಲ. ಹಾಗೆಯೇ ನನ್ನ ನಿನ್ನ ಮನಶಾಂತಿ ಹಾಳಾಗಿ ನಾವು ಪರೀಕ್ಷೆಗೆ ಸರಿಯಾದ ಸಿದ್ಧತೆ ಮಾಡಿಕೊಳ್ಳಲಾಗುವುದಿಲ್ಲ ಕೂಡ. ನೀನೇ ಹೇಳು, ಓದು ಮುಗಿಯದೆ, ತಾತನ ಸಿಟ್ಟಿಗೆ ಗುರಿಯಾಗಿ, ಅವರಿಂದ ದೂರವಾಗಿ ಹೇಗೆ ಸುಖವಾಗಿ ಬದುಕಲು ಸಾಧ್ಯವಿದೆ. ದಯವಿಟ್ಟು ಎರಡು ತಿಂಗಳು ತಡೆದುಕೋ, ನಮ್ಮ ಮುಂದಿರುವ ಸಮಸ್ಯೆ ಸುಖಾಂತವಾಗುತ್ತದೆ ಪ್ಲೀಸ್."

ನರೇಂದ್ರನ ಅಭಿಪ್ರಾಯಕ್ಕೆ ನನ್ನಲ್ಲಿ ವಿರೋಧವಿರಲಿಲ್ಲ, ಒಪ್ಪಿಕೊಂಡೆ. ನಮ್ಮಿಬ್ಬರ ಕಾನೂನು

ರೀತ್ಯಾ ವಿವಾಹದ ಬಗ್ಗೆ ಜಯಶ್ರೀ, ಆನಂದ್‌ರಿಗೆ ತಿಳಿದಿದ್ರೂ ನಾನು ಗರ್ಭಿಣಿ ಎಂಬುದು ಮಾತ್ರ ತಿಳಿದಿರಲಿಲ್ಲ. ನಾನೇ ಅವರಿಗೆ ಹೇಳಲಿಲ್ಲ, ಅಂತೂ ನಾನು ಎರಡು ತಿಂಗಳು ಸಮಯವನ್ನು ಎರಡು ಯುಗದಂತೆ ಕಳೆದೆ.

ಅಂತಿಮ ಪೇಪರು ಬರೆದು ಬಂದ ದಿನ ಸಂಜೆ ನಾನು ನರೇಂದ್ರನನ್ನು ಆತನ ರೂಮಿನಲ್ಲಿ ಭೇಟಿಯಾದೆ. ವಾರ್ಷಿಕ ಪರೀಕ್ಷೆಯ ಕಾರಣ ನಮ್ಮಿಬ್ಬರ ನಡುವೆ ಹದಿನೈದು ದಿನಗಳಿಂದ ಮುಖತಾ ಭೇಟಿ ಇರಲಿಲ್ಲ. ನನ್ನನ್ನು ನೋಡುತ್ತಲೇ ಆತನ ಮುಖ ಬೆಳಗಿತು, ನನ್ನನ್ನು ತಬ್ಬಿಕೊಂಡ.

"ನಾಳೆ ಹೋಗ್ತಿದ್ದೀರಾ ಊರಿಗೆ?" ನನ್ನ ಆತಂಕ ಆದಷ್ಟು ಬೇಗ ಸಮಸ್ಯೆಯಿಂದ ಮುಕ್ತವಾಗು ಅಂತ ಒತ್ತಡ ತುಂಬುವಾಗ ನಾನು ವಿಧಿಯಿಲ್ಲದೆ ಈ ಪ್ರಶ್ನೆ ಹಾಕಿದೆ.

"ನಾಳೆ ನಾನು ಊರಿಗೆ ಹೋಗ್ತಿಲ್ಲ ಮಧೂ, ನಾಡಿದ್ದು ಹೋಗ್ತೇನೆ. ನಾಳೆ ನನ್ನ ಮಿತ್ರನೊಬ್ಬನ ಮದುವೆ ಇದೆ. ಮದುವೆ ನಡೆಯೋದು ಒಂದು ಕುಗ್ರಾಮದಲ್ಲಿ, ನಾನು ಮದುವೆಗೆ ಹೋಗಲೇಬೇಕು. ಅಲ್ಲಿಂದ ಬಂದ ಅನಂತರ ತಾತನನ್ನು ಮೀಟ್ ಮಾಡಿ ನಮ್ಮಿಬ್ಬರ ಸಮಸ್ಯೆಗೆ ದಾರಿ ಹುಡುಕುತ್ತೇನೆ ಆಯ್ತಾ?"

ಮರುದಿನ ನರೇಂದ್ರ ತನ್ನ ಮೂವರು ಗೆಳೆಯರೊಂದಿಗೆ ಅವರ ಮಿತ್ರನೊಬ್ಬನ ಜೀಪೊಂದರಲ್ಲಿ ಕುಗ್ರಾಮಕ್ಕೆ ಹೋದರು.

* * * * *

"ಮದುವೆಗೆ ಹೋದ ನರೇಂದ್ರ ವಾಪಾಸು ಬರಲಿಲ್ವ, ನಿನಗೆ ಮೋಸ ಮಾಡಿದ್ನಾ?" ಆತುರದಿಂದ ಕೇಳುತ್ತಾಳೆ ವಸಂತ.

"ಹೌದು ನರೇಂದ್ರ ಮತ್ತೆ ಬರಲೇ ಇಲ್ಲ. ನನಗೆ ಮೋಸ ಮಾಡಿದ." ಒಣ ನಗೆ ನಗುತ್ತಾಳೆ ಮಾಧವಿ.

"ಈ ಗಂಡಸರೇ ಇಷ್ಟು. ರುಚಿ ನೋಡುವವರೆಗೂ ರುಚಿ ನೋಡಿ ಆಮೇಲೆ ಸಿಪ್ಪೆ ಎಸೆದಂತೆ ಎಸೆದು ಬಿಡ್ತಾರೆ." ಸಿಟ್ಟಿಂದ ಹಲ್ಲು ಕಡಿದಳು ವಸಂತ.

ಮತ್ತೆ ಮುಂದುವರಿಸಿದಳು ಮಾಧವಿ "ನರೇಂದ್ರ ಮಿತ್ರನ ಮದುವೆಗೆ ಹೋದ ಮರುದಿನ ನಾನು ನನ್ನ ಕಸಿನ್‌ನನ್ನು ಬರಮಾಡಿಕೊಳ್ಳಲು ರೈಲು ನಿಲ್ದಾಣಕ್ಕೆ ಹೋದೆ, ರೈಲು ಒಂದು ತಾಸು ತಡವಾಗಿ ಬರುವುದು ಗೊತ್ತಾಗಿ ಅವತ್ತಿನ ದಿನಪತ್ರಿಕೆಯೊಂದನ್ನು ಕೊಂಡು, ಮುಖ ಪುಟದ ಮೇಲೆ ಕಣ್ಣಾಡಿಸಿದಾಗ ನನಗೊಂದು ಶಾಕ್ ಕಾದಿತ್ತು." ಬಿಕ್ಕುತ್ತಾಳೆ ಮಾಧವಿ.

"ಯಾವ ಶಾಕು?"

"ಮುಖ ಪುಟದಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಜೀಪು ಅಪಘಾತ ಐವರ ದುರ್ಮರಣ' ಎಂದಿತ್ತು. ಓದುತ್ತ ಹೋದೆ. 'ಹೈದರಾಬಾದ್‌ನಿಂದ ಹೊರಟು, ಬೆಲ್ಲಂಪಲ್ಲಿ ಕುಗ್ರಾಮಕ್ಕೆ ಮದುವೆಯ ಸಲುವಾಗಿ ಮಾರುತಿ ಜೀಪೊಂದರಲ್ಲಿ ಹೋಗುತ್ತಿದ್ದ ಯುವಕರ ತಂಡವೊಂದು ಅಪಘಾತಕ್ಕೀಡಾಯಿತು. ಚಾಲಕನ ನಿಯಂತ್ರಣ ತಪ್ಪಿದ ಜೀಪು, ಹೆದ್ದಾರಿಯ ಅರಳಿಮರಕ್ಕೆ ಗುದ್ದಿ ಜೀಪಿಗೆ ಬೆಂಕಿ ಹತ್ತಿಕೊಂಡಿತು. ಚಾಲಕನೊಂದಿಗೆ ಐವರು ಯುವಕರು ದುರ್ಮರಣಕ್ಕೆ ಈಡಾದರು. ಯಾರ ಮುಖವೂ ಗುರುತಿಸಲಾಗದಷ್ಟು ಛಿದ್ರಗೊಂಡಿದೆ ಎಂದಿತ್ತು." ದುರಂತದ ವಿವರ ನಿಲ್ಲಿಸಿದಳು ಮಾಧವಿ.

"ಓ ಗಾಡ್, ಹಾಗಾದ್ರೆ ನರೇಂದ್ರ..." ದಿಗ್ಮೂಢಳಾಗಿ ಕೇಳಿದಳು ವಸಂತ.

"ಹೌದು ಅವರೂ ಕೂಡ ಅಪಘಾತದಲ್ಲಿ ಮಡಿದರು." ನೋಟವನ್ನು ಶೂನ್ಯದಿಂದ ಬದಲಿಸದೆ ಹೇಳುತ್ತಾಳೆ ಮಾಧವಿ.



"ನಿಜಕ್ಕೂ ದೇವರು ತುಂಬ ಕ್ರೂರಿ ಕಣೆ. ನೀನು ಯಾರಿಗೆ ಅಪಕಾರ ಮಾಡಿದೇಂತ ನಿನಗೆ ಈ
ಶಿಕ್ಷೆ?''

ಪ್ರತಿ ಮಾತನಾಡಲಿಲ್ಲ ಮಾಧವಿ.

"ನೀನು ಕುಂಕುಮದ ಬೊಟ್ಟು ಇಡದಿದ್ದಾಗ ಬಹುಶಾ ಫ್ಯಾಶನ್ ಇರಬಹುದೂಂತ ತಿಳಿದುಕೊಂಡಿದ್ದ
ಆದರೆ ನನಗೆ ಗೊತ್ತಿರಲಿಲ್ಲ ಆ ದೇವರು ನಿನ್ನ ಕುಂಕುಮವನ್ನು ಶಾಶ್ವತವಾಗಿ ಅಳಿಸಿ ಹಾಕಿದ್ದಾನೆಂದು.''

ಈಗ ಮಾಧವಿಯ ಕಣ್ಣುಗಳು ವರ್ಷಿಸುತ್ತಿಲ್ಲ. ಅವಳ ಹೃದಯ ಸಂಪೂರ್ಣ ಸ್ತಬ್ಧಗೊಂಡಿದೆ
ಮರಗಟ್ಟುತ್ತಿದೆ. ಕಣ್ಣೀರ ರೂಪದಲ್ಲಿ ಹೊರಬರಬೇಕಾಗಿದ್ದ ವೇದನೆ, ಘನೀಭವಿಸಿ ಹೃದಯದಲ್ಲೇ ತಳ
ಊರಿ, ಆ ಭಾರವನ್ನು ಹೊರಲು ತನಗೆ ಸಾಧ್ಯವಿಲ್ಲ ಎಂಬಂತೆ ಮಾಧವಿ ವಸಂತಳ ತೋಳಿಗೆ ತಲೆ
ಆನಿಸಿದಳು. ಮಾಧವಿಯ ತಲೆಯನ್ನು ಪ್ರೀತಿಯಿಂದ ನೇವರಿಸುತ್ತಾಳೆ ವಸಂತ.

ಮತ್ತೆ ಮಾಧವಿಯಿಂದಲೇ ಬಂತು ದುರಂತದ ವಿವರ. "ಆ ಘೋರ ಸುದ್ದಿಯನ್ನು ಓದುತ್ತಲೇ
ನಾನು ಹೃದಯ ಬಿರಿಯುವಂತೆ ಅಳಲಿಲ್ಲ. ಯಾಕೆಂದರೆ ಆ ವೇಳೆಗಾಗಲೇ ನಾನು ಜೀವಂತ
ಶವವಾಗಿದ್ದೆ. ಜೀವರಹಿತ ದೇಹಕ್ಕೆ ಅನುಭೂತಿ ಎಲ್ಲಿರುತ್ತೆ ಹೇಳು. ಕೆಲ ನಿಮಿಷ ಹಾಗೆಯೇ ಕಲ್ಲಿನಂತೆ
ಬೆಂಚಿನ ಮೇಲೆ ಕುಳಿತಿದ್ದ ನಾನು ಅನಂತರ ಎದ್ದು ಹೋಗಿ ನನ್ನೆದುರು ಪ್ಲಾಟ್ ಫಾರಮ್ಮಿನಲ್ಲಿ ನಿಂತಿದ್ದ
ರೈಲುಬಂಡಿಯೊಂದರ ಬೋಗಿಯೊಂದರಲ್ಲಿ ಕುಳಿತುಕೊಂಡೆ. ಆ ರೈಲು ಗಾಡಿ ಎಲ್ಲಿಗೆ ಹೋಗುತ್ತ
ನಾನೆಲ್ಲಿಗೆ ಹೋಗಬೇಕು, ನಾನು ಕುಳಿತಿರುವುದು ಫಸ್ಟ್ ಕ್ಲಾಸ್‌ನಲ್ಲೇ ಅಥವಾ ಸೆಕೆಂಡ್ ಕ್ಲಾಸ್‌ನಲ್ಲೇ
ಎಂಬುದು ನನಗೆ ತಿಳಿದಿರಲಿಲ್ಲ. ಆಲೋಚನೆ, ಅನುಭೂತಿ ಎಲ್ಲವುಗಳಿಂದ ಹೊರತಾಗಿತ್ತು ನನ್ನ
ಮಿದುಳು. ಕೇವಲ ಬ್ಲಾಂಕ್ ಆಗಿತ್ತು. ಕಂಪಾರ್ಟ್‌ಮೆಂಟಿನಲ್ಲಿ ಕುಳಿತ ಎಷ್ಟೋ ಸಮಯದ ಅನಂತರ
ನನಗೆ ವಾಸ್ತವದ ಪ್ರಜ್ಞೆ ಬಂತು. ದೇಹ, ಮನಸ್ಸು ಕ್ರಿಯೆಗೆ ಸಿದ್ಧವಾಗತೊಡಗಿದಾಗ ನನಗೆ ಅರಿವು
ಬಂತು, ನಾನು ಕುಳಿತಿರುವುದು ರೈಲುಗಾಡಿಯಲ್ಲಿ ಎಂದು. ಅಷ್ಟರಲ್ಲಿ ಶ್ರೀಧರ್ ನನ್ನನ್ನು
ಗುರುತಿಸಿದರು. ಆಗಲೂ ನಾನು ಏನೂ ಹೇಳಲಿಲ್ಲ. ನನ್ನೆಲ್ಲ ನೋವನ್ನು ಹೃದಯದಲ್ಲಿ
ಅದುಮಿಟ್ಟುಕೊಂಡೆ. ನಿನ್ನ ಒತ್ತಾಯಕ್ಕೆ ಈಗದು ಕರಗಿ ಬಂತು.''

* * * * *

ಅವತ್ತು ರಾತ್ರಿ ವಸಂತಳನ್ನು ವಂಚಿಸಿತು ನಿದ್ದೆ. ಒಂದು ಕಡೆ ಆವಳಿಗೆ ಅಚ್ಚರಿ, ಮತ್ತೊಂದು
ಕಡೆ ವೇದನೆ. 'ಮಾಧವಿಗೆ ಎಂತಾ ಅನ್ಯಾಯವಾಗಿಬಿಟ್ಟಿತು. ಮಾಧವಿ ವಿಧವೆ ಎಂದರೆ ನಂಬಲು
ಸಾಧ್ಯವಿಲ್ಲ. ಮಾಧವಿಯ ಬದುಕಿನೊಂದಿಗೆ ಆಟವಾಡಿದ ವಿಧಿಯ ಕ್ರೌರ್ಯದ ಬಗ್ಗೆ ಏನೆಂದು
ಹೇಳಬೇಕು.'

'ಶೀತಲಮಾಸದ ವರ್ಷಧಾರೆಯಲ್ಲ ತೊಯ್ದು ನಳನಳಿಸುವ ಮುಂಜಾವಿನ ಹೂವಿನಂಥವಳು
ಮಾಧವಿ. ಸೌಂದರ್ಯದ ಕನಿ. ಈ ಜಗತ್ತಿನಲ್ಲಿ ಎಲ್ಲ ಚೆಲವುಗಳಿಗೂ ಆಯುಸ್ಸು ಅಲ್ಪವೆಂದೇ
ಕಾಣುತ್ತೆ. ಸ್ಪಟಿಕ ಸ್ವಚ್ಛತೆಯಿಂದ ಬೆರಗುಗೊಳಿಸುವ ಹಾಲುಗಲ್ಲಿನ ನುಣುಪನ್ನು ತನ್ನದಾಗಿಸಿಕೊಂಡ
ಹಣೆಯ ನಡುವೆ ಕುಂಕುಮದ ಬಿಂದು ಅದೆಷ್ಟು ಸೊಬಗನ್ನು ಪಡೆದಿತ್ತು.

ತಾನೂ ಮಾಧವಿ ಈ ಮನೆಗೆ ಕಾಲಿಟ್ಟ ದಿನದಿಂದಲೂ ನೋಡುತ್ತಿದ್ದಾಳೆ. ಅವಳ ಕರಗಳನ್ನು
ಚಿನ್ನದ ಬಳೆಗಳು ಅಲಂಕರಿಸಿರುವುದು ನೋಡಿ, 'ಮಾಮೂಲಿ ಬಳೆ ಹಾಕ್ಕೋಬಾರದೇನೆ' ಅಂತ
ಕೇಳಿದಾಗಲೆಲ್ಲ ಅವಳು 'ಪರವಾಗಿಲ್ಲ ಬಿಡು' ಅಂತ ಮಾತು ಹಾರಿಸಿಬಿಡುತ್ತಿದ್ದಳು. ಹಾಗಾದರೆ ಇಷ್ಟು
ದಿನದಿಂದ ಮಾಧವಿ ತನಗೆ ಅವಳ ಬಾಳಿನಲ್ಲಾದ ದುರಂತವನ್ನು ಹೇಳದೆ ಸುಮ್ಮನಿದ್ದಳು. ಬಹುಶಃ
ಆ ದುರಂತ ಕತೆ ಕೇಳಿ ತಾನೆಲ್ಲಿ ಧೃತಿಗೆಡುವೆನೋ ಎಂದು ಅಳುಕಿದಳೇನೋ?

ಈಗ ನಡುಗಡಲಿನ ಗಾಂಭೀರ್ಯದ ಹೆಣ್ಣು ಮಾಧವಿ, ಹಿಂದೊಮ್ಮೆ ನದಿಯಂತೆ ತುಂಬ

ತುಂಟಿಯಾಗಿದ್ದಳು. ಕಷ್ಟ ಕಾರ್ಪಣ್ಯದ ಬಗ್ಗೆ ಲವಲೇಶವೂ ತಿಳಿಯದಂತೆ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದಳು. ಇಳಿಸಂಜೆಗಳಲ್ಲಿ ಹಸಿರು ಪೈರುಗಳ ನೇವರಿಸಿ ಸಾಗುವ ಕುಳಿರ್ಗಾಳಿಯಂತೆ, ಉತ್ಸಾಹಕ್ಕೆ ಪ್ರತೀಕಾರವಾಗಿದ್ದ ಹುಡುಗಿ. ತನ್ನದು ಅವಳಿಗಿಂತ ಭಿನ್ನವಾದ ವ್ಯಕ್ತಿತ್ವ. ಆದರೂ ಸ್ನೇಹದಲ್ಲಿ ತಾವಿಬ್ಬರೂ ಹಾಲು ಜೇನಿನಂತೆ ಒಂದಾದೆವು.

ಆಗೆಲ್ಲ ತಾನು ಅಮಾಯಕ ಹುಡುಗಿ, ನೀರ ಹಾವಿನಂಥವಳು ಎಂದು ಶಾಲೆಯಲ್ಲಿ ಬಿರುದು ಪಡೆದುಕೊಂಡಿದ್ದವಳು. ತನ್ನನ್ನು ಯಾರಾದರೂ ಹೀಯಾಳಿಸಿದಾಗಲೋ, ಬಯ್ದಾಗಲೋ ಕೂಡ ತಾನು ಸಿಟ್ಟಿಗೇಳುತ್ತಿರಲಿಲ್ಲ. ಪ್ರತಿಯಾಗಿ ಮೂದಲಿಸುತ್ತಿರಲಿಲ್ಲ. ಅಂತಾ ಸಮಯದಲ್ಲಿ ತನ್ನ ಪರವಾಗಿ ತನ್ನನ್ನು ಬಯ್ದವರನ್ನು ಕದನಕ್ಕೆ ಕಾಲು ಕೆರೆದುಕೊಂಡು ಜಗಳಕ್ಕೆ ಕರೆಯುತ್ತಿದ್ದವಳು ಮಾಧವಿ. ಹಾಗೆಯೇ ತನ್ನನ್ನು ಸಾಂತ್ವನ ಪಡಿಸುತ್ತಿದ್ದಳು ಕೂಡ. ಅವಳು ತನ್ನ ಮನೆಗೆ ಬಂದಾಗ ತನ್ನ ಭಾವ ಶ್ರೀಧರ್ ಮತ್ತು ತಾನು ಇಬ್ಬರೂ ಅವಳಿಗೆ ರೇಗಿಸುತ್ತಿದ್ದದ್ದುಂಟು. ಎಂ. ಬಿ. ಬಿ. ಎಸ್. ಓದುತ್ತಿದ್ದ ಭಾವಯ್ಯ ಶ್ರೀಧರ್‌ನಿಗೆ ತಮ್ಮ ಮನೆಯೇ ಹಾಸ್ಟೆಲ್.

ತನ್ನ ಶ್ರೀಧರ್‌ನ ಮದುವೆಯನ್ನು ಹಿರಿಯರು ಮೊದಲೇ ನಿರ್ಧರಿಸಿದ್ದುದರಿಂದ ಮಾಧವಿ 'ಏನೇ ಮಿಸೆಸ್ ಡಾಕ್ಟರ್?' ಎಂದು ರೇಗಿಸುತ್ತಿದ್ದಳು. ಅದನ್ನು ನೋಡಿ ಶ್ರೀಧರ್ ಕೂಡ 'ನಾನೇ ಇನ್ನೂ ಡಾಕ್ಟರಾಗಿಲ್ಲ, ಆಗಲೇ ನಮ್ಮ ವಸು ಮಿಸೆಸ್ ಡಾಕ್ಟರ್ ಆಗಿಬಿಟ್ಟಿದ್ದಾಳೆ' ಅಂತ ಹೇಳುತ್ತಿದ್ದ.

ಚಂಡಮಾರುತಕ್ಕೆ ಸಿಕ್ಕ ನಾವೆಯಂತಾಗಿದೆ ವಸಂತಳ ಯೋಚನೆಗಳು. ಬೇಗನೇ ನಿದ್ದೆ ಬರಲಿಲ್ಲ. ಅವಳಿಗೆ ನಿದ್ದೆ ಹತ್ತಿದಾಗ ಬೆಳಗಿನ ಜಾವ. ಮತ್ತವಳಿಗೆ ಎಚ್ಚರವಾದಾಗ ಮೈಕೈ ನೋವಿಂದ ಕಿರಿಕಿರಿಗೊಳಗಾಗಿತ್ತು. ಕಣ್ಣುರಿ, ದಾಹ. ಡಣ್ ಡಣ್ ಎಂದು ಗೋಡೆ ಗಡಿಯಾರ ಕೂಗಿದಾಗ ವಸಂತ ಮೆಲ್ಲಗೆ ಕಣ್ಣೆವೆ ತೆರೆದಳು. ಹತ್ತು ಗಂಟೆ. ಶ್ರೀಧರ್ ಕಳೆದ ರಾತ್ರಿ ಯಾವುದೋ ತುರ್ತು ಕೆಲಸದ ನಿಮಿತ್ತ ಹೈದರಾಬಾದ್‌ಗೆ ಹೋದ ಕಾರಣದಿಂದ ವಸಂತಳನ್ನು ಬೇರೆ ಯಾರೂ ಎಬ್ಬಿಸಲಿಲ್ಲ.

ಖಾಸಗಿ ವೈದ್ಯ ವೃತ್ತಿ ಪ್ರಾಕ್ಟೀಸು ಮಾಡುತ್ತಿರುವ ಶ್ರೀಧರ್ ವಾಸಿಸುತ್ತಿರುವ ಆ ಊರು ಆಧುನಿಕ ನಗರವೂ ಅಲ್ಲ, ಕುಗ್ರಾಮವೂ ಅಲ್ಲ. ದೇಶಕ್ಕೆ ಪರಂಗಿಯವರ ಕಾಟ ತಪ್ಪಿದ ಮೇಲೆ ಆಮೆ ನಡಿಗೆಗಿಂತ ಕಡಿಮೆ ವೇಗದಲ್ಲಿ ಬೆಳೆಯ ತೊಡಗಿದ ಆ ಊರಲ್ಲೆಲ್ಲ ಇತ್ತೀಚೆಗಷ್ಟೇ ದನದ ಆಸ್ಪತ್ರೆ, ಎರಡು ಸಿನಿಮಾ ಮಂದಿರ, ಪ್ರೌಢಶಾಲೆ, ಎರಡು ಸಾರಾಯಿ ಅಂಗಡಿ ಮತ್ತು ತಾಲ್ಲೂಕು ಕಚೇರಿಯ ಅದೃಷ್ಟ ಪಡೆದಿದೆ.

ಮೆಡಿಕಲ್ ಪದವಿ ಸಿಗುತ್ತಲೇ ಇತರ ಧನದಾಹಿ ವೈದ್ಯ ಮೂರ್ಖರಂತೆ ಗಿಜಿಗಿಜಿ ನಗರಗಳಿಗೆ ಧಾವಿಸುವ ಹುಂಬತನ ತೋರಲಿಲ್ಲ ಶ್ರೀಧರ್. ಅವನಿಗೆ ಅವನ ಹೆತ್ತನೆಲವನ್ನು ತ್ಯಜಿಸಿ ದುಡ್ಡು ಮಾಡುವ ದೂರ್ತ ಆಸೆ ಇಲ್ಲ. ಆದುದರಿಂದಲೇ ಶ್ರೀಧರ್ ವೈದ್ಯ ಪದವಿ ಸಿಗುತ್ತಲೇ ಸೋದರ ಮಾವನ ಮಗಳು ವಸಂತಳನ್ನು ಮದುವೆ ಆದ. ತಾನು ಜನ್ಮ ತಾಳಿದ ಸ್ವಂತ ನೆಲದಲ್ಲೇ ಡಿಸ್‌ಪೆನ್ಸರಿಯನ್ನು ತೆರೆದ. ಇದು ಐದು ವರ್ಷದ ಹಿಂದಿನ ಕಥೆ.

ಶ್ರೀಧರ್‌ನ ತಾಯಿ ಅವನಿಗೆ ಜನ್ಮ ಕೊಡುತ್ತಲೇ ಬಾಣಂತನದ ನಂಜಿಗೆ ಸಿಕ್ಕಿ ಕಾಲವಾದಳು. ಎರಡು ವರ್ಷಗಳ ಹಿಂದೆ ಶ್ರೀಧರ್‌ನ ತಂದೆ ಕಾಶಿಯಲ್ಲಿ ಪ್ರೊಫೆಸರನಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯ ಮಗನ ಬಳಿಗೆ ಹೋದರು. ಆತನ ಶೇಷ ಜೀವನವನ್ನು ಕಾಶಿ ವಿಶ್ವೇಶ್ವರನ ಸಮ್ಮುಖದಲ್ಲಿ ಕಳೆದರೆ ತನಗೆ ಮುಕ್ತಿ ಸಿಗಬಹುದೆಂಬ ಆಶೆ ಅವರದು. ಶ್ರೀಧರ್‌ನ ಅಣ್ಣ ತನ್ನ ಪಾಲಿಗೆ ಬಂದ ಆಸ್ತಿಯನ್ನು ಮಾರಿ ಕಾಶಿಯಲ್ಲೇ ಕಾಯಂ ವಾಸಿಸಲು ಉದ್ದೇಶಿಸಿರುವುದು, ವೃದ್ಧ ತಂದೆಗೆ ಮುಕ್ತಿ ಜೀವನಕ್ಕಾಗಿ ಪ್ರೇರೇಪಣೆ ನೀಡಿತ್ತು.

ಪ್ರಸ್ತುತದಲ್ಲಿ ಶ್ರೀಧರ್ ಮತ್ತು ಕುಟುಂಬ ವಾಸಿಸುತ್ತಿರುವ ಮನೆ, ಮೂಸಂಬಿ ತೋಟ, ಹತ್ತೆಕರೆ ಗದ್ದೆ ಶ್ರೀಧರ್‌ನ ಪಾಲಿನ ಆಸ್ತಿ. ಮನೆಗೆ ನೂರು ಗಜಗಳ ದೂರದಲ್ಲಿ ವಿಶಾಲ ಮತ್ತು ಆಧುನಿಕ

ಉಪಕರಣಗಳ ನರ್ಸಿಂಗ್ ಹೋಮ್ ಒಂದನ್ನು ಸ್ಥಾಪಿಸಬೇಕೆಂಬುದು ಅವನ ಬಹುಕಾಲದ ಅಪೇ
ಈಗ ಆತ ಆ ಪ್ರಯತ್ನದಲ್ಲಿ ಹೈದರಾಬಾದ್ ನಗರಕ್ಕೆ ಹೋಗಿದ್ದಾನೆ.

ಹಾಸಿಗೆ ಬಿಡಲೆತ್ನಿಸಿ ಸಾಧ್ಯವಾಗದೆ ಮತ್ತೆ ಹಾಗೆಯೇ ಮಲಗಿದಳು ವಸಂತ. 'ಸಮಯ ಹತ್ತಾದರೂ ಅಮ್ಮಣ್ಣಿಯವರಿನ್ನೂ ಹಾಸಿಗೆ ಬಿಟ್ಟಿಲ್ಲ' ಎಂದು ತನ್ನನ್ನೇ ಪ್ರಶ್ನಿಸಿಕೊಂಡು ಬಂದ ಲಕ್ಷ್ಮಿ ವಸಂತಳ ಹಾಸಿಗೆಯ ಸಮೀಪ ಬಂದು "ಯಾಕಮ್ನೋರೆ, ಇನ್ನೂ ಎದ್ದಿಲ್ಲ?"

ಭಾರಗೊಂಡ ಕಣ್ಣವೆ ತೆಗೆದು "ಪುಟ್ಟ ಎಲ್ಲಿ?"

"ಮಾಧವಿ ಅಮ್ನೋರು ಇವತ್ತು ಸ್ಕೂಲಿಗೆ ರಜ ಹಾಕವ್ರಂತೆ. ಪುಟ್ಟನ್ನು ಮನೇಲ್ಲಿ ಆಡಿಸಿಕೊಂಡವ್ರೆ."

'ಮಾಧವಿ ಇವತ್ತು ಕೆಲಸಕ್ಕೆ ಹೋಗಲಿಲ್ವಾ, ನಿನ್ನೆ ರಾತ್ರಿ ಇಲ್ಲೇ ಇದ್ದುಬಿಡೆ ಅಂದರೂ ಕೇಳಲಿಲ್ಲ ನಾನು ಹೋಗ್ತೇನೆ ವಸು, ನನ್ನ ಬಗ್ಗೆ ನಿನಗೆ ಚಿಂತೆ ಬೇಡ. ಒಂದೂವರೆ ವರ್ಷದಿಂದ ದುರಂತದ ಬೆಂ ನನ್ನ ಎದೆಯಲ್ಲೇ ಇತ್ತು. ಇವತ್ತು ಅದನ್ನು ನಿನ್ನ ಮುಂದೆ ಹೊರ ಹಾಕಿದೆ ಅಷ್ಟೇ. ನೀನು ಮಾ ನನ್ನ ಬದುಕಿನ ದುರಂತದ ಬಗ್ಗೆ ಚಿಂತೆ ಮಾಡದೆ ಹಾಯಾಗಿ ನಿದ್ದೆ ಮಾಡು' ಎಂದು ಹೊರಟ ಹೋಗಿದ್ದಳು ಮಾಧವಿ.

'ಮಾಧವಿಯ ಅಂತರಾಳದಲ್ಲಿ ಜ್ವಾಲಾಮುಖಿ ಸಿಡಿಯುತ್ತಿದೆ ಎಂದು ತನಗೂ ಗೊತ್ತಿದ ಮೇಲು ನೋಟಕ್ಕೆ ಗಾಂಭೀರ್ಯ, ಪ್ರಶಾಂತತೆಯಿಂದ ವರ್ತಿಸಿದರೂ, ಮಾಧವಿಯ ಮಾನಸಿಕ ವ್ಯ ಅಷ್ಟಿಷ್ಟಲ್ಲ ಎಂಬುದು ತಿಳಿದಿದೆ ವಸಂತಳಿಗೆ. ಅವಳಿಗೆ ಅನ್ನಿಸಿತು ಅನಗತ್ಯವಾಗಿ ತಾನು ಮಾಧವಿಯ ದುರಂತ ಗತವನ್ನು ಕೆದಕಿ ಅವಳ ಹೃದಯಕ್ಕೆ ಕಿಚ್ಚು ಹಚ್ಚಿದೆನೇನೋ? ಬಹುಶಾ ಅವ ಮನೋವ್ಯಥೆಯನ್ನು ತಾನು ಬೇರೊಂದು ರೀತಿಯಲ್ಲಿ ಅರ್ಥೈಸಿಕೊಂಡಿರಬಹುದು, ತನ್ನ ಉದ್ದೇಶವಿ ಆಗಿತ್ತು. ಅವಳ ಸಮಸ್ಯೆಗೆ ಯಾವುದಾದರೂ ಸರಿಯಾದ ಪರಿಹಾರ ಹುಡುಕಿ ಸರಿಪಡಿಸಬೇಕ ಆದರೆ ತನಗೇನು ಗೊತ್ತಿತ್ತು, ಮಾಧವಿಯ ಸಮಸ್ಯೆಗೆ ಪರಿಹಾರವೇ ಇಲ್ಲ, ದುರಸ್ತಿ ಮಾಡಲಾಗ ಬಾಳು ಅವಳದೆಂದು. ನಮ್ಮ ಊಹೆಗೂ ನಿಲುಕದಂತಾ ಘಟನೆಗಳನ್ನು ಸೃಷ್ಟಿಸುವುದು ಕೇವಲ ದೇವರೊಬ್ಬರಿಗೇ ಸಾಧ್ಯವಿರಬೇಕು.

'ಎಂದಿನಂತೆ ಮಾಧವಿ ಶಾಲೆಗೆ ಹೋಗಿದ್ದರೆ ಚೆನ್ನಾಗಿತ್ತು; ರಜೆ ಹಾಕಿ ಮನೆಯಲ್ಲಿ ಇದ್ದಾಳೆಂದರೆ ಖಂಡಿತಕ್ಕೂ ಮಾಧವಿ ಮನದಲ್ಲೇ ಕೊರಗುತ್ತಿದ್ದಾಳೆ ಅಂತ ಸ್ಪಷ್ಟ. ತಾನವಳ ಮನೆ ಹೋಗಿ ಸಾಂತ್ವನಪಡಿಸಿದ್ದರೆ ಚೆನ್ನಾಗಿತ್ತೇನೋ. ಆದರೆ ಸದ್ಯಕ್ಕೆ ಎದ್ದು ನಿಲ್ಲುವುದಕ್ಕೂ, ಕಣ ಬಿಡಲಿಕ್ಕೂ ಆಗುತ್ತಿಲ್ಲವಲ್ಲ, ಹೋಗಲಿ ಅವಳನ್ನೇ ಇಲ್ಲಿಗೆ ಬಾ ಅಂತ ಹೇಳಿ ಕಳಿಸೋಣವೆಂದ ಅದಕ್ಕೂ ಮನ ಅಂಗೀಕರಿಸುತ್ತಿಲ್ಲ.'

ಒಂದೆರಡು ನಿಮಿಷ ಅಮ್ಮಣ್ಣಿಯ ಮುಂದೆ ನಿಂತು,ಅವಲೋಕಿಸಿದ ಲಕ್ಷ್ಮಿಗೆ ಅರ್ಥವಾಯಿತೊಂದ ವಿಷಯ. ಅದುದರಿಂದಲೇ ಕೇಳಿದಳು ಕೂಡ "ಮೈಯಾಗೆ ಚೆಂದಾಗಿಲ್ವ ಅಮ್ನೋರೆ?"

"ಏನೂ ಆಗಿಲ್ಲ, ಚೆನ್ನಾಗೆ ಇದೆ. ಬಿಸಿ ಬಿಸಿ ಕಾಫಿ ತಗೊಂಡ್ಬಾ. ಆಮೇಲೆ ಹೋಗಿ ಪುಟ್ಟ ಕರ್ಕೊಂಡು ಬಾ." ಲಕ್ಷ್ಮಿ ಕೆಳಗೆ ಹೊರಟು ಹೋಗುತ್ತಲೇ ವಸಂತ ತುಂಬ ಪ್ರಯಾಸದಿಂದ ಎದ್ ಹೋಗಿ ಅಟಾಚ್ಡ್ ಬಾತ್ ರೂಮಿನಲ್ಲಿ ಮುಖ ತೊಳಕೊಂಡು ಬಂದಾಗ ಕಾಫಿ ಬಂದಿತ್ತು. ಅಮ್ಮಣ್ಣಿ ಕಾಫಿ ಕೊಟ್ಟು ಮಾಧವಿಯ ಮನೆಗೆ ಹೋದ ಲಕ್ಷ್ಮಿಗೆ ಮಾಧವಿಯಿಂದ ವಸಂತಳ ಸ್ಥಿತಿಯನ ಮರೆಮಾಚಿಡಲಾಗಲಿಲ್ಲ.

ಪುಟ್ಟನನ್ನು ಎತ್ತಿಕೊಂಡು ಮನೆಗೆ ಬೀಗ ಹಾಕಿಕೊಂಡು ಬಾ ಎಂದು ಲಕ್ಷ್ಮಿಗೆ ತಿಳಿ ಆಟೋದಲ್ಲಿ ಧಾವಿಸಿ ಬಂದ ಮಾಧವಿ ವಸಂತಳ ಹಣೆಗೆ ಕೈ ತಾಗಿಸಿದಾಗ ಅದು ಕಾದ ಹೆಂಚಾಗಿತ್ತು

ದೇಹವೂ ಅಷ್ಟೇ, ಮೂಗು ಹೊಳ್ಳೆಗಳಿಂದ ಹಬೆಯಂತೆ ಉಸಿರಾಟ. ವಸಂತಳ ಪಕ್ಕದಲ್ಲಿ ಕುಳಿತು ಅವಳ ಕೈಯನ್ನು ನೇವರಿಸುವಾಗ ಅತಿ ಕಷ್ಟದಿಂದ ಎವೆ ಎತ್ತುತ್ತಾಳೆ ವಸಂತ.

ಅವಳ ಕಣ್ಣುಗಳಲ್ಲಿ ಸೂರ್ಯ ಉರಿಯುತ್ತಿದ್ದ.

"ಮಧೂ." ತಗ್ಗು ಸ್ವರದಲ್ಲಿ ಕರೆಯುತ್ತಾಳೆ ವಸಂತ.

"ನಾನು ಹೇಳಲಿಲ್ವಾ, ನನ್ನ ಕರ್ಮ ಕತೆ ಕೇಳಿ ನೀನು ತಡೆದುಕೊಳ್ಳೋದಿಲ್ಲ ಅಂತ."

"ಅದಕ್ಕೆ ಹೀಗಾಗಿಲ್ಲ." ಪ್ರಯಾಸದಿಂದ ಹೇಳಿದಳು ವಸಂತ. "ಹೆಚ್ಚು ಕೆಲ್ಸ ಮಾಡಿ ಹೀಗಾಗಿದೆ. ಅಷ್ಟೇ."

ತಡಮಾಡದೆ ಕೆಳಗಿಳಿದು ಮಾಧವಿ ಮೆಡಿಕಲ್ ಅಂಗಡಿ ಒಂದರಲ್ಲಿ ತನಗೆ ತಿಳಿದಿರುವ ಎರಡು ಜ್ವರದ ಗುಳಿಗೆಗಳನ್ನು ಕೊಂಡು, ಮತ್ತೆ ಮನೆಗೆ ಬರುವಷ್ಟರಲ್ಲಿ ಲಕ್ಷ್ಮಿ ಪುಟ್ಟನೊಂದಿಗೆ ಬಂದಾಗಿತ್ತು. ಮನೆಗೆ ಬಂದ ಮೇಲೆ ಅವಳಿಗೆ ಹೊಳೆಯಿತು ಗಾಬರಿಯಲ್ಲಿ ಗುಳಿಗೆಗಳಿಗಾಗಿ ತಾನು ಅಂಗಡಿಗೆ ಹೋದೆ. ಇದು ವೈದ್ಯರ ಮನೆ, ಇಲ್ಲಿ ತನಗೆ ಸಿಗದಿರುವುದು ಯಾವುದು ಎಂದು ತಾನು ಯೋಚಿಸಲಿಲ್ಲ, ತನ್ನ ಮರೆವಿಗೆ ತಾನೇ ನಕ್ಕಳು. ನೆನಪುಗಳು ಕಾಡುವಾಗ ಮರೆವು ಹೆಚ್ಚುವುದಂತೆ.

ಲಕ್ಷ್ಮಿಗೆ ಮತ್ತೆ ಬಿಸಿ ಬಿಸಿ ಕಾಫಿ ತರಲು ಹೇಳಿದ ಮಾಧವಿ ಪುಟ್ಟನನ್ನು ವಸಂತಳ ಪಕ್ಕದಲ್ಲಿ ಕೂರಿಸುತ್ತಾಳೆ. ಪುಟ್ಟನೊಂದಿಗೆ ಜ್ವರ ಬಾಧೆಯಲ್ಲೂ ಆಟವಾಡಿದ ವಸಂತ, ಲಕ್ಷ್ಮಿ ಮತ್ತೆ ಕಾಫಿ ತಂದಾಗ ಪುಟ್ಟನನ್ನು ಅವಳ ಕೈಗೆ ಕೊಟ್ಟು ಹೋಗಿ ಕೆಳಗೆ ಆಟ ಆಡಿಸಿಕೊಂಡಿರು ಎಂದಾಗ ಪುಟ್ಟನೊಂದಿಗೆ ಹೊರಟು ಹೋದಳು ಲಕ್ಷ್ಮಿ.

ಕಾಫಿಯೊಟ್ಟಿಗೆ ಜ್ವರದ ಗುಳಿಗೆಗಳನ್ನು ನುಂಗಿಸಿ, ಒದ್ದೆ ಬಟ್ಟೆಯೊಂದನ್ನು ಬೆಂಕಿ ಕಾರುವ ವಸಂತಳ ಹಣೆಯ ಮೇಲಿರಿಸಿದಳು ಮಾಧವಿ. ವಸಂತಳ ಒತ್ತಾಯದ ಮೇರೆಗೆ ತಾನೂ ಒಂದು ಲೋಟ ಕಾಫಿ ಕುಡಿದಳು. ಮಾಧವಿಯ ಭವಿಷ್ಯದ ಬಗೆಗೇ ಅವಳಿಗೆ ಚಿಂತೆ.

ವಸಂತಳ ನಯನಗಳಲ್ಲಿ ಚಿಮ್ಮುವ ಕಂಬನಿ ನೋಡಿ ಮಾಧವಿಗೂ ದುಃಖ ತಡೆಯಲಾಗಲಿಲ್ಲ.

"ಯಾಕೆ ವಸು ಅಳ್ತಿದ್ದೀ?"

"ನಿನ್ನ ಭವಿಷ್ಯ ಜೀವನದ ಬಗ್ಗೆ ಯೋಚಿಸುತ್ತಿದ್ದೇನೆ."

"ನಾನು ನಿನಗೆ ಅದೆಷ್ಟು ಸಲ ಹೇಳಿಲ್ಲ, ನೀನು ಕಣ್ಣೀರಿಡಬಾರದೂಂತ. ಶಾಲೇಲಿ ಓದುವಾಗ ನಿನ್ನನ್ನು ಯಾರಾದರೂ ಏನಾದರೂ ಅಂದ್ರೆ ಅವರು ನಿನ್ನನ್ನು ಅಪಾಲಜಿ ಕೇಳೋವರೆಗೂ ಬಿಡ್ತಿರಲಿಲ್ಲ, ಡ್ರಿಲ್ ಪಿರಿಯಡಿನಲ್ಲಿ ಮರ್ಯಾದೆ ತೆಗೆದುಬಿಡ್ತಿದ್ದೆ. ನಿನಗೇನಾದರೂ ತೊಂದರೆ ಬಂದಾಗ ನಾನದನ್ನು ಪರಿಹರಿಸಲು ಶ್ರಮಿಸುತ್ತಿದ್ದೆ. ಅಂದರೆ ನಿನ್ನನ್ನು ಯಾರೂ ಹರ್ಟ್ ಮಾಡಬಾರದೆಂಬುದು ನನ್ನ ಉದ್ದೇಶ. ನಾನು ಹೇಳೋದಿಷ್ಟೇ, ನೀನು ಕಣ್ಣೀರು ಹಾಕಲೇಬಾರದು."

ಪ್ರತಿ ಹೇಳಲಿಲ್ಲ ವಸಂತ.

ಮತ್ತೆ ಮಾಧವಿಯೇ "ನನಗೆ ಮೊದಲೇ ಗೊತ್ತಿತ್ತು ವಸೂ ನನ್ನ ಕರ್ಮಕತೆ ಕೇಳಿ ನೀನು ತಡಕೊಳ್ಳೋದಿಲ್ಲಾಂತ. ಈಗ ನೋಡು ಜ್ವರ ಹೇಗೆ ನಿನ್ನ ಮೈ ಸುಡ್ತಿದೆ?"

"ಒಂದು ರೀತಿಯಲ್ಲಿ ನಿನ್ನ ಸ್ಥಿತಿಗಿಂತ ನನ್ನ ಸ್ಥಿತೀನೇ ಮೇಲು ಮಧೂ." ಕೆಳಸ್ವರದಲ್ಲಿ ವಸಂತಳ ಸಮರ್ಥಸಿಕೊಳ್ಳುವಿಕೆ. "ನೋವನ್ನು ತಾಳಲಾರದೆ ನಾನು ಕೊನೇ ಪಕ್ಷ ಅತ್ತಾದರೂ ಸಮಾಧಾನ ಪಟ್ಟುಕೊಳ್ತೇನೆ. ಆದರೆ ನೀನು ಹಾಗಲ್ಲ, ಬೆಂಕಿ ಪರ್ವತವನ್ನು ನಿನ್ನೊಳಗೇ ಇಟ್ಟುಕೊಂಡು ತಳಮಳಿಸುತ್ತಿದ್ದಿ. ಹೊರಗೆ ಮಾತ್ರ ನಿರ್ಮಲವಾಗಿ ನಗ್ತಿದ್ದಿ."

"ಕಷ್ಟ ಕಾರ್ಪಣ್ಯಗಳನ್ನು ಬುದ್ಧಿವಂತರಾದವರು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಬಾರದು ಗೊತ್ತಾ?" ಹಣೆಗೆ ಹಚ್ಚಿದ್ದ ಬಟ್ಟೆ ತೆಗೆದು ಮತ್ತೆ ಒದ್ದೆ ನೀರಿನಲ್ಲಿ ಹಿಂಡಿ ಹಣೆಯ ಮೇಲಿಟ್ಟಳು

ಮಾಧವಿ.

ಮಾಧವಿಯ ಈ ಮಾತು ಅವಳಿಗೆ ಸಿಟ್ಟು ತರಿಸಿ ಅವಳು ಸಿಟ್ಟಿನಿಂದಲೇ ಹೇಳಿದಳು "ಹಾಗಾದ್ರೆ ನೀನ್ಯಾಕೆ ನನಗೆ ಜ್ವರ ಅಂತ ಕೇಳಿ ಅಲ್ಲಿಂದ ಓಡಿ ಬಂದೆ?"

ಈ ಪ್ರಶ್ನೆಗೆ ಮಾಧವಿ ನಸುನಕ್ಕು "ಕಷ್ಟ ಕಾರ್ಪಣ್ಯವನ್ನು ಹಂಚಿಕೊಳ್ಳುವ ಮಾನಸಿಕ ಸ್ಥೈರ್ಯ ಎಲ್ಲರಿಗೂ ಇರುವುದಿಲ್ಲ, ಒಂದು ವೇಳೆ ಆ ತರಹದ ಸದುದ್ದೇಶ ನಿನ್ನಂತಾ ಮೃದು ಹೃದಯಿಗಳಿಗೆ ಇದ್ದರೂ ಅದನ್ನು ಹಂಚುವುದಕ್ಕೆ ನಮ್ಮಂಥವರಿಗೆ ಇಷ್ಟವಿರುವುದಿಲ್ಲ. ಶ್ರೀಧರ್ ಅಣ್ಣನ ಪ್ರೀತಿಯ ಧಾರೆಗೆ ಸುಖ ಸಂತೋಷದಿಂದ ನೀನು ನಗುನಗುತ್ತ ಇರಬೇಕೆ ವಿನಾ ಹೀಗೆ ಅಳಬಾರದು."

ಅಚ್ಚರಿಗೊಳ್ಳುತ್ತಾಳೆ ವಸಂತ.

"ಹಾಗಾದರೆ ನಿನ್ನ ಕಷ್ಟದಲ್ಲಿ ಭಾಗಿಯಾಗುವ ಯೋಗ್ಯತೆ ನನಗಿಲ್ಲ ಅನ್ನು."

"ನಿನ್ನ ಮಾತು ಕೇಳಿ ನನಗೇನು ಹೇಳಬೇಕೋ ಅರ್ಥವಾಗ್ತಿಲ್ಲ ವಸು. ಇಲ್ಲಿ ಯೋಗ್ಯತೆ ಅಥವಾ ಕೀಳರಿಮೆ ಪ್ರಶ್ನೆ ಇಲ್ಲ. ನಾನು ಹೇಳೋದಿಷ್ಟೇ, ನನ್ನ ಕಷ್ಟದಲ್ಲಿ ಭಾಗಿಯಾಗ್ತೇನೆಂತ ಜ್ವರದಿಂದ ನರಳ್ತಿರೋದು ಸಾಕು. ಇನ್ನು ಅದರ ಬಗ್ಗೆ ಚಿಂತೆ ಬಿಡು." ನಕ್ಕುಬಿಟ್ಟಳು ಮಾಧವಿ.

"ಅದು ಸರಿ ನೀನು ಹೇಗೆ ಅಷ್ಟೆಲ್ಲ ಬಾಧೆಯನ್ನು ಅದುಮಿಟ್ಟುಕೊಂಡು ನಗ್ತಿದ್ದಿ?"

"ನಗದೇ ಏನು ಅಳ್ತಾ ಕೂತಿರಬೇಕಾ?" ಮತ್ತೆ ನಕ್ಕಳು ಮಾಧವಿ. ಆದರೆ ವಸಂತಳಿಗೆ ಮಾತ್ರ ಕಣ್ಣಂಚುಗಳಿಂದ ಒಸರುವ ನೀರನ್ನು ತಡೆಹಿಡಿಯಲು ಸಾಧ್ಯವಾಗಲಿಲ್ಲ.

*   *   *   *   *

ಹೈದರಾಬಾದ್‌ನಿಂದ ಮಾರನೆಯ ದಿವಸ ವಾಪಾಸಾದ ಶ್ರೀಧರ್ ವಸಂತಳ ದೈಹಿಕ ಸ್ಥಿತಿ ನೋಡಿ ತುಂಬ ಕಳವಳಗೊಂಡ. ಆದರೆ ಆ ವೇಳೆಗಾಗಲೇ ಗುಳಿಗೆಗಳ ಪ್ರಭಾವದಿಂದ ಜ್ವರದ ತೀವ್ರತೆ ತುಸು ಕಡಿಮೆಯಾಗಿತ್ತು. ಆ ಮೂರು ದಿನಗಳೂ ಸ್ಕೂಲಿಗೆ ರಜೆ ಹಾಕಿ ವಸಂತಳ ಸೇವೆಗೆ ಉಳಿದಳು ಮಾಧವಿ.

ಒಂದು ಕಡೆ ಅವಳ ದುರದೃಷ್ಟಕ್ಕೆ ಒಳಗೊಳಗೇ ನೋಯುತ್ತಿದ್ದರೂ ಮತ್ತೊಂದು ಕಡೆ ತನ್ನನ್ನು ಒಂದು ನಿಮಿಷವೂ ಬಿಡದೆ ಗಮನಿಸಿಕೊಳ್ಳುತ್ತಿರುವ ಮಾಧವಿಯ ಬಗ್ಗೆ ಮೆಚ್ಚುಗೆ ಇದೆ ವಸಂತಳಿಗೆ.

ಶ್ರೀಧರ್ ಹೈದರಾಬಾದ್‌ನಿಂದ ಬಂದ ಸಂಜೆ ಮನೆಯ ಮುಂದಿನ ವಿಶಾಲ ತೋಟದಲ್ಲಿ ಕುಳಿತರು ಶ್ರೀಧರ್, ಮಾಧವಿ, ವಸಂತ. ವಸಂತ ಪೂರ್ಣತೋಳಿನ ಸ್ವೆಟರ್, ತಲೆಗೆ ಮಫ್ಲರ್‌ಧಾರಿಯಾಗಿದ್ದಳು. ದೂರದಲ್ಲಿ ಗುಲಾಬಿ ಗಿಡಕ್ಕಾಗಿ ಗುಳಿ ತೋಡುತ್ತಿದ್ದಾನೆ ತೋಟದ ಮಾಲಿ. ಅವನ ತೋಳು ಹಿಡಿದು ಎಗರಾಡುತ್ತಿದ್ದಾನೆ ಪುಟ್ಟ

ತೋಟದ ಜಾಜಿ ಹೂಗಳ ಪಕಳೆಗಳು ಒಂದೊಂದಾಗಿ ಅರಳುತ್ತಿವೆ. ಮಂದಾರ ಪುಷ್ಪಗಳ ವದನಗಳು ಕೆಂಪಡರಿದರೆ, ಗುಲಾಬಿ ಗಿಡಗಳು ಸುಮನೋಹರವಾಗಿ ನಗುತ್ತಿವೆ.

ಏನನ್ನೋ ಯೋಚಿಸುತ್ತಿದ್ದ ಶ್ರೀಧರ್ ಇದಕ್ಕಿದ್ದಂತೆ ಕೇಳಿದ.

"ಹತ್ತು ವರ್ಷದ ಹುಡುಗಿ, ಹನ್ನೊಂದು ವರ್ಷದ ಹುಡುಗಿ ಗರ್ಭ ಧರಿಸುವುದನ್ನು ನಾವೆಲ್ಲರೂ ಕೇಳಿದ್ದೇವೆ. ಆದರೆ ತಾಯಿಯ ಗರ್ಭದಿಂದಾಚೆಗೆ ಬರುತ್ತಲೇ ತಾನೂ ಗರ್ಭ ಧರಿಸುವ ವಿಸ್ಮಯವನ್ನು ನೀನೆಲ್ಲಾದರೂ ಕೇಳಿದ್ದೀಯ ಮಧು?"

ಇಲ್ಲವೆಂದು ತಲೆಯಾಡಿಸಿದಳು ಮಾಧವಿ.

"ಕೆಲ ನೀರಹಾವುಗಳು ಅಥವಾ ನೀರಡಿಯಲ್ಲಿ ಬದುಕುವ ಜಲಚರ ಪ್ರಾಣಿಗಳು, ಹುಟ್ಟುತ್ತಲೇ ಎರಡು ಜೀವಿಗಳಾಗಿ ಪ್ರತ್ಯೇಕವಾಗಿ ಬಿಡುತ್ತವಂತೆ. ಆ ಎರಡು, ನಾಲ್ಕಾಗಿ, ನಾಲ್ಕು ಎಂಟಾಗಿ ಹಾಗೆ ಮಾನವರು ಅವುಗಳಂತೆ ಜನ್ಮತಾಳಲು ಆರಂಭಿಸಿದರೆ ಕಾಲಿಡಲಿಕ್ಕೂ ಬಹುಶಾ ಜಾಗ ಸಿಗಲಿಕ್ಕಿಲ್ಲವೇನೋ?"

'ಹೌದು' ಎಂಬಂತೆ ತಲೆ ಆಡಿಸಿದಳು ಮಾಧವಿ.

ಇವರಿಬ್ಬರ ಸಂಭಾಷಣೆಯತ್ತ ವಸಂತಳಿಗೆ ಗಮನವಿಲ್ಲ. ಅವಳ ಸಮಸ್ತ ಯೋಚ[illegible]ಳ್ಳಬೇಡ. ರ ಭೌತಿಕ ಮಾಧವಿ ತುಂಬಿಕೊಂಡಿದ್ದಾಳೆ.

'ಸಾಮಾನ್ಯ ನೂಲಿನ ಸೀರೆಯಲ್ಲಿ, ಯಾವ ಅಲಂಕಾರವೂ ಇಲ್ಲದೆ ಸ್ವಚ್ಛವಾಗಿ, ತೋ[illegible] ಮುತ್ತಿನಂತಿರುವ ಮಾಧವಿಯ ಸೌಂದರ್ಯದಲ್ಲಿ ಯಾವುದೋ ಅಪಸ್ವರದ ಛಾಯೆ.'

ಕುರ್ಚಿ ಬೆನ್ನಿಗೆ ಒತ್ತುವುದು ಎಂದೋ ಏನೋ ಮಾಧವಿ ತನ್ನ ನೀಳ ಜಡೆಯನ್ನು ಮುಂದಕ್ಕೆ ಇಳಿಬಿಟ್ಟುಕೊಂಡಿದ್ದಾಳೆ. ಜಡೆಗೆ ಹೂವಾಗಲಿ, ರಿಬ್ಬನ್ ಆಗಲಿ ಇಲ್ಲ. ಕೆದರಿದ ಕೂದಲು ಕೊರಳನ್ನು ಹಾಯ್ದು ಎರಡು ಎತ್ತರದ ಕುಚದ್ವಯಗಳ ಕಣಿವೆಯಲ್ಲಿ ನುಸುಳಿರುವ ಜಡೆ, ಕೆದರು ಮುಂಗುರುಳು.

'ಎಂತಾ ಅದ್ಭುತ ಸೌಂದರ್ಯ ಇವಳದು. ಆದರೆ ಈ ಸಹಜ ಸುಂದರ ಚೆಲುವು ಯಾರಿಗೆ? ಕಾಡನ್ನು ವ್ಯರ್ಥವಾಗಿ ತೊಯ್ಯಿಸುವ ಬೆಳದಿಂಗಳಂತೆ ಇವಳ ಚೆಲುವೂ ವ್ಯರ್ಥವಾಗುತ್ತಿದೆಯಲ್ಲ. ಒಂದು ವೇಳೆ ಕಾಡು ಬೋಳಾಗಿ ನಗರವಾಗಿ ಬೆಳದಿಂಗಳ ಚೆಲುವಿಗೆ ಅರ್ಥ ಬರಬಹುದೇನೋ? ಆದರೆ ಮಾಧವಿಯ ಬದುಕಿನಲ್ಲಿ ದಟ್ಟಣೆಯಾಗಿ ಬೆಳೆದಿರುವ ಅಶಾಂತಿಯನ್ನು ಕಡಿದು ಹಾಕಲು ಸಾಧ್ಯವಿಲ್ಲ. ಆ ಅಶಾಂತಿಯನ್ನು ನಾಶಮಾಡಲು ಒಬ್ಬರಿಗೆ ಮಾತ್ರ ಸಾಧ್ಯವಿತ್ತು. ಆತ ನರೇಂದ್ರ, ಆದರೆ ನರೇಂದ್ರ ಈಗಿಲ್ಲವಲ್ಲ.''

''ಏನು ವಸೂ, ಆಗಲೇ ನಮ್ಮ ಕೂಸಿನ ಬಗ್ಗೆ ಹಗಲುಗನಸು ಕಾಣಲಿಕ್ಕೆ ಶುರು ಮಾಡಿಬಿಟ್ಯಾ? ನಾವಿಷ್ಟೊತ್ತು ನಿನ್ನ ಬಗ್ಗೇನೆ ಮಾತಾಡ್ತಿದ್ದೀವಿ ಅಂತ ನಿನಗೇನಾದರೂ ಗೊತ್ತಾಗ್ತಿದೆಯೇ?'' ಶ್ರೀಧರ್‌ನ ಪ್ರಶ್ನೆಯಲ್ಲಿ ತುಂಟತ್ವ.

ಅವನ ಪ್ರಶ್ನೆಗಳು ಅವಳನ್ನು ವಾಸ್ತವಕ್ಕೆ ಸೆಳೆದವು. ಶ್ರೀಧರ್‌ನ ಮುಖ ದಿಟ್ಟಿಸಿದಳು. ವಸಂತಳ ಕೈ ಸವರಿದ ಅಭಿಮಾನದ ಪತಿ. ಹೈದರಾಬಾದ್‌ನಿಂದ ಬಂದಾಗಲಿಂದ ಶ್ರೀಧರ್‌ನಿಗೆ ಮೋಡಗಳಲ್ಲಿ ತೇಲಾಡುವಂತಿತ್ತು. ವಸಂತಳ ಮೇಲಿದ್ದ ಪ್ರೀತಿ ಇನ್ನಷ್ಟು ಇಮ್ಮಡಿಗೊಂಡಿತ್ತು. ಅವನು ಮನೆಯೊಳಕ್ಕೆ ಕಾಲಿಡುತ್ತಲೇ ಹೆಂಡ್ತಿಯ ಜ್ವರದ ಬಗ್ಗೆ ತಿಳಿಯಿತು. ಕೂಡಲೇ ಶೂ ಕೂಡ ಕಳಚದೆ ಸೀದಾ ಮಹಡಿಗೆ ಬಂದಿದ್ದ.

ಸೊರಗು ಮುಖ, ಮಿಂಚು ಶೂನ್ಯ ಕಣ್ಣು, ಬಿರುಕು ಬಿಟ್ಟ ಬರಪೀಡಿತ ಒಣ ನೆಲದ ತುಟಿ, ಬಾಯಲ್ಲಿನ ಥರ್ಮಾಮೀಟರ್ ನೋಡುತ್ತಲೇ ಅವನಿಗೆ ಜೀವ ಹಾರಿ ಹೋಗುವುದು ಒಂದೇ ಬಾಕಿ.

''ಏನಾಗಿದೆ ಇವಳಿಗೆ, ಏನಾಯ್ತು ಇವಳಿಗೆ?''

ಶ್ರೀಧರ್‌ನ ಆತಂಕದ ಪ್ರಶ್ನೆಗಳಿಗೆ ಮಧು ನಗುತ್ತಲೇ ಥರ್ಮಾಮೀಟರ್ ತೆಗೆದುಕೊಟ್ಟಳು. ದೇಹದ ಉಷ್ಣತೆ ನಾರ್ಮಲ್‌ಗಿಳಿದಿತ್ತು. ಅವನ ಆತಂಕ ಕೂಡ ಮಾಯವಾಯಿತು. ಹಾಗೆಯೇ ಆತನ ಅನಂತರದ ಪರೀಕ್ಷೆಗಳಲ್ಲಿ ಹೊರಬಿತ್ತೊಂದು ಸತ್ಯ.

ವಸಂತ ಗರ್ಭಿಣಿ.

ಶ್ರೀಧರ್ ಈ ಸಿಹಿ ಸುದ್ದಿ ತಿಳಿಸುತ್ತಲೇ ಮಾಧವಿಗೆ ಮಕ್ಕಳಂತೆ ಎಗರಾಡಿ ಕುಣಿದು ಬಿಡಲೇ ಎನಿಸಿತು. ಶ್ರೀಧರ್ ಇಲ್ಲದಿದ್ದರೆ ಆ ಕೆಲಸವನ್ನು ಮಾಡೇ ಬಿಡುತ್ತಿದ್ದಳೇನೋ. ಇನ್ನು ಶ್ರೀಧರ್‌ನಂತೂ ಕುಣಿದಾಡಿಬಿಟ್ಟ. ಯಾವ ಸಂಕೋಚವೂ ಇಲ್ಲದೆ. ಗಂಡ ಹೆಂಡಿರ ಸ್ವರ್ಗವನ್ನು ತನ್ನ ಉಪಸ್ಥಿತಿಯಿಂದ ಹಾಳುಗೆಡವಲು ಇಷ್ಟವಿಲ್ಲದೆ ಕೋಣೆಯಿಂದ ಹೊರಬಂದಳು ಮಾಧವಿ. ಅವಳಿಗೆ ತಾನು ಇಂಥದೇ ವಿಷಯವನ್ನು ನರೇಂದ್ರನಿಗೆ ಹೇಳಿದ್ದ ದಿನ ನೆನಪಾಯಿತು. ನರೇಂದ್ರನ ನೆನಪಿನ ಹಿಂದೆಯೇ ಉಮ್ಮಳಿಸಿತು ದುಃಖ.

ಆದರೆ ವಸಂತಳ ಸ್ಥಿತಿಯೇ ಬೇರೆ, ಅವಳಿಗೆ ತುಸು ಬೇಸರ. ಆಗಬಾರದ್ದೇನೋ ಆಗಿ

ುಂಬ ಅಸಮಾಧಾನ. 'ಇಂತಾ ಸಮಯದಲ್ಲಿ ಈಗ ಅದೊಂದು ಬೇರೆ.'

ಮಾಧ ತಾನು ಹುಟ್ಟಿದ ದಿನದಂದೇ ವಸಂತಳಿಗೆ ಜ್ವರ ಕಾಣಿಸಿಕೊಂಡಿದ್ದರಿಂದ ಜ್ವರದ ಜೊತೆಗೆ ಯಾಗುತ್ತಿರುವ ಸೂಚನೆ ಕೂಡ ಸ್ಪಷ್ಟವಾಗಿರುವುದರಿಂದ ವಸಂತಳಿಗೆ ಜನ್ಮದಿನದ ತಾಯಿ ನೀನ್ಸ್ ಕರೆಯಬಹುದು'' ಎಂದು ಮಾಧವಿಗೆ ಹೇಳಿ, ವಸಂತಳಿಗೆ ರೇಗಿಸುವಾಗ ಅವಳು ಮಾಧವಿಯ ಬಗೆಗೇ ಯೋಚಿಸುತ್ತಿದ್ದಳು. ಇವರ ಸಂಭಾಷಣೆಯಲ್ಲಿ ಗಮನ ಹರಿಸಿರಲಿಲ್ಲ.

ಅಷ್ಟರಲ್ಲಿ ಮರದ ಗೇಟು ಕೀರಲು ಶಬ್ದ ಮಾಡಿತು. ಅತ್ತ ತಿರುಗಿದರು ಮೂವರೂ.

ಇಪ್ಪತ್ತೇಳು ಇಪ್ಪತ್ತೆಂಟರ ಎತ್ತರದ ಯುವಕ, ಕೈಯಲ್ಲೊಂದು ಬ್ರೀಫ್ ಕೇಸು. ಕೆದರಿದ ಗುಂಗುರು ತಲೆ, ಬಿಳಿಯ ಮೈಬಣ್ಣ. ಬಸ್ಸಿನಿಂದ ಪ್ರಯಾಣ ಮಾಡಿ ಬಂದಂತೆ ಸುಕ್ಕುಗಟ್ಟಿರುವ ಬಟ್ಟೆ ಶ್ರೀಧರ್ ಎದ್ದು ನಿಲ್ಲುವಷ್ಟರಲ್ಲಿ ಆ ಯುವಕ ಇವರಿರುವಲ್ಲಿಗೆ ಬಂದಾಗಿತ್ತು.

"ಅರೆರೆ ಕುಮಾರ್.'' ಸಂತಸದಿಂದ ಚೀರಿತು ಶ್ರೀಧರ್‌ನ ಧ್ವನಿ. ಮಾಧವಿ ಒಮ್ಮೆ ಯುವಕನನ್ನು ಗಮನಿಸಿ ಆಮೇಲೆ ನೋಟ ಬದಲಿಸುತ್ತಾಳೆ. ತೋಟದ ಮಾಲಿ ತಂದು ಹಾಕಿದ ಮತ್ತೊಂದು ಬಿದಿರು ಕುರ್ಚಿಯಲ್ಲಿ ಯುವಕ ಕೂರುವಾಗ ಮಾಧವಿ ಎದ್ದು ಹೋಗಲೆತ್ನಿಸುತ್ತಾಳೆ. ಆದರೆ ಶ್ರೀಧರ್ ತಡೆದ "ಕುಮಾರ್ ನಮ್ಮವನೇ ಮಾಧವಿ, ಪರವಾಗಿಲ್ಲ ಕೂತ್ಕೋ.''

ಮತ್ತೆ ಕೂರುತ್ತಾಳೆ ಮಾಧವಿ, ಪರಿಚಯ ಮಾಡಿಸಿದ ಶ್ರೀಧರ್.

"ಕುಮಾರ್ ಈಕೆ ಮಾಧವಿ ಅಂತ, ವಸಂತಳ ಗೆಳತಿ, ನನ್ನ ತಂಗಿ.'' ಮಾಧವಿಯತ್ತ ನೋಟ ಹರಿಸಿದ ಕುಮಾರ್ ಕೆಲಕ್ಷಣ ತನ್ನ ದೃಷ್ಟಿಯನ್ನು ಹಾಗೆಯೇ ಇರಲು ಬಿಡುತ್ತಾನೆ. ಎಂಥದೋ ಭಾವ ಆ ಕಣ್ಣುಗಳಲ್ಲಿ.

"ಕುಮಾರ್ ಬೇರೆ ಯಾರೋ ಅಲ್ಲ ಮಧೂ, ನನ್ನ ಸೋದರತ್ತೆ ಮಗ.'' ಪರಿಚಯಿಸಿ ಆಮೇಲೆ ವಿದ್ಯಾರ್ಹತೆಯ ಬಗ್ಗೆ ಹೇಳಿದ ಶ್ರೀಧರ್ "ಎಂ.ಎಸ್‌ಸಿ. ಮಾಡಿದ್ದಾನೆ.''

"ಇನ್ನೊಂದು ವಿಷಯ ಮರೆತುಬಿಟ್ರಾ?'' ನೆನಪಿಸಿ ನಕ್ಕಳು ವಸಂತ.

"ಹೌದು.'' ನಕ್ಕು "ಒಳ್ಳೆ ಲೇಖಕ ಕೂಡ.''

ಮಾಧವಿ, ಕುಮಾರ್ ಔಪಚಾರಿಕವಾಗಿ ನಮಸ್ಕರಿಸಿಕೊಂಡ ಮೇಲೆ ಲಕ್ಷ್ಮಿಯನ್ನು ಕರೆದು ಟೀ ತರಲು ಹೇಳಿದಳು ವಸಂತ.

"ತುಂಬ ದೊಡ್ಡವನಾಗಿಬಿಟ್ಯೇನೋ ಕುಮ್ಮಿ?''

ಶ್ರೀಧರ್ ನಸುಗೋಪದಲ್ಲಿ ಕೇಳುತ್ತಲೇ "ಯಾಕೆ?'' ಎಂದು ಪ್ರಶ್ನಿಸಿದ ಕುಮಾರ್ ಧ್ವನಿಯಲ್ಲಿ ಭಾವುಕತ್ವವಿತ್ತು.

"ಈ ಮನೆಗೆ ಬರೋದಕ್ಕೆ ಇಷ್ಟು ದಿನ ಹಿಡೀತಾ ನಿನಗ?''

"ಎಷ್ಟು ದಿನ ಆಗಿದೆ ಎರಡು ವರ್ಷ ತಾನೆ, ಮಾವ ಕಾಶಿಗೆ ಹೋಗುವಾಗ ಬಂದಿದ್ದೆ. ಆದರೂ ನೀನು ನಿನ್ನ ಸೋದರತ್ತೇನ ಮರೆತು ಹೋಗಿರೋ ಅಪರಾಧಕ್ಕಿಂತ ದೊಡ್ಡ ಅಪರಾಧವೇನಲ್ಲ ಇದು.'' ನಿಷ್ಠುರವಾಗಿ ಬಂತು ಕುಮಾರ್‌ನ ಮಾತು.

"ನನ್ನನ್ನೇ ದೂರ್ತಿಯಲ್ಲ ಮಾರಾಯ, ನನಗಿಲ್ಲಿ ಉಸಿರಾಡೋಕ್ಕೂ ಬಿಡುವಿಲ್ಲದಷ್ಟು ಕೆಲಸಗಳಿವೆ.''

"ಅಯ್ಯೋ ಪಾಪ, ಬಿಡುವಿಲ್ಲದಿರೋದಕ್ಕೇ ಹಾಯಾಗಿ ಗಾರ್ಡನ್‌ನಲ್ಲಿ ಕೂತುಕೊಂಡು ಗಾಳಿ ಸೇವನೆ ಮಾಡ್ತಿರೋದು.'' ಕುಮಾರ್ ಛೇಡಿಸಿದಾಗ ಶ್ರೀಧರ್ ಮತ್ತೊಂದು ಬಾಣ ಬಿಟ್ಟ

"ಗಾಳಿ ಸೇವನೆ ನಾನು ಮಾಡ್ತಿಲ್ಲ ಕಣಪ್ಪ ಕುಮಾರ ಕಂಠೀರವ. ನಿನ್ ತಂಗಿ ವಸೂಗೆ ಗಾಳಿ ಸೇವನೆ ಮಾಡಿಸುತ್ತಿದ್ದೇನೆ. ಯಾಕಂದ್ರೆ ಈಗವಳನ್ನು ಮಧುರ ರೋಗವೊಂದು ಪೀಡಿಸುತ್ತಿದೆ.''

"ರೋಗದಲ್ಲೂ ಮಾಧುರ್ಯವಿರುತ್ತ!'' ಉದ್ಗರಿಸಿ "ಅದರ ಹೆಸರೇನು?'' ಶ್ರೀಧರ್ ಮಧುರ

ರೋಗದ ನಾಮದ ಬಗ್ಗೆ ಹೇಳಲಿಲ್ಲ.

"ನಾನು ಹೇಳಿದ ಮಧುರ ರೋಗವನ್ನು ನಿನ್ನ ಸಾಹಿತ್ಯ ಭಾಷೆಗೆ ಅನುವಾದ ಮಾಡಿಕೊಳ್ಳಬೇಡ. ಈ ಮಧುರ ರೋಗ, ಮಧುರ ನೋವು, ಮಧುರ ಭಾವನೆ ಮುಂತಾದವುಗಳು ಪ್ರೇಮದ ಭೌತಿಕ ಲಕ್ಷಣಗಳು ಅಂತ ಕತೆಗಳಲ್ಲಿ ಬರೆದುಬಿಟ್ಟಿದೆ?"

ಕುಮಾರ್‌ನಿಗೆ ನಗು ಉಕ್ಕಿತು. "ಲೋ ಭಾವಾ ನೀನ್ಯಾವಾಗ ಈ ಸಾಹಿತ್ಯಕ್ಕೆ ಅಂಟಿಕೊಂಡೆ."

"ನೀನು ಪುಟಗಟ್ಟಲೆ ಸಾಹಿತ್ಯ ಬರೆಯುವಾಗ ನಾವು ಸಾಹಿತ್ಯದ ಎರಡು ಮೂರು ಪದಗಳನ್ನು ಹೇಳದಿದ್ದರೆ ನಮಗೆ ಘೋರ ಅವಮಾನವಾಗುತ್ತೆ ತಾನೆ." ನಗುತ್ತಾಳೆ ವಸಂತ.

"ಒಂದು ರೀತಿಯಲ್ಲಿ ಹೌದೂಂತ ಹೇಳ್ಲೇಬೇಕು. ಆದರೂ ವೈದ್ಯಶ್ರೇಷ್ಠನ ಗಾಳಿ, ಸಾಹಿತ್ಯದ ಗಾಳಿ ಸಮಾನಾಂತರ ರೇಖೆಗಳು ಅಲ್ವೆ. ಅವು ಎಂದೂ ಒಂದುಗೂಡುವುದಿಲ್ಲವಲ್ಲ."

"ಹಾಗಲ್ಲ ಡಾಕ್ಟರುಗಳ ಬಗ್ಗೆ ಹಗುರವಾಗಿ ಮಾತಾಡ್ಬೇಡ ಕುಮ್ಮಿ." ಗಂಡನ ಪರವಹಿಸಿದಳು ವಸಂತ "ನೀವು ಲೇಖಕ ಮಂದಿ ದಿನಕ್ಕಿಷ್ಟು ಪೇಜು ಅಂತ ಗೀಚಿ ಗೀಚಿ ಹಾಕಿ ನಮ್ಮೇಲೆ ಬಿಸಾಕ್ತೀರಿ. ಜನ ಓದಲಿಲ್ಲಾಂದ್ರೆ ಜನರು ಸಾಹಿತ್ಯ ಪ್ರೇಮಿಗಳಲ್ಲ ಅಂತ ಆ ವಿಷಯದ ಬಗ್ಗೆ ಇನ್ನಷ್ಟು ಕೊರೀತಿರಿ. ಅದನ್ನೂ ನಾವು ಓದಬೇಕು."

"ನಿನ್ನ ವಾದವನ್ನು ನಮ್ಮ ಸೋದರ ಲೇಖಕರು ಕೇಳಿದಲ್ಲಿ ನಿನ್ನ ವಿರುದ್ಧ ಪ್ರತಿಭಟನೆ ಮಾಡಿಬಿಡ್ತಾರೆ."

"ಸಾಕು ಸುಮ್ನಿರೋ ಕಂಡಿದ್ದೀನಿ. ಪ್ರತಿಭಟನೆ ಈಗ ತುಂಬ ಅಗ್ಗದ ವಸ್ತುವಾಗಿಬಿಟ್ಟಿದೆ." ಶ್ರೀಧರ್ ರೇಗಿಸಿದ. ಮಾಧವಿಗೆ ಆ ಮೂವರ ವಾದ ತುಂಬ ತಮಾಷೆಯಾಗಿ ಕಂಡಿತು. ಆಸಕ್ತಿಯಿಂದ ಕೇಳುತ್ತ ಇದ್ದುಬಿಟ್ಟಳು.

ಅಷ್ಟರಲ್ಲಿ ಅವಳ ಪುಟ್ಟ ಪುಟುಪುಟು ಓಡುತ್ತ ಇವರಿರುವ ಜಾಗಕ್ಕೆ ಬಂದ. ಅವನನ್ನು ಎತ್ತಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡಳು ವಸಂತ.

"ವಾಟ್ ಎ ವಂಡರ್, ಇವನ್ಯಾರು?" ಅಚ್ಚರಿಗೊಳ್ಳುತ್ತಾನೆ ಕುಮಾರ್.

"ಇವನು ನಮ್ಮ ಮಾಧೂಳ ಮಗ." ಪುಟ್ಟನ ಹಾಲುಗೆನ್ನೆಗೆ ಮುತ್ತು ಕೊಟ್ಟಳು.

ಇನ್ನಷ್ಟು ಚಕಿತತೆಯಿಂದ ಮಾಧವಿಯ ಮುಖ ನೋಡುತ್ತಾನೆ ಕುಮಾರ್.

"ಹ್ಞಾ ಅಂದ ಹಾಗೆ ರಾಮಾಯಣದಲ್ಲಿ, ಮಹಾಭಾರತದ ಉಪಕತೆ ಅಂದ ಹಾಗೆ ನಾವು ಇನ್ಯಾವುದೋ ವಿಷಯದ ಬಗ್ಗೆ ಮಾತಾಡ್ತಿದ್ದೀವಲ್ವೆ. ಆಗ್ಲೇ ಹೇಳಿದ್ನಲ್ಲ, ನಿನ್ ತಂಗಿಗೆ ಯಾವುದೋ ಮಧುರ ರೋಗ ತಗುಲಿಕೊಂಡಿದೆ ಅಂತ ಅದೇನೋ ಗೊತ್ತಾ" ಕ್ಷಣ ಸುಮ್ಮನಿದ್ದು ಅನಂತರ "ಇವಳು ಸದ್ಯದಲ್ಲೇ ಈ ಪುಟ್ಟನಂತಾ ಪಾಪನ್ನ ಎತ್ತಿ ಆಡಿಸಲಿದ್ದಾಳೆ."

ಕುಮಾರ್‌ನಿಗೆ ಸಂಭ್ರಮಾಶ್ಚರ್ಯ ತಡೆ ಹಿಡಿಯಲಾಗಲಿಲ್ಲ. ಎದ್ದು ಹೋಗಿ ವಸಂತ, ಶ್ರೀಧರನ ಕೈ ಕುಲುಕಿ 'ಕಂಗ್ರಾಟ್ಸ್' ತಿಳಿಸಿದ.

ಐದು

ವಸಂತಳ ಆರೋಗ್ಯ ಸುಧಾರಿಸಿತು.

ಮತ್ತೆ ಕೆಲಸಕ್ಕೆ ಹೋಗಲಾರಂಬಿಸಿದಳು ಮಾಧವಿ. ವಸಂತಳ ಕಳೆಗುಂದಿದ ಮುಖವನ್ನು ಗಮನಿಸುತ್ತಾಳೆ 'ಯಾಕಿವಳು ಹೀಗೆ?'

"ನೀನು ತಾಯಿಯಾಗ್ತಿದ್ದೀ ಎನ್ನುವ ಸಂತಸದಲ್ಲಿರೋ ಶ್ರೀಧರ್ ನಿನ್ನ ಆನಂದರಹಿತ ಮುಖ ನೋಡಿ ಏನೋ ಇದೆ ಅಂತ ಕೊರಗ್ತಾನೆ. ಏನೋ ಮುಚ್ಚಿಟ್ಟುಕೊಂಡಿದ್ದೀ ಅಂತ ನಿನ್ನನ್ನು ಒತ್ತಾಯ ಮಾಡಿದರೂ ಮಾಡಿದ. ಆಗ ನೀನು ನನ್ನ ಕಥೇನ ಹೇಳಲೇಬೇಕಾಗುತ್ತೆ. ಅದನ್ನು ಕೇಳಿ ಇನ್ನಷ್ಟು ಸಂಕಟ ಪಡ್ತಾನೆ ಶ್ರೀಧರ್, ಇಷ್ಟೆಲ್ಲ ರಾದ್ಧಾಂತ ಆಗೋದು ನನಗಿಷ್ಟವಿಲ್ಲ ವಸು. ನೀನು ಎಂದಿನಂತಿರು.''

ಏನೆಂದುಕೊಂಡಳೋ ಏನೋ ವಸಂತ ಮತ್ತೆ ಹಿಂದಿನಂತಾದಳು.

ಅದೊಂದು ದಿನ ಹೊಟ್ಟೆಯಲ್ಲಿ ತಿರುಚುತ್ತೆ ಅಂತ ಮಾಧವಿ ವೈದ್ಯ ಶ್ರೀಧರ್‌ನಿಗೆ ಹೇಳಿದಾಗ, ಶ್ರೀಧರ್ ಪರೀಕ್ಷಿಸಿ ದಿನಾ ಸಂಜೆ ವಾಕಿಂಗ್ ಮಾಡಿ ಬಾ ಅಂತ ಸಲಹೆ ಕೊಟ್ಟ. ಸಲಹೆ ಬಂದ ದಿನ ಸಂಜೆಯಿಂದಲೇ ಮಾಧವಿ ವಾಕಿಂಗ್ ಶುರು ಮಾಡಿಬಿಟ್ಟಳು. ಅವಳಿಗೆ ಕಂಪೆನಿ ವಸಂತ. ಮಾತಾಡುತ್ತ ಒಂದೆರಡು ಫರ್ಲಾಂಗ್ ನಡೆದು ವಾಕ್‌ಮಾಡಿ ಬರ್‍ತಾರೆ ಇಬ್ಬರೂ.

ಅವತ್ತು ಮಾತಿನ ಮಧ್ಯೆ ಕುಮಾರ್‌ನ ಪ್ರಸ್ತಾಪ ಮಾಡುತ್ತಾಳೆ ವಸಂತ. ತಾಯಿತಂದೆಗೆ ಏಕೈಕ ಪುತ್ರ ಕುಮಾರ್. ಬೇಸಾಯ, ಮಾವಿನ ತೋಪಿನ ಉಸ್ತುವಾರಿ, ರೈಸ್ ಮಿಲ್ಲು ಮುಂತಾದ ಸ್ಥಿರ ಚರಾಸ್ತಿಗಳ ಮಾಲೀಕ. ಕೆಲಸದ ಅಗತ್ಯವಾಗಲೀ, ಮಾಡಲೇಬೇಕೆನ್ನುವ ತೆವಲಾಗಲಿ ಇಲ್ಲದವನು. ಜೊತೆಗೆ ಲೇಖಕ ಬೇರೆ. ಆದುದರಿಂದ ವೈಚಾರಿಕತೆ, ಆದರ್ಶ ತನ್ನಲ್ಲಿ ಬೆಳೆಸಿಕೊಂಡ ವ್ಯಕ್ತಿ. ಪ್ರತಿಯೊಂದು ವಿಷಯವನ್ನೂ ಲೇಖಕನಂತೆ ಸಮೀಕ್ಷಿಸುತ್ತಾನೆ. ಸದ್ಯಕ್ಕೆ ವೈದ್ಯನೊಬ್ಬನ ಬದುಕಿನ ಬಗ್ಗೆ ತಿಳಿದುಕೊಳ್ಳಲು ಇಲ್ಲಿಗೆ ಬಂದಿದ್ದಾನಂತೆ. ಶ್ರೀಧರ್ ಕೂಡ ತುಂಬು ಹೃದಯದಿಂದ ಒಂದೊಂದು ಸೂಕ್ಷ್ಮ ವಿವರವನ್ನೂ ತಿಳಿಸುತ್ತಾನಂತೆ. ಕುಮಾರ್‌ನ ಬಗ್ಗೆ ತಿಳಿಸುವಾಗ ಇನ್ನೊಂದು ವಿಷಯ ಕೂಡ ತಿಳಿಸಲು ಮರೆಯಲಿಲ್ಲ ವಸಂತ.

ಆದಷ್ಟೂ ಬೇಗ ಕುಮಾರ್‌ನಿಗೆ ಮದುವೆ ಶಾಸ್ತ್ರ ಮುಗಿಸಿ ಮನೆಗೆ ಅಚ್ಚುಕಟ್ಟಾದ ಸೊಸೆಯನ್ನು ತರಬೇಕೆಂದು ಅವನ ತಂದೆ ತಾಯಿಯರ ಅಪೇಕ್ಷೆ. ಆದರೆ ಕುಮಾರ್‌ನಿಗೆ ಮದುವೆ ಎಂದರೆ ಅಲರ್ಜಿ, ಹೆದರಿಕೆ. ಈ ಹೆದರಿಕೆಗೆ ಮುಖ್ಯ ಕಾರಣ ಏನಪ್ಪಾ ಅಂದರೆ ಕುಮಾರ್ ತನ್ನ ಕಾಲ್ಪನಿಕ ಲೋಕದಲ್ಲಿ ಊಹಾಸುಂದರಿಯೊಬ್ಬಳ ಶಿಲ್ಪವನ್ನು ಕೆತ್ತಿದ್ದಾನಂತೆ. ಆ ಶಿಲ್ಪವನ್ನು ಹೋಲುವಂತಾ ಹುಡುಗಿ ಸಿಗದ ಹೊರತು ಅವನು ಮದುವೆಯಾಗುವುದಿಲ್ಲವಂತೆ. ಅವನು ಬುದ್ಧಿಜೀವಿಯೇ ಆಗಿರಬಹುದು, ಅವನ ಊಹಾ ಕನ್ಯೆ ದೇವತಾ ಸುಂದರಿಯೇ ಆಗಿರಬಹುದು. ಹಾಗೇಂತ ಅವನು ತನಗೆ 'ತನ್ನ ಕನಸಿನ ರಾಣಿ ಸಿಗುವವರೆಗೂ ಮದುವೆಯೇ ಬೇಡ' ಅಂತ ಹೇಳೋದು ನಾಯ್ಯವಾ. ಕಾಲ್ಪನಿಕ ಸುಂದರಿಯನ್ನು ಬಿಟ್ಟು ಮಿಕ್ಕೆಲ್ಲ ಹುಡುಗಿಯರನ್ನು ಕಂಡು ಹೆದರೋದು ತಮಾಷೆಯಾಗಿದೆ ತಾನೆ.''

"ನಿನ್ನ ಮಾತು ಸರೀಂತ ಅನ್ಸುತ್ತೆ ವಸೂ, ಲೇಖಕರ ಚಿಂತನಾಕ್ರಮಕ್ಕೂ ಇತರರ ಚಿಂತಾನಾ ಕ್ರಮಕ್ಕೂ ತುಂಬ ವ್ಯತ್ಯಾಸವಿರುತ್ತೆ. ಅದರಲ್ಲೂ ಮುಖ್ಯವಾಗಿ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಅವರು ಸಾಮಾನ್ಯರಿಗಿಂತ ಭಿನ್ನವಾಗಿ ಯೋಚಿಸುತ್ತಾರೆ. ಸಾಮಾನ್ಯರಿಗೆ ಅವರ ಮಾನಸಿಕ ಸ್ಥಿತಿ ಸುಲಭವಾಗಿ ವೇದ್ಯವಾಗುವುದು ಕಷ್ಟ. ಲೇಖಕರ ಅಥವಾ ಸಾಹಿತಿಗಳ ಬಗ್ಗೆ ಜನರಿಗೆ ಅಭಿಮಾನ ಇರುತ್ತೆ. ಆದರೆ ಜನರ ಅಭಿಮಾನ, ಪ್ರೀತಿ ಗಳಿಸುವ ಸಾಹಿತಿಗಳು ಕೂಡ ಒಮ್ಮೊಮ್ಮೆ ಸಹಾನುಭೂತಿಗೊಳಗಾಗಬೇಕಾದ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ತಾರೆ. ನಿಮ್ಮ ಕುಮಾರ್‌ರವರ ಇಬ್ಬಂದಿತನ ಕೂಡ ನನಗರ್ಥವಾಗಿದೆ. ಆತನ ಕಾಲ್ಪನಿಕ ಸುಂದರಿ ಆತನನ್ನೇ ಚಕಿತಗೊಳಿಸುವಷ್ಟು ಅದ್ಭುತವಾಗಿ ಆತನ ಮನೋನೇತ್ರದ ಮುಂದೆ ರೂಪು ತಾಳಿರೋದ್ರಿಂದ, ತನ್ನ ಹೆಂಡ್ತಿಯಾಗಿ ಬರುವವಳಲ್ಲಿ ಆ ಅಂಶ ಸ್ವಲ್ಪ ಇಲ್ಲದಿದ್ದರೂ ಆತ ಆದನ್ನು ಭರಿಸಲಾರ. ಅತೃಪ್ತಿಯಿಂದ ಕೊರಗುತ್ತಾನೆ.''

ಮಾಧವಿಯ ಅನಾಲಿಸಿಸ್‌ಗೆ ಬೆರಗಾಗುತ್ತಾಳೆ ವಸಂತ.

"ಯೂ ಆರ್ ಕರೆಕ್ಟ್ ಮಧೂ, ನಿನ್ನಂತೆ ಕುಮಾರ್ ಕೂಡ ಹೇಳಿದ್ದಾನೆ. ತನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವವರೇ ಕಮ್ಮಿ ಅಂತ ಅವನ ಅಭಿಪ್ರಾಯ. ನಾನಾದರೂ ಅವನ ಉದ್ದೇಶವನ್ನು ಅಲ್ಪ ಸ್ವಲ್ಪ ಅರ್ಥಮಾಡಿಕೊಂಡಿದ್ದೇನೆ, ಆದರೆ ಅವನ ತಂದೆ ತಾಯಿಗೆ ಅದು ಅರ್ಥವಾಗಬೇಕಲ್ಲ."

"ಏನೇ ಆಗಲಿ, ಕುಮಾರ್‌ನಿಗೆ ಅವನ ಊಹಾಸುಂದರಿಯಂಥವಳು ಸಿಕ್ಕರೇನೇ ಅವನ ಬದುಕು ಸುಖಮಯವಾಗಿರುತ್ತೆ." ಕುಮಾರ್‌ನ ಬಗ್ಗೆ ಸಹಾನುಭೂತಿಯ ಮಾತಾಡುವಾಗ ಮಾಧವಿಯ ಕಣ್ಣಿನ ಮುಂದೆ ಕುಮಾರ್‌ನ ಸುಂದರ ಚಿತ್ರ ಮೂಡಿತು. ಗಮ್ಯ ಗೊತ್ತಿಲ್ಲದ ಪಥಿಕನಂತೆ ಆತ ತನ್ನ ಕಾಲ್ಪನಿಕ ಚೆಲುವೆಗಾಗಿ ನಿರೀಕ್ಷಿಸುತ್ತಿರುವುದು ಅವಳಿಗೆ ಹಿಡಿಸುತ್ತದೆ.


* *

* * *

ಮನೆಯಲ್ಲಿ ಪುಟ್ಟ ಕಾಣಲಿಲ್ಲ. "ಅಮ್ಮಾವ್ರು ಎತ್ಕೊಂಡು ಹೋಗವ್ರೆ." ಕೆಲಸದ ಹುಡುಗಿ ಲಕ್ಷ್ಮಿಯಿಂದ ವಿಷಯ ತಿಳಿದಾಗ ಸರಿ ರಾತ್ರಿ ಬಂದು ಮಗನನ್ನು ಕರೆದೊಯ್ದರಾಯ್ತು ಎಂದು ಮಾಧವಿ ತೋಟ ದಾಟ ಗೇಟನತ್ತ ಹೆಜ್ಜೆ ಹಾಕುವಾಗ ಯಾರದೋ ಧ್ವನಿ ತಡೆಯುತ್ತದೆ.

'ರಾಗಸಂಗಮ'

ಲಾಟರಿ ಡ್ರಾ - ೧೧೪ರ ವಿಜೇತರು



ಆದಿಲಕ್ಷ್ಮಿ ದಮ್ಮು

ಅಳ್ನಾವರ - 581 103,

ಧಾರವಾಡ ಜಿಲ್ಲೆ.

"ಯಾಕೆ ಹೊರಟು ಹೋಗ್ತಿದ್ದೀರಾ?"

ಅದು ಕುಮಾರ್‌ನ ಧ್ವನಿ. ಬಿದಿರು ಕುರ್ಚಿಯಲ್ಲಿ ಕುಳಿತು ಪ್ಯಾಡ್ ಒಂದರಲ್ಲಿ ಏನನ್ನೋ ಬರೆಯುತ್ತಿದ್ದ ಕುಮಾರ್ ಮಾಧವಿಯನ್ನು ಗಮನಿಸಿದ. ಪಡುವಣದಲ್ಲಿ ಸಂಜೆಯಾಗತೊಡಗಿದಂತೆ ಹಕ್ಕಿಗಳ ಚಿಲಿಪಿಲಿ ಕೂಡ ಹೆಚ್ಚಾಗತೊಡಗಿತು. ಮಂದಮಾರುತದ ಓಲಾಟ. ಲೇಖಕರಿಗೆ ಹೇಳಿ ಮಾಡಿಸಿಟ್ಟಂತಾ ಪ್ರಕೃತಿಯ ಅಮಲು. ಅವನ ಪ್ರಶ್ನೆಗೆ ಅವಳು ಕೂಡಲೇ ಉತ್ತರಿಸಲಿಲ್ಲ ಕುಮಾರನೇ ಮತ್ತೆ

"ಈಗ್ಲೇ ಹೋಗಬೇಕಾ?" ಈ ಪ್ರಶ್ನೆಗೆ ಅವಳು ಉತ್ತರಿಸಲಿಲ್ಲ.

"ವಸು ಇಲ್ವಲ್ಲ." ಮೆಲು ದನಿಯಲ್ಲಿ ಹೇಳುತ್ತಾಳೆ ಮಾಧವಿ. ಇದೇ ಪ್ರಥಮ ಬಾರಿಗೆ ಇಬ್ಬರೂ ನೇರವಾದ ಸಂಭಾಷಣೆಗೆ ತೊಡಗಿಸಿಕೊಂಡಿರುವುದು.

"ನೀವು ಬರ್‍ತಿರಾಂತ ಕಾದು ಕಾದು, ಒಂದು ಹತ್ತು ನಿಮಿಷದ ಹಿಂದೆ ವಾಕಿಂಗ್ ಹೋದ್ರು." ಪ್ಯಾಡನ್ನು ಕೆಳಗಿಟ್ಟ ಕುಮಾರ್. "ಕೂತ್ಕೊಳ್ಳಿ." ತನ್ನ ಮುಂದಿರುವ ಬಿದಿರು ಕುರ್ಚಿಯನ್ನು ತೋರಿಸಿದ.

"ಕಾಫಿ ತರಿಸಲಾ?" ಕುಮಾರ್‌ನ 'ಆಫರ್‌ಗೆ' ಅವಳಿಗೆ ಒಳಗೊಳಗೆ ನಗು ಬಂತು. ಈ ಮನೆಗೆ ತಾನು ಬಂದು ಹೋಗಿ ಇನಿಲ್ಲವೆಂದರೂ ಎರಡು ವರ್ಷವಾಗಿದೆ. ಈತ ನಿನ್ನೆ ಮೊನ್ನೆ ಬಂದವನು. ಆದರೂ ತನಗೆ ಉಪಚಾರ ಮಾಡುವ ಹುಮ್ಮಸ್ಸು, ಎಷ್ಟಾದರೂ ಈತ ವಸಂತಳ ನೆಂಟ, ತಾನು ಸ್ನೇಹಿತೆ ಮಾತ್ರ.

ರಕ್ತ ಸಂಬಂಧಕ್ಕಿಂತ ಸ್ನೇಹ ಸಂಬಂಧ ಯಾವ ದೃಷ್ಟಿಯಲ್ಲಿ ಉತ್ತಮ. ಒಂದು ವೇಳೆ ಇದನ್ನು ವಸಂತಳಿಗೆ ಹೇಳಿದರೂ ಒಪ್ಪಿಕೊಳ್ಳುವುದಿಲ್ಲ. ಗೆಳೆತನದಿಂದ ಉದ್ಭವಿಸುವ ಸಲಿಗೆ, ಆತ್ಮೀಯತೆ, ಸೌಹಾರ್ದ ಮಾತ್ಯಾವುದರಿಂದಲೂ ಸಿಗುವುದಿಲ್ಲ ಎನ್ನುತ್ತಾಳೆ. ತಂದೆ ತಾಯಿ, ತಾಯಿ ಮಕ್ಕಳು ಅಥವಾ ತಂದೆ ಮಕ್ಕಳು ಅಥವಾ ಸಹೋದರ, ಸಹೋದರಿಯರು ಯಾರೇ ಆದರೂ ಸರಿ ಸ್ವಲ್ಪವಾದರೂ ಸ್ವಾರ್ಥವಿಲ್ಲದೆ ಪ್ರೀತಿ ಪ್ರೇಮಗಳು ಅಭಿವ್ಯಕ್ತಗೊಳಿಸುವುದಿಲ್ಲ. ಆದರೆ ಸ್ವಾರ್ಥ ಗೆಳೆತನದಲ್ಲಿ ಕಾಣದು ಎನ್ನುವುದು ವಸಂತಳ ತರ್ಕ. ಸ್ನೇಹ ಎಲ್ಲವನ್ನೂ ಮೀರಿ ನಿಂತ ಬಂಧ ಎಂದು ಹೇಳಬಹುದಾದರೂ ಅದು ಗಂಡ ಹೆಂಡತಿ ಮತ್ತು ತಂದೆ ತಾಯಿ, ಮಕ್ಕಳ ಸಂಬಂಧವನ್ನು ಮೀರಿದ್ದು ಎಂಬ ವಾದವನ್ನು ಮಾಧವಿ ಸುತಾರಾಂ ಒಪ್ಪಿಕೊಳ್ಳುವುದಿಲ್ಲ. ಒಂದರ ಮಹತ್ವವನ್ನು ಮತ್ತೊಂದು 'ರೀಪ್ಲೇಸ್' ಮಾಡಲು ಸಾಧ್ಯವೇ ಇಲ್ಲ.

"ಲಕ್ಷ್ಮಿ" ಕೂಗು ಹಾಕಿದ ಕುಮಾರ್. ಲಕ್ಷ್ಮಿ ಬಂದೊಡನೆ ಎರಡು ಕಪ್ ಕಾಫಿ ತರಲು ಹೇಳಿದಾಗ ಮಾಧವಿ 'ಬೇಡ ಬಿಡಿ' ಎಂದು ಇಬ್ಬಂದಿಯ ಉತ್ತರ ಹೇಳುತ್ತಾಳೆ.

"ಕಾಫಿ ಕುಡಿಯೋಕ್ಕೂ ನಾಚಿಕೊಂಡ್ರೆ ಹೇಗೆ ಮಾಧವಿಯವರೇ, ನಾನು ನಿಮಗೆ ಕಾಫಿ ಕೊಡದೇ ಹಾಗೆಯೇ ಕಳಿಸಿಬಿಟ್ಟೆ ಅನ್ನೋದು ವಸೂಗೆ ಗೊತ್ತಾದ್ರೆ ನನಗೆ ಗ್ರಹಚಾರ ಬಿಡಿಸಿಬಿಡ್ತಾಳೆ." ನಕ್ಕು ಹೇಳಿದ. "ವಸೂ ತುಂಬ ನಿಷ್ಠುರದವಳು ಬಿಡಿ."

"ಇಲ್ಲ ನಮ್ಮ ವಸು ಅಂಥವಳಲ್ಲ." ಗೆಳತಿಯನ್ನು ಬೆಂಬಲಿಸಿದಳು.

"ಆದ್ರೆ ನಿಮ್ಮ ವಿಷಯದಲ್ಲಿ ಹೇಳಬೇಕೆಂದರೆ ನೀವು ತುಂಬ ಮೃದು ಸ್ವಭಾವದವರು."

ಅವಳೇನೂ ಹೇಳಲಿಲ್ಲ ತೋಟದಾಚೆ ಬೀದಿಯಲ್ಲಿ ಕಿರುಗಂಟೆ ಮೊಳಗಿಸುತ್ತ ಹಿಂಡು ಹಿಂಡಾಗಿ ಗೂಡಿಗೆ ವಾಪಾಸುಗುವ ದನಗಳನ್ನು ನೋಡುತ್ತ ಇದ್ದು ಬಿಟ್ಟಳು. ಎರಡು ನಿಮಿಷಗಳಲ್ಲಿ ಎರಡು ಬಟ್ಟಲುಗಳಲ್ಲಿ ಬಂತು ಕಾಫಿ. ಕಾಫಿ ಕುಡಿದು ಮುಗಿಸಿ ಎದ್ದಳು ಮಾಧವಿ.

"ನಾನಿನ್ನು ಹೋಗಿಬರ್ತೇನೆ, ನೀವೇನೋ ಬರಿತಿದ್ರಿ, ನನ್ನಿಂದ ಡಿಸ್ಟರ್ಬ್ ಆಗಿರ್ಬೇಕು, ಐಯಾಂ ಸಾರಿ."

"ನೀವ್ಯಾಕೆ ಸಾರಿ ಹೇಳ್ತೀರಿ, ನನ್ನ ಬರವಣಿಗೆಗೆ ನಿಮ್ಮ ಆಗಮನದಿಂದ ಏನೂ ತೊಂದರೆ ಆಗಲಿಲ್ಲ ಬಿಡಿ."

"ಸುಳ್ಳು ಹೇಳ್ತಿದ್ದೀರಿ, ಪೆನ್ನು ಪ್ಯಾಡು ಪಕ್ಕದಲ್ಲಿಟ್ಟ ಮೇಲೆ ಡಿಸ್ಟರ್ಬ್ ಆದಂತೆಯೇ ತಾನೆ?"

"ಇಲ್ಲ, ಸಾಹಿತ್ಯ ಯಾವಾಗಂದ್ರೆ ಆವಾಗ ಬರೆಯುವಂತಾದ್ದಲ್ಲ. ನೀವು ಬಂದ ಮೇಲೂ ನಾನು ಬರೀತಾ ಕೂತ್ರೆ ಅದು ಸಭ್ಯತೆ ತೋರುವುದಿಲ್ಲ."

ಅವಳು ಕೇಳುತ್ತ ಮತ್ತೆ ಕುಳಿತಳು, ಕುಮಾರ್ ಪ್ರಕೃತಿಯ ಬಗ್ಗೆ, ಹೆಣ್ಣಿನ ಸ್ನಿಗ್ಧ ಸೌಂದರ್ಯದ ಬಗ್ಗೆ ಹೇಳಿದ. ಆಸಕ್ತಿಯಿಂದ ಕೇಳಿದಳು. ಅವರಿಬ್ಬರೂ ಕ್ಷಣದಲ್ಲಿ ಸಲಿಗೆ ಆತ್ಮೀಯತೆಗಳ ತಳಪಾಯ ಗಟ್ಟಿ ಮಾಡುತ್ತ ಸಂಭಾಷಿಸತೊಡಗಿದರು, ವಸಂತ, ಶ್ರೀಧರ್ ಬರುವವರೆಗೂ.

*   *   *   *   *

ಎಷ್ಟು ಬೇಗ ನರ್ಸಿಂಗ್ ಹೋಂ ನಿರ್ಮಿಸಬೇಕೆಂದು ಶ್ರೀಧರ್ ಚಡಪಡಿಸುತ್ತಿದ್ದಾನೋ ಅಷ್ಟೂ ತಡವಾಗಿ ನರ್ಸಿಂಗ್ ಹೋಂ ನಿರ್ಮಾಣಗೊಳ್ಳುವುದರಲ್ಲಿ ಆರಂಭಿಸಿದೆ. ಹಲವು ಹತ್ತು ಸಮಸ್ಯೆಗಳು ತೊಡಕಾಗಿ ಬಂದವು. ನಿರ್ಮಾಣ ತಡವಾದಂತೆಲ್ಲ ಶ್ರೀಧರ್‌ನಿಗೆ ಇನ್ನೊಂದು ಆಶೆ. ತನ್ನ ಚೊಚ್ಚಲ ಮಗುವಿನ ಜನನ ಯಾಕೆ ತನ್ನ ಹೊಸ ನರ್ಸಿಂಗ್ ಹೋಂನಲ್ಲೇ ಆಗಬಾರದು?

ಈ ನಡುವೆ ಅವನ ಮಿತ್ರನೊಬ್ಬ ಕರ್ನೂಲ್‌ನಿಂದ ಕಾಗದ ಹಾಕಿದ. ಕರ್ನೂಲ್‌ನಲ್ಲಿ ನಿವೃತ್ತ ನರ್ಸ್ ಒಬ್ಬಳಿದ್ದಾಳೆಂದು, ತುಂಬ ಸಂಯಮಿ ಎಂದೂ, ಅವಳ ವಿಳಾಸ ಕಳಿಸಿದ್ದ. ಹೇಗೂ ತನ್ನ

ನರ್ಸಿಂಗ್ ಹೋಮಿಗೆ ಜೂನಿಯರ್ ಡಾಕ್ಟರ್‌ಗಳಿಬ್ಬರು, ಕೆಲವು ನರ್ಸುಗಳ ಅಗತ್ಯವಿದ್ದುದರಿಂದ ಶ್ರೀಧರ್ ಯಾವುದೋ ಕೆಲಸದ ನಿಮಿತ್ತ ನಂದ್ಯಾಲಕ್ಕೆ ಹೋದವನು ಹಾಗೆಯೇ ಆ ನಿವೃತ್ತ ನರ್ಸ್‌ಳನ್ನು ಭೇಟಿಯಾದ. ತನ್ನ ನರ್ಸಿಂಗ್ ಹೋಂ ಪ್ರಾರಂಭವಾಗುತ್ತಲೇ ನಿಮ್ಮ ಸೇವೆಯ ಅಗತ್ಯವನ್ನು ನಾನು ಉಪಯೋಗಿಸಿಕೊಳ್ಳುತ್ತೇನೆ ಎಂದು, ಕರ್ನೂಲಿನಿಂದ ವಾಪಾಸಾಗುವಾಗ ಅಲಂಪೂರ್ ಬೇನಿಷಾ ತರುತ್ತಾನೆ.

ಬಾಲ್ಕನಿಯಲ್ಲಿ ಕೂತು ಮಾಧವಿ 'ಬೇನಿಷಾ' ಚೂರುಗಳನ್ನು ಕತ್ತರಿಸುತ್ತ ವಸಂತಳನ್ನು ಒತ್ತಾಯದಿಂದ ತಿನ್ನುವಂತೆ ಹೇಳುತ್ತಾಳೆ. ವಸಂತ ಒತ್ತಾಯಿಸಿದಾಗಲೆಲ್ಲ ತಿನ್ನುತ್ತ ಅವಳು ಯೋಚಿಸುತ್ತಾಳೆ.

'ಹಿಂದೊಮ್ಮೆ ಮಾಧವಿ ಇದೇ ಸ್ಥಿತಿಯಲ್ಲಿದ್ದಾಗ, ಈ ಮನೆಯಲ್ಲೇ ಇದ್ದಾಗ ತಾನು ಮಾಧವಿಗೆ ಈ ಸೇವೆ ಮಾಡಲಿಲ್ಲ. ಬಸುರಿ ಹೆಂಗಸಿಗೆ ಏನೇನು ಸೇವೆ ಮಾಡಬೇಕೋ ಅಷ್ಟು ಮಾತ್ರದ ಸೇವೆ ಮಾಡಿದಳಷ್ಟೆ ಹೊರತು ಮಾಧವಿ ತೋರುತ್ತಿರುವ ಆತ್ಮೀಯತೆ, ಕಾಳಜಿ ತೋರಲಿಲ್ಲ. ನೀನೀಗ ಬಸುರಿ ಕಣೆ ಎಂದು ಮಾಧವಿಗೆ ತಿಳಿಸುವುದಕ್ಕೇ ತಾನು ಅಳುಕುತ್ತಿದ್ದಳು. ಅವಳನ್ನು ಸಾಧ್ಯವಾದಷ್ಟು ಆ ಬಸುರಿ ನೆನಪಿನಿಂದ ಇಡಲೆತ್ನಿಸುತ್ತಿದ್ದಳು. ಪಾಪ ನಿಜಕ್ಕೂ ಮಾಧವಿ ನತದೃಷ್ಟೆ ಯಾವ ಸಂತೋಷ, ಸಂಭ್ರಮಗಳಿಲ್ಲದೆ ನಿರ್ಲಿಪ್ತ ಜೀವನ ದೂಡುತ್ತಿದ್ದಾಳೆ.'

"ಏನೇ ವಸೂ ಅಷ್ಟೊಂದು ಯೋಚನೆ ಮಾಡ್ತಿದ್ದೀ?'' ವಸಂತಳ ತೋಳು ಹಿಡಿದು ಅಲುಗಿಸಿದಾಗ, ವಸಂತ ವಾಸ್ತವಕ್ಕೆ ಬಂದಳು.

"ಯೋಚನೆ ಮಾಡ್ತಾ ಮಾಡ್ತಾ ಬೇನಿಷಾ ಸಿಪ್ಪೆ ಕೂಡ ತಿನ್ನೋಕ್ಕೆ ಶುರು ಮಾಡಿಬಿಟ್ಟೆಯಲ್ಲ.'' ನಕ್ಕು ವಸಂತಳ ಕಿವಿಯಲ್ಲಿ ಉಸುರಿದಳು ಮಾಧವಿ "ಈ ಬೇನಿಷಾ ಹಣ್ಣನ್ನು ಸಂಪೂರ್ಣವಾಗಿ ತಿನ್ನಬೇಕು ನೀನು, ಈ ಹಣ್ಣಿನಷ್ಟೇ ಸಿಹಿಯಾದ ಮುದ್ದಾದ ಮಗ ಹುಟ್ಟುತ್ತಾನೆ.''

"ಏನು ನೀವಿಬ್ರೇ ಎಲ್ಲ ಕಾಲಿ ಮಾಡಿಬಿಟ್ಟಿದ್ದೀರಾ'' ಬಾಲ್ಕನಿಗೆ ಬಂದರು ಶ್ರೀಧರ್, ಕುಮಾರ್.

"ಈಗ ಉಳಿದಿರೋದು ಬರೀ ವಾಟೆ ಮಾತ್ರ.''

"ವಾಟೆಗಳಲ್ಲಿ ಜೀವಶಕ್ತಿ ಇರುತ್ತೆ. ಇಂತಾ ವಾಟೆಗಳನ್ನು ತಿನ್ನೋದ್ರಿಂದ್ಲೆ ಹೆಂಗಸರಿಗೆ ಹೆರುವ ಶಕ್ತಿ ಬಂದಿರೋದು.'' ಶ್ರೀಧರ್ ಕಿಚಾಯಿಸಿದ.

"ಅವರು ಇಷ್ಟೆಲ್ಲ ಮಾತಾಡಿದ್ರೂ ನೀನು ಸುಮ್ನೆ ನಿಂತಿದ್ದೀಯಲ್ಲ. ಏನಾದ್ರೂ ಹೇಳು.'' ಅಣ್ಣನಿಗೆ ದೂರು ಸಲ್ಲಿಸುತ್ತಾಳೆ ವಸಂತ.

ತಲೆ ಕೆರೆದುಕೊಂಡ ಕುಮಾರ್ ಉತ್ತರ ನೀಡುವ ಮುಂಚೆ.

"ಇದರಲ್ಲಿ ಗಂಡ ಹೆಂಡ್ತಿ ಸಮಸ್ಯೆಯೇ ಇಲ್ಲ. ಗಂಡಸು ಮತ್ತು ಹೆಂಗಸಿನ ವೈಯಕ್ತಿಕ ಸಮಸ್ಯೆ ಇದು.''

"ಇದು ಹೆಂಗಸಿನ ಸಮಸ್ಯೆ ಅಂತ ನೀನು ಅವರ ಪರ ವಹಿಸ್ತೀಯಾ?''

"ತಪ್ಪೇನಿದೆ, ನಾವಿಬ್ಬರು, ನೀವಿಬ್ಬರು.''

ಅಷ್ಟರಲ್ಲಿ ಎದ್ದು ನಿಲ್ಲಲೆತ್ನಿಸಿದಳು ಮಾಧವಿ. "ಪುಟ್ಟ ಎಲ್ಲಿ?''

"ಹೇಡಿಯಂತೆ ಯುದ್ಧರಂಗದಿಂದ ಪರಾರಿಯಾಗಲೆತ್ನಿಸುತ್ತಿದ್ದೀರಾ!'' ಕುಮಾರ್ ಮತ್ತೊಂದು ಅಸ್ತ್ರ ಬಿಟ್ಟ.-

"ಹೌದಹುದು.'' ಶ್ರೀಧರ್ ತಲೆ ಆಡಿಸುತ್ತಾನೆ, ಮಾಧವಿಗೆ ಕೂರದೆ ಬೇರೆ ದಾರಿ ಕಾಣಲಿಲ್ಲ, ಮತ್ತೆ ಕುಳಿತಳು.

"ಇಬ್ಬರು ಹೆಣ್ಣುಗಳೊಂದಿಗೆ ಇಬ್ಬರು ಗಂಡಸರು ಯುದ್ಧ ಮಾಡುವುದನ್ನು ನಾನೆಲ್ಲೂ

ನೋಡಲಿಲ್ಲ.'' ವಸಂತ.

"ಯೂ ಮೀನ್ ಟು ಸೇ, ಹೆಂಗಸರು ಅಬಲೆಯರು, ಗಂಡಸರೊಂದಿಗೆ ಯುದ್ಧ ಮಾಡುವಷ್ಟು ದೈಹಿಕ ಶಕ್ತಿ ಉಳ್ಳವರಲ್ಲ ಎಂಬುದನ್ನು ಒಪ್ಪಿಕೊಳ್ತಿದ್ದೀ ತಾನೆ?'' ಎಂದ ಶ್ರೀಧರ್.

"ಒಂದ್ಕೆಲಸ ಮಾಡಿ. ಇಬ್ಬರು ಹೆಂಗಸರೊಂದಿಗೆ ಯುದ್ಧ ಮಾಡಲು ಆಗದಿದ್ರೆ, ಹೋಗಿ ಇನ್ನೊಬ್ಬರನ್ನು ಕರ್‍ಕೊಂಡು ಬನ್ನಿ.''

"ಓಕೆ ಕುಮಾರ್ ಹೋಗಿ ಪುಟ್ಟನ್ನ ಕರ್‍ಕೊಂಡು ಬಾ.''

ಶ್ರೀಧರ್‌ನ ಸಲಹೆಗೆ ಉಳಿದವರು ನಕ್ಕು ಬಿಡುತ್ತಾರೆ. ಮಾಧವಿ ಮತ್ತೆ ಬೇನಿಷಾ ಚೂರು ಮಾಡಲಾರಂಭಿಸಿದಳು. ಶ್ರೀಧರ್ ಕುಮಾರ್ ಕೂಡ ಒಂದೊಂದು ಚೂರನ್ನು ಬಾಯಿಗಿಟ್ಟುಕೊಂಡರು. ಬೇನಿಷಾ ಚೂರು ಕತ್ತರಿಸುವ ಮಾಧವಿಯ ಮಲ್ಲಿಗೆ ಮೊಗ್ಗು ಬೆರಳುಗಳನ್ನು ನೋಡುತ್ತ ಕುಳಿತಿದ್ದ ಕುಮಾರ್‌ನನ್ನು ಇದ್ದಕ್ಕಿದ್ದಂತೆ ಕೇಳಿದ ಶ್ರೀಧರ್ "ಅಂದ ಹಾಗೆ ನಿನ್ನ ಸದ್ಯದ ಕಾದಂಬರಿ ಎಲ್ಲೀವರೆಗೂ ಬಂತು?''

"ಇನ್ನೇನು ಮುಕ್ತಾಯಕ್ಕೆ ಬಂತು. ಆದರೆ ಇತ್ತೀಚೆಗಷ್ಟೇ ನನ್ನ ಮನವನ್ನು ಇನ್ನೊಂದು ಪಾತ್ರ ಕಾಡಲಾರಂಭಿಸಿದೆ. ಆ ಪಾತ್ರ ನನ್ನ ಮೇಲೆ ಅದೆಷ್ಟು ಪ್ರಭಾವ ಬೀರಿದೆ ಅಂದರೆ ಆ ಪಾತ್ರಕ್ಕಾಗಿ ನಾನು ಒಟ್ಟು ಕಾದಂಬರಿಯನ್ನೇ ಮತ್ತೆ ಪುನಃ ಬರೆಯಬೇಕಾಗಿದೆ.''

"ಕೇವಲ ಒಂದು ಪಾತ್ರದ ಸಲುವಾಗಿ ಆ ಕಾದಂಬರಿಯನ್ನು ಬದಲಾಯಿಸೋದು ಯಾಕೆ, ಆ ಪಾತ್ರದ ಆಧಾರದಿಂದ ಇನ್ನೊಂದು ಕಾದಂಬರಿ ಬರೆಯಬಹುದಲ್ಲ?''

"ಇಲ್ಲ. ನನ್ನ ಸದ್ಯದ ಕಾದಂಬರಿಯಲ್ಲಿ ಆ ಹೊಸ ಪಾತ್ರ ಸೇರಿಸಿದರೇನೇ ಸರಿ ಅಂತ ನನ್ನ ಖಚಿತಾಭಿಪ್ರಾಯ. ಕಾದಂಬರಿಯನ್ನು ಮತ್ತೆ ಬರೆಯಬೇಕಾಗುತ್ತೆ ಅನ್ನೋ ಹೆದರಿಕೆಯಿಂದ ಕಾದಂಬರಿಯ ಸೌಂದರ್ಯವನ್ನು ಹಾಳು ಮಾಡಲು ನನಗಿಷ್ಟವಿಲ್ಲ.''

"ಸರಿ ಬಿಡಯ್ಯ, ನೀವು ಲೇಖಕ ಮಂದಿ ಒಂದು ರೀತಿಯಲ್ಲಿ ಅರ್ಥವಾಗದ ಒಗಟುಗಳು.''

"ನೀವೀಗ ಬರೀತಿರೋ ಕಾದಂಬರಿಯ ಹಸ್ತಪ್ರತೀನ ನಾನೊಂದು ಸಲ ನೋಡಬಹುದಾ?'' ಕುತೂಹಲ ತಡೆಯಲಾರದೆ ಕೇಳಿದಳು ಮಾಧವಿ.

"ಹಸ್ತಪ್ರತೀನ ಇದುವರೆಗೂ ನಾನು ಯಾರಿಗೂ ಕೊಟ್ಟದ್ದಿಲ್ಲ, ನೀವು ಕೇಳ್ತಿದ್ದೀರೀಂತ ಕೊಡ್ತೇನೆ.''

"ಥ್ಯಾಂಕ್ಯೂ ವೆರಿಮಚ್.'' ಮಾಧವಿಯ ಮುಖ ಅರಳಿತು. ಕೋಣೆಗೆ ಹೋಗಿ ಹಸ್ತಪ್ರತಿ ತಂದುಕೊಟ್ಟ ಕುಮಾರ್.

* * * * *

ತನ್ನ ಕೈದೋಟದಲ್ಲಿ ಭಾನುವಾರದ ರಾತ್ರಿ ಬೆಳದಿಂಗಳ ಡಿನ್ನರಿನ ವ್ಯವಸ್ಥೆ ಮಾಡಿದ್ದ ಶ್ರೀಧರ್ ಮೂರು ದಿನಗಳ ಹಿಂದೆ ಸರಕಾರದಿಂದ ನರ್ಸಿಂಗ್ ಹೋಂ ನಿರ್ಮಿಸಲು ದೊರೆತ ಅನುಮತಿ ಮತ್ತು ನೀಡಿದ ಧನ ಸಹಾಯದ ಸಂತೋಷ ಸಂದರ್ಭದಲ್ಲಿ 'ಮೂನ್ ಲೈಟ್' ಡಿನ್ನರಿನ ವ್ಯವಸ್ಥೆ. ಶ್ರೀಧರ್, ವಸಂತ, ಮಾಧವಿ, ಲಕ್ಷ್ಮಿ, ಕುಮಾರ್ ತೋಟದ ಮಾಲಿ.

ಸಂಜೆ ಕಳೆದು ಎಂಟರ ಸಮಯವಾದಾಗ ಮಾವಿನ ಮರದಡಿಯಲ್ಲಿ ಎಲ್ಲರೂ ಹಸಿರು ಹುಲ್ಲಿನ ಮೇಲೆ ವೃತ್ತಾಕಾರದಲ್ಲಿ ಕುಳಿತರು. ಎಲ್ಲರಿಗೂ ಲಕ್ಷ್ಮಿ ಬಡಿಸತೊಡಗಿದಳು. ಬದನೆಕಾಯಿ ಪಲ್ಯ ಚಪ್ಪರಿಸುತ್ತ ಕೇಳಿದ ಶ್ರೀಧರ್,

"ಅಪ್ಪಾ ಲೇಖಕ ಭಾವ ಮೈದುನ ಮಾರಾಯ, ಈ ಬೆಳದಿಂಗಳ ಬಗ್ಗೆ ನಿನ್ನ ಸಾಹಿತ್ಯ ಭಾಷಣ ಕೊಡು.''

"ಭಾಷಣ ಕೊಡೋ ಮಾತು ಹಾಗಿರಲಿ, ನಿನ್ನನ್ನು ನೋಡ್ತಿದ್ರೆ ಬಕಾಸುರ ನೆನಪಾಗ್ತಿದ್ದಾನೆ. ನಮ್ಮೆಲ್ಲರನ್ನೂ ತಿಂದು ಹಾಕಿ ಬಿಡ್ತಿಯೇನೋಂತ ಹೆದರಿಕೆ ಆಗ್ತಿದೆ."

ಎಲ್ಲರೂ ಪಕಪಕ ನಕ್ಕರು ಕುಮಾರ್‌ನ ಜೋಕ್‌ಗೆ.

"ನನ್ನ ಊಟ ನಾನು ಮಾಡಿದ್ನೇ ಹೊರತು ಬಕಾಸುರನಂತೆ ತಿನ್ನಲಿಲ್ಲ."

"ನೀವು ಬಕಾಸುರನ ತರಾ ತಿನ್ನದಿದ್ದಿದ್ರೆ ಬದನೆಕಾಯಿ ಪಲ್ಯ ಅಷ್ಟು ಬೇಗ ಹೇಗೆ ಅರ್ಧ ಕಾಲಿಯಾಗ್ಬಿಡ್ತಿತ್ತು." ವಸಂತ ಅಣಕಿಸಿದಳು.

"ಇಧರಲ್ಲಿ ನನ್ನ ತಪ್ಪೇನಿಲ್ಲ ವಸೂ. ನೀನಿಗ ಬಸುರಿ, ಸರಿಯಾಗಿ ಊಟ ಮಾಡ್ತಿಲ್ಲ. ನಿನ್ನ ಪಾಲನ್ನು ನಾನು ತಿನ್ನಲೇಬೇಕಲ್ಲ."

"ಇದ್ಯಾವ ಸೀಮೆ ಮೇಲಿನ ತರ್ಕ ಭಾವ." ಹುಬ್ಬೇರಿಸುತ್ತಾನೆ ಲೇಖಕ ಪುಂಗವ. "ತಾಯಿ ಆಗಲಿರೋದು ವಸು, ನೀನ್ಯಾಕೆ ಸಕತ್ ಊಟ ಹೊಡೀಬೇಕು."

ನಿಡಿದಾಗಿ ತೇಗಿ "ಯಾರು ತಿಂದ್ರೆ ಏನು ಬಿಡು."

"ಹೌದು ಬಿಡು. ಹಾಗಾದ್ರೆ ಒಂದ್ಕೆಲಸ ಮಾಡು ತಂಗಿ ಬದಲಿಗೆ ನೀನೇ ಹೆತ್ತುಬಿಡು."

ಮತ್ತೊಮ್ಮೆ ಅಲ್ಲಿ ನಗೆಯ ಅಲೆ ಎದ್ದಿತು.

"ನಿನ್ ತಂಗಿನ ಕಟ್ಕೊಂಡ ತಪ್ಪಿಗೆ ಆ ಕೆಲ್ಸವನ್ನೂ ಮಾಡಿಬಿಡ್ತೇನೆ."

"ಶಭಾಷ್ ಭಾವಾ, ಗಂಡ ಅಂದ್ರೆ ನಿನ್ನಂಥವರೇ ಸರಿ." ಭಾವನ ಬೆನ್ನು ತಟ್ಟಿ ಮೆಚ್ಚಿಕೊಳ್ಳುತ್ತಾನೆ ಬುದ್ಧಿವಂತ ಲೇಖಕ ಕುಮಾರ್.

ಇವರ ಹಾಸ್ಯ ಸಂಭಾಷಣೆಯಲ್ಲಿ ತಾನೂ ಭಾಗವಹಿಸಬೇಕೆಂಬುದು ಮಾಧವಿಗೆ ಆಶೆ ಇಲ್ಲದಿಲ್ಲ. ಆದರೆ ಕುಮಾರ್ ಇರುವುದರಿಂದ ಅವಳಿಗೆ ಹಾಗೆ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಆದಕ್ಕೆ ಕೇವಲ ಪ್ರೇಕ್ಷಕಿಯಾಗಿ ನಗುತ್ತ ಕುಳಿತುಬಿಟ್ಟಳು. ನಗು, ಅಣಕುವಾಟ, ಟೇಡಿಕೆ ತಮಾಶೆಗಳೊಂದಿಗೆ ಊಟ ಮುಗಿಯಿತು. ಪುಟ್ಟನಿಗೆ ಕೈ ಕಾಲು ಮುಖ ತೊಳೆದು ಅವನನ್ನು ಎತ್ತಿಕೊಂಡು ಬಂದ ಮಾಧವಿ, ಸಪೋಟ ಗಿಡದಡಿಯಲ್ಲಿ ವಸಂತಳ ತೊಡೆಯ ಮೇಲೆ ತಲೆ ಇಟ್ಟು ಮಲಗಿರುವ ಶ್ರೀಧರ್‌ನನ್ನು ನೋಡಿ, ಅವರ ಮಧ್ಯೆ ನಾನ್ಯಾಕೆ ಎಂದುಕೊಂಡು, ಅವರ ಏಕಾಂತಕ್ಕೆ ಭಂಗ ಮಾಡಲು ಇಷ್ಟವಿಲ್ಲದೆ ಮತ್ತೆ ಹೋಗಿ ಮಾವಿನ ಮರದಡಿಯಲ್ಲಿ ಕುಳಿತಳು. ತೋಟದ ಮಾಲಿ ಪುಟ್ಟನನ್ನು ಹೆಗಲ ಮೇಲೆ ಕೂರಿಸಿಕೊಂಡು ತೋಟದ ಸುತ್ತ ಹೆಜ್ಜೆ ಹಾಕಿದರೆ, ಲಕ್ಷ್ಮಿ ಪಾತ್ರೆಗಳನ್ನು ಎತ್ತಿ ಒಳಗಿಡಲಾರಂಭಿಸಿದಳು.

ಊಟದ ಅನಂತರ ಸಿಗರೆಟ್ ಹಚ್ಚುವ ಅಭ್ಯಾಸವಿರುವ ಬುದ್ಧಿಜೀವಿ ಯುವ ಲೇಖಕ, ಧೂಮಪಾನ ಮುಗಿಸಿ ಬರುವಾಗ ಮಾವಿನ ಮರದಡಿಯಲ್ಲಿ ಏಕಾಂಗಿಯಾಗಿ ಕುಳಿತಿರುವ ಮಾಧವಿಯನ್ನು ನೋಡಿದ. ಹುಣ್ಣಿಮೆ ಚಂದಿರನತ್ತ ದೃಷ್ಟಿ ನೆಟ್ಟಿರುವವಳತ್ತ ಹೆಜ್ಜೆ ಹಾಕುತ್ತಾನೆ. ಬೆಳದಿಂಗಳ ಮಳೆಯಲ್ಲಿ ತೊಯ್ದ ಹಿಮಬಾಲೆಯಂತೆ ಕುಳಿತಿರುವಳು.

ನಿಜಕ್ಕೂ ಯಾರು ಈ ಮಾಧವಿ.

ಮಾಧವಿಯ ಬಗ್ಗೆ ವಿವರ ಕೇಳುವುದು ಸಭ್ಯತೆ ಅಲ್ಲವೆಂದು ವಸಂತಳನ್ನು ಆ ಕುರಿತಾಗಿ ಇದುವರೆವಿಗೂ ಏನೂ ಕೇಳಿದ್ದಿಲ್ಲ ಕುಮಾರ್. ಹಾಗೆಯೇ ಆ ಕುರಿತು ಶ್ರೀಧರ್‌ನನ್ನು ಕೂಡ. ಮಾಧವಿಯ ಬಗ್ಗೆ, ಮಾಧವಿಯ ಸೌಂದರ್ಯದ ಬಗ್ಗೆ ತನ್ನಲ್ಲಿ ಯಾಕಿಷ್ಟು ಕುತೂಹಲ? ಕುಂಕುಮದ ಬಿಂದು ಧರಿಸುವುದಿಲ್ಲ ಬಹುಶಾ ಕ್ರಿಶ್ಚಿಯನ್ ಧರ್ಮದವಳಿರಬೇಕು. ಈಕೆಯ ಗಂಡ ಯಾರು? ಸದಾ ಇವರ ಮನೆಯಲ್ಲೇ ಇವಳಿದ್ದಲ್ಲಿ ಅವನಿಗೆ ಬೇಸರವಾಗುವುದಿಲ್ಲವಾ? ಕೆಲಸಕ್ಕೆ ಹೋಗುವ ಸಮಯ ಬಿಟ್ಟರೆ ಉಳಿದ ಸಮಯವನ್ನೆಲ್ಲ ಇಲ್ಲೇ ಕಳೆಯುವ ಇವಳನ್ನು ಇವಳ ಗಂಡ ಮೂದಲಿಸುವುದಿಲ್ಲವೇ? ಗಂಡ ಹೆಂಡತಿಗೆ ತುಸು ಸಮಯದ ಅಗತ್ಯವಿದೇಂತ ಈಕೆಗೆ ಗೊತ್ತಿಲ್ವಾ ಅಥವಾ ಈಕೆಯ ಗಂಡ ಕೆಲಸದ ನಿಮಿತ್ತ ಬೇರೆ ಯಾವುದಾದರೂ ಊರಿನಲ್ಲಿ ಕೆಲಸಕ್ಕಿದ್ದಾನಾ?

ಮಾಧವಿಯೊಂದಿಗೆ ಆ ಚೇತೋಹಾರಿ ಪ್ರಕೃತಿಯ ನಡುವೆ ಮಾತಾಡಬೇಕೆಂಬ ಒತ್ತಾಸೆಯನ್ನು ಹತ್ತಿಕ್ಕಿ ಮನೆಯೊಳಕ್ಕೆ ಹೋಗಿಬಿಟ್ಟ ಭಾವುಕ ಕತಾಲೇಖಕ.

*　　*　　*　　*　　*

ವನಭೋಜನದ ಅನಂತರದ ಭಾನುವಾರ ಸಂಜೆ ನಾಲ್ಕೂವರೆ ಸಮಯದಲ್ಲಿ ಯಾವುದೋ ಕೆಲಸದ ಸಲುವಾಗಿ ಹೊರ ಹೋಗಿದ್ದ ಕುಮಾರ್ ಮಾಧವಿಯ ಮನೆ ಮುಂದೆ ಹಾದು ಹೋಗುತ್ತಾನೆ. ಮರದ ಗೇಟಿನಾಚೆ ನಿಂತು ಮಲ್ಲಿಗೆ ಪೊದೆಯಿಂದ, ಮಲ್ಲಿಗೆ ಮೊಗ್ಗು ಕೀಳುತ್ತಿರುವ ಮಾಧವಿಯನ್ನು ನೋಡಿ ಚಕಿತನಾದ. ಸರಿಯಾಗಿ ಆಗಲೇ ಅವನನ್ನು ನೋಡುತ್ತಾಳೆ ಮಾಧವಿ.

"ಬನ್ನಿ ಬನ್ನಿ." ಕಿರುನಗುವಿನಿಂದ ಆಹ್ವಾನಿಸಿದಳು.

ಗೇಟು ದಾಟಿ ಒಳಕ್ಕೆ ಬಂದವು ಅವನ ಹೆಜ್ಜೆಗಳು. "ಇದು ನಿಮ್ಮ ಮನೇಂತ ನನಗೆ ಗೊತ್ತಿರಲಿಲ್ಲ. ಸಾಕಷ್ಟು ಸಾರಿ ಈ ಮನೆಯ ಮುಂದೆ ಹಾದು ಹೋಗಿದ್ದೇನೆ ನಾನು."

ವರಾಂಡಾದಲ್ಲಿ ಕುರ್ಚಿಯ ಮೇಲೆ ಲೇಖಕ ಅತಿಥಿಯನ್ನು ಕೂರಿಸಿ ಒಳಗೆ ಹೋಗಿ ಚಾ ಬಟ್ಟಲಿನೊಂದಿಗೆ ಬಂದಳು ಮಾಧವಿ. ಏನನ್ನೋ ಹೇಳಲು ಕುಮಾರ್ ಬಾಯಿ ತೆರೆಯುವಷ್ಟರಲ್ಲಿ ಅವಳೇ ನಸು ನಕ್ಕು,

"ನನ್ನ ಫ್ರೆಂಡಿಗ್ಯಾಕೆ ತುಂಬ ಕಷ್ಟ ಕೊಟ್ರಿ ಅಂತ ವಸಂತ ನಿಮ್ಮ ಮೇಲೆ ರೇಗದ ಹಾಗೆ ನಾನು ನಿಭಾಯಿಸ್ತೀನಿ ಬಿಡಿ."

"ನಿಮಗೆ ಭವಿಷ್ಯ ಗೊತ್ತಿದೆಯಾ?"

"ಯಾಕೆ?" ಚಕಿತತೆ ಮಾಧವಿಯ ಕಣ್ಣರಳಿಸಿತು.

"ಯಾಕೂ ಇಲ್ಲ, ನಾನೇನು ಹೇಳಬೇಕೂಂತಿದ್ದೀನೋ ಅದನ್ನು ನೀವೇ ಹೇಳಿಬಿಟ್ರಿ ಅದಕ್ಕೆ."

ಟೀ ಕುಡಿದ ಮೇಲೆ ಟೀಪಾಯ್‌ನ ಮೇಲೆ ಗುಪ್ಪೆಯಾಗಿರಿಸಿದ ಮಲ್ಲಿಗೆಗಳನ್ನು ಸೂಜಿದಾರದಲ್ಲಿ ಪೋಣಿಸುತ್ತ, ಕುಮಾರ್‌ನ ಹಸ್ತಪ್ರತಿಯ ಬಗ್ಗೆ ತನ್ನ ಅಭಿಪ್ರಾಯ ಹೇಳಿದಳು ಮಾಧವಿ.

"ನಿಮ್ಮ ಕಾದಂಬರಿ ತುಂಬ ಚೆನ್ನಾಗಿದೆ."

"ಥ್ಯಾಂಕ್ಸ್."

"ಪಾತ್ರಗಳ ಚಿತ್ರಣ ತುಂಬ ಸಹಜವಾಗಿದೆ. ದುರ್ಬಲ ವ್ಯಕ್ತಿತ್ವವಿರುವ ಪಾತ್ರಗಳನ್ನು ಕೂಡ ತುಂಬ ಚೆನ್ನಾಗಿ ಕಡೆದಿದ್ದೀರಿ. ನಿಮ್ಮ ಕಾದಂಬರಿ ಕೇವಲ ಉನ್ನತ ಮೌಲ್ಯ, ಅಪರೂಪ ವ್ಯಕ್ತಿತ್ವ ಅಥವಾ ನಾಯಕ ನಾಯಕಿ ಮರ ಸುತ್ತುವ ಕತೆಯಾಗಿರದೆ ವೆರೈಟಿಯಾಗಿದೆ."


ಉಕ್ಕುವ ಆನಂದಕ್ಕೆ ತಡೆಹಾಕಲೆತ್ನಿಸುತ್ತ ಹೇಳಿದ ಕುಮಾರ್.

"ಕಾದಂಬರಿಯನ್ನು ತುಂಬ ಡೀಪ್ ಆಗಿ ಸ್ಟಡಿ ಮಾಡಿರೋ ಹಾಗಿದೆ." ನಾಚಿ ತಲೆ ಬಾಗಿಸಿದಳು ವಿಮರ್ಶೆ ಜ್ಞಾನವಿರುವ ಹೆಣ್ಣು.

"ಎಲ್ಲಕ್ಕೂ ಆಳವಾದ ಅಭ್ಯಾಸದ ಅಗತ್ಯವಿಲ್ಲ, ಹೂವನ್ನು ಹೊಸಕಿ ಅದರ ಪರಿಮಳ ಆಘ್ರಾಣಿಸುವುದು ಮೂರ್ಖತನ. ಯಾವ ಹೂವಿನಲ್ಲಿ ಪ್ರಕೃತಿ ಸಹಜ ಪರಿಮಳವಿದೆಯೋ, ಆ ಹೂವಿನ ಪರಿಮಳ ತನ್ನಷ್ಟಕ್ಕೆ ತಾನೇ ನಮ್ಮ ಗಮನವನ್ನು ಅದರತ್ತ ಸೆಳೆಯುತ್ತದೆ." ತನ್ನ ಕಾದಂಬರಿಯ ಹಿರಿಮೆಯನ್ನು ಹೇಳಿದ ಮಾಧವಿಯ ಉಪಮೆಗೆ ಆತ ಭಾರೀ ಆನಂದಗೊಂಡ. ತನ್ನ ಕಾದಂಬರಿಗಿಂತಲೂ ಆಕೆಯ ವಿಮರ್ಶೆಯೇ ಚೆನ್ನಾಗಿದೆ ಅನ್ನಿಸಿತು.

"ನನ್ನ ಕಾದಂಬರಿಗೆ ಇಲ್ಲ ಸಲ್ಲದ ಘನತೆ ಕೊಡ್ತಿದ್ದೀರಿ ನೀವು."

"ನಾನೇನೂ ನಿಮ್ಮ ಮುಖಸ್ತುತಿ ಮಾಡಬೇಕೂಂತ ಹೇಳ್ತಿಲ್ಲ. ಇದು ನನ್ನ ಪ್ರಾಮಾಣಿಕ ಅಭಿಪ್ರಾಯ. ನಿಮ್ಮ ಕಾದಂಬರಿಯ ವಸ್ತು, ಶೈಲಿ ಕೂಡ ಅದ್ಭುತ. ಇನ್ನೂ ಸ್ವಲ್ಪ ದಿವಸ ಇಲ್ಲೇ ಇದ್ದು ನಿಮಗೆ ಅಗತ್ಯವಾದ ವಿಷಯ ಸಂಗ್ರಹಣೆ ಮಾಡಿಕೊಂಡು ಕಾದಂಬರಿ ಪೂರ್ತಿ ಮಾಡಿಬಿಡಿ."



"ನನ್ನ ಉದ್ದೇಶ ಕೂಡ ಅದೇ. ಆದರೆ ಆ ಕೆಲಸ ಯಶಸ್ವಿಯಾಗಿ ಮುಗಿಯಬೇಕಾದರೆ ನಿಮ್ಮ ಸಹಕಾರದ ಅಗತ್ಯವಿದೆ."

ಅಚ್ಚರಿಯಾಯಿತವಳಿಗೆ "ನನ್ನ ಸಹಕಾರವಾ?" ಉದ್ಗರಿಸಿದಳು.

"ಹೌದು. ನನ್ನ ಹಸ್ತಪ್ರತಿಯನ್ನು ಓದಿ, ಕಾದಂಬರಿಗೆ ಒಳ್ಳೆಯ ಮುಕ್ತಾಯ ಕೊಡಿ ಅಂತ ಹೇಳಿದಿರಿ. ನನ್ನ ಕಾದಂಬರಿ ಇಷ್ಟು ಚೆನ್ನಾಗಿ ರೂಪುಗೊಂಡಿದೆ ಅಂತ ಹೇಳಿದಿರಿ. ನನ್ನ ಕಾದಂಬರಿ ಇಷ್ಟು ಚೆನ್ನಾಗಿ ರೂಪುಗೊಂಡಿದೆ ಎಂದ ಮೇಲೆ ಕಾದಂಬರಿಯ ಮುಕ್ತಾಯವನ್ನೂ ಕೂಡ ಅದಷ್ಟು ಚೆನ್ನಾಗಿ ಬರೆಯಬೇಕೂಂತ ಅನ್ನಿಸುತ್ತಿದೆ. ನೀವು ಕಾದಂಬರಿಯ ಬಗ್ಗೆ ನಿಮ್ಮ ಅಭಿಪ್ರಾಯ ಹೇಳದೇ ಇದ್ದಿದ್ದರೆ ನನಗೆ ಮುಕ್ತಾಯದ ಬಗ್ಗೆ ಈ ಕ್ಷಣದಲ್ಲಿರುವಷ್ಟು ಆಸಕ್ತಿ ಹುರುಪು ಇರ್‍ತಿರಲಿಲ್ಲವೇನೋ. ನನ್ನ ಮಾಮೂಲು ಶೈಲಿಯಲ್ಲಿ ಬರೆದು ಮುಗಿಸುತ್ತಿದ್ದೆನೇನೋ. ನಿಮ್ಮ ಉತ್ತೇಜನ ಒಂದು ರೀತಿಯಲ್ಲಿ ಟಾನಿಕ್, ಥ್ಯಾಂಕ್ಯೂ ಸೋ ಮಚ್."

ಮಾಧವಿಗೆ ಸಂಕೋಚ. "ನನ್ನ ಅಭಿಪ್ರಾಯಕ್ಕೆ ನೀವು ತುಂಬ ಬೆಲೆ ಕೊಡ್ತಿದ್ದೀರಿ. ಸಾಹಿತ್ಯದಲ್ಲಿ ಸೀಮೆಸುಣ್ಣದಷ್ಟು ಅಕ್ಷರ ಜ್ಞಾನವಿಲ್ಲದ ನಾನು ತಿಳಿಯದೆಯೋ, ತಿಳಿದೋ ಮಾಡಿದ ವಿಮರ್ಶೆಗೆ ನೀವಿಷ್ಟೊಂದು ಪ್ರಾಮುಖ್ಯತೆ ಕೊಡೋದು..."

"ವಿಮರ್ಶೆಗೆ ಸಾಹಿತ್ಯದಲ್ಲಿ ಪ್ರವೇಶವಿರಲೇಬೇಕೂಂತ ಏನೂ ಇಲ್ಲ. ಯಾವುದೇ ಲೇಖನ ಅಥವಾ ಕತೆ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡೇ ರಚಿತವಾಗುತ್ತದೆ. ಆದುದರಿಂದ ಓದುಗರ ಅಭಿಪ್ರಾಯವೇ ಅಂತಿಮ. ಅಭಿಪ್ರಾಯ ವ್ಯಕ್ತಪಡಿಸುವಾಗ ಕೃತಿಯ ಬಗ್ಗೆ ಪ್ರಾಮಾಣಿಕತೆ ಇರಬೇಕೇ ವಿನಾ ಬರಹಗಾರನ ಬಗ್ಗೆ ಇರಕೂಡದು."

"ನೀವಿಲ್ಲಿಯವರೆವಿಗೂ ಎಷ್ಟು ಕತೆ ಕಾದಂಬರಿ ಬರೆದಿದ್ದೀರಿ?" ಕುತೂಹಲ ತಡೆಯಲಾಗಲಿಲ್ಲ ಅವಳಿಗೆ.

"ನಾಲ್ಕು ಕಾದಂಬರಿ ಬರೆದಿದ್ದೇನೆ. ಒಂದು ಕಾದಂಬರಿಯ ಪ್ರಥಮ ಬಹುಮಾನ ಸಿಕ್ಕಿದೆ. ಪ್ರಸ್ತುತದ ಕಾದಂಬರಿ ಐದನೆಯದು. ಕತೆಗಳು..." ಮನದಲ್ಲೇ ಲೆಕ್ಕ ಹಾಕಿ "ಇಪ್ಪತ್ತೈದು ಕತೆಗಳಾಗಿವೆ."

ಮಾಧವಿಯ ಮುಂದಿನ ಪ್ರಶ್ನೆ ಸಾಹಿತ್ಯಾಸಕ್ತರ ಮಾಮೂಲು ಪ್ರಶ್ನೆ.

"ಕತೆಯ ಹಂದರ ಮೊದಲು ರಚಿಸಿ ಆಮೇಲೆ ಕತೇನ ಶುರು ಮಾಡ್ತೀರಾ, ಇಲ್ಲ ಹಂದರವಿಲ್ಲದೆ ಸೀದಾ ಬರಕೊಂಡು ಹೋಗ್ತೀರಾ?"

"ಇದು ಹೀಗೇಂತ ಹೇಳೋದು ಕಷ್ಟ. ನೀವು ಹೇಳಿದಂತೆ ಕಥಾ ಹಂದರ ಮೊದಲು ಸಿದ್ಧಪಡಿಸಿಕೊಂಡು ಅನಂತರ ಕತೆ ರೂಪಿಸಬಹುದು ಅಥವಾ ಯಾವುದೋ ಒಂದು ಎಳೆ ಆಧಾರದಿಂದ ಬರೆಯಲು ಶುರು ಮಾಡಬಹುದು. ಆದರೆ ಬಹುಪಾಲು ಸಮಯದಲ್ಲಿ ಹೀಗೆ ಬರೆಯಬೇಕೂಂತ ಊಹಿಸಿ ಹಾಗೆಯೇ ಬರೆಯುತ್ತ, ಮತ್ಯಾವುದೋ ಜಾಡನ್ನು ಅನುಸರಿಸುತ್ತೇವೆ. ಕೆಲವೊಮ್ಮೆ ಕತೆಯ ಮುಕ್ತಾಯವನ್ನು ಬದಲಾಯಿಸಬೇಕಾಗುತ್ತೆ, ಅದೇ ರೀತಿ ಪ್ರಾರಂಭ ಕೂಡ. ಒಮ್ಮೊಮ್ಮೆ ಈ ಕತೆ ಬರೆಯಲು ಸಾಧ್ಯವೇ ಇಲ್ಲವೇನೋ ಎನ್ನುವಷ್ಟು ಬೇಸರವೂ ಆಗುವುದುಂಟು. ಕೃತಿಗಳ ಸೃಷ್ಟಿಯಲ್ಲಿ ಮತ್ತೊಂದು ಚಿತ್ರವೂ ಉಂಟು. ಕೆಲಪಾತ್ರಗಳು ಸ್ವೋಪಜ್ಞತೆ ವ್ಯಕ್ತಿತ್ವದ ವ್ಯಕ್ತಿಗಳಂತೆ ಲೇಖಕರ ಹಿಡಿತದಲ್ಲಿರುವುದಿಲ್ಲ. ತಮ್ಮ ಮನಸ್ವೇಚ್ಛೆ ರೂಪು ತಾಳುತ್ತವೆ. ನಾವು ಕೇವಲ ಅವುಗಳ ದಾರಿ ಅನುಸರಿಸುವವರಂತೆ ಉಳಿದು ಬಿಡುತ್ತೇವೆ."

"ತುಂಬ ವಿಚಿತ್ರವಾಗಿದೆ."

"ಹೌದು ವಿಚಿತ್ರವಾಗಿಯೇ ಇದೆ. ನನ್ನ ಮೊದಲ ಕಾದಂಬರಿಯಲ್ಲಿ ಹೀಗಾಯ್ತು. ನಾನು ನಾಯಕಿಯನ್ನು ಅಂತಿಮದಲ್ಲಿ ಕೊಂದುಬಿಡಬೇಕೂಂತ ಅಂದುಕೊಂಡಿದ್ದೆ. ಆದರೆ ನಾಯಕಿ ತುಂಬ

ಧೈರ್ಯವಂತೆ ಮತ್ತು ಉತ್ತಮ ವ್ಯಕ್ತಿತ್ವವಿರುವವಳು. ತನ್ನ ಬಾಳಿನ ಕಷ್ಟಗಳನ್ನು ಧೈರ್ಯದಿಂದ ಎದುರಿಸಿದ ಹುಡುಗಿಯನ್ನು ನಾನು ಅಂತ್ಯದಲ್ಲಿ ಮುಗಿಸಿ ಬಿಡೋಣವೆಂದುಕೊಂಡಿದ್ದೆ. ಆದರೆ ಆಗಲಿಲ್ಲ.

"ನಾನ್ಯಾಕೆ ಸಾಯಬೇಕು, ನಾನು ಯಾವ ತಪ್ಪು ಮಾಡಿದೇಂತ ಸಾಯಬೇಕು? ನನ್ನನ್ನು ಅರ್ಥಮಾಡಿಕೊಳ್ಳುವ ಯೋಗ್ಯತೆ ನಿಮ್ಮ ಲೇಖನಿಗೆ ಇಲ್ಲದ್ದಿದ್ದರೆ ಬೇರೆ ಯಾರಿಗೂ ಇಲ್ಲವೆಂದು ಭ್ರಮೆ ಬೇಡ. ಈ ಜಗತ್ತಿನಲ್ಲಿ ಇನ್ನೂ ಅಲ್ಪ ಸ್ವಲ್ಪ ಉಳಿದುಕೊಂಡಿದೆ ಮಾನವೀಯತೆ. ನನಗೆಲ್ಲಾದರೂ ಮಾನವೀಯತೆ ಇರುವವರಿಂದ ಬೆಂಬಲ ಸಿಗುತ್ತೆ. ಆದುದರಿಂದಲೇ ಈ ಜಗತ್ತನ್ನು ತೊರೆದು ಹೋಗುತ್ತಿಲ್ಲ. ನಾನು ಪ್ರಪಂಚದೊಳಕ್ಕೆ ಕಾಲಿಡುತ್ತಿದ್ದೇನೆ. ಗುಡ್ ಬೈ ಎಂದು ನಯವಂಚಕ ನಾಯಕನ ಮುಖಕ್ಕೆ ಕ್ಯಾಕರಿಸಿ ಉಗಿದು ಹೋಗಿ ಬಿಡುತ್ತಾಳೆ ನಾಯಕಿ. ಆ ಕಾದಂಬರಿಯ ನಾಯಕ ಲೇಖಕ ಕೆಟ್ಟ ಮನುಷ್ಯ."

'ರಾಗಸಂಗಮ'

ಲಾಟರಿ ಡ್ರಾ – ೧೧ಳರ ವಿಜೇತರು



ಓ. ಪ್ರೇಮ

ಕುದುರೆಗುಂಡಿ – 577 127

ಚಿಕ್ಕಮಗಳೂರು ಜಿಲ್ಲೆ.

"ತುಂಬ ಚೆನ್ನಾಗಿ ಹೇಳಿದಿರಿ."

"ನಿಮಗೆ ಕೇಳೋ ತಾಳ್ಮೆ ಇದ್ದರೆ ಲೇಖಕರು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಯೊಂದನ್ನು ಹೇಳ್ತೇನೆ."

"ಹೇಳಿ."

"ಒಮ್ಮೊಮ್ಮೆ ಒಳ್ಳೊಳ್ಳೆ ಹೆಸರು ಫ್ಲಾಷ್ ಆಗುತ್ತೆ. ಆ ಹೆಸರಿಗೆ ಅನುಗುಣವಾಗಿ ಕತೆಯನ್ನು ಬೆಳೆಸುತ್ತಾರೆ ಲೇಖಕರು. ಯಾಕೆಂದರೆ ಒಳ್ಳೆಯ ಹೆಸರನ್ನು ಬಿಟ್ಟು ಬಿಡಲು ಅವರಿಗೆ ಇಷ್ಟವಿರುವುದಿಲ್ಲ. ಒಮ್ಮೆ ನನಗೊಂದು ಹೆಸರು ಹೊಳೆಯಿತು, ಆ ಹೆಸರಿಗೆ ಅನುಗುಣವಾಗಿ ಕತೆಯೊಂದನ್ನು ಬರೆಯಬೇಕೆಂದುಕೊಂಡೆ, ತಲೆ ಕೆಡಿಸಿಕೊಂಡೆ. ಆದರ ಹೆಸರಿಗೆ ಸೂಕ್ತವಾದ ಕತೆಯೇ ಸಿಗಲಿಲ್ಲ. ಬೇಸರವಾಗಿ ಕತೆ ಬರೆಯುವ ನಿರ್ಧಾರ ಕೈಬಿಟ್ಟು ಹೆಸರನ್ನೇ ಯಾರಿಗಾದರೂ ಮಾರಿಬಿಡೋಣ ಅಂತ ಅಂದುಕೊಂಡೆ. ಆದರೆ ಯಾರೂ ಬರಲಿಲ್ಲ ಹೆಸರನ್ನು ಖರೀದಿ ಮಾಡಲು. ಸುಮ್ಮನಾಗಿ ಬಿಟ್ಟೆ."

ಅವಳಿಗೆ ನಗು ತಡೆಯಲಾಗಲಿಲ್ಲ, ಬಿದ್ದು ಬಿದ್ದು ನಕ್ಕಳು.

"ಕತೆಗೆ ಸೂಕ್ತವಾದ ಹೆಸರು ಸಿಗಬಹುದೇನೋ, ಆದರೆ ಹೆಸರಿಗೆ ತಕ್ಕ ಕತೆಯನ್ನು ಹೊಂದಿಸುವುದು ತುಂಬ ಕಷ್ಟ." ಕೈಗಡಿಯಾರದತ್ತ ಕಣ್ಣಾಡಿಸಿದ ಕುಮಾರ್.

"ನಿಮ್ಮ ಸಮಯವನ್ನು ವೇಸ್ಟ್ ಮಾಡಿಬಿಟ್ಟೆ ನಾನು. ಐಯಾಮ್ ಸಾರಿ."

"ಹಾಗೇನೂ ಇಲ್ಲ, ನಿಜಕ್ಕೂ ಇವತ್ತು ಸಂಜೆ ನಾನೆಷ್ಟೋ ವಿಷಯ ತಿಳಿಕೊಂಡಂತಾಯಿತು."

"ನನಗೂ ಅಷ್ಟೇ ಮಾಧವಿ ಅವರೇ, ಲೇಖಕರಿಗೆ ಸಾಹಿತ್ಯ ಚರ್ಚೆಯಲ್ಲಿ ಸಿಗುವಷ್ಟು ಆನಂದ ಮತ್ಯಾವ ಚರ್ಚೆಯಿಂದಲೂ ಸಿಗೋದಿಲ್ಲ."

ಅಷ್ಟರಲ್ಲಿ ಫೋಣಿಸಿ ಮುಗಿಸಿದ್ದ ಮಲ್ಲಿಗೆ ಚೆಂಡನ್ನು ಕುಮಾರ್‌ನ ಕೈಗೆ ಕೊಟ್ಟು "ನಾನು ಆ ಮನೆಗೆ ಬರೋದಕ್ಕೆ ತಡವಾಗಬಹುದು. ಈ ಮಲ್ಲಿಗೆ ಚೆಂಡನ್ನು ವಸೂಗೆ ಕೊಟ್ಟುಬಿಡಿ, ಇಫ್ ಯು ಡೋಂಟ್

ಮೈಂಡ್.''

"ವೈನಾಟ್, ಯಾಕೆ ನಿಮಗೆ ಬೇಡವಾ ಹೂವು?'' ಮಲ್ಲಿಗೆ ಚೆಂಡನ್ನು ತನ್ನ ಕೈಗಿತ್ತು ತನಗಾ ಏನೂ ಉಳಿಸಿಕೊಳ್ಳದವಳ ಮುಖ ನೋಡಿದ ಆತ.

ಒಂದು ಕ್ಷಣ, ಒಂದೇ ಒಂದು ಕ್ಷಣ ಸ್ತಬ್ಧಳಾಗಿ ನಿಂತುಬಿಟ್ಟಳು ಮಾಧವಿ. ಅನಂತರ ಅವ ಕಣ್ಣಾಲಿಗಳಿಂದ ಮಿನುಗಿತು ನೀರು. ಸೆರಗಂಚಿನಿಂದ ಕಂಬನಿ ಒರೆಸಿಕೊಂಡು ಏನೂ ಹೇಳ ಮನೆಯೊಳಕ್ಕೆ ಹೊರಟು ಹೋಗುತ್ತಾಳೆ ಮಾಧವಿ.

ಕುಮಾರ್‌ನಿಗೆ ಆಶ್ಚರ್ಯ. ಮಾಧವಿಯ ಕಣ್ಣಲ್ಲಿ ನೀರು ನೋಡಿ ಅವನು ತುಂಬ ನೊಂದುಕೊಂ ತಾನೇನೋ ತಪ್ಪಾಗಿ ಹೇಳಲಿಲ್ಲವಲ್ಲ, ಎಲ್ಲ ಹೂಗಳನ್ನು ತನಗೆ ಕೊಟ್ಟು ಬಿಟ್ಟ ಕಾರಣ 'ನಿಮ ಬೇಡವಾ ಹೂವು' ಅಂತ ಕೇಳಿದನೇ ಹೊರತು ಬೇರೆ ಏನೂ ಹೇಳಲಿಲ್ಲ. ಅಷ್ಟಕ್ಕೆ ಕಣ್ಣೀರಿಟ್ಟುಬಿಟ್ಟ ಏನೆಂದು ಅರ್ಥೈಸಿಕೊಳ್ಳಬೇಕು. ಮನೆಯೊಳಗೆ ಹೋಗಿ ಮಾಧವಿಯನ್ನೇ ನೇರವಾಗಿ ಕೇಳಿಬಿಡಲ ಎನ್ನಿಸಿತು, ಮರುಕ್ಷಣ ಬೇಡವೆನ್ನಿಸಿತು. ಮನೆಯ ದಾರಿ ಹಿಡಿದ.

ರಾತ್ರಿ ಒಂಬತ್ತಾದರೂ ಮಾಧವಿ ಬಾರದಿದ್ದಾಗ, ಲಕ್ಷ್ಮಿಯೊಂದಿಗೆ ಪುಟ್ಟನನ್ನು ಕಳಿಸಿಬಿಟ್ಟ ವಸಂತ.

ಊಟದ ಮೇಜಿನ ಮುಂದೆ ಕುಳಿತಿರುವಾಗ ಕೇಳುತ್ತಾನೆ ಕುಮಾರ್.

"ಮಾಧವಿಗೆ ಹೂವು ಮುಡಿದುಕೊಳ್ಳೋಕ್ಕೆ ಆಶೆ ಇಲ್ವಾ?''

"ಹೂಗಳ ಬಗ್ಗೆ ಆಶೆ ಇಲ್ಲದ ಹೆಣ್ಣು ಎಲ್ಲಾದರೂ ಇರ್ತಾಳಾ?'' ನಕ್ಕಳು ವಸಂತ.

"ಮತ್ತೆ ಸಾಯಂಕಾಲ ಮಾಧವಿ ಎಲ್ಲ ಮಲ್ಲಿಗೆಗಳನ್ನೂ ನಿನಗೇ ಕೊಟ್ಟುಬಿಟ್ಟಳಲ್ಲ?'' ಕುಮಾ ಕೇಳಿದ.

ಉತ್ತರಿಸುವ ಮುಂಚೆ ಭಾರವಾದ ನಿಡುಸುಯ್ದಳು ವಸಂತ.

"ಮಾಧವಿಗೆ ಹೂ ಮುಡಿಯುವ ಅದೃಷ್ಟವಿಲ್ಲ, ಅವಳು ವಿಧವೆ.''

* * * * *

ಮೂರನೆಯ ದಿನ ಅಂದರೆ ಸೋಮವಾರ ಎಂದಿನಂತೆ ಬಂದಳು ಮಾಧವಿ. ಶ್ರೀಧರ ಹಳ್ಳಿಯಲ್ಲಿರಲಿಲ್ಲ, ನರ್ಸಿಂಗ್ ಹೋಂ ಕೆಲಸದ ನಿಮಿತ್ತ ಮತ್ತೆ ಹೈದರಾಬಾದ್‌ಗೆ ಹೋಗಿದ್ದರಿಂ ವಸಂತ, ಕುಮಾರ್ ಹಾಗೇ ತಿರುಗಾಡಿ ಬರಲು ಹೊರಟಿದ್ದರು. ಅವರಿನ್ನೇನು ಗೇಟು ದಾಟಬೇಕ ಅಷ್ಟರಲ್ಲಿ ಎದುರಾದಳು ಮಾಧವಿ.

"ನೀವಿಬ್ಬರೂ ಹೋಗಿ ಬನ್ನಿ'' ಮನೆಯಲ್ಲೇ ಇರಲು ಕುಮಾರ್ ನಿರ್ಧರಿಸಿದಾಗ "ಪರವಾಗಿಲ್ ಬಾರೋ'' ಅಂತ ಅವನ ರಟ್ಟೆ ಹಿಡಿದು ಕರೆದೊಯ್ದಳು ವಸಂತ.

ಹಳ್ಳಿಯ ಆಚೆ ಒಂದು ಪುಟ್ಟ ನದಿ ಇದೆ. ನದಿಯ ಇಕ್ಕೆಲ ದಂಡೆಯಲ್ಲಿ ಅಚ್ಚ ಬಿಳಿ ಮರ ದಂಡೆ. ಮರಳ ದಂಡೆಯಲ್ಲಿ ಕುಳಿತರು ಮೂವರೂ. ಕಾವು ಇಂಗಿದ್ದ ಮರಳಲ್ಲಿ ಪುಟ್ಟ ಪುಟ್ಟ ಮ ಕಟ್ಟುವ ಪುಟಾಣಿಗಳು, ನದಿಯ ಮಧ್ಯೆ ತೆಪ್ಪಗಳ ಮೇಲೆ ಕುಳಿತು ಮೀನಿಗಾಗಿ ಬೇಟೆಯಾಡು ಬೆಸ್ತರು. ನದಿಯ ಮತ್ತೊಂದು ದಂಡೆಯಾಚೆ ದಟ್ಟ ಕಾಡು. ಹಿಮ್ಮೇಳದಲ್ಲಿ ಹಳದಿ ಕೆಂಪು ಮಿಶ್ರಿ ನೇಸರ ಕಾಂತಿ. ಮೂವರ ನಡುವೆ ಗಾಢ ನೀರವತೆ ನೆಲೆಸಿತು ತುಂಬ ಸಮಯ. ಕೊನೆಗೆ ಅದನ್ನು ಬಗೆದವಳು ಮಾಧವಿಯೇ.

"ಶ್ರೀಧರಣ್ಣ ಈ ನರ್ಸಿಂಗ್ ಹೋಂ ಗಲಾಟೆಯಲ್ಲಿ ಆರೋಗ್ಯದ ಕಡೆ ಅಷ್ಟಾಗಿ ಗಮನ ಕೊಡ್ತಿಲ್ಲಾಂತ ಅನ್ಸುತ್ತೆ.''

ಮಾಧವಿಯ ಮೌನಭೇದದ ಮಾತು ಕೇವಲ ಔಪಚಾರಿಕವಾಗಿತ್ತು. ನಿಟ್ಟುಸಿರು ಹಾಕುತ್ತಾ ವಸಂತ. "ನಾನೆಷ್ಟು ಹೇಳಿದ್ರೂ ಕೇಳೋದಿಲ್ಲ ಮಧೂ. ಎರಡೆರಡು ದಿವಸಕ್ಕೊಮ್ಮೆ ಹೈದರಾಬಾದ್‌ಗ

ಹೋಗಿಬಿಡ್ತಾರೆ. ಇಲ್ಲಿ ಕುಮಾರ್ ಇರೋದ್ರಿಂದ ಪರವಾಗಿಲ್ಲ.'' ಅಣ್ಣನತ್ತ ವಾರೆನೋಟ ಬೀರಿ "ಇವನೇನೋ ಕತೆ ಬರಿಬೇಕೂಂತ ಇಲ್ಲಿಗೆ ಬಂದ್ರೆ ಪಾಪ ನಮ್ ತಲೆನೋವು ಕೂಡ ಇವನ ತಲೆಗೆ ಕಟ್ಟಿಬಿಟ್ಟಿದ್ದೇವೆ.''

ಕುಮಾರ್‌ನ ಮುಖ ನೋಡಿ ನಕ್ಕಳು ಮಾಧವಿ. "ಇದರಲ್ಲಿ ಈ ಲೇಖಕ ಸಾಹೇಬರಿಗೆ ಹೇಳಿಕೊಳ್ಳುವಂತಾ ತಲೆನೋವೇನೂ ಇರೋದಿಲ್ಲ ಬಿಡು ವಸೂ. ನೀನು ಏನೇ ತೊಂದರೆ ಕೊಟ್ಟರೂ ಅದನ್ನು ಯಾವುದಾದ್ರೂ ಒಂದು ಕತೇಲಿ ಬರೆದು ಬಿಡ್ತಾರೆ.''

"ನನ್ನ ಮನಸಲ್ಲಿರೋ ಆಲೋಚನೆಗಳನ್ನು ಸರಿಯಾಗಿ ಗ್ರಹಿಸಿಬಿಡ್ತೀರಿ ನೀವು.'' ಕುಮಾರ್ ಮೆಚ್ಚಿಕೊಳ್ಳುತ್ತಾನೆ.

"ಹಾಗಾದ್ರೆ ಮಧೂ ಹೇಳಿದು ಸತ್ಯವೇನಾ?'' ವಸಂತ ಕೇಳಿದಳು.

'ಹೌದು' ಎಂದು ತಲೆಯಾಡಿಸಿದ ಕುಮಾರ್. "ಈಗ ನಾನು ಬರೀತಿರೋ ಕಾದಂಬರಿಯಲ್ಲಿ ವೈದ್ಯನೊಬ್ಬ ನರ್ಸಿಂಗ್ ಹೋಂ ನಿರ್ಮಿಸುವ ಪ್ರಯತ್ನವನ್ನು ಯಥಾರೂಪದಲ್ಲಿ ಚಿತ್ರಿಸಲು ನಿರ್ಧಾರಮಾಡಿದ್ದೇನೆ.''

"ಹಾಗಾದರೆ ಶ್ರೀಧರಣ್ಣ ತಂದೆಯಾಗಲಿರುವ ಸನ್ನಿವೇಶ?'' ಮಾಧವಿ ಕೇಳಿದಳು.



ಗೆಳತಿ

ಪ್ರೀತಿ ಮೂಡದ
ಬರಡು ಹೃದಯ
ಎಂದು ಜರಿಯದಿರು
ತಿಳಿಸುವ ಕಲೆ
ನಾ ಅರಿಯೆ.

— ಬಿ. ಪ್ರಭಾಕರ ವರ್ಮ

"ಅದನ್ನು ನೀವು ಬರೆದುಬಿಡಿ.'' ಹೇಳಿ ನಕ್ಕುಬಿಟ್ಟ ಕುಮಾರ್.

"ನನಗೆ ಒಂದೇ ಒಂದು ವಾಕ್ಯ ಕೂಡ ಬರೆಯೋ ಶಕ್ತಿ ಇಲ್ಲ.''

"ಒಂದ್ಕೆಲಸ ಮಾಡ್ತೀನಿ. ನಿಮ್ಮ ಪಾತ್ರವನ್ನೂ ನನ್ನ ಕಾದಂಬರಿಯಲ್ಲಿ ಉಪಯೋಗಿಸಿಕೊಂಡು...''

ಕುಮಾರ್‌ನ ಮಾತಿಗೆ ತಡೆಹಾಕಿ ಹೇಳಿದಳು "ಶ್ರೀಧರಣ್ಣ, ವಸಂತ ಮುಂತಾದವರನ್ನು ಪಾತ್ರಗಳ ಮೂಲಕ ಸೃಷ್ಟಿಸಿದರೆ ಅದಕ್ಕೊಂದು ಅರ್ಥವಿರುತ್ತೆ. ನನ್ನಂಥವಳನ್ನು ಪ್ರೇರಣೆಯಾಗಿಟ್ಟುಕೊಂಡರೆ ಯಾವ ಪಾತ್ರ ಕೂಡ ಶೋಭಿಸುವುದಿಲ್ಲ.''

"ನಿಮಗ್ಯಾಕೆ ಈ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್?''

"ಇದು ಯಾವ ಕಾಂಪ್ಲೆಕ್ಸೂ ಅಲ್ಲ, ರಿಯಾಲಿಟಿ. ನನ್ನ ಬದುಕು ಗರಿಕೆ ಹುಲ್ಲಿಗೆ ಸಮ. ಪರಿಮಳ ರಹಿತವಾಗಿ ಎಲ್ಲೋ ಹುಟ್ಟಿ ನಾಶವಾಗಿಬಿಡುತ್ತದೆ.''

ವಸಂತ ನೊಂದುಕೊಂಡಂತೆ ಮಾಧವಿಯ ಮುಖ ನೋಡುತ್ತಾಳೆ. ಆದರೆ ಮಾಧವಿಯ ವದನ ಭಾವರಹಿತವಾಗಿದೆ. ತಟ್ಟನೆ ಹೇಳಿದ ಕುಮಾರ್.

"ನನ್ನ ಅಭಿಪ್ರಾಯದಲ್ಲಿ ಗರಿಕೆ ಹುಲ್ಲಿಗೂ ಕೂಡ ಗುಲಾಬಿ ಅಥವಾ ಸಂಪಿಗೆಗೆ ಇರುವ ಸ್ಥಾನವೇ ಇದೆ. ಪರಿಮಳಶೂನ್ಯವಾಗಿದ್ದರೂ ಅವುಗಳ ಹಿರಿಮೆ ದೊಡ್ಡದು. ತಮ್ಮೆಲ್ಲ ನೋವನ್ನು ನುಂಗಿ ಗಾಳಿಗೆ ನರ್ತಿಸುತ್ತವೆ.''

"ನರ್ತಿಸುವುದೂ ಒಂದು ಪ್ರಯೋಜನವೇನಾ." ನಗುತ್ತಾಳೆ ಮಾಧವಿ.

"ಯಾಕಾಗೋದಿಲ್ಲ."

ಅವರಿಬ್ಬರ ವಾದ ವಿವಾದಕ್ಕೆ ತಡೆಹಾಕುತ್ತಾಳೆ ವಸಂತ. ಅನಂತರ ಮೂವರೂ ಅದು ಇದ ಮಾತಾಡುತ್ತ ಕುಳಿತರು. ದಕ್ಷಿಣದಿಕ್ಕಿನಿಂದ ತೇಲಿಬಂದ ಕಾರ್ಮೋಡಗಳು ನದಿಯ ನೆತ್ತಿಯ ಮೇ ಜಮಾಯಿಸತೊಡಗಿದಾಗ ಮಳೆ ತಟಪಟಿಸಬಹುದೆಂದು ಮೇಲೆದ್ದರು.

* * * * *

ವಸಂತಳ ಅಮ್ಮ ಮಗಳಿಗೆ ಕಾಗದ ಹಾಕಿದರು. 'ಮುಂದಿನ ವಾರದಲ್ಲಿ ನಾನು ಬಂದ ಸೀಮಂತ ಮಾಡಿ ಕರ್ಕೊಂಡು ಹೋಗ್ತೇನೆ.' ಕಾಗದ ನೋಡುತ್ತಲೇ ವಸಂತ ಹಿಗ್ಗಿ ಹೀರೇಕಾಯಿ ಆಗಲಿಲ್ಲ, ತಳಮಳಿಸಿದಳು. ಮಾಧವಿ ಇಲ್ಲಿಗೆ ಬಂದ ಕಳೆದೆರಡು ವರ್ಷಗಳಿಂದ ತಾನು ತನ್ನ ತಾಯಿ ಇಲ್ಲಿಗೆ ಬರದಂತೆ ಎಚ್ಚರಿಕೆ ತೆಗೆದುಕೊಂಡಿದ್ದಳು. ಅಮ್ಮ ಇಲ್ಲಿಗೆ ಬರುವ ಸೂಚನೆ ಇದ್ದಾಗಲೆಲ್ಲ ತಾನೇ ಅಮ್ಮನ ಮನೆಗೆ ಮುಂಚಿತವಾಗಿ ಧಾವಿಸಿ, ಒಂದು ವಾರವಿದ್ದು ಬರ್ತಿದ್ದಳು. ಎರಡು ವರ್ಷ ಅವಧಿಯಲ್ಲಿ ಏಳೆಂಟು ಬಾರಿ ಹೀಗೆ ಮಾಡಿದ್ದುಂಟು. ಆಕೆ ಇಷ್ಟೆಲ್ಲ ಮಾಡಿದ್ದು ಮಾಧವಿಯನ್ನು ಗಮನದಲ್ಲಿಟ್ಟುಕೊಂಡೇ. ಮಾಧವಿ ತನ್ನ ಬಳಿ ಇರುವುದು ಯಾರಿಗೂ ತಿಳಿಯಕೂಡದು, ಕೊನೆಗೆ ತನ್ನ ತಾಯಿಗೂ ಕೂಡ.

ಇಂತಾ ಸ್ಥಿತಿಯಲ್ಲಿ ಕೊನೆಗೂ ಅಮ್ಮ ಬರುತ್ತಿದ್ದಾಳೆ. ಈ ಬಾರಿ ಆಕೆಯ ಆಗಮನವನ್ನು ತಡೆಯಲು ಸಾಧ್ಯವಿಲ್ಲವೇನೋ? ಅಮ್ಮ ಇಲ್ಲಿರುವುದು ಮೂರು, ನಾಲ್ಕು ತಿಂಗಳಾದರೂ ಮಾಧವಿಯನ್ನು ಇಲ್ಲಿಗೆ ಬರದಂತೆ ಹೇಗೆ ತಡೆಯಬೇಕು. ನೇರವಾಗಿ ಅವಳಿಗೆ ಹೇಳಿಬಿಟ್ಟರೆ, ಇಲ್ಲ ಅದು ಸಾಧ್ಯವಿಲ್ಲ. ಮಾಧವಿ ಇಲ್ಲದೆ ತನ್ನ ಸೀಮಂತ ಆಗುವುದಿಲ್ಲ.

ಈ ಸಂದಿಗ್ಧ ಸ್ಥಿತಿಯ ಬಗ್ಗೆ ಶ್ರೀಧರ್‌ನೊಟ್ಟಿಗೆ ಚರ್ಚಿಸೋಣವೆಂದರೆ ಶ್ರೀಧರ್‌ನಿಗಂತೂ ಬಿಡುವೇ ಸಿಗುತ್ತಿಲ್ಲ. ಹೈದರಾಬಾದ್‌ನಿಂದ ಬಂದಿರುವ ಸಿವಿಲ್ ಇಂಜಿನಿಯರ್ ಒಬ್ಬರೊಂದಿಗೆ ನರ್ಸಿಂಗ್ ಹೋಂ ನಿರ್ಮಿಸಲು ಉದ್ದೇಶಿಸಿರುವ ಸೈಟಿನ ಬಳಿಯೇ ಮೊಕ್ಕಾಂ ಹೂಡಿಬಿಟ್ಟಿದ್ದಾನೆ ಮನೆಗೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ಇನ್ನೆರಡು ಮೂರು ದಿನಗಳಲ್ಲಿ ನಿರ್ಮಾಣದ ಕೆಲಸ ಶುರುವಾಗಲಿರುವುದರಿಂದ ಬಿಡುವಿಲ್ಲದ ಕೆಲಸ ಶ್ರೀಧರ್‌ನಿಗೆ. ಮಾಧವಿ ಎಂದಿನಂತೆ ಸಂಜೆ ಮನೆಗೆ ಬರುವವರೆಗೂ ಅಮ್ಮನ ಪತ್ರದ ಬಗ್ಗೆಯೇ ಯೋಚಿಸುತ್ತ ಇದ್ದುಬಿಟ್ಟಳು ವಸಂತ. ಆದರೆ ಮಾಧವಿ ಬಂದ ಮೇಲೆ ಅವಳಿಗೆ ಹೇಳಲಿಲ್ಲ.

ಆರು

ಕಾಲಚಕ್ರದಲ್ಲಿ ಮತ್ತೆರಡು ದಿನಗಳು ಉರುಳಿದವು.

ಎಡೆಬಿಡದೆ ಮಳೆ ಸುರಿಯುತ್ತಿರುವುದರಿಂದ ಮಾಧವಿ ವಸಂತಳ ಮನೆಗೆ ಹೋಗಲು ಸಾಧ್ಯವಾಗಲಿಲ್ಲ. ತನ್ನ ಮನೆಯಲ್ಲೇ ಉಳಿದುಕೊಂಡಳು. ಈ ನಲವತ್ತೆಂಟು ತಾಸುಗಳ ಅವಧಿಯಲ್ಲಿ ತನ್ನ ಕಾದಂಬರಿಯ ಮುಕ್ತಾಯದ ಸೃಷ್ಟಿಯಲ್ಲಿದ್ದುಬಿಟ್ಟ ಕುಮಾರ್. ಕೈ ತೋಟಕ್ಕೆ ಮುಖ ಮಾಡಿಕೊಂಡಿದ್ದ ಕಿಟಕಿಯ ಈಚೆ ಕುರ್ಚಿ ಮೇಜೆಳೆದುಕೊಂಡು ಕೂತು, ತೆಂಗಿನ ಸೋಗೆಯ ತೊಯ್ದು ಎಳೆ ಎಳೆಗಳಾಗಿ ಧಾರೆಯಾಗುವ ಮುಂಗಾರು ಮಳೆಯ ಸೌಂದರ್ಯ ನೋಡುತ್ತ ಅವನು ಅಚ್ಚರಿ ಹುಟ್ಟಿಸುವ ವೇಗದಲ್ಲಿ ಕಾದಂಬರಿಯನ್ನು ಮುಗಿಸಿ ಬಿಡುತ್ತಾನೆ. ಮಾಧವಿಗೆ ಅಂತಿಮ ಅಧ್ಯಾಯ ಓದಲು ಕೊಟ್ಟು ಅಭಿಪ್ರಾಯ ತಿಳಿದುಕೊಳ್ಳಬೇಕೆಂಬ ಅಪೇಕ್ಷೆ. ಆದರೆ ಮಾಧವಿಯೇ ಪತ್ತೆಯಿಲ್ಲ.

ಮಾರನೆಯ ದಿವಸ ಮಳೆರಾಯ ತುಸು ವಿಶ್ರಾಂತಿ ತೆಗೆದುಕೊಂಡಾಗ ಕುಮಾರ್ ಹಸ್ತಪ್ರತಿಯೊಂದಿಗೆ ಮಾಧವಿಯ ಮನೆಗೆ ಹೊರಟ. ಕೇವಲ ತನ್ನ ಕಾದಂಬರಿ ತೋರಿಸುವುದೊಂದೇ ಕಾರಣವಲ್ಲ. ಕೆಲವೇ ದಿನಗಳಲ್ಲಿ ಕುಮಾರ್ ತನ್ನ ಊರಿಗೆ ವಾಪಾಸಾಗಲಿರುವುದು ಮುಖ್ಯ ಕಾರಣ.

ತನ್ನ ಮನೆಯ ಮುಂದಿನ ಗಾರ್ಡನ್‌ನಲ್ಲಿ ಆಗತಾನೆ ಮೆಲ್ಲಮೆಲ್ಲಗೆ ಚಿಗುರುತ್ತಿರುವ ಗಿಡಗಳ ನಡುವೆ ಕುರ್ಚಿಯಲ್ಲಿ ಕುಳಿತು ಯಾವುದೋ ಪುಸ್ತಕ ಹಿಡಿದು ಕುಳಿತಿರುವ ಮಾಧವಿಯನ್ನು, ಅವಳ ಹೆಸರಿಡಿದು ಕೂಗುವ ಮುಂಚೆ ದಿಟ್ಟಿಸುತ್ತಾನೆ ಕುಮಾರ್. ಆಕಾಶ ನೀಲಿಬಣ್ಣಧ ಸೀರೆಯಲ್ಲಿ, ಕಾರ್ಮೋಡಗಳ ನಡುವೆ ಸೀಳೋಡೆಯುವ ಮಿಂಚಿನಂತೆ ಕಂಗೊಳಿಸುತ್ತಿದ್ದಾಳೆ ಮಾಧವಿ. ಅರೆ ನಿಮಿಷ ಅವಳ ಚೆಲುವಿಗೆ ಬೆರಗಾದ. ಮುಂದಿನ ನಿಮಿಷದಲ್ಲಿ ವಾಸ್ತವಕ್ಕೆ ಬಂದು ಮರದ ಗೇಟು ತೆರೆದು ಒಳ ನಡೆದ. ಗೇಟಿನ ಶಬ್ದಕ್ಕೆ ಕತ್ತೆತ್ತಿ ಅನಿರೀಕ್ಷಿತ ಅತಿಥಿಯನ್ನು ನೋಡಿ ಎದ್ದು ನಿಂತು "ಬನ್ನಿ" ಎಂದಳು ಮುಗುಳುನಕ್ಕು. ಆಮೇಲೆ ಅವಳಿಗೆ ನೆನಪಾಯಿತು ಅಲ್ಲಿರುವುದು ಒಂದೇ ಒಂದು ಕುರ್ಚಿ ಎಂದು, ಕೂಡಲೇ ವರಾಂಡಕ್ಕೆ ಹೋಗಿ ಮತ್ತೊಂದು ಕುರ್ಚಿ ತಂದಳು. ಇಬ್ಬರೂ ಎದುರುಬದುರಾಗಿ ಕೂರುತ್ತಾರೆ.



ಅನುಭವದ ಸಂಪತ್ತೇ ಸಾಹಿತ್ಯದ ಜೀವ, ಜೀವಾಳ.

— ಅ. ನ. ಕೃ.

ನೀತಿ ಎನ್ನುವುದು ವ್ಯಕ್ತಿಗತವಾದ ಬಹು ಬೆಲೆ ಬಾಳುವ ಭೋಗವಸ್ತು.

— ಎಚ್. ಬಿ. ಅಡಮ್ಸ್

ಸಂಗ್ರಹ : ಹ. ಸಾ. ಶ್ರೀ.

ನೀಲಿಬಣ್ಣದ ಸೀರೆಯಲ್ಲಿ ಕುಳಿತಿರುವ ಅವಳನ್ನು ನೋಡಿ ಅವನಿಗೆ ಮತ್ತೆ ಅನ್ನಿಸಿತು ನೀಲಕಡಲ ತೆರೆಗಳ ಮಧ್ಯೆ ಬಿಳಿಯ ತಾವರೆಯೇ ಇವಳು. ಒಂದು ಗಳಿಗೆ ಆತ ಸಂಸ್ಕಾರ, ಸಭ್ಯತೆಗಳನ್ನು ಬದಿಗೊತ್ತಿದ. ಕೆಲನಿಮಿಷ ಸಾಹಿತ್ಯದ ಬಗ್ಗೆ ಮಾತಾಡಿದರು. ಆ ಮೇಲಷ್ಟೇ ಅವಳಿಗೆ ನೆನಪಾದದ್ದು ಅತಿಥಿ ಸತ್ಕಾರ ಮಾಡಲು ತಾನು ಮರೆತೆ ಎಂಬುದು. ಮತ್ತೆ ಮನೆಯೊಳಕ್ಕೆ ಓಡುತ್ತಾಳೆ. ಓಡುವಾಗ ರೇಶಿಮೆಯ ಕೇಶರಾಶಿ ನಿಶ್ಶಬ್ದ ಕಡಲಂತೆ ಏರಿಳಿಯುತ್ತದೆ.

ಕಾಫಿ ಬಟ್ಟಲುಗಳೊಂದಿಗೆ ಬಂದಾಗ ಅವಳ ಕೇಶರಾಶಿ ಹಿಂದಿನಂತೆ ಬಿಚ್ಚಿಕೊಂಡು ಹರಡಿರಲಿಲ್ಲ, ಗಂಟುಗೊಂಡಿತ್ತು. ಕಾಫಿ ಬಟ್ಟಲು ಇಸಿದುಕೊಂಡು ಮುಗುಳು ನಗುವ ಲೇಖಕನಿಗೆ ಕೇಳಿದಳು ಮಾಧವಿ.

"ಪನಿಶ್‌ಮೆಂಟ್ ಕೊಡ್ತಿದ್ದೀನೀಂತ ತಿಳ್ಕೋಬೇಡಿ."

"ಇಲ್ಲ, ಕೆಲ ಪನಿಶ್‌ಮೆಂಟುಗಳು ತುಂಬ ಸಿಹಿಯಾಗಿರುತ್ತವೆ."

"ಚೆನ್ನಾಗಿ ಮಾತಾಡ್ತೀರಿ ನೀವು." ಮಾಧವಿ ಕೂಡ ನಗುತ್ತಾಳೆ.

"ಕಾದಂಬರಿ ಪೂರ್ತಿ ಮಾಡಿದ್ರಾ?"

"ಅಂತಿಮ ಅಧ್ಯಾಯ ಡ್ರಾಫ್ಟ್ ಮಾಡಿದ್ದೇನೆ, ಕರಡು ಪ್ರತಿ ಬರೆದಿಲ್ಲ. ಅಂದಹಾಗೆ ನೀವ್ಯಾಕೆ ಎರಡು ದಿನಗಳಿಂದ ಬರಲಿಲ್ಲ."

ಹಸ್ತಪ್ರತಿಯನ್ನು ಮಾಧವಿಯ ಕೈಗೆ ಕೊಡಲಿಲ್ಲ ಕುಮಾರ್.

ಇನ್ನೂ ಸ್ವಲ್ಪ ಹೊತ್ತು ಮಾತಾಡಿ ಆಮೇಲೆ ಹಸ್ತಪ್ರತಿ ಕೊಡುವುದು ಅವನ ಉದ್ದೇಶ.

ಅವನ ಪ್ರಶ್ನೆಗೆ ಉತ್ತರಿಸಿದಳು "ನಿಮಗೇ ಗೊತ್ತಿರೋ ಹಾಗೆ ಎರಡು ಮೂರು ದಿನಗಳಿಂದ ಜಡಿಮಳೆ. ಆದಕ್ಕೇ ಬರಲಿಕ್ಕಾಗಲಿಲ್ಲ."

"ಕಾರಣ ಏನೇ ಇರಬಹುದು, ನೀವು ಬರದಿದ್ದ ದಿನ ವಸಂತ ಏನನ್ನೋ ಕಳೆದುಕೊಂಡವಳ ಹಾಗಿರುತ್ತಾಳೆ."

"ನಮ್ಮಿಬ್ಬರ ಮಧ್ಯೆ ಸ್ನೇಹ ಅಷ್ಟು ಗಾಢವಾಗಿದೆ." ನಕ್ಕು ಮತ್ತೆ "ವಸಂತಳಿಗೆ ನನ್ನನ್ನು ಬಿಟ್ಟು ಇರಲಿಕ್ಕೆ ಸಾಧ್ಯವೇ ಇಲ್ವಂತೆ." ಕಿಲಕಿಲ ನಕ್ಕ ಮಾಧವಿಯನ್ನು ನೋಡಿ ಆತ ವಿಸ್ಮಿತನಾಗುತ್ತಾನೆ.

"ನಿಮ್ಮನ್ನು ನೋಡದಿದ್ದರೆ ಹುಚ್ಚರಾಗಿಬಿಡುವವರ ಬಗ್ಗೆ ನಿಮಗೆ ಅನುಕಂಪ ಇಲ್ವಾ, ನಗ್ತಿದ್ದೀರಲ್ಲ."

"ಕೇವಲ ವ್ಯಕ್ತಿ ಪ್ರೀತಿ ಬೆಳೆಸಿಕೊಳ್ಳುವವರನ್ನು ನೋಡಿ ನಗಲಾರದೆ ಇನ್ನೇನು ಮಾಡ್ಲಿ."

"ಹಾಗಾದರೆ ಪ್ರೀತಿಸುವುದು ತಪ್ಪೆನ್ನುತ್ತೀರಾ?"

"ಪ್ರೀತಿಸುವುದು ತಪ್ಪೇನಲ್ಲ, ಆದರೆ ಪ್ರೀತಿ ಹುಚ್ಚಾಗಬಾರದಷ್ಟೆ" ಯಾಕೋ ಕುಮಾರ್‌ನ ಮುಖ ಪೆಚ್ಚಾಯಿತು. ಕೆಲ ಕ್ಷಣ ಆಕಾಶದತ್ತ ನೋಡುತ್ತ ಇದ್ದುಬಿಡುತ್ತಾನೆ. ಅದನ್ನು ಗಮನಿಸಿದಳು ಮಾಧವಿ.

"ನಾನು ತಮಾಷೆಗೆ ಹೇಳಿದ್ದಕ್ಕೆ ಅಷ್ಟೊಂದು ಬೇಸರ ಮಾಡಿಕೊಂಡುಬಿಟ್ರಾ."

"ಹಾಗೇನೂ ಇಲ್ಲ" ಕೃತಿಮ ನಗೆ ಹಾಕಲೆತ್ನಿಸುತ್ತಾನೆ. "ನಿಮಗೆ ಹೇಳೋದಕ್ಕೆ ಮರೆತು ಹೋಯ್ತು. ನಾನು ಸದ್ಯದಲ್ಲೇ ಊರಿಗೆ ವಾಪಾಸು ಹೋಗಲಿದ್ದೇನೆ."

"ಯಾಕೆ, ಇನ್ನೂ ಸ್ವಲ್ಪ ದಿನ ಇದ್ದು ಹೋಗಬಹುದಲ್ಲ?"

"ನನಗೂ ಸ್ವಲ್ಪ ದಿವಸ ಇದ್ದು ಹೋಗೋಣ ಅಂತಿದೆ. ಆದರೆ ಅಪ್ಪ ಅಮ್ಮ ವಾರಕ್ಕೊಂದು ಕಾಗದ ಬರೆದು ಬಾ ಅಂತ ಒತ್ತಾಯ ಮಾಡ್ತಿದ್ದಾರೆ."

"ವಸಂತ ಏನು ಹೇಳ್ತಾಳೆ?"

"ನನ್ನ ಸೀಮಂತ ಮುಗಿಸಿಕೊಂಡು ಹೋಗು ಅಂತಿದ್ದಾಳೆ." ಏನೂ ಪ್ರತಿ ನುಡಿಯಲಿಲ್ಲ ಮಾಧವಿ. ಆಕಸ್ಮಾತ್ತಾಗಿ ಕೇಳಿದ ಕುಮಾರ್.

"ಮದುವೆಯ ಬಗ್ಗೆ ನನ್ನ ಅಭಿಪ್ರಾಯದ ಬಗ್ಗೆ ನಿಮಗೆ ಗೊತ್ತಿರಬೇಕಲ್ಲ?"

ದುಪ್ಪಟ್ಟು ಚಕಿತತೆ ಅವಳಲ್ಲಿ. ಮಾತಾಡಲಿಲ್ಲ.

"ನನ್ನ ಅಭಿಪ್ರಾಯದ ಬಗ್ಗೆ ನಿಮ್ಮ ಅಭಿಪ್ರಾಯವೇನೂಂತ ನನಗೆ ವಸಂತ ಹೇಳಿದ್ದಾಳೆ. ಹೇಳಬೇಕಾದರೆ ನನ್ನ ಅಭಿಪ್ರಾಯವನ್ನು ಇಲ್ಲಿಯವರೆಗೂ ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ." ನೊಂದ ದನಿಯಲ್ಲಿ ಹೇಳಿದ ಆತ.

"ಒಬ್ಬರ ಅಭಿಪ್ರಾಯ ಮತ್ತೊಬ್ಬರಿಗೆ ಒಪ್ಪಿಗೆಯಾಗಬೇಕೂಂತ ಎಲ್ಲಿದೆ." ನಕ್ಕು ಕೇಳುತ್ತಾಳೆ ಮಾಧವಿ. "ಇಷ್ಟಕ್ಕೂ ನಿಮ್ಮ ಸಮಸ್ಯೆ ಏನು?" ಉತ್ತರಿಸುವ ಮುಂಚೆ ತಡಬಡಿಸಿದ ಕುಮಾರ್ "ಅದು... ಅದು... ನನ್ನ ಮದುವೆಗಾಗಿ ನನ್ನ ತಂದೆ ತಾಯಿ ತುಂಬ ಆತುರದಿಂದ ಕಾಯ್ತಿದ್ದಾರೆ. ಆದರೆ ನನ್ನ ಆಸೆ ಆಕಾಂಕ್ಷೆಗಳ ಪ್ರಕಾರ ಮದುವೆಯಾಗುವುದು ಅವರಿಗೆ ಇಷ್ಟವಿಲ್ಲ."

"ಈ ಸಮಸ್ಯೆಗೆ ಇರುವುದು ಎರಡೇ ಪರಿಹಾರ, ಒಂದು ಅವರಿಗಾಗಿ ನಿಮ್ಮ ಆದರ್ಶಕ್ಕೆ ತಿಲಾಂಜಲಿ ಕೊಡುವುದು ಅಥವಾ ಅವರನ್ನು ಧಿಕ್ಕರಿಸಿ ನಿಮ್ಮ ಮನ ಮೆಚ್ಚಿದವಳನ್ನು ಮದುವೆಯಾಗುವುದು."

"ಹೇಳಬೇಕೆಂದರೆ ನನಗೆ ಎರಡೂ ಪರಿಹಾರಗಳಾಗಿ ಕಾಣ್ತಿಲ್ಲ. ನುಂಗಲಾರದ ಬಿಸಿ ತುಪ್ಪದಂತಾಗಿದೆ ನನ್ನ ಸ್ಥಿತಿ."

ಮಾಧವಿ ಹೇಳಿದಳು, ಅವಳ ಹೇಳಿಕೆಯಲ್ಲಿ ಸಾಂತ್ವನವಿತ್ತು; ಅನುಕಂಪವೂ ಇತ್ತು.

"ನಾವು ಪ್ರೀತಿಸುವವರಿಗಾಗಿ ನಮ್ಮ ಹೃದಯ, ದೇಹಗಳನ್ನು ಪಣವಾಗಿ ಒಡ್ಡಿದರೆ ಅದಕ್ಕೊಂದು ಅರ್ಥವಿರುತ್ತೆ. ಪ್ರೇಮ ಸಾಹಿತ್ಯದಲ್ಲಿ ಬದುಕು ದುರ್ಭರ ಎನ್ನುವುದು ಎಲ್ಲರಿಗೂ ತಿಳಿದಿದೆ. ಆದರೆ ಕಲ್ಪನಾ ಸುಂದರಿಗಾಗಿ ವ್ಯರ್ಥವಾಗಿ ನಿರೀಕ್ಷಿಸುವುದು ಯಾವ ರೀತಿಯಲ್ಲಿ ಪ್ರಯೋಜನಕಾರಿ ಅಂತ ನೀವೇ ಹೇಳಿ. ಕೊನೇ ಪಕ್ಷ ಕಾಲ್ಪನಿಕ ಜಗತ್ತಿನಲ್ಲಿ ವಿಹಾರ ಮಾಡುವವರಿಗೂ ನಿರೀಕ್ಷೆ ತೃಪ್ತಿ ಕೊಡುವುದಿಲ್ಲ. ವಾಸ್ತವ ಇದಾದರೆ ನೀವ್ಯಾಕೆ ನಿಮ್ಮ ವೃದ್ಧ ಮಾತಾಪಿತರನ್ನು ವೇದನೆಗೆ ಗುರಿ ಮಾಡುವಿರಿ? ಆದುದರಿಂದ ನನ್ನ ಅಭಿಪ್ರಾಯ ಇಷ್ಟೇ. ನಿಮಗೆ ನಿಮ್ಮ ಊಹಾಸುಂದರಿ ಸಿಗುವುದು ಈ ಜನ್ಮದಲ್ಲಿ ಸಾಧ್ಯವಿಲ್ಲವೇನೊಂತ ನನ್ನ ಅನುಮಾನ. ಆದುದರಿಂದ ನಿಮ್ಮ ಕಾಲ್ಪನಿಕ ಸುಂದರಿಯಲ್ಲಿ ಕೆಲ ಅಂಶ ಇರುವ ಹೆಣ್ಣು ಸಿಕ್ಕರೂ ಸರಿ ನೀವು ಮದುವೆಯಾಗೋದು ಒಳ್ಳೇದು. ನಿಮ್ಮ ವೃದ್ಧ ಮಾತಾಪಿತರ ಮನಕ್ಕೂ ನೆಮ್ಮದಿ ಇರುತ್ತೆ."



"ಏ ಹುಡುಗ, ಏನೇನು ತಿಂಡಿ ಇದೆಯೋ?"

"ನಾನು ಕ್ಲೀನರು ಸಾರ್, ಬೇರರ್ ಅಲ್ಲ."

— ಅಲ್ಲಾಬಕಷ್

"ನಿಮ್ಮ ಸಲಹೆ ಚೆನ್ನಾಗಿದೆ. ಆದರೆ ಅಂತಾ ಹುಡುಗಿಯನ್ನು ನಾನೊಂದು ವೇಳೆ ಭೇಟಿಯಾದರೂ ಅವಳು ನನ್ನನ್ನು ಮದುವೆಯಾಗಲು ಒಪ್ಪಬೇಕಲ್ಲ."

"ಯಾಕೆ ಒಪ್ಪಿಕೊಳ್ಳಬಾರದು?"

"ನನ್ನ ಅದೃಷ್ಟ ಸರಿಯಾಗದೆಯಾ?"

"ನಿಮ್ಮ ಮೇಲೆ ನಿಮಗೇ ಅನುಮಾನವಾ, ಮೊದಲು ಅಳುಕನ್ನು ತೊರೆಯಿರಿ, ಧೈರ್ಯ ತಾನಾಗೇ ಬರುತ್ತೆ. ನಿಮ್ಮ ಕಾಲ್ಪನಿಕ ಸುಂದರಿಯಲ್ಲಿ ಕೆಲ ಗುಣಗಳಿರುವ ಹುಡುಗಿ ನಿಮ್ಮ ಕಣ್ಣಿಗೆ ಬಿದ್ದಾಗ ನಿರ್ಭಯವಾಗಿ ಕೇಳಿಬಿಡಿ ನನ್ನನ್ನು ಮದುವೆಯಾಗು ಅಂತ."

ಅವಳ ನಯನಗಳಲ್ಲಿ ಆಳಕ್ಕೆ ದೃಷ್ಟಿ ತೂರಿದ ಕುಮಾರ್.

"ಪ್ರಯತ್ನಿಸುತ್ತೇನೆ."

* * * * *

"ವಸೂ,

ಅಚಾನಕವಾಗಿ ಪ್ರವಾಸಕ್ಕೆ ಹೋಗಬೇಕಾಗಿದೆ. ನಿನ್ನ ಸೀಮಂತಕ್ಕೆ ನಾನಿರಲಾಗುತ್ತಿಲ್ಲವಲ್ಲ ಅಂತ ನನಗೆ ಬಹಳಷ್ಟು ಫೀಲ್ ಆಗಿದೆ. ಆದರೆ ಹೋಗಲೇ ಬೇಕಾಗಿರೋದರಿಂದ ಬೇರೆ ದಾರಿ ಕಾಣ್ತಿಲ್ಲ. ನಾನು ವಾಪಾಸು ಬರುವಷ್ಟರಲ್ಲಿ ಏಳೆಂಟು ದಿನಗಳಾಗಬಹುದೇನೋ. ನೀನೊಂದು ವೇಳೆ ಊರಿಗೆ ಹೋದರೆ ಬೇಗನೆ ಬರಲು ಪ್ರಯತ್ನಮಾಡು. ಹೆಚ್ಚು ದಿನ ನಿಲ್ಲಬೇಡ, ಆರೋಗ್ಯದ ಕಡೆ ಗಮನವಿರಲಿ. ಪುಟ್ಟನನ್ನೂ ಕರೆದೊಯ್ಯುತ್ತಿದ್ದೇನೆ.

ನಿನ್ನ ಮಧು."

ಲಕ್ಷ್ಮಿ ತಂದುಕೊಟ್ಟ ಪತ್ರ ಓದಿ ವಸಂತ ಭಾರವಾಗಿ ನಿಡುಸುಯ್ಯುತ್ತಾಳೆ. 'ಬೇಕೆಂದೇ ಮಾಧವಿ ಪ್ರವಾಸಕ್ಕೆ ಹೋಗಿದ್ದಾಳೆ. ಒಂದು ವೇಳೆ ತನ್ನ ಸೀಮಂತದ ಸಂದರ್ಭದಲ್ಲೇ ಪ್ರವಾಸವನ್ನು ವ್ಯವಸ್ಥೆ ಮಾಡಿರುವುದು ಕಾಕತಾಳೀಯವೆಂದುಕೊಂಡರೂ, ಮಾಧವಿ ಮನಸ್ಸು ಮಾಡಿದ್ದರೆ ಪ್ರವಾಸದಿಂದ ತಪ್ಪಿಸಿಕೊಳ್ಳಬಹುದಿತ್ತು. ಇನ್ನೆಷ್ಟು ದಿವಸ ಅಂತ ಮಾಧವಿ ಹೀಗೆ ಕಣ್ಣಾಮುಚ್ಚಾಲೆ ಆಡುತ್ತಾಳೆ. ಯಾವತ್ತೋ ಒಂದು ದಿನ ಸತ್ಯ ಹೊರಬೀಳಲೇ ಬೇಕು. ಆಗ ಮಾಧವಿಯ ತಂದೆ ತಾಯಿ ತನ್ನ ಮೇಲೆ ರೇಗುತ್ತಾರೆ. ಮನೆಹಾಳಿ ಅಂತ ಬಯ್ಯಲೂ ಬಹುದು. ಆದರೆ ತಾನು ಅಳುಕುವುದಿಲ್ಲ, ಅಂಜುವುದಿಲ್ಲ, ಅವರ ಆರೋಪಕ್ಕೆ ಹೆದರುವುದಿಲ್ಲ.

ಮಾಧವಿಯ ಸಂತಸಕ್ಕಾಗಿ, ಮನಶಾಂತಿಗಾಗಿ ತಾನು ಯಾವ ಆರೋಪ ಬೇಕಾದರೂ ಸಹಿಸಲು ಸಿದ್ಧ, ತಾಳ್ಮೆಗೆಡುವುದಿಲ್ಲ. ಆದರೆ ಮಾಧವಿ? ಹೆತ್ತು ಹೊತ್ತವರಿಂದ, ಆತ್ಮೀಯರಿಂದ ದೂರವಾಗಿ ಏಕಾಂತವಾಗಿ ಜೀವನ ಸಾಗಿಸುತ್ತಿರುವ ಮಾಧವಿಯ ಬಾಳಿನಲ್ಲಿ ಯಾವ ಸಾರ್ಥಕತ್ವವಿದೆ? ಅವಳಿಲ್ಲಿರುವುದು ತನಗೆ ತುಂಬು ಸಂತಸ ನೀಡುತ್ತಿದ್ದರೂ, ದೂರಕ್ಕೆ ಯೋಚಿಸಿದಾಗ ಅವಳು ತವರಿನಲ್ಲಿರುವುದೇ ಉತ್ತಮ ಎನಿಸುತ್ತೆ ವಸಂತಳಿಗೆ. ತನಗೋಸ್ಕರ ಅಲ್ಲದಿದ್ದರೂ ತನ್ನ ಪುಟ್ಟ ಕಂದನ ಭವಿಷ್ಯದ ಸಲುವಾಗಿ ಆದರೂ ಮಾಧವಿ ತವರಿಗೆ ಹೋಗಬೇಕು. ಮುಂದೆ ಈ ಪುಟ್ಟ ಕಂದನ ಉತ್ತಮ ಭವಿಷ್ಯಕ್ಕೆ ಅವಳಿಗೆ ಅನೂಚಾನವಾಗಿ ಬರುವ ಆಸ್ತಿ ಪಾಸ್ತಿ ಕೂಡ ಅಗತ್ಯವೇ. ಅಷ್ಟೆಲ್ಲ ಬಂಧು ಬಳಗದವರನ್ನು ಇಟ್ಟುಕೊಂಡು ಇವಳ್ಯಾಕೆ ಹೀಗೆ ಅನಾಥಳಂತೆ ಬದುಕಬೇಕು? ಆಸ್ತಿ ಪಾಸ್ತಿ, ಆತ್ಮೀಯರ ಪ್ರೀತಿ, ಪುಟ್ಟನ ಬೆಳವಣಿಗೆಯಲ್ಲಿ ಅತ್ಯಗತ್ಯವಾದವುಗಳೇ ತಾನೆ? ನರೇಂದ್ರನನ್ನು ಕಳೆದುಕೊಂಡ ವೈರಾಗ್ಯದಲ್ಲಿ, ವಿರಕ್ತಿಭಾವದಲ್ಲಿ ಮಾಧವಿಗೆ ಐಹಿಕ ಸುಖಗಳ ಬಗ್ಗೆ ಆಸಕ್ತಿ ಇಲ್ಲದಿರಬಹುದೇನೋ? ಆದರೆ ಇನ್ನೂ ತುಂಬು ಜೀವನ ನಡೆಸಬೇಕಾದ ಪುಟ್ಟನಿಗೆ ಅವೆಲ್ಲವುಗಳ ಅಗತ್ಯವಿದೆ. ತಾನಿದರ ಬಗ್ಗೆ ಮಾಧವಿಗೆ ಲೆಕ್ಕವಿಲ್ಲದಷ್ಟು ಬಾರಿ ಹೇಳಿದ್ದುಂಟು. ಆದರೆ ಅವಳು ಪ್ರತಿಕ್ರಿಯಿಸಲಿಲ್ಲ.

ಮಾಧವಿಯ ಕುರಿತಾದ ಆಲೋಚನೆಗಳಲ್ಲಿ ಮುಳುಗಿದ್ದ ವಸಂತ ವಾಸ್ತವಕ್ಕೆ ಬಂದದ್ದು ಅಮ್ಮನ ದನಿ ಕೇಳಿದಾಗಲೇ.

*　　　*　　　*　　　*　　　*

ಏನೋ ಶಾಸ್ತ್ರೋಸ್ತ್ರವಾಗಿ ನಡೆಯಬೇಕು ಎಂಬಂತೆ ವಸಂತಳಿಗೆ ಸೀಮಂತ ಆಯಿತೇ ವಿನಾ ಅದರಲ್ಲಿ ಯಾವ ರೀತಿಯ ಅಪರಿಮಿತತ್ವವೂ ಕಾಣಲಿಲ್ಲ. ಕೇವಲ ಬೆರಳೆಣಿಸುವಷ್ಟು ಆತ್ಮೀಯರ ಮಧ್ಯೆ ನಡೆದ ಸಮಾರಂಭದ ಅನಂತರ ತಾಯಿ ತನ್ನೊಂದಿಗೆ ಬರುವಂತೆ ವಸಂತಳನ್ನು ಒತ್ತಾಯಿಸಿದರು, ಆದರೆ ಹೋಗಲಿಲ್ಲ ವಸಂತ. ಶ್ರೀಧರನಿಗೂ ಹೆಂಡತಿಯನ್ನು ಕಳಿಸುವ ಇಚ್ಛೆ ಇರಲಿಲ್ಲ. ವಸಂತಳ ತಾಯಿ ಮನಸ್ಸಿಲ್ಲದ ಮನಸ್ಸಿನಿಂದಲೇ ಊರಿಗೆ ಹೊರಟು ಹೋದಳು.

ಹೇಳಿದಂತೆ ಒಂಬತ್ತು ದಿನಗಳ ಬಳಿಕ ಮಧ್ಯಾಹ್ನದ ಸಮಯದಲ್ಲಿ ವಾಪಾಸಾದ ಮಾಧವಿ, ಮನೆಗೆ ಬರುತ್ತಲೇ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಸ್ನಾನ ಮುಗಿಸಿ ಆಮೇಲೆ ಶ್ರೀಧರ್‌ನ ಮನೆಗೆ ಹೋಗುತ್ತಾಳೆ. ವರಾಂಡಾದಲ್ಲೇ ಅವಳಿಗೆ ಎದುರಾಗುತ್ತಾಳೆ ಲಕ್ಷ್ಮಿ. ಮಾಧವಿಯನ್ನು ನೋಡಿದ್ದೇ ಅವಳ ಮುಖ ಊರಗಲವಾಗಿ,

"ಯಾವಾಗ ಬಂದ್ರಿ ಅಮ್ನೋರೆ?"

"ಇವತ್ತು ಮಧ್ಯಾಹ್ನ."

ಪುಟ್ಟನನ್ನು ಎತ್ತಿಕೊಂಡು ಲಕ್ಷ್ಮಿ ಮುದ್ದಾಡುವಾಗ ಕೇಳಿದಳು ಮಾಧವಿ,

"ವಸಂತ ಯಾವಾಗ ಬರ್ತಾಳೆ, ಊರಿಂದ?"

"ಊರಿಗೆ ಓಗಿಲ್ಲ ಅಮ್ಮಣ್ಣಿ, ಮನೇಲೆ ಅವ್ರೆ."

"ಎಲ್ಲಿದ್ದಾಳೆ?"

"ಮಾಡಿ ಮೇಲೆ."

ಚಿಗರೆಯಂತೆ ಮಹಡಿಯ ಮೆಟ್ಟಲೇರಿ, ವಸಂತಳ ಕೋಣೆಯ ಬಳಿಗೆ ಧಾವಿಸಿದ ಮಾಧವಿಯ ಕಾಲುಗಳು ಯಾರೋ ತಡೆಹಾಕಿದಂತೆ ತಟ್ಟನೆ ನಿಂತುಬಿಡುತ್ತವೆ.

"ನಿನಗೇನು ತಲೆಗಿಲೆ ಕೆಟ್ಟಿಲ್ಲ ತಾನೆ, ಮಾಧವಿ ವಿಧವೆ. ಒಬ್ಬ ಮಗನೂ ಇದ್ದಾನೆ. ಅವಳನ್ನು ಮದುವೆಯಾಗಿ ನಮ್ಮ ವಂಶ ಗೌರವವನ್ನು ಬೀದಿಗೆಳೀ ಬೇಡ." ಅದು ವಂಸತಳ ಸಿಟ್ಟಿನ ದನಿ.

ಮಾಧವಿಗೆ ದಿಗ್ಭ್ರಮೆ! ತಾನೇನು ಬೆಳ್ಳಗಿರುವುದೆಲ್ಲ ಹಾಲೆಂದುಕೊಂಡಿಲ್ಲ ತಾನೆ?

"ಅವಳು ವಿಧವೆಯಾಗಲಿ, ಮುತ್ತೈದೆ ಆಗಲಿ ಅವಳೂ ಮನುಷ್ಯಳೇ ತಾನೆ? ಅವಳಿಗೆ ಆಶೆ, ಹೃದಯ ಇರೋದಿಲ್ವಾ? ನಿನ್ನ ಮನೇಲಿದ್ದು ನಿನಗೆ ಸೇವೆ ಮಾಡುವಾಗ ಇಲ್ದಿರೋ ವಿರೋಧ, ನಾನು ಮದುವೆಯಾಗ್ತೀನಿ ಅಂತ ನಿರ್ಧಾರ ಮಾಡಿರುವಾಗ ಯಾಕಿರಬೇಕು?" ಕುಮಾರ್ ತಂಗಿಯ ಸಿಟ್ಟಿಗೆ ಸಿಟ್ಟಿಂದಲೇ ಉತ್ತರಿಸಿದ. "ಅವಳು ನಿನ್ನ ಪ್ರಾಣ ಸ್ನೇಹಿತೆ ಆಗಿದ್ದರೂ, ಅವಳು ವಿಧವೆ ಈ ಮದುವೆ ಸಲ್ಲದು ಅನ್ನೋ ಮಾತಾಡ್ತಿದ್ದಿಯಲ್ಲ. ನಿನಗೇನೂ ಹುಚ್ಚು ಹಿಡಿದಿಲ್ಲ ತಾನೆ."



ಚಿಲ್ರೆ

ಕಂಡಕ್ಟರ್ ಆಗಿದ್ದ ಆತ
ಮಾವ ವರ
ದಕ್ಷಿಣೆ
ಕೊಡಲು ಬಂದರೆ
ಚಿಲ್ರೆ ಕೊಡಿ ಸ್ವಾಮಿ
ಎನ್ನಬೇಕೆ?

— ಸಂಜೀವಕುಮಾರ ಜೋಶಿ

ಮಾಧವಿಗ ದ್ವಿಗುಣ ದಿಗ್ಭ್ರಮೆ 'ತಾನು ಕೇಳುತ್ತಿರುವುದು ಸತ್ಯದ ಮಾತೇನಾ? ತನಗೆ ಕುಮಾರ್‌ನಿಗೆ ಮದುವೆ. ಓ ಗಾಡ್' ನೆನೆಯಲು ಸಾಧ್ಯವಾಗುತ್ತಿಲ್ಲ ಅವಳಿಗೆ.

"ಅವಳು ನನ್ನ ಪ್ರಾಣ ಸ್ನೇಹಿತೆ ಆದ ಮಾತ್ರಕ್ಕೆ ವಿಧವೆ, ಮುತ್ತೈದೆಯಾಗಲು ಸಾಧ್ಯವಿದೆಯಾ. ನೀನು ಒಪ್ಪಿಕೊಂಡರೆ ಸಾಕು ನೂರಾರು ಹೆಣ್ಣುಗಳು ಕ್ಯೂನಲ್ಲಿ ನಿಂತು..."

"ಮೂರ್ಖ ಹುಡುಗಿ ಹಾಗೆ ಮಾತಾಡ್ಬೇಡ ವಸೂ, ನೂರಾರಲ್ಲ, ಸಾವಿರಾರು ಮಂದಿ ಹೆಣ್ಣುಗಳಿದ್ದರೂ ಎಲ್ಲರೂ ಮಾಧವಿಯಂತಿರಲು ಸಾಧ್ಯವಿಲ್ಲ. ಷಿ ಈಸ್ ಅನ್ ಕಂಪೇರಬಲ್. ಅವಳ ಸೌಂದರ್ಯದಲ್ಲಿ ಸ್ವಚ್ಛತೆ ಇದೆ, ಮಾರ್ದವವಿದೆ. ಅವಳ ವ್ಯಕ್ತಿತ್ವದಲ್ಲಿರುವ ಗಾಂಭೀರ್ಯಕ್ಕೆ ನಾನು ಮನಸೋತಿದ್ದೇನೆ. ಅಂತಾ ವ್ಯಕ್ತಿತ್ವವಿರುವವರು ತುಂಬ ಅಪರೂಪ. ಮಾಧವಿ ವಿಧವೆಯಾಗಿರುವುದು ಅವಳ ತಪ್ಪಾ? ವಿಧಿಯ ಕ್ರೌರ್ಯಕ್ಕೆ ಬಲಿಯಾದ ಹೆಣ್ಣು ಆಕೆ."

"ಅವಳ ಬಾಳು ಹೀಗಾಯಿತಲ್ಲ ಅಂತ ಮರುಕಪಟ್ಟು ಅವಳನ್ನು ಮದುವೆಯಾಗ ಬೇಕೂಂತಿದ್ದೀಯೇನು."

"ಇಲ್ಲ, ಅವಳೇ ನನ್ನ ಮೇಲೆ ಮರುಕಪಟ್ಟು ನನ್ನನ್ನು ಮದುವೆಯಾಗಬೇಕು. ನಾನವಳನ್ನು ಮನಸಾರೆ ಪ್ರೀತಿಸುತ್ತಿದ್ದೇನೆ. ನನ್ನ ಕಾಲ್ಪನಿಕ ಸುಂದರಿಯ ತದ್ರೂಪ ಅವಳಿಗಿದೆ. ನನ್ನ ಬದುಕಿನ ಅದ್ಭುತ ಮಾಧವಿ. ನಾನವಳನ್ನು ಪ್ರಥಮ ಬಾರಿಗೆ ನೋಡಿದಾಗಲೇ ನನಗೇ ಅರಿವಿಲ್ಲದಂತೆ ಅವಳಿಗೆ

ಸೋತು ಹೋದೆ. ಆದರೆ ಮಾಧವಿಗೆ ವಿವಾಹವಾಗಿ ಒಂದು ಮಗು ಕೂಡ ಇದೆ ಎಂದು ತಿಳಿದಾಗ ನನಗೆ ಭಾರೀ ನಿರಾಸೆ ಆಯಿತು. ಆದರೂ ನನಗೇ ಗೊತ್ತಿಲ್ಲದಂತೆ ನನ್ನೆಲ್ಲ ಆಲೋಚನೆ ಅವಳ ಸುತ್ತಲೂ ತಿರುಗುತ್ತಿದ್ದವು. ಕೊನೆಗೆ ಅವಳು ವಿಧವೆ ಎನ್ನುವ ಕಹಿ ಸತ್ಯ ತಿಳಿದ ಮೇಲಂತೂ...''

"ಮುಂದಕ್ಕೆ ಹೇಳಬೇಡ ಕುಮಾರ್. ಆಗಲೇ ನಾನು ಮಧೂ ಬಗ್ಗೆ ಉದಾಸೀನವಾಗಿ ಮಾತಾಡಿದ್ದು ಯಾಕಂದ್ರೆ, ಕೊನೆಪಕ್ಷ ನಾನು ಹಾಗೆ ಹೇಳಿದ ಮೇಲಾದರೂ ನೀನು ನಿನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವೆಯೇನೋ ಎಂದು. ಆದರೆ ನೀನು ನಿನ್ನ ಪಟ್ಟನ್ನು ಬಿಡುವ ಹಾಗೆ ಕಾಣ್ತಿಲ್ಲ.'' ಮುಂದಿನ ವಾಕ್ಯಗಳಲ್ಲಿ ನೋವು ತುಂಬಿತ್ತು. "ಮಾಧವಿ ಬರಿ ನನ್ನ ಗೆಳತಿಯಷ್ಟೇ ಅಲ್ಲ, ನನ್ನ ಜೀವದ ಜೀವ ಕೂಡ. ನಿನ್ನ ಪ್ರಪೋಸಲ್‌ಗೆ ಅವಳು ಒಪ್ಪಿಕೊಂಡರೆ ನನ್ನಷ್ಟು ಸಂತೋಷ ಪಡುವವರು ಈ ಜಗತ್ತಿನಲ್ಲಿ ಮತ್ತೊಬ್ಬರಿರುವುದಿಲ್ಲವೇನೋ. ಅವಳ ಜೀವನ ಯಾವುದೇ ರೀತಿಯಲ್ಲಾದರೂ ಮತ್ತೆ ಸರಿ ದಾರಿಗೆ ಬರಲಿ ಎಂಬುದೇ ನನ್ನ ತೀವ್ರ ಅಪೇಕ್ಷೆ. ಆದರೆ ಅವಳ ಮನದಲ್ಲೇನಿದೆ ಎನ್ನುವುದು ನನಗೆ ತಿಳಿದಿರುವುದರಿಂದಲೇ ನಾನು ನಿನ್ನ ಆಶೆಗೆ ವಿರೋಧಿಸಿದೆ.

"ಅವಳು ನರೇಂದ್ರನನ್ನು ಬಹಳ ಪ್ರೀತಿಸಿದಳು. ಆತ ಈಗ ಶಾಶ್ವತವಾಗಿ ದೂರವಾದರೂ ಆತನ ನೆನಪು ಈಗಲೂ ಜೀವಂತವಾಗಿಯೇ ಇದೆ ಅವಳ ಹೃದಯದಲ್ಲಿ. ಆ ನೆನಪನ್ನು ಅಳಿಸಲು ಬಹುಶಃ ಯಾರಿಗೂ ಸಾಧ್ಯವಾಗುವುದಿಲ್ಲವೇನೋ?''

"ನೋಡೋಣ, ನಾನು ಪ್ರಯತ್ನಿಸುತ್ತೇನೆ. ಗಂಡನನ್ನು ಪ್ರೀತಿಸುವುದು ಹೆಂಡತಿಯಾದವಳ ಕರ್ತವ್ಯ,ಸಹಜಧರ್ಮ. ಆದರೂ...''

"ನಿನಗೆ ಮಧೂಳ ಬಗ್ಗೆ ಸಂಪೂರ್ಣವಾಗಿ ಗೊತ್ತಿಲ್ವೋ ಅಣ್ಣಾ. ಅವಳು ಇಲ್ಲಿ ಯಾಕಿದ್ದಾಳೆ ಅಂತ ನೀನಂದುಕೊಂಡಿರೋದು. ಹೆತ್ತವರನ್ನು ದೂರವಾಗಿದ್ದು ಯಾಕಿಲ್ಲಿ ಅಜ್ಞಾತವಾಸ ಮಾಡ್ತಿದ್ದಾಳೋ ಗೊತ್ತಾ? ಮಾಧವಿಯ ಬದುಕು ನರೇಂದ್ರನೊಬ್ಬನಿಗೆ ಮಾತ್ರ ಅರ್ಪಿತವಾಗಿದೆ. ಆತನ ನೆನಪನ್ನು ತನ್ನ ಹೃದಯ ದೇಗುಲದಲ್ಲಿಟ್ಟುಕೊಂಡು. ಒಂದೊಂದು ದಿನವನ್ನು ಮಾಧವಿಯ ನೆನಪಿನಲ್ಲಿ ಜೀವಂತವಾಗಿದ್ದಾನೆ ನರೇಂದ್ರ. ಆ ಸಮಾಧಿಯ ಸ್ಥಿತಿಯಿಂದ ಹೊರ ಬರುವುದನ್ನು, ತನ್ನ ಪವಿತ್ರ ಸ್ವಪ್ನಕ್ಕೆ ಅಡಚಣೆ ಒದಗುವುದನ್ನು ಮಾಧವಿ ಎಳ್ಳಷ್ಟೂ ಸಹಿಸುವುದಿಲ್ಲ. ಆದಕ್ಕೇ ಈ ಏಕಾಂತವಾಸ.''

ನಸು ನಕ್ಕು ಪ್ರತಿಕ್ರಿಯಿಸಿದ ಕುಮಾರ್ "ನಿಂದೆಲ್ಲ ಬರೀ ಭ್ರಮೆ ವಸು, ಅವಳ ಉದ್ದೇಶ ಏನೂಂತ ನನಗೆ ಗೊತ್ತಿದೆ.''

"ಇದು ನಿನ್ನ ಭ್ರಮೆ.''

ಮುಂದಿನ ವಾದ ವಿವಾದದ ಬಗ್ಗೆ ಅವಳಿಗೆ ಕಿವಿಗೊಡುವ ತಾಳ್ಮೆ ಇರಲಿಲ್ಲ. ಥರಗುಟ್ಟಿತು ದೇಹ. ಮೈಪೂರ ಬೆವತು ಕೋಣೆಯ ಒಳಗೆ ಹೋಗಲಿಲ್ಲ.

ಮೆಟ್ಟಲಿಳಿದು ಹೆಬ್ಬಾಗಿಲತ್ತ ಹೆಜ್ಜೆ ಹಾಕುತ್ತಾಳೆ ಮಾಧವಿ.

* * * * *

ಮೇಲಿನ ಘಟನೆ ನಡೆದ ನೂರು ದಿನಗಳನಂತರ ಆಗಮಿಸಿತು ರಾಖಿ ಹಬ್ಬ. ಆ ಎರಡು ದಿನಗಳು ಮಾಧವಿ ಮತ್ತೆ ವಸಂತಳ ಮನೆಯತ್ತಲೇ ತಲೆ ಹಾಕಲಿಲ್ಲ. ಕುಮಾರ್ ತನ್ನ ಮನೆಗೆ ಬರಬಹುದೇನೋ, ತನ್ನ ಆಶೆಯನ್ನು ಮುಂಡಿಸಬಹುದೇನೋ ಎಂಬ ಅಳುಕು. ಆದರೆ ಕುಮಾರ್ ಬರಲಿಲ್ಲ.

ರಾಖಿ ಹಬ್ಬದ ದಿನ ವಸಂತಳ ಮನೆಗೆ ಬಂದಳು ಮಾಧವಿ ಪುಟ್ಟನೊಂದಿಗೆ. ಅವಳು ಬಂದಾಗ ಹಾಲ್‌ನಲ್ಲೇ ಕುಳಿತು ಏನೋ ಚರ್ಚಿಸುತ್ತಿದ್ದರು ಶ್ರೀಧರ್,ಕುಮಾರ್. ವಸಂತ ಪುಟ್ಟನಿಗಾಗಿ ಖರೀದಿಸಿದ ನೀಲಿ ಬಣ್ಣದ ಅಂಗಿಯ ಮೇಲೆ ಬಿಳಿಯ ಬಣ್ಣದ ಮೊಲದ ಚಿತ್ರವನ್ನು ಕಸೂತಿ ಮಾಡುತ್ತಿದ್ದಾಳೆ. ಮಾಧವಿ ಹಾಲನ್ನು ಪ್ರವೇಶಿಸುತ್ತಲೇ ಮೂವರ ದೃಷ್ಟಿ ಅವಳತ್ತ ಸರಿಯಿತು. ಮೊನ್ನೆ ಮನೆಯವರೆಗೂ

ಬಂದು ತನ್ನನ್ನು ಕಾಣದೆ ಹಾಗೆಯೇ ವಾಪಸು ಹೋದದ್ದು, ಎರಡು ದಿನಗಳು ಬಾರದೆ ಇವತ್ತು ಮಾತ್ರ ಬಂದಿರೋದು ವಸಂತಳಿಗೆ ಬಹುಶಾ ಕುಮಾರ್‌ನ ಅಭಿಪ್ರಾಯ ಇವಳಿಗೆ ತಿಳಿದಿರಲಿಕ್ಕೂ ಸಾಕು ಎನ್ನುವ ಅನುಮಾನ ತರಿಸಿತ್ತು, ಆದರೆ ಮಾಧವಿ ನಸು ನಕ್ಕಾಗ ವಸಂತಳ ಹೃದಯ ತುಸು ಹಗುರವಾಯಿತು. ಕುಮಾರ್ ಮಾಧವಿಯ ಸ್ನಿಗ್ಧ ಮಂದಹಾಸಕ್ಕೆ ಸಂತಸಿಸಿದ. ಶ್ರೀಧರ್ ವಾತ್ಸಲ್ಯದಿಂದ ಆಹ್ವಾನಿಸಿದ "ಬಾ ಮಧೂ." ಪುಟ್ಟನನ್ನು ತೊಡೆಯ ಮೇಲೆ ಕೂರಿಸಿಕೊಂಡ ಶ್ರೀಧರ್‌ನ ಬಲಗೈಗೆ ರಾಖಿ ಬಿಗಿದಳು ಮಾಧವಿ.

"ಈಗ ನೀನು ಏನು ಕೇಳಿದರೂ ಕೊಡೋದಕ್ಕೆ ನಾನು ರೆಡಿಯಾಗಿದ್ದೀನಿ ಮಧೂ." ವಸಂತಳತ್ತ ವಾರೆಗಣ್ಣು ಬೀರುತ್ತಾನೆ ಶ್ರೀಧರ್. ವಸಂತ ಕಣ್ಣಲ್ಲೇ ಗದರಿಕೊಳ್ಳುತ್ತಾಳೆ. ಕುಮಾರ್ ಮುಗುಳ್ನಕ್ಕು ಮಾಧವಿಯನ್ನೇ ನೋಡತೊಡಗಿದ. ಆಗಲೇ ಆತ ಊಹಿಸದ ಘಟನೆಯೊಂದು ನಡೆದುಹೋಯಿತು.

ಕುಮಾರ್‌ನ ಬಳಿಗೆ ಸಾರಿದ ಮಾಧವಿ.

"ನಿಮ್ಮ ಕೈ ಕೊಡಿ."

ಆತ ಚಕಿತತೆಯಿಂದಲೇ ಅಪ್ರಯತ್ನವಾಗಿ ಕೈಯನ್ನು ಮುಂದಕ್ಕೆ ಚಾಚುತ್ತಾನೆ.

ತನ್ನ ಅಂಗೈಯಲ್ಲಿರುವ ರಾಖಿಯನ್ನು ಅವನ ಕೈಗೆ ಬಿಗಿದುಬಿಟ್ಟಳು ಮಾಧವಿ.

ಪಾಪ ಕುಮಾರ್‌ನ ವದನ ಕಳೆಗುಂದಿತು. ಶ್ರೀಧರ್ ಮಾತ್ರ ಮೊದಲು ಅಚ್ಚರಿಗೊಂಡರೂ ಆಮೇಲೆ ಪಕಪಕ ನಕ್ಕು ಬಿಡುತ್ತಾನೆ. ವಸಂತಳಿಗೆ ಮಾತ್ರ ಮಾಧವಿಯ ಈ ಕ್ರಿಯೆ ಅಚ್ಚರಿಗೊಳಿಸಲಿಲ್ಲ. ಯಾವುದೋ ಭರಿಸಲಸದಳವಾದ ನೋವನ್ನು ಅಥವಾ ಚಿತ್ರಹಿಂಸೆಯ ಅನುಭವಕ್ಕೆ ಒಳಗಾದವನಂತೆ ಚಡಪಡಿಸಿ ಗಬಕ್ಕನೆ ಎದ್ದು ನಿಂತು "ಎಕ್ಸ್‌ಕ್ಯೂಸ್‌ಮಿ" ಎಂದು ಮೆಟ್ಟಿಲೇರಿ ಮಹಡಿಗೆ ಹೊರಟು ಹೋದ ಕುಮಾರ್.



ತೇಜಸ್ವಿಗಳ ವಯಸ್ಸನ್ನು ನೋಡಲಾಗುವುದಿಲ್ಲ.

— ಕಾಳಿದಾಸ

ಜಾಗರೂಕತೆಯಿಂದ ಮಾಡಿದ ಕಾರ್ಯದಲ್ಲಿ ಭಯ ಬರುವುದಿಲ್ಲ.

— ಶೇಕ್ಸ್‌ಪಿಯರ್

ಅಳುವವರ ಬಳಿ ಕುಳಿತರೆ ಶೋಕ ಹೆಚ್ಚುವುದು.

— ಕುವೆಂಪು

ಸಂಗ್ರಹ : ಮುರಳಿ ಕೆ. ಎಸ್.

'ಕುಮಾರ್‌ನ ವರ್ತನೆ ನಿನಗೆ ಆಶ್ಚರ್ಯ ತರಲಿಲ್ವಾ' ಎಂಬಂತೆ ಮಾಧವಿಯ ಮುಖ ನೋಡುತ್ತಾಳೆ ವಸಂತ. ಹೀಗಾಗಬಹುದೆಂದು ಮೊದಲೇ ಊಹಿಸಿದ್ದ ಮಾಧವಿಯ ಮುಖ ಭಾವರಹಿತವಾಗಿತ್ತು.

* * * * *

ಮೇಲಿನ ಘಟನೆ ನಡೆದ ಎರಡು ದಿನಗಳ ಆನಂತರ ತನ್ನ ಊರಿಗೆ ಹೊರಟುಹೋದ ಕುಮಾರ್.

* * * * *

ಇದು ಒಂದು ಕಡೆ ಎದೆಯ ಮೇಲಿಂದ ದೊಡ್ಡ ಹೊರೆ ಇಳಿಸಿದಂತೆ ಮಾಧವಿಗೆ 'ಫೀಲ್'

ಆದರೂ, ಮತ್ತೊಂದು ಕಡೆ ಮನದ ಒಂದು ಮೂಲೆಯಲ್ಲಿ ನೋವು ತುಂಬಿತ್ತು. ಅನ್ಯಾಯವಾಗಿ ತಾನು ಕಲ್ಮಶರಹಿತವಾಗಿದ್ದ ಕುಮಾರ್‌ನ ಹೃದಯ ಸರೋವರದಲ್ಲಿ ಕಲ್ಲೆಸೆದು ಅಲ್ಲೋಲ ಕಲ್ಲೋಲ ಉಂಟು ಮಾಡಿದೆನಲ್ಲ ಎಂದು ಸಂಕಟಪಟ್ಟಳು ಮಾಧವಿ. ಅವತ್ತು ಸಂಜೆ ವಸಂತ, ಮಾಧವಿ ಎಂದಿನ ಹಾಗೆ ಮಾತಾಡುತ್ತ ಕುಳಿತ್ತಿದ್ದರು. ವಸಂತ ಏನನ್ನೋ ಹೇಳುತ್ತಿದ್ದರೆ ಮಾಧವಿ ಹ್ಞೂ ಗುಟ್ಟುತ್ತಿದ್ದಳು. ಆಕಸ್ಮಾತ್ತಾಗಿ ಮಾಧವಿಗೆ ಹಾಲಿನ ಎಡಭಾಗದ ಕೋಣೆಯಿಂದ ಶ್ರೀಧರ್ ಮತ್ತು ಮತ್ತೊಬ್ಬನ ಸಂಭಾಷಣೆ ಕೇಳಿಸುತ್ತಿದೆ. ಮತ್ತೊಬ್ಬನ ಧ್ವನಿ ಕೇಳಿ ಅವಳು ಬೆಚ್ಚಿಬೀಳುತ್ತಾಳೆ.

"ಅರೆರ, ಆ ಧ್ವನಿ ನರೇಂದ್ರನ ಗಂಟಲಿನಂತಿದೆಯಲ್ಲ, ಆದರೆ ಅದು ನರೇಂದ್ರನೇ ಆಗಲಿಕ್ಕೆ ಸಾಧ್ಯವಿಲ್ಲ. ಮೃತಪಟ್ಟವನು ಮತ್ತೆ ಬದುಕಿ ಬರಲು ಸಾಧ್ಯವಿಲ್ಲ, ಇಂಪಾಸಿಬಲ್."

"ನಿಮ್ಮಾಕೆ ಇಲ್ಲಿಗೆ ಬರೋದಿಲ್ವಾ?" ಶ್ರೀಧರ್ ಕೇಳುತ್ತಿದ್ದಾನೆ.

"ಆಕೆ ಇಲ್ಲಿಗೆ ಬರೋದಿಲ್ಲ ಬಿಡಿ." ಮತ್ತೊಬ್ಬನ ಉತ್ತರದಲ್ಲಿ ವಿಷಾದ ಧ್ವನಿಸಿತು. ಆ ಧ್ವನಿ ನರೇಂದ್ರನ ಧ್ವನಿಯಂತೆಯೇ ಇದೆ.

"ಯಾರೇ ಅದು ವಸು?" ಕುತೂಹಲ ತಾಳಲಾಗಲಿಲ್ಲ ಮಾಧವಿಗೆ.

"ಸಿವಿಲ್ ಇಂಜಿನಿಯರ್ ಕಣೆ. ಫಾರಿನ್ ರಿಟರ್ನ್ಡ್ ಇಂಜಿನಿಯರ್ ಅಂತೆ. ನಮ್ಮ ನರ್ಸಿಂಗ್ ಹೋಂನ ಪ್ಲಾನ್ ಮಾಡಿರೋದು. ಈಗ ಖುದ್ದಾಗಿ ಕಟ್ಟಡದ ನಿರ್ಮಾಣದ ಉಸ್ತುವಾರಿ ಮಾಡ್ತಿರೋದೂ ಅವರೇ. ನೀನು ಮೊನ್ನೆ ಪ್ರವಾಸಕ್ಕೆ ಹೋಗಿದ್ದಾಗ ಬಂದರು. ಅವರು ತಂಗಲಿಕ್ಕೆ ನಮ್ಮ ಮನೆಯಲ್ಲೇ ವ್ಯವಸ್ಥೆ ಮಾಡಣೋಂದ್ರೆ, ಬೇರೆ ಯಾವ್ದಾದ್ರೂ ಪ್ರಶಾಂತವಾದ ಜಾಗದಲ್ಲಿ ರೂಮಿನ ವ್ಯವಸ್ಥೆ ಮಾಡೀಂತ ಕೇಳಿದರು. ಸರೀಂತ ನಿಮ್ಮಣ್ಣ ಈ ಊರಿನಾಚೆ ಇರೋ ನಮ್ಮ ತೆಂಗಿನ ತೋಟದಲ್ಲಿರೋ ಗೆಸ್ಟ್ ಹೌಸಿನಲ್ಲಿ ಅವರಿಗೆ ಅಕಾಮಡೇಶನ್ ವ್ಯವಸ್ಥೆ ಮಾಡಿದರು. ಇವತ್ತು ಯಾವುದೋ ಮುಖ್ಯ ವಿಷಯದ ಬಗ್ಗೆ ನಿಮ್ಮಣ್ಣನೊಂದಿಗೆ ಚರ್ಚಿಸೋದಕ್ಕೆ ಬಂದಿದ್ದಾರೆ."

"ಹೆಂಡ್ತಿ ಬರೋದಿಲ್ಲಾಂತ ಹೇಳ್ತಿದ್ದಾರಲ್ಲ, ಆತ ಏನು ಮುಸಲ್ಮಾನನಾ?" ವಸಂತ ನಕ್ಕು "ಇಲ್ಲ ಕಣೆ, ಆತ ಹಿಂದೂ ಧರ್ಮದವರೇ, ವಿದೇಶದಿಂದ ಬಂದಾಗ ಆತ ಒಬ್ಬರೇ ಬಂದರಂತೆ. ಹೆಂಡ್ತೀನ ಜೊತೇಲಿ ಕರೆದುಕೊಡು ಬರಲಿಲ್ವಂತೆ. ಯಾಕೇಂತ ನಿಮ್ಮಣ್ಣ ಕೇಳಿದ್ದಕ್ಕೆ ಅವಳು ಹೊರಗೆಲ್ಲೂ ಬರೋದಿಲ್ಲ ಬಿಡಿ ಅಂತ ಹೇಳಿಬಿಡ್ತಾನಂತೆ."

ಇಲ್ಲಿ ಇವರಿಬ್ಬರೂ ಮಾತನಾಡುತ್ತಿದ್ದರೂ ಒಳಗಿನಿಂದ ಅವರಿಬ್ಬರ ಸಂಭಾಷಣೆ ಮಂದಸ್ವರದಲ್ಲಿ ಕೇಳುತ್ತಲೇ ಇದೆ. ವಿದೇಶಿ ವಾಪಾಸು ಇಂಜನಿಯರ್‌ನ ಧ್ವನಿಗೆ ಶರಣಾದವಳಂತೆ ಕೇಳುತ್ತ ಇದ್ದು ಬಿಟ್ಟ ಮಾಧವಿ, ವಸಂತ ಎಚ್ಚರಿಸಿದಾಗಲೇ ವಾಸ್ತವಕ್ಕೆ ಬಂದದ್ದು.

* * * * * *

ಕಾಲ ಪುರುಷ ಒಂದು ವಾರವನ್ನು ನುಂಗಿದ.

ಈ ಏಳು ದಿನಗಳಲ್ಲಿ ಮಾಧವಿ ಒಂದೇ ಒಂದು ಸಲ ಕೂಡ ವಸಂತಳ ಮನೆಗೆ ಮುಖ ತೋರದಿದ್ದಾಗ ಕಳವಳಗೊಳ್ಳುತ್ತಾಳೆ ವಸಂತ. ಲಕ್ಷ್ಮಿಯನ್ನು ಕರೆದು "ಸ್ಕೂಲಿಗೆ ಹೋಗಿ ಮಧ್ಯಾಗೆ ಮಧ್ಯಾಹ್ನ ರಜೆ ಹಾಕಿ ಬಾ ಅಂತ ಹೇಳು. ನನಗೆ ಮೈಯಲ್ಲಿ ಸ್ವಲ್ಪ ಸರಿಯಾಗಿಲ್ಲಾಂತ ಕೂಡ ಹೇಳು."

ಹೋದ ಲಕ್ಷ್ಮಿ ಅರ್ಧ ಗಂಟೆಯಲ್ಲಿ ವಾಪಾಸಾಗುತ್ತಾಳೆ.

"ಅಮ್ನೋರು ಒಂದ್‌ವಾರದಿಂದ ಸ್ಕೂಲಿಗೆ ಒಗಿಲ್ವಂತೆ."

ವಸಂತಳಲ್ಲಿ ಇನ್ನಷ್ಟು ಹೆಚ್ಚಾಗುತ್ತೆ ಕಳವಳ. ನಿಜಕ್ಕೂ ಅವಳ ಆರೋಗ್ಯ ಸರಿ ಇರಲಿಲ್ಲ, ಆದರೂ ಮಾಧವಿಯನ್ನು ನೋಡಲೇಬೇಕೆಂದಿದೆ ಅವಳಿಗೆ. ಗೇಟು ದಾಟುತ್ತಲೇ ಚಕಿತಳಾಗುತ್ತಾಳೆ ವಸಂತ. ಗೇಟಿನ ಮೇಲೆ ಕಾಮನಬಿಲ್ಲಿನಕಾರದ ಕಾಶಿ ರತ್ನದ ಬಳ್ಳಿ ಒತ್ತೊತ್ತಾಗಿ ಹಬ್ಬಿತ್ತು. ಕಾಂಪೌಂಡು ಗೋಡೆಯ ಸುತ್ತಲೂ ಕೆಂಪು ಬಿಳಿ ಬಣ್ಣಗಳಲ್ಲಿ ಮಂದಾರ, ನಂದಿವರ್ಧನ ಹೂಗಳ ಹೆಣೆದಾಟ,

ಗೇಟನೊಳಗೆ ಎಡಭಾಗದಲ್ಲಿ ಮಲ್ಲಿಗೆ ಪೊದೆ. ನಡುವೆ ಕಿರುದಾರಿ, ಬಾಗಿಲವರೆಗೂ. ಕೈ ತೋಟದಲ್ಲಿ ಕಸ್ತೂರಿ, ಸೇವಂತಿಗೆ, ಕನಕಾಂಬರದ ಗಿಡಗಳು. ಅವುಗಳ ಮಧ್ಯೆ ಗುಲಾಬಿ ಗಿಡ ಸಮೂಹ. ಕಿರುದಾರಿಯಲ್ಲಿ ಹಾದು ಬಾಗಿಲ ಬಳಿಗೆ ಬಂದವಳನ್ನು ವರಾಂಡಾದ ಎರಡೂ ತುದಿಗಳಿಂದ ಚಾವಣಿಗೆ ಅಪ್ಪುತ್ತ ಮೇಲೇರುತ್ತಿರುವ ಬೋಗನ್‌ವಿಲ್ಲಾ ಸ್ವಾಗತಿಸಿತು.

ಮೆಟ್ಟಿಲುಗಳಲ್ಲಿ ಸಾಲು ಹೂ ಕುಂಡಗಳಲ್ಲಿ ಅಲ್ಲಿ ಹೂಗಳು. ಒಟ್ನಲ್ಲಿ ಹೇಳಬೇಕೆಂದರೆ ಪರಿಮಳ ಪುಷ್ಪಭರಿತ ಆವರಣ. ಅಮಿತಾನಂದದಿಂದ ನಲಿದಾಡುವ ಹೂ ಸಸ್ಯಧಾಮ. ಬಾಗಿಲಿಗೆ ತೂಗಾಡುವ ಮೆಲುಪರದೆ ಸರಿಸಿ ಒಳನಡೆದಳು ವಸಂತ. ಹಾಲ್‌ನಲ್ಲಿ ಕಾಣಲಿಲ್ಲ. ಹಿತ್ತಲಿಗೆ ಹೋದರೆ ಅಲ್ಲೂ ಇಲ್ಲ. ಅಡುಗೆ ಮನೆಗೆ ಹೋದಳು ಅಲ್ಲೂ ಕಾಣಲಿಲ್ಲ. ಮತ್ತೆ ಡ್ರಾಯಿಂಗ್ ರೂಮಿಗೆ ವಾಪಾಸಾಗುತ್ತಾಳೆ. ಕುರ್ಚಿಯಲ್ಲಿ ಕೂರುತ್ತಾಳೆ ವಸಂತ. ಎಲ್ಲ ಬಾಗಿಲುಗಳನ್ನು ತೆರೆದಿಟ್ಟು ಎಲ್ಲಿಗೆ ಹೋಗಿರಬಹುದು ಮಧೂ? ಒಂದು ವೇಳೆ ತನ್ನ ಮನೆಗೆ ಹೋಗಿರಬಹುದಾ, ಹಾಗಿದ್ದರೆ ತನಗೆ ಎದುರಾಗಿ ಬರಬೇಕಲ್ಲ? ಎಲ್ಲೇ ಹೋಗಿರಲಿ, ಬಾಗಿಲು ತೆರೆದು ಯಾಕೆ ಹೋಗಬೇಕು ಹೊರಗೆ?



"ನೀನು ಸತ್ಮೇಲೆ ಎಲ್ಲಿಗೋಗ್ತಿ?"
"ನಾ ಸತ್ಮೇಲೆ ಸ್ವರ್ಗಕ್ಕೆ ಹೋಗ್ತೀನಿ."
"ತಪ್ಪು, ನೀ ಸತ್ಮೇಲೆ ಸುಡುಗಾಡಿಗೆ ಹೋಗ್ತಿ."

— ಚಂದ್ರಹಾಸ ಎಚ್. ಬಂಡಿ

ಡ್ರಾಯಿಂಗ್ ರೂಮಿನಲ್ಲಿ ಅವಲೋಕಿಸುವಾಗ ವಸಂತಳ ದೃಷ್ಟಿ ಅಪ್ರಯತ್ನವಾಗಿ ಒಂದು ಜಾಗದಲ್ಲಿ ನೆಟ್ಟಿತು. ಡ್ರಾಯಿಂಗ್ ರೂಮಿನ ಗೋಡೆಯ ಮೇಲೆ ಪುಟ್ಟ ಕಪಾಟೊಂದು ಅವಳ ಗಮನ ಸೆಳೆಯಿತು. ಪುಟ್ಟ ಕಪಾಟಿಗೂ ತೆಳು ಪರದೆ. ಈ ಪುಟ್ಟ ಕಪಾಟಿಗೂ ಪರದೆಯ ಅಗತ್ಯವಿದೆಯೇ? ಕುತೂಹಲದಿಂದ ಎದ್ದು ಹೋಗಿ ಪರದೆ ಸರಿಸಿದಳು.

ಅವಳ ಅಚ್ಚರಿ ದ್ವಿಗುಣಗೊಂಡಿತು. ಯಾಕೆಂದರೆ ಆ ಪುಟ್ಟ ಕಪಾಟಿನ ಬಾಗಿಲಿಗೂ ಬೀಗ ಹಾಕಲಾಗಿತ್ತು. ಇಷ್ಟೊಂದು ಜಾಗರೂಕತೆಯಿಂದ ಈ ಕಪಾಟಿನಲ್ಲಿ ಭದ್ರಪಡಿಸಿಡುವಂತಾ ಅಮೂಲ್ಯ ವಸ್ತು ಯಾವುದಿದೆ ಮಾಧವಿಯ ಬಳಿ. ಸೀರೆಗಳೇನಿದ್ದರೆ ಅವುಗಳನ್ನು ಇಟ್ಟುಕೊಳ್ಳಲು ಗಾಡ್ರೆಜ್ ಬೀರುವಿದ್ದೇ ಇದೆ. ಪುಸ್ತಕಗಳಿಗೆ ಎರಡು ದೊಡ್ಡ ಕಪಾಟುಗಳಿದೆ. ಹಾಗಾದರೆ ಇನ್ನೇನಿದೆ ಇದರಲ್ಲಿ? ಕ್ಷಣ ಕ್ಷಣಕ್ಕೆ ಕುತೂಹಲ ಇಮ್ಮಡಿಸಲಾರಂಭಿಸಿದಾಗ ಪುಟ್ಟ ಕಪಾಟಿಗಿರುವ ಪುಟ್ಟ ಬೀಗವನ್ನೇ ಹಿಡಿದೆಳೆದಳು, ಬರಲಿಲ್ಲ. ಮಾಧವಿ ಬರುವವರೆಗೂ ಕಾಯುವ ತಾಳ್ಮೆ ಇರಲಿಲ್ಲ. ಹಾಗೇಂತ ಬೀಗ ಮುರಿಯಲು ಅವಳ ಮನ ಒಪ್ಪಲಿಲ್ಲ, ಹಾಗೆಯೇ ಆ ಕೋಣೆಯಲ್ಲಿ ಮತ್ತೊಮ್ಮೆ ಕಣ್ಣಾಡಿಸುವಾಗ, ಪುಟ್ಟ ಗೂಡೊಂದರಲ್ಲಿ ಬೀಗದ ಕೈ ಗೊಂಚಲು ಕಾಣಿಸಿತು ಗೊಂಚಲಿನಲ್ಲಿ ಮೂರು ಬೀಗದ ಕೈಗಳು, ಒಂದು ತುಂಬ ದೊಡ್ಡದು ಬಹುಶಃ ಮನೆಯ ಹೊರ ಬಾಗಿಲಿನದಿರಬೇಕು. ಇನ್ನೊಂದು ಬೀರುವಿನದಿರಬೇಕು. ಮೂರನೆಯದು ಮಾತ್ರ ತೀರಾ ಚಿಕ್ಕ ಸೈಜಿನದು. ಬಹುಶಾ ಇದೇ ಪುಟ್ಟ ಕಪಾಟಿನದಿರಬೇಕೆಂದು ಆ ಸಣ್ಣ ಕೀಯಿಂದ ಪುಟ್ಟ ಕಪಾಟಿನ ಬಾಗಿಲು ತೆರೆದವಳಿಗೆ ಷಾಕ್ ಹೊಡೆದಂತಾ ಅನುಭವ.

ಕಪಾಟಿನೊಳಗೆ ಸುಂದರ ಯುವಕನೊಬ್ಬನ ಕ್ಯಾಬಿನೆಟ್ ಅಳತೆಯ ಬಣ್ಣದ ಭಾವಚಿತ್ರ. ಅದ ಮುಂದೆ ತಾಜಾ ಬಿಳಿ ಗುಲಾಬಿ ಹೂವು.

"ಓ ಗಾಡ್! ಇವನು ಶ್ರೀಧರ್ ಕರೆದುಕೊಂಡು ಬಂದಿರುವ ಫಾರಿನ್ ರಿಟರ್ನ್ಡ್ ಇಂಜನಿಯ ಮಿಸ್ಟರ್ ವರ್ಮ." ಗಿರಗಿರ ತಿರುಗಿದಂತೆ ಭಾಸವಾಯಿತವಳಿಗೆ.

'ಮಾಧವಿಗೂ, ವರ್ಮನಿಗೂ ಇರುವ ಸಂಬಂಧವೇನು? ಈತ ನರೇಂದ್ರನಾಗಿರಬಹುದೇ? ಇ ಸಾಧ್ಯವಿಲ್ಲ. ಮೃತಪಟ್ಟ ನರೇಂದ್ರ ಮತ್ತೆ ಬದುಕಿ ಬಂದಿದ್ದಾನೆಂದರೆ ಹುಚ್ಚ ಕೂಡ ನಂಬುವುದಿಲ್ಲ ಅಥವಾ ಇಬ್ಬರೂ ತದ್ರೂಪಿನವರಾ? ಇಷ್ಟಕ್ಕೂ ಈ ಭಾವಚಿತ್ರ ಮಧೂ ಮನೆಗೆ ಹೇಗೆ ಬಂತು. ಇದ ಮಿಸ್ಟರಿ ಏನು? ತನ್ನ ಮನೆಗೆ ಮಾಧವಿ ಬಂದಾಗ ಬರಿಗೈಲಿ ಬಂದಿದ್ದಳು. ಈ ಫೋಟೋ ಎಲ್ಲಿಂ ಬಂತು?'

ತಲೆಯಲ್ಲಿ ಸಮಸ್ಯೆಗಳ ಗೊಂದಲ. ಎಡೆಬಿಡದೆ ಆಲೋಚನೆ ಅರ್ಥರಹಿತ ಸಮಸ್ಯೆಗಳ ನೆತ್ತಿಯನ್ನು ಒಂದೇ ಸಮ ಸ್ಫೋಟಿಸಲು ಶುರುಮಾಡಿದಾಗ ಹೆಜ್ಜೆ ಎತ್ತಿ ಇಡಲೂ ಆಗದ ಸ್ಥಿತಿಯ ನಿಧಾನವಾಗಿ ಡ್ರಾಯಿಂಗ್ ರೂಮಿನಿಂದ ಹೊರ ಬಂದಳು. ಅವಳು ಹಜಾರಕ್ಕೆ ಬಂದಾಗ ಅವ ಕಣ್ಣುಗಳು ಕತ್ತಲಿಟ್ಟವು, ತೂರಾಡಿತು ದೇಹ, ಕೈ ಕಾಲುಗಳು ಥರಗುಟ್ಟಿದವು. ಆಸರೆಗಾಗಿ ಕೈಗಳನ ಚಾಚಿದಳು ಮುಂದಕ್ಕೆ ಏನೂ ಸಿಗಲಿಲ್ಲ. ಮತ್ತೆರಡು ಹೆಜ್ಜೆ ಸರಿಸಿದಾಗ ಟೀಪಾಯ್ ಕಾಲಿಗೆ ಎಡ ನೆಲದ ಮೇಲೆ ಬೋರಲು ಬಿದ್ದಳು ವಸಂತ.

ತನ್ನ ಪುಟ್ಟ ಆಟವಾಡುತ್ತ ಮನೆಯಿಂದಾಚೆ ಹೊರಟು ಹೋದಾಗ ಅವನನ್ನು ಹುಡುಕು ಬಾಗಿಲು ಹಾಕುವುದನ್ನು ಮರೆತು ಹೊರಗೆ ಹೋಗಿ ಪುಟ್ಟನನ್ನು ಎತ್ತಿಕೊಂಡು ಆಗ ತಾ ಮನೆಯೊಳಕ್ಕೆ ಬಂದ ಮಾಧವಿ ನೆಲದ ಮೇಲೆ ಬೋರಲು ಬಿದ್ದಿರುವ ವಸಂತಳನ್ನು ನೋಡಿ ಕಿಟಾರ ಕಿರುಚಿ ಪುಟ್ಟನನ್ನು ಕೆಳಗಿಳಿಸಿ ವಸಂತಳತ್ತ ಧಾವಿಸಿದಳು.

* * * * *

ಕಣ್ಣು ಮುಚ್ಚಿ ಆರಾಮವಾಗಿ ಮಲಗಿದ್ದಾಳೆ ವಸಂತ. ಅವಳ ಪಕ್ಕದಲ್ಲಿ ಕುಳಿತಿರು ಮಾಧವಿಯ ಕಣ್ಣುಗಳು ಉಬ್ಬಿಕೊಂಡಿವೆ ಅತ್ತು ಅತ್ತು ಬಳಲಿದಂತೆ. ವಸಂತಳ ತಲೆಯ ಬ ಕುರ್ಚಿಯಲ್ಲಿ ಕುಳಿತಿರುವ ಶ್ರೀಧರ್‌ನ ಮುಖ ಕಳಾಹೀನವಾಗಿದ್ದರೆ, ಮಂಚದ ಕೆಳಗೆ ಕುಳಿತಿರು ಲಕ್ಷ್ಮಿಯ ವದನ ಕೂಡ ಕಳೆಗುಂದಿದೆ.

ವಸಂತಳಿಗೆ ಗರ್ಭಸ್ರಾವವಾಗಿದೆ.

ಪ್ರಜ್ಞಾಶೂನ್ಯಳಾಗುವಾಗ ಹಾಲ್‌ನ ಮೊಜಾಯಿಕ್ ನೆಲದ ಮೇಲೆ ದೊಪ್ಪಂದು ಬೋರಲ ಬಿದ್ದಾಗ ಅವಳಿಗೆ ಗರ್ಭಸ್ರಾವವಾಯಿತು. ಗರ್ಭಸ್ರಾವದೊಂದಿಗೆ ಮಾನಸಿಕವಾಗಿ ಕೂಡ ಆಘಾತಗೊಂಡಳ ವಸಂತ. ಅವಳ ಅದೃಷ್ಟ ಗಟ್ಟಿಯಾಗಿರುವುದರಿಂದಲೋ ಏನೋ ಶ್ರೀಧರ್ ಮನೆಯಲ್ಲಿ ಇದ್ದ. ಅವ ಜೀವ ಅಪಾಯದಿಂದ ಪಾರಾಯಿತು. ಅವಳಿಗಿನ್ನೂ ಪ್ರಜ್ಞೆ ಮರುಕಳಿಸಿ ಬಂದಿಲ್ಲ.

ಸ್ವಲ್ಪ ಹೊತ್ತಿನ ಅನಂತರ ಬೂಟು ಶಬ್ದ ಮಾಡುತ್ತ ಕೋಣೆಯೊಳಕ್ಕೆ ಯುವಕನೊಬ್ಬ ಬಂದ ಮಾಧವಿಯ ಬೆನ್ನು ಬಾಗಿಲಿಗಿತ್ತು. ಆ ಯುವಕ ಶ್ರೀಧರ್‌ನ ಬಳಿಗೆ ಸರಿಯುತ್ತ "ಏನಾಯ ಡಾಕ್ಟರ್?" ಎಂದು ಗಾಬರಿಯ ಸ್ವರದಲ್ಲಿ ಕೇಳುವಾಗ ಮಾಧವಿ ಎದ್ದು ಹೊರಗೋಡಿದಳು. ಅವ ಧ್ವನಿ ಕೇಳಿದ ಕೂಡಲೇ ಅವಳು ತೋರಿದ ಪ್ರತಿಕ್ರಿಯೆ ಅದು. ಹೀಗೆ ಅವಳು ಮಿಂಚಿನಂತೆ ಎದ ಹೋಗುವಾಗ ಅವಳ ಮುಖ ನೋಡಿಬಿಡುತ್ತಾನೆ ಆ ಯುವಕ.

"ಮಧೂ, ಸ್ಟಾಪ್ ದೇರ್." ಪ್ರಪಂಚದ ಮತ್ತೊಂದು ಅದ್ಭುತವನ್ನು ನೋಡುತ್ತಿರುವ ಅಚ್ಚ ಅವನ ಕಣ್ಣುಗಳಲ್ಲಿ ವ್ಯಕ್ತವಾಯಿತು. ಆತನಿಗೆ ಅವಳನ್ನು ನೋಡುತ್ತಿರುವುದು ಕೂಡ ಬಹು ದೊಡ ಶಾಕ್.



ಆ ಶಾಕ್‌ನಿಂದ ಹೊರಬರಲು ಅವನಿಗೆ ಸುಮಾರು ಸೆಕೆಂಡುಗಳೇ ಬೇಕಾದವು.

ಯಾರೊಡನೆ ಕೂಡ ಮಾತಾಡದೆ ಅವಳ ಹಿಂದೆ ಓಡಿದ. 'ವಸಂತಳನ್ನು ನೋಡಿ ಹೋಗ ಬಂದಿದ್ದ ನರ್ಸಿಂಗ್ ಹೋಮಿನ ಕೂಲಿಗಳು, ಮೇಸ್ತ್ರಿಗಳು, ಕೆಲ ರೋಗಿಗಳು ಆದಿಯಾಗಿ ಎಲ್ಲ ಪರಮಾಶ್ಚರ್ಯಗೊಂಡರು. ಶ್ರೀಧರ್ ಕೂಡ.

*   *   *   *   *

"ದಯವಿಟ್ಟು ಹೊರಟು ಹೋಗಿ, ನನ್ನ ದೇವರು ಇಲ್ಲಿದ್ದಾರೆ. ಪ್ಲೀಸ್ ಹೊರಟು ಹೋಗಿ

ಕಪಾಟಿನ ಮುಂದೆ ನಿಂತು ಕೈ ಜೋಡಿಸಿ ಬೇಡುತ್ತಿದ್ದಾಳೆ ಮಾಧವಿ, ತನ್ನ ಹಿಂದೆ ಓಡಿ ಬಂ ಡ್ರಾಯಿಂಗ್ ರೂಮಿನ ಬಾಗಿಲಲ್ಲಿ ನಿಂತಿರುವ ಆ ಯುವಕನನ್ನು ನೋಡುತ್ತ.

ಮಾಧವಿಯನ್ನು ನೋಡಿ ಆನಂದ ತಾಳಲಾರದೆ ಮುಂದೆ ಧಾವಿಸಿ ಅವಳನ್ನು ಅಪ್ಪಿಕೊಳ್ಳಬೇಕೆಂದಿ ಯುವಕ ತಟ್ಟನೆ ನಿಂತುಬಿಟ್ಟ ಬಾಗಿಲಲ್ಲೇ.

"ಏನು ಮಾತಾಡ್ತಿದ್ದೀ ನೀನು, ನಿನ್ನ ದೇವರು ಯಾರು?"

"ಇಲ್ಲಿದ್ದಾರೆ." ಪುಟ್ಟ ಕಪಾಟಿನ ಬಾಗಿಲು ತೆರೆದಳು ಮಾಧವಿ. ಕಪಾಟಿನೊಳಕ್ಕೆ ಆತುರದಿಂ ದೃಷ್ಟಿ ತೂರಿದ ಯುವಕ. ಕಪ್ಪಿಟ್ಟಿದ್ದ ಅವನ ಮುಖದಲ್ಲಿ ತುಂಬು ದೀಪ್ತಿ, ತನು ಮನದಲ್ಲಿ ಪುಳ ಬಾಗಿಲು ತೆರೆದು ಅತ್ತ ತಿರುಗಿದವಳಿಗೆ ಕಾಣಿಸಿದ್ದು, ಆಹ್ವಾನಪೂರ್ವಕವಾಗಿ ಕೈ ಚಾಚಿದ ಯುವಕ ಭಂಗಿ. 'ಬೇಡ ಬೇಡ' ಎಂದು ಮನಸ್ಸು ಹೇಳುತ್ತಿದ್ದರೂ ಯುವಕನತ್ತ ಧಾವಿಸುತ್ತಾಳೆ ಮಾಧವಿ. ಆದ ಆಕೆ ಅವನ ತೋಳುಗಳಲ್ಲಿ ಬಂಧಿಯಾಗಲಿಲ್ಲ, ಪಾದಗಳ ಮೇಲೆ ಜಾರಿಬಿದ್ದಳು. ಚಕಿತತೆಯಿಂದೇ ಬಾಗಿ ಅವಳ ತೋಳು ಹಿಡಿದೆಬ್ಬಿಸಲು ಹೋದ ಆತನನ್ನು ತಡೆಯಿತು ಅವಳ ಧ್ವನಿ.

"ನೀವು ಇನ್ನಿಲ್ಲ ಎಂದು ತಿಳಿದ ದಿನ ನಿಮ್ಮ ನೆನಪಿಗೆ ಸಂಕೇತದಂತೆ ನನ್ನ ಹೃದಯ ದೇಗುಲದಲ್ಲಿ ದೀಪದಂತೆ ಪಟಪಟಿಸುತ್ತಿದೆ ಮನಸ್ಸು. ಮೊನ್ನೆಮೊನ್ನೆಯವರೆಗೂ ನಿಮ್ಮನ ದೈವದಂತೆ ಪೂಜಿಸುತ್ತಿದ್ದೆ. ಆ ಭಾವನೆಯನ್ನು, ಆ ಆರಾಧನೆಯನ್ನು ನೀವು ಹಾಗೆಯೇ ಉಳಿಸಿಬಿಟ್ಟಿದ್ದ ಚೆನ್ನಾಗಿತ್ತೇನೋ? ಗುರಿಕಾಣಲಿದ್ದ ನನ್ನ ನೇರ ಪಯಣದಲ್ಲಿ, ಅಡ್ಡದಾರಿಯಂತೆ ಮತ್ತೆ ಯಾಕೆ ಬಂದಿ ಹೇಳಿ. ರೂಪವನ್ನು ಮರೆತು ನೆನಪುಗಳನ್ನಷ್ಟೇ ಮಾತ್ರವೇ ನೋಡುತ್ತಿರುವ ನನ್ನ ಮನೋನೇತ್ರ ಮುಂದೆ ಚಲಿಸುವ ಸಿನಿಮಾ ರೀಲಿನಂತೆ ನೀವು ಬಂದದ್ದು ಯಾಕೆ ಹೇಳಿ. ನೀವು ನನ್ನವ ಎಂದುಕೊಂಡ ಆ ಅಸತ್ಯದಲ್ಲಿ ಮೂಢನಂಬಿಕೆಯಲ್ಲಿ ನಾನು ಪ್ರಶಾಂತವಾಗಿ ಜೀವಿಸುತ್ತಿದ್ದೆ. ಆದ ಈಗ ಕಠೋರ ಸತ್ಯ ಬೆಂಕಿಯಂತೆ ಸುಡುತ್ತಿದೆ ನನ್ನನ್ನು." ಆತ ಅಂದರೆ ಫಾರಿನ್ ರಿಟರ್ನ್ ಇಂಜಿನಿಯರ್ ಬೇರೆ ಯಾರೂ ಅಲ್ಲ ಸುರೇಂದ್ರನೇ. ಆತನಿಗೆ ಅವಳ ಮಾತಿನ ಅರ್ಥವಾಗಲಿಲ್ಲ ಗೊಂದಲದಲ್ಲಿ ಬಿದ್ದ. ತಾನಿಲ್ಲ ಎಂದು ಇವಳು, ಇವಳಿಲ್ಲ ಎಂದು ತಾನು ಇಷ್ಟೆಲ್ಲ ಬರಿ ಭ್ರಮೆಯಲ್ಲ ಇದ್ದುಬಿಟ್ಟಿದ್ದರೂ ಕೆಲ ಕಾಲದ ಅಗಲಿಕೆಯ ಅನಂತರ ಆಕಸ್ಮಿಕವಾಗಿ ಭೇಟಿಯಾದ ಈ ಪ್ರಥಮ ಗಳಿಗೆಯಲ್ಲಿ, ಈ ಅದ್ಭುತ ಗಳಿಗೆಯಲ್ಲಿ ಇವಳಲ್ಲಿ ಯಾಕಿಷ್ಟು ಅಸಹನೆ, ನಿಷ್ಠುರತೆ?

ಆವೇಶದಿಂದ ಉಬ್ಬಿತು ಅವನ ಗಂಟಲು ಸೆರೆ, ಮಾಧವಿಯ ತೋಳು ಹಿಡಿದೆಬ್ಬಿಸಿದ.

"ಇನ್ನೇನು ಹೇಳಬೇಡ ಮಧೂ, ನಾನು ಸತ್ತು ಹೋದೆ ಎನ್ನುವ ಭ್ರಮೆಯಲ್ಲಿ ನೀನು ನಿನ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು, ಹುಚ್ಚು ಹುಚ್ಚಾಗಿ ಮಾತಾಡ್ತಿದ್ದಿ."

"ಹೌದು ರೀ, ನಾನೀಗ ತಲೆ ಕೆಟ್ಟವಳು, ಯಾಕಂದ್ರೆ ನಿಮಗೀಗ ಇನ್ನೊಬ್ಬಳು ರಾ ಇದ್ದಾಳಲ್ಲ. ಅವಳಿರುವಾಗ ನಾನು ಹುಚ್ಚಿಯಾಗದೆ ಇನ್ನೇನಾಗ್ತೇನೆ."

"ನನಗೆ ಇನ್ನೊಬ್ಬಳು ರಾಣೀನಾ?" ಹೇಳಿ ಅಚ್ಚರಿಯಿಂದ ಕಣ್ಣಗಲಿಸಿ ಆಮೇಲೆ ಪಕಪ ನಕ್ಕುಬಿಡುತ್ತಾನೆ.

"ನಿನ್ನನ್ನು ಕರೆದೊಯ್ದು ನನ್ನ ಅಂತಃಪುರ ದಲ್ಲಿಡುತ್ತೇನೆ ಅಂತ ಹೇಳಿ ಮಾಯವಾಗಿಬಿಟ್ಟೆ ಅಂ

ನಿನ್ನ ಸಿಟ್ಟು ಮಧೂ, ನಾನಲ್ಲ ಮಾಯವಾಗಿ ಹೋದದ್ದು ನೀನೇ. ನಾನೆಲ್ಲಿದ್ದೇನೋ ಅಲ್ಲೇ ಇದ್ದೆ, ಆದರೆ ನೀನು ಮಾತ್ರ ಕಾಣದಾದೆ. ನನಗೆ ತೀರದ ಶಿಕ್ಷೆಯನ್ನು ಕೊಟ್ಟು ಈಗ ದೇವತೆಯಂತ ಪ್ರತ್ಯಕ್ಷವಾಗಿ...''

"ಮತ್ತೆ ನಿಮ್ಮ ಹೆಂಡ್ತಿ?''

"ನನಗೆ ಬೇರೆ ಯಾವ ಹೆಂಡ್ತಿಯೂ ಇಲ್ಲ, ನನ್ನ ಈಗಿನ ಮತ್ತು ಕೋಟಿ ಕೋಟಿ ಜನುಮಗಳ ಹೆಂಡ್ತಿ ನೀನೇ.'' ನಸುನಕ್ಕ ನರೇಂದ್ರ.

"ನಿಜವಾಗ್ಲೂ?'' ಅವನ ಕಿರುನಗು ನೋಡಿ ಚಂದಮಾಮನನ್ನು ನೋಡಿ ಪುಳಕಗೊಂಡಂತೆ ಪುಳಕಿಸಿತು ಅವಳ ತನು, ಬಳ್ಳಿಯಂತೆ ಅವನನ್ನು ಅಪ್ಪಿಕೊಂಡಳು.

"ಮೈ ಡಿಯರ್ ಮಧೂ, ಯೂ ಆರ್ ಮೈ ಲವ್.'' ಅಮೃತಕಲಶದಂತಾ ಅವಳ ಮುಖ ಹಿಡಿದು ಚುಂಬನಗಳೆಂಬ ಮಧುವಿನಲ್ಲಿ ತೋಯಿಸಿ ಬಿಟ್ಟ ನರೇಂದ್ರ.

ಅವಳ ನಯನಗಳಲ್ಲಿ, ವದನದಲ್ಲಿ, ತುಟಿಗಳಲ್ಲಿ ಹೊಸ ಬೆಳಕು. ಕಣ ಕಣದಲ್ಲಿ ಆನಂದದ ಜರಿ. ಈ ನವ ಚೈತನ್ಯವನ್ನು ತಾಳಲಾಗದಂತೆ ಅವನನ್ನು ಇನ್ನಷ್ಟು ಗಾಢವಾಗಿ ಅಪ್ಪಿಕೊಂಡಳು. ಅಪ್ಪುಗೆ ಬಿಗಿಯಾದಂತಲ್ಲ ಅವಳ ನೇತ್ರಗಳಿಂದ ಆನಂದಭಾಷ್ಪ ಪಟಪಟ ಉದುರಿತು. ತನ್ನ ಅಪ್ಪುಗೆಯಲ್ಲಿ ಕಾಲವನ್ನೇ ಮರೆತಂತೆ ನಿಂತಿರುವ ಆನಂದ ಮೋಹಿನಿಯನ್ನು ಪ್ರೇಮಮೂರ್ತಿಯನ್ನು ನೋಡುತ್ತ ನಿಂತುಬಿಟ್ಟ ನರೇಂದ್ರ.



ಪ್ರೇಮ ಭಾವನೆ

ನಿನ್ನನ್ನರಿಸಿ ನಾ ಬಂದ ನೀ ಸ್ವೀಕರಿಸುವೆ
ಎಂದು
ನೀ ತಿರಸ್ಕರಿಸಲು ನಾ ತಿಳಿದೆ ನಿನ್ನ
ಭಾವನೆ ಏನೆಂದು
ಭಗ್ನ ಪ್ರೇಮ ಸಂಘಕ್ಕೆ ಸೇರದೆ
ಇರು ನೀ ಎಂದೆಂದೂ
ನೀನೊಪ್ಪಿದರೆ ನಾ ಒಲ್ಲೆ ಎನ್ನಲು
ಮೂರ್ಖನೇ
ನಿನ್ನ ದಾರಿ ಕಾಯುವೆನು ಬೇಗನೆ.

— ಶ್ರೀಕಾಂತ್ ರಾ. ಗುಳೇದ

ಕೈ ಜಾರಿ, ಕಣಿವೆಯಲ್ಲಿ ಉರುಳಿಹೋಯಿತೆಂದುಕೊಂಡ ಈ ಮುತ್ತಿನ ಹಾರ ಅಂಗೈಯಲ್ಲಿ ಬೆಡಗು ಬಿನ್ನಾಣದಿಂದ ನಳ ನಳಿಸುತ್ತಿದ್ದು, ಶೀತಲ ಮಾರುತದ ದಾಳಿಗೆ ಕೊಚ್ಚಿಕೊಂಡು ಹೋಗಿ ಕೊಚ್ಚೆಯಲ್ಲಿ ಬಿದ್ದು ಹೋಯಿತೆಂದುಕೊಂಡಿದ್ದ ತಾವರೆ, ಮೋಡದ ಮರೆಯಲ್ಲಿ ಸೇರಿಕೊಂಡು ತನ್ನನ್ನು ಸತಾಯಿಸಿದ ಈ ಚಂದಮಾಮ ಮತ್ತೆ ತನ್ನ ನೇತ್ರಗಳ ಮುಂದೆ, ತನ್ನ ಅಪ್ಪುಗೆಯಲ್ಲಿ, ತನ್ನ ಹೃದಯದಲ್ಲಿ. ನರೇಂದ್ರ ಅವಳ ಆನಂದಭಾಷ್ಪ ಒರೆಸಿದ.

ಮತ್ತೆ ಮಾಧವಿಯೇ "ಅಣ್ಣನೊಂದಿಗೆ ನನ್ನ ಹೆಂಡ್ತಿ ಬರೋದಿಲ್ಲ ಅಂತ ಹೇಳ್ತಿದ್ರಂತೆ ಯಾಕೆ?'' ಅವಳ ಪ್ರಶ್ನೆಗೆ ಉತ್ತರಿಸುವ ಮುಂಚೆ ಅವಳನ್ನು ಮಂಚದ ಬಳಿಗೆ ಕರೆದೊಯ್ದು ಇಬ್ಬರೂ ಮಂಚದ ಮೇಲೆ ಕುಳಿತರು.

"ಎಲ್ಲರೂ ನೀನು ಸತ್ತು ಹೋಗಿದ್ದಿ ಎಂದು ಭಾವಿಸಿದರೂ ಯಾಕೋ ನಾನು ಹಾಗೆ ಭಾವಿಸಲಿಲ್ಲ. ನನ್ನ ಹೃದಯದಲ್ಲಿ ನೀನು ಅಮರಳಾಗೇ ಉಳಿದು ಬಿಟ್ಟಿರುವೆ ಎಂದು ನಾನು ಭಾವಿಸಿದೆ. ನನ್ನಲ್ಲಿ ಈ 'ಫೀಲಿಂಗ್' ಇಲ್ಲದಿದ್ದಲ್ಲಿ ನಾನಿಲ್ಲಿಯವರೆವಿಗೂ ಉಳಿಯುತ್ತಿರಲಿಲ್ಲವೇನೋ?

ಡಾಕ್ಟರ್ ಶ್ರೀಧರ್ ನಿಮ್ಮ ಹೆಂಡ್ತಿ ಎಲ್ಲಿ, ಯಾಕೆ ಬರಲಿಲ್ಲ ಎಂದು ಕೇಳುವಾಗಲೆಲ್ಲ ನನ್ನ ಹೆ ಮೃತಪಟ್ಟಿದ್ದಾಳೆ ಎಂದು ಹೇಳಲಾಗುತ್ತಿರಲಿಲ್ಲ ನನಗೆ. ಅವಳು ಬರೋದಿಲ್ಲ ಎಂದು ಮಾ ಹೇಳುತ್ತಿದ್ದೆ. ಮಂದಾರ ಮಕರಂದವನ್ನು ಹೀರಿದ ದುಂಬಿಗೆ ಒಣಹುಲ್ಲಿನ ಅಗತ್ಯವೆಲ್ಲಿರುತ್ತೆ? ನಿನ್ನ ಹೆಂಡ್ತಿಯಾಗಿ ಪಡೆದು ಆನಂದದ ಚರಮಸೀಮೆಯವರೆಗೂ ಪಯಣಿಸಿ ಬಂದ ನಾನು, ನಿ ಜಾಗದಲ್ಲಿ ಇನ್ನೊಬ್ಬಳನ್ನು ಹೇಗೆ ತರಬಲ್ಲೆ? ಒಂದು ವೇಳೆ ನೀನಿಲ್ಲದಿದ್ದರೂ ನಿನ್ನ ನೆನಪಲ್ಲೇ ನಾ ಕೊನೆಯುಸಿರು ಎಳೆಯುವವನೇನೋ ವಿನಾ ಮತ್ತೊಬ್ಬಳ ಸಹವಾಸ ಮಾಡುವುದಿಲ್ಲ.''

"ನರೇನ್'' ಅವಳ ಗಂಟಲು ಬಿಗಿದು ಬಂತು.

"ಪ್ರೇಮವೆನ್ನುವುದು, ಗಂಡು ಹೆಣ್ಣು ಇಬ್ಬರ ಮೇಲೂ ಸಮವಾಗಿ ತನ್ನ ಪ್ರಭಾವ ಬೀರುತ್ತ ನಾನಿಲ್ಲ ಎಂಬ ಭ್ರಮೆಯಲ್ಲಿ ನೀನು ವಿರಾಗಿಣಿಯಂತೆ ಬದುಕುತ್ತಿರುವಾಗ ನಾನು ಮಾತ್ರ ಅಂಥ ಸ್ಥಿತಿಯಲ್ಲಿ ಮನ್ಮಥನಂತೆ ಹೇಗೆ ಬದುಕಲಿ?''

"ದಯವಿಟ್ಟು ನನ್ನನ್ನು ಕ್ಷಮಿಸು ನರೇನ್.'' ಕ್ಷಮೆ ಕೋರಿ ಮತ್ತೆ ಆ ಭಯಂಕರ ಗತ ಸ್ವಪ್ನ ಬಗ್ಗೆ ಕೇಳಿದಳು ಮಾಧವಿ.

ಹೇಳಲಾರಂಭಿಸಿದ ಆತ. "ನನ್ನ ಮಿತ್ರನ ಮದುವೆಗೆ ನಾವು ನಾಲ್ಕು ಜನ ಹೋಗ್ತಿದ್ದೇವೆ ಅಂ ನಿನಗೆ ಹೇಳಿದ್ದೆ. ಅದೇ ರೀತಿ ನಾಲ್ವರು ಮಾತ್ರ ಹೊರಟೆವು. ನಗರದ ಹೊರವಲಯ ದಾಟುವಾ ನಮ್ಮ ಮಿತ್ರನೊಬ್ಬ ದಾರಿಯಲ್ಲಿ ಕಾಣಿಸಿದ. ಅವನು ಕೂಡ ಮದುವೆಗೆ ಹೊರಟಿದ್ದ. ಆದರೆ ಬಸ ಸಿಗಲಿಲ್ಲವಂತೆ. ಅವನನ್ನು ನಮ್ಮ ಜೀಪಿಗೇರಿಸಿಕೊಂಡೆವು. ಚಾಲಕನೊಟ್ಟಿಗೆ ಸೇರಿ ಈಗ ನಾವು ಆ ಮಂದಿ ಜೀಪಿನಲ್ಲಿದ್ದವು.

"ಹೈದರಾಬಾದ್ ದಾಟಿ ಮೂರು ನಾಲ್ಕು ಕಿಲೋಮೀಟರ್ ಬಂದಿರಬೇಕು ನಾವು, ನಮ್ಮೆದುರ ದಿಕ್ಕಿನಲ್ಲಿ ಕಾರಿನಲ್ಲಿ ಬಂದ ತಾತ ಕಾರು ನಿಲ್ಲಿಸಿ ನನ್ನನ್ನು ಕೂಗಿದ. ನಾನು ನನ್ನ ಮಿತ್ರನ ಮದುವೆ ಹೋಗುತ್ತಿದ್ದೇನೆ ಎಂದು ಹೇಳಿದರೂ ಕೇಳದೆ ನೀನೀಗ ಬರಲೇಬೇಕು' ಎಂದು ಒತ್ತಾಯ ಹೇರಿ ಮ ಹೈದರಾಬಾದ್‌ಗೆ ಕರೆದುಕೊಂಡು ಬಂದ. ಐದು ಜನರನ್ನು ಹೊತ್ತ ದುರದೃಷ್ಟದ ಜೀಪು ಆಮೇಲೆ... ನಿಟ್ಟುಸಿರು ಹಾಕಿದ ನರೇಂದ್ರ.

"ದಯವಿಟ್ಟು ಆ ಅಪಘಾತದ ವಿವರ ಹೇಳಬೇಡಿ'' ಮಾಧವಿಯ ಕಣ್ಣಮುಂದೆ, ಅವತ್ತು ರೈಲ ಪ್ಲಾಟ್ ಫಾರ್ಮ್ಮಿನ ಮೇಲೆ ಪೇಪರು ಓದಿದ್ದು, ಅಪಘಾತದ ಸುದ್ದಿ ನೋಡುತ್ತಲೇ ತನ್ನ ಹೃದಯ ಕ್ರಿಯೆ ಕ್ಷಣ ಕಾಲ ನಿಂತ ಅನುಭವವಾದದ್ದು ಎಲ್ಲವೂ ಸುಳಿದಾಡಿದವು. ಅವಳಿಗೆ ಆ ನರಕ ಸದೃ ವಿವರ ಮತ್ತೆ ಕೇಳುವ ತಾಳ್ಮೆ ಇಲ್ಲ.

"ನನ್ನ ತಾತ ನನ್ನನ್ನು ಅಷ್ಟೊಂದು ತುರ್ತಾಗಿ ಹೈದರಾಬಾದ್‌ಗೆ ಕರೆದುಕೊಂಡು ಬಂದದ್ದು ಹುಡುಗಿಯನ್ನು ನೋಡಲಿಕ್ಕಂತೆ. ನಾನು ಯಾವ ಹುಡುಗಿಯನ್ನೂ ನೋಡೋದಿಲ್ಲಾಂತ ಹಟ ಹಿಡಿದೆ. ನನಗೆ ಮದುವೇನೇ ಬೇಡ ತಾತ ಅಂತ ಹೇಳಿಬಿಟ್ಟಾಗ, ತಾತ ಮತ್ತೆ ನನ್ನನ್ನು ಹಳ್ಳಿ ಕರೆದೊಯ್ದು 'ಏನ್ ನಿನ್ ಸಮಾಚಾರ?' ಅಂತ ಕೇಳಿದ. ನಾನು ನಮ್ಮಿಬ್ಬರ ಪ್ರೇಮದ ಬಗ್ಗೆ ಹೇಳಿದ 'ಅವಳು ನಿಜವಾಗ಼್ಲೂ ಗರ್ಭಿಣಿಯಾಗಿದ್ದಾಳಾ?' ಎಂದು ಮತ್ತೆ ಕೇಳಿದ, ಹೌದು ಅಂತ ಪ್ರಮಾ ಮಾಡಿದೆ. 'ಸರಿ ನಾನದರ ಬಗ್ಗೆ ಎನ್‌ಕ್ವಯರಿ ಮಾಡ್ತೇನೆ. ನೀನು ಹೇಳಿರೋದೆಲ್ಲ ಸತ್ಯವಾಗಿದ್ರೆ ನೀನ ಅವಳನ್ನೇ ಮದುವೆಯಾಗುವೆ. ಒಂದು ವೇಳೆ ಸುಳ್ಳಾದರೆ ಮಾತ್ರ ನಾನು ಸೆಲೆಕ್ಟ್ ಮಾಡಿ ಹುಡುಗಿಯನ್ನೇ ಮದುವೆಯಾಗಬೇಕು. ನೀನು ಅಲ್ಲಿಯವರೆಗೂ ಹಳ್ಳಿ ಬಿಟ್ಟು ಹೋಗಬಾರದು ಎಂದು ತಾಕೀತು ಮಾಡಿದ ತಾತ.

"ಒಂದು ವಾರದ ಅನಂತರ ಎಲ್ಲಿಗೋ ಹೋಗಿ ಬಂದ ತಾತ ತುಂಬ ನೊಂದ ದನಿಯಲ್ಲಿ ನನ ಹೇಳಿದ. 'ನೀನು ನತದೃಷ್ಟ ಕಣೋ ನರೇನ್, ನೀನು ಜೀಪಿನ ಅಪಘಾತದಲ್ಲಿ ಸತ್ತು ಹೋಗಿದ್ದೀಯೆಂದು

ಆ ಮಾಧವಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.' ನನಗೆ ದಿಗ್ಭ್ರಮೆಯಾಯಿತು. ನಾನು ನಂಬಲಿಲ್ಲ. ಬಹುಶಾ ತಾತ ನನಗೆ ಸುಳ್ಳು ಹೇಳುತ್ತಿದ್ದಾನೇನೋ ಎಂದುಕೊಂಡೆ ಕೂಡ. ಆದುದರಿಂದ ತಾತನಿಗೆ ಹೇಳದೆ ಕೇಳದೆ ಹೈದರಾಬಾದಿಗೆ ಹೊರಟು ಬಂದೆ.

"ಜಯಶ್ರೀ ಮೂಲಕ ನಾನು ನೀನು ಕಾಣೆಯಾದುದರ ಬಗ್ಗೆ ತಿಳಿದುಕೊಂಡೆ. ನಿನ್ನ ಮನೆಗೆ ಹೋದಾಗ 'ನೀನಿನ್ನೂ ಬದುಕೇ ಇದ್ದೀಯ, ಅವಳನ್ನು ಕೊಂದು ನೀನು ಮಾತ್ರ ಸುಖವಾಗಿದ್ದೀಯ ಎಲ್ಲ ನಮ್ಮ ಕರ್ಮ' ಎಂದು ನಿನ್ನ ಮನೆಯವರು ಅತ್ತು ನನಗೆ ಶಾಪ ಹಾಕಿದರು. ಆನಂದ್, ಜಯಶ್ರೀ ಕೂಡ ಕೊನೆಕೊನೆಯಲ್ಲಿ ನನ್ನನ್ನು ಕಾಲ ಕಸದಂತೆ ನೋಡಿದರು.

"ನಾನಾಗಲೇ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದೆ. ಅಷ್ಟರಲ್ಲಿ ನನ್ನನ್ನು ಹುಡುಕುತ್ತ ಬಂದ ನನ್ನ ತಾತ, ನನ್ನನ್ನು ಸಮಾಧಾನ ಮಾಡಿ ಹಳ್ಳಿಗೆ ಕರೆದುಕೊಂಡು ಹೋದ. ಅನಂತರ ನಾನು ಮತಿಭ್ರಮಣೆ ಆದವನಂತೆ ಹೊರಗೆಲ್ಲೂ ಹೋಗದೆ ಮಾನಸಿಕ ಯಾತನೆಗೊಳಗಾದೆ. ನಿನ್ನನ್ನು ಹುಡುಕುತ್ತ ದೇಶವನ್ನೆಲ್ಲ ಸುತ್ತಿದೆ. ಒಂದು ವೇಳೆ ವಿರಕ್ತಿಯಿಂದ ಯಾವುದಾದರೂ ಸೇವಾಸದನದಲ್ಲಿ ಅಥವಾ ಮಹಿಳಾಸಮಾಜದಲ್ಲಿ ಸೇರಿಬಿಟ್ಟಿರಲಿಕ್ಕೂ ಸಾಕು ಎಂಬ ನಂಬಿಕೆಯಲ್ಲಿ ಎಲ್ಲ ಸೇವಾ ಸಂಸ್ಥೆಗಳನ್ನು ಹುಡುಕಾಡಿಬಿಟ್ಟೆ ಅಂತಿಮದಲ್ಲಿ ಬಹುಶಾ ನೀನು ನನ್ನನ್ನು ಬಿಟ್ಟು ಹೊರಟು ಹೋಗಿದ್ದಿ ಎಂಬ ನಿರ್ಧಾರಕ್ಕೆ ಬರಲೇಬೇಕಾಯಿತು. ಆ ಕಟು ಸತ್ಯವನ್ನು ತಾಳಲು, ನನಗೆ ಮಾನಸಿಕ ದೃಢತೆ ಕುಗ್ಗುತ್ತ ಬಂದಾಗ ದೇಶ ತೊರೆದು ವಿದೇಶಕ್ಕೆ ಹೋದೆ. ನನ್ನ ಬುದ್ಧಿ ಜಾಣತನದಲ್ಲಿ ಬದಲಾವಣೆ ಬಂತೇನೋ ನನಗೆ ಗೊತ್ತಿಲ್ಲ. ಆದರೆ ನನ್ನ ಹೃದಯ ಮಾತ್ರ ಬದಲಾಗಲೇ ಇಲ್ಲ. ಅದರಲ್ಲಿ ನಿನಗೆ ಶಾಶ್ವತ-ಜಾಗ ಕೊಟ್ಟುಬಿಟ್ಟೆ." ತನ್ನ ಎದೆಯ ಮೇಲೆ ಒರಗಿರುವ ಅವಳ ಶಿರವನ್ನು ಚುಂಬಿಸಿದ ಅಮರ ಪ್ರೇಮಿ.

ತನ್ನ ತಲೆಯ ಮೇಲೆ ಪುಷ್ಪಾಕ್ಷತೆಯನ್ನು ಸಿಂಪಡಿಸಿದಂತಾಯಿತು ಮಾಧವಿಗೆ. ತನ್ನ ಬಲಗೈ ಬೆರಳುಗಳಿಂದ ಅವನ ತುಟಿಗಳನ್ನು ತಡವಿದಳು. ನವಿರು ಬೆಚ್ಚಗಿನ ಸ್ಪರ್ಶದೊಂದಿಗೆ ಪೊದೆಮೀಸೆಯ ಪರಕು ಸ್ಪರ್ಶಕ್ಕೆ ಅವಳ ಮೈ ಜುಂ ಎಂದಾಗ ಅವಳು ತನ್ನ ಕೈಯನ್ನು ಹಿಂದಕ್ಕೆಳೆದುಕೊಳ್ಳಲೆತ್ನಿಸಿದಳು. ಆದರೆ ತುಂಟ ನರೇಂದ್ರ ಬಿಡಲಿಲ್ಲ. ಆ ಬೆರಳುಗಳನ್ನು ಮೃದುವಾಗಿ ಹಲ್ಲಿನಿಂದ ಅವುಚಿ ಹಿಡಿದ.

"ಪ್ಲೀಸ್ ನರೇನ್." ಗೋಗರೆಯುತ್ತಾಳೆ.

'ಹೋಗಲಿ ಪಾಪ' ಎಂಬಂತೆ ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ತನ್ನ ಕೆನ್ನೆಗೆ ಮೃದುವಾಗಿ ಸವರಿಸಿದ ಪ್ರೇಮ ಪೂಜಾರಿ.

"ನಾನು ನಿನ್ನನ್ನು ಬಿಡೋದಿಲ್ಲ. ನೀನು ಮತ್ತೆ ಮಿಣುಕು ಹುಳದಂತೆ ಮಾಯವಾಗಿಬಿಡ್ತೀ. ಆದಕ್ಕೇ ನಾನು ನಿನ್ನನ್ನು ಕೇವಲ ನನ್ನ ಕೈಗಳಿಂದ ಮಾತ್ರ ಬಂಧಿಸುತ್ತಿಲ್ಲ, ತುಟಿ, ಹೃದಯ,



ಓದಿಗಿಂತ ಸ್ವತಂತ್ರವಾಗಿ ವಿಚಾರ ಮಾಡುವುದೇ ಉತ್ತಮ.

— ಐನ್‌ಸ್ಟೀನ್

ನಮ್ಮ ಮೊಳಕಾಲಲ್ಲಿ ನಮ್ಮ ಮುಖ ಅಡಗಿಸಿ ಬದುಕುವುದಕ್ಕಿಂತ, ನಮ್ಮ ಪಾದದ ಮೇಲೆ ಬಿದ್ದು ಸಾಯುವುದು ಲೇಸು.

— ಫ್ರಾಂಕ್ಲಿನ್, ಡಿ. ರೂಜವೆಲ್ಟ್

ಸಂಗ್ರಹ : ಬಿ. ನಿರ್ಮಲ ಜಂಗಳಿ

ಕಣ್ಣುಗಳಿಂದ ಕೂಡ ಬಂಧಿಸುತ್ತಿದ್ದೇನೆ.'' ಮೈಮರೆತು ಬಿಟ್ಟಳು ಮಂದಾರಪುಷ್ಪದ ನವಿರು ಚೆಲುವಿ ಹೆಣ್ಣು. ಇದು ಕನಸು, ಬೇಗ ಕರಗಿಬಿಡುವುದೇನೋ ಎಂಬ ಅಳುಕಿನಿಂದ ಅವನನ್ನು ಇನ್ನಷ್ಟು ಜೋರಾಗಿ ತಬ್ಬಿಕೊಂಡಳು. 'ನಮ್ಮ ಈ ಪ್ರೇಮ ಬಂಧ ಸಡಿಲಗೊಳ್ಳುವುದಿಲ್ಲ, ಕಡಿದು ಹೋಗುವುದಿಲ್ಲ ಕೂಡ.'

"ನೀನು ಹೀಗೆ ಎಲ್ಲವನ್ನೂ ತೊರೆದು ಬಂದು ಬಿಡುವೆ ಎಂದಾಗಲಿ, ಇನ್ನೂ ಜೀವಂತವಾಗಿ ಇರುವೆ ಎಂದಾಗಲಿ ಯಾರೂ ಊಹಿಸಲಿಲ್ಲ. ಯಾಕೆ ಹೀಗೆ ಅಜ್ಞಾತ ವಾಸವನ್ನು ಆಯ್ಕೆ ಮಾಡಿಕೊಂಡೆ?''

"ಈ ಜಗತ್ತಿಗೆ ಬರಲಿರುವ ನಮ್ಮ ಮಗುವಿಗಾಗಿ.'' ತನ್ನ ಗತ ಜೀವನದ ಬಗ್ಗೆ ಹೇಳಿ ಕೊನೆಗೆ "ಅವತ್ತು ವಸಂತಳ ಮನೆಯ ಹಾಲ್‌ನಲ್ಲಿ ಕುಳಿತಿದ್ದಾಗ ನನಗೆ ನಿಮ್ಮ ಧ್ವನಿ ಕೇಳಿಸಿತು, ತುಂಬ ಆಶ್ಚರ್ಯಗೊಂಡೆ. ಆದರೆ ಎದ್ದು ಹೇಗಿ ನಿಮ್ಮನ್ನು ನೋಡುವ ಧೈರ್ಯ ಮಾಡಲಿಲ್ಲ. ನಿಮ್ಮ ಸ್ವರವನ್ನು ಕೇಳುತ್ತ ಹಾಗೆಯೇ ಮೈ ಮರೆತು ಕುಳಿತಿದ್ದಾಗ ವಸು, ನನ್ನನ್ನು ಹೊರಗೆ ಕರೆದೊಯ್ದಳು.

"ಯಾಕೋ ಗೊತ್ತಿಲ್ಲ, ನನ್ನ ನರೇಂದ್ರನ ಧ್ವನಿಯನ್ನು ಹೋಲುವ ಆ ವ್ಯಕ್ತಿಯನ್ನು ಒಮ್ಮೆ ಭೇಟಿಯಾಗಬೇಕೆಂದು ತುಂಬ ಹಂಬಲಿಸಿದೆ ನಾನು. ದಿನೇ ದಿನೇ ಆ ಬಯಕೆ ಬಲಿಯತೊಡಗಿದಾಗ ಒಂದು ವಾರದ ಬಳಿಕ ನಿಮ್ಮನ್ನು ನೋಡಲೇಬೇಕೆಂದು ಮನೆಗೆ ಬಂದೆ. ನೀವು ಗೆಸ್ಟ್‌ಹೌಸಿನಲ್ಲಿದ್ದಿರಿ. ತೋಟದ ಮಾಲಿಯೊಟ್ಟಿಗೆ ಅದೂ ಇದೂ ಮಾತನಾಡ್ತ ನೀವು ಗೆಸ್ಟ್ ಹೌಸಿನಲ್ಲಿರುವ ವಿಷಯ ತಿಳಿದುಕೊಂಡೆ. ತಾತ ಎಲ್ಲಿಗೋ ಹೊರಟು ಹೋದ ಮೇಲೆ ಗೆಸ್ಟ್‌ಹೌಸಿಗೆ ಬಂದು ಕಿಟಕಿಯಲ್ಲಿ ಇಣುಕು ಹಾಕಿದೆ. ಕೋಣೆಯಲ್ಲಿ ನೀವು ಕಾಣಲಿಲ್ಲ. ಕುತೂಹಲ ತಾಳಲಾರದೆ ನಿಧಾನವಾಗಿ ಬಾಗಿಲು ಬಡಿದೆ, ಸಮಾಧಾನ ಬರಲಿಲ್ಲ. ಬಾಗಿಲು ತಳ್ಳಿಕೊಂಡು ಒಳಗೆ ಹೋದೆ. ಕೋಣೆಯಲ್ಲಿ ಕೇವಲ ಮಂಚವಿತ್ತು. ಕಿಟಕಿಯ ಮುಂದೆ ಪುಟ್ಟ ಬೆಂಚಿತ್ತು. ಬೆಂಚಿನ ಮೇಲೆ ಯಾವುದೋ ಪುಸ್ತಕ ಮಗುಚಿ ಹಾಕಲಾಗಿತ್ತು. ಔಪಚಾರಿಕವಾಗಿ ಪುಸ್ತಕವನ್ನು ಎತ್ತಿಕೊಂಡಾಗ ಯಾವುದೋ ಭಾವಚಿತ್ರವೊಂದು ಕೆಳಗೆ ಜಾರಿಬಿತ್ತು. ಕುತೂಹಲ ತಡೆಯಲಾರದೆ ಬಾಗಿ ಅದನ್ನು ಎತ್ತಿಕೊಂಡು ನೋಡಿದೆ. ಏನು ಹೇಳಲಿ ನರೇನ್? ಸ್ವರದಲ್ಲಿ ಸಾಮ್ಯ, ಭಾವಚಿತ್ರದಲ್ಲಿ ಸಾಮ್ಯ ನೋಡಿ ನನ್ನ ಅನುಮಾನ ಇನ್ನಷ್ಟು ಬಲವಾಯಿತು. ಕ್ಷಣ ನಿಲ್ಲದೆ ಆ ಭಾವಚಿತ್ರದೊಂದಿಗೆ ನರ್ಸಿಂಗ್ ಹೋಮಿಗೆ ಓಡೋಡಿ ಬಂದೆ. ಆದರೆ ಮಧ್ಯೆ ನಿಮ್ಮ ಮಾತು 'ನನ್ನ ಹೆಂಡ್ತಿ ಮತ್ತೆ ಬರೋದಿಲ್ಲ' ಎಂಬುದು ನೆನಪಾಗಿ ನನ್ನ ಪ್ರಯತ್ನದಿಂದ ಹಿಂದಕ್ಕೆ ಸರಿದೆ.''

"ಅಂದ ಹಾಗೆ ಎಲ್ಲಿ ನಮ್ಮ ಪುಟ್ಟ ನಿನ್ನನ್ನು ನೋಡಿದ ಆನಂದದಲ್ಲಿ ಅವನನ್ನು ಮರೆತು ಬಿಟ್ಟೆ''

ಅವಳು ಏನನ್ನೋ ಹೇಳಲು ಬಾಯಿ ತೆರೆದಳು. ಅಷ್ಟರಲ್ಲಿ ಬಾಗಿಲ ಬಳಿ ಯಾರದೋ ಹೆಜ್ಜೆ ಸಪ್ಪಳ. ಪರಸ್ಪರ ಅಪ್ಪುಗೆಯಲ್ಲಿದ್ದ ಅವರಿಬ್ಬರೂ ಬೆಚ್ಚಿಬಿದ್ದರು. ಒಮ್ಮೆಲೇ ಬಾಗಿಲತ್ತ ದೃಷ್ಟಿ ಹರಿಸುತ್ತಾರೆ. ಪುಟ್ಟನನ್ನು ಎತ್ತಿಕೊಂಡು ನಿಂತಿದ್ದಾನೆ ಶ್ರೀಧರ್. ಅವನ ಕಣ್ಣುಗಳಲ್ಲೂ ಬಣ್ಣಿಸಲಸದಳ ಆಶ್ಚರ್ಯ, ಅವಳ ಅಪ್ಪುಗೆಯಿಂದ ಹೊರಬಂದು ಶ್ರೀಧರ್‌ನತ್ತ ದಾಪುಗಾಲು ಹಾಕುತ್ತ, ಪುಟ್ಟನನ್ನು ಎತ್ತಿಕೊಂಡು ಒಂದೇ ಸಮ ಮುದ್ದಾಡಿ ಬಿಟ್ಟ ನರೇಂದ್ರ. ಶ್ರೀಧರ್‌ನಿಗೀಗ ಎಲ್ಲವೂ ಅರ್ಥವಾಯಿತು. ಕೊನೆಗೂ ಮಾಧವಿ, ಶಾಂತಿ ತೀರವನ್ನು ತಲುಪಿದಳು. ಅಷ್ಟೇ ಸಾಕೆನಿಸಿತು ಅವನಿಗೆ.

"ಬನ್ನಿ ಹೋಗೋಣ, ವಸಂತಳಿಗೆ ಪ್ರಜ್ಞೆ ಮರುಕಳಿಸಿದೆ. ನಿಮಗಾಗಿ ಕಾಯ್ತಿದ್ದಾಳೆ.'' ಪುನರ್ ಮಿಲನಗೊಂಡ ಪ್ರೇಮಿಗಳತ್ತ ತೃಪ್ತಿಯಿಂದ ನೋಡುತ್ತ ಶ್ರೀಧರ್ ಹೇಳಿದಾಗ ತನ್ನಲ್ಲೇ ಹೇಳಿಕೊಂಡಳು ಮಾಧವಿ, 'ಹೌದು, ನನಗೋಸ್ಕರ ಎಷ್ಟೆಲ್ಲ ತೊಂದರೆ ತಗೊಂಡ, ಕೊನೆಗೆ ತನ್ನ ಗರ್ಭದ ಫಲವನ್ನು ನಾಶ ಮಾಡಿಕೊಳ್ಳುವಂತಹ ಸ್ಥಿತಿಯನ್ನು ಎದುರಿಸಿದ ಆ ದೇವತೆ ನಮಗಾಗಿ ಕಾಯ್ತಿದ್ದಾಳೆ.'

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ವ್ಯಾಪಾರ

ಲೀಲಾ ಮಣ್ಣಾಲ

"ಇನ್ನೊಂದು ಚಪಾತಿ ಹಾಕಿಕೊಳ್ಳಪ್ಪ, ಒಂದರಲ್ಲೇ ಹೊಟ್ಟೆ ತುಂಬತ್ಯೆ?''

"ಸಾಕಮ್ಮಾ ನನಗೆ ಹಸಿವಿಲ್ಲ.''

"ಬೆಳೆಯೋ ಮಕ್ಕಳಿಗೆ ಹಸಿವಿಲ್ಲ ಎಂದರೆ ನಂಬುವ ಮಾತೇನು?''

"ಖಂಡಿತ ನನಗೆ ಹಸಿವಿಲ್ಲಮ್ಮ.''

ಇದು ಹೆಚ್ಚು ಕಡಿಮೆ ಪ್ರತಿ ದಿನವೆಂಬಂತೆ ನನ್ನ ಮತ್ತು ನನ್ನಮ್ಮನ ನಡುವೆ ನಡೆಯುತ್ತಿದ್ದ ಮಾತುಕತೆ. ನಾನು ಇನ್ನೊಂದು ತಿಂದರೆ ಅಮ್ಮ ಉಪವಾಸವಿರುತ್ತಾಳೆಂದು ನನಗೆ ಗೊತ್ತು. ಮುಂಬಯಿಯ ದುಬಾರಿ ನಗರ ಜೀವನದಲ್ಲಿ ಹೊಟ್ಟೆ ತುಂಬ ತಿನ್ನುವಷ್ಟು ಅದೃಷ್ಟವಂತರು ನಾವಾಗಿರಲಿಲ್ಲ. ಅಕ್ಕನ ಮದುವೆಗೆ ಮಾಡಿದ ಸಾಲವನ್ನು ತೀರಿಸುತ್ತ ಆರು ಜನರ ಜೀವನಾವಶ್ಯಕತೆಗಳನ್ನು ಪೂರೈಸುವುದರಲ್ಲಿ, ನನ್ನಪ್ಪನ ಆರಡಿಯ ಸದೃಢ ಜೀವ ಹಣ್ಣಾಗಿತ್ತು.

"ಹರ್‌ಚಂದ್, ಇಂದು ನಿನ್ನ ಜೀವನದಲ್ಲಿ ಮಹತ್ವದ ದಿನ ಮಗೂ, ನೀನು ಅರೆ ಹೊಟ್ಟೆಯಲ್ಲಿರಬಾರದು'' ಎನ್ನುತ್ತ ನಾನು ತಡೆದರೂ ಕೇಳದೆ ಅಮ್ಮ ನನ್ನ ತಟ್ಟೆಗೆ ಇನ್ನೊಂದು ಚಪಾತಿ ಹಾಕಿದಳು. ಅವಳ ಮಾತಿನಿಂದ ನಾನು ಹರ್ಷಪುಳಕಿತನಾದೆ. ಈ ದಿನ ನಾನು ಮತ್ತೆ ಶಾಲೆಯ ಮೆಟ್ಟಲನ್ನು ತುಳಿಯಲಿದ್ದೇನೆ. ಇದಕ್ಕಿಂತ ಭಾಗ್ಯ ಬೇರೇನಿದೆ?

ಬಡತನದ ಕಾರಣದಿಂದಾಗಿ ಎರಡು ವರ್ಷಗಳ ಹಿಂದೆ ನಾನು ಶಾಲೆ ಬಿಡಬೇಕಾದ ಪರಿಸ್ಥಿತಿ ಬಂದಿತ್ತು. ವೃತ್ತಿಯಲ್ಲಿ ನನ್ನಪ್ಪ ಬಡಗಿ. ಅವರ ಕೆಲಸ ನಾಜೂಕು ಎನ್ನುವುದು ನಿಜ. ಆದರೂ ಈ ಪೈಪೋಟಿಯ ಯುಗದಲ್ಲಿ ಸಿಗುವ ಆದಾಯ ನಮ್ಮ ದೊಡ್ಡ ಸಂಸಾರಕ್ಕೆ ಸಾಕಾಗುತ್ತಿರಲಿಲ್ಲ. ನಾನಾಗ ಆರನೆಯ ತರಗತಿಯಲ್ಲಿ ಓದುತ್ತಿದ್ದೆ. ತಿಂಗಳುಗಟ್ಟಲೆ ಸ್ಕೂಲ್‌ಫೀಸ್ ಕಟ್ಟದಿದ್ದ ನನ್ನನ್ನು ಟೀಚರ್ ಕ್ಲಾಸಿಗೆ ಸೇರಿಸಿಕೊಳ್ಳುತ್ತಿರಲಿಲ್ಲ. ನಾನು ತರಗತಿಯ ಬಾಗಿಲಲ್ಲೇ ನಿಂತು ಪಾಠ ಕೇಳಿಸಿಕೊಳ್ಳುತ್ತಿದ್ದೆ. ಎಷ್ಟು ಗೋಗರೆದರೂ ಅಪ್ಪ ಫೀಸಿನ ದುಡ್ಡು ನನಗೆ ಕೊಡಲೇ ಇಲ್ಲ. ಯಾಕೆಂದರೆ ಅದೇ ಸಮಯದಲ್ಲಿ ನನ್ನಕ್ಕನ ಮದುವೆಯಾಗಿತ್ತು. ಒಂದು ದಿನ ಹಾಜರಿಪಟ್ಟಿಯಿಂದ ನನ್ನ ಹೆಸರನ್ನು ಕಿತ್ತು

ಹಾಕಿದರು. ನಾನು ಅಳುತ್ತ ಮನೆಗೆ ಬಂದೆ. ಅನಂತರ ಅಪ್ಪನ ದುಡಿಮೆಯಲ್ಲಿ ಸೇರಿಕೊಂಡೆ. ಓದಿನಲ್ಲಿ ನನಗಿರುವ ಅದಮ್ಯ ಆಸೆಯನ್ನು ಕಂಡು ಮತ್ತೆ ಶಾಲೆಗೆ ಸೇರಿಸುವ ಮನಸ್ಸು ಮಾಡಿದ್ದಾರೆ ನನ್ನ ಹೆತ್ತವರು.

ತಿಂಡಿ ತಿಂದು ಕೈ ತೊಳೆದವನೇ ನನ್ನಲ್ಲಿದ್ದ ಒಂದೇ ಒಂದು ಒಳ್ಳೆಯ ಉಡುಪನ್ನು ತೊಟ್ಟುಕೊಂಡೆ. ನಿನ್ನೆ ರಾತ್ರಿಯೇ ಅದನ್ನು ದಿಂಬಿನಡಿ ಇಟ್ಟದ್ದರಿಂದ ಇಸ್ತ್ರಿ ಹಾಕಿದಂತೆಯೇ ಗರಿಗರಿಯಾಗಿತ್ತು. ಅನಂತರ ನೀಳಕೂದಲಿನ ಮುಡಿಯನ್ನು ಬಿಚ್ಚಿ ಓರಣವಾಗಿ ಬಾಚಿಕೊಂಡು ಮತ್ತೆ ಕಟ್ಟಿದೆ. ಅಷ್ಟರಲ್ಲಿ "ಹೊರಟಾಯ್ತೇನೋ ಮದುಮಗ?'' ಎಂದು ಅಪ್ಪ ಕೇಳಿದರು. ನನಗೆ ನಾಚಿಕೆಯಾಯ್ತು. ಅಮ್ಮನ ಕಾಲಿಗೆ ನಮಸ್ಕರಿಸಿದವನೇ ಲಗುಬಗನೆ ಅಪ್ಪನ ಜೊತೆ ಹೆಜ್ಜೆ ಹಾಕಿದೆ. ವೈಟ್ ಫ್ಲವರ್ ಸ್ಕೂಲ್‌ನ ಗೇಟು ದಾಟಿ ಒಳಗಡಿಯಿಟ್ಟಾಗ, ನನಗೆ ಸ್ವಲ್ಪ ಮಟ್ಟಿಗೆ ನಿರಾಸೆಯೆನಿಸಿತು. ಇದೊಂದು ಖಾಸಗೀ ಸಂಸ್ಥೆ. ಹೊರಗೆ ಆಡುವ ಮಕ್ಕಳು ಮತ್ತು ತೂಗು ಹಾಕಿದ ಬೋರ್ಡನ್ನು ನೋಡದಿದ್ದರೆ, ಇದನ್ನು ಶಾಲೆ ಎಂದು ಯಾರೂ ಗುರುತಿಸಲಾರರು. ನಾಲ್ಕಂತಸ್ತಿನ ದೊಡ್ಡ ಕಟ್ಟಡದ ತಳಭಾಗದಲ್ಲಿದೆ ಈ ಶಾಲೆ. ಮೇಲೆಲ್ಲ ಮನೆಗಳು. ಸಣ್ಣ ಸಣ್ಣ ಕೊಟಡಿಗಳ ಇಕ್ಕಟ್ಟಾದ ಜಾಗ. ಇದೀ ಕಟ್ಟಡಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ಅಂಗಳ ಕಾಂಪೌಂಡ್ ಗೋಡೆಯಾಚೆಯಿದೆ ಅಷ್ಟೇ. ಶಾಲೆಯ ಮಕ್ಕಳಿಗೆಂದು ಬೇರೆ ಆಟದ ಮೈದಾನವಿಲ್ಲ. ನಾನು ಯೋಚಿಸುತ್ತ ಮುಂದಡಿಯಿಡುತ್ತಿದ್ದಾಗ ತೊಪಕ್ಕನೆ ನನ್ನ ತಲೆಗೇನೋ ಬಿತ್ತು. ಮೇಲೆ ನೋಡಿದರೆ ಮೊದಲನೆ ಮಹಡಿಯ ದಢೂತಿ ಬಿಳಿ ಹೆಂಗಸೊಂದು ಬಾಲ್ಕನಿಯಿಂದ ಸರಸರನೆ ಒಳಗೆ ಸರಿಯುವುದು ಕಾಣಿಸಿತು. ಆಕೆ ಕಸ ಕೆಳಗೆ ಸುರಿದಿದ್ದಳು. "ಛೀ'' ಎಂದೆ ಜೋರಾಗಿ. ನನಗೆ ಅಸಹ್ಯವೆನಿಸಿತ್ತು. ಶಾಲೆಗೆ ಸೇರಿಸುವ ಯೋಚನೆ ತಡವಾಗಿ ಬಂದದ್ದರಿಂದ ನನಗೆ ಮುನಿಸಿಪಲ್ ಸ್ಕೂಲಿನಲ್ಲಿ ಸೀಟು ದೊರೆತಿರಲಿಲ್ಲ.

ನಾವು ಆಫೀಸ್ ರೂಂ ಒಳಗೆ ಬಂದೆವು. ಸರಳ ಉಡುಪಿನ ಸ್ಥೂಲ ದೇಹದ ಮಹಿಳೆಯೊಬ್ಬರು ಕುರ್ಚಿಯಲ್ಲಿ ಕುಳಿತಿದ್ದರು. ಅವರೇ ಹೆಡ್‌ಮಿಸೆಸ್ ಇರಬಹುದೆಂದು ನಾನು ಊಹಿಸಿದೆ. "ನಮಸ್ತೆ ಮೇಡಂ'' ಅಪ್ಪ ನನ್ನನುಸರಿಸಿ ನಾನೂ ಹೇಳಿದೆ. ಆಕೆಯ ಮುಖ ಗಡುಸಾಗಿತ್ತು. ನಮ್ಮನ್ನೇ ಅರೆಕ್ಷಣ ಇರಿಯುವಂತೆ ನೋಡಿ, ಅನಂತರ ಕುಳಿತುಕೊಳ್ಳಲು ಸೂಚಿಸಿದರು. ಅನಂತರ ಮಾತುಕತೆ ನಡೆಯಿತು. ಎಲ್ಲ ಸೀಟು ಈಗಾಗಲೇ ಭರ್ತಿಯಾಗಿದೆ. ಐದು ಸಾವಿರಕ್ಕೆ

ಆತನಿಗೆ ಓದಿನಲ್ಲಿ ಬಹಳ ಆಸಕ್ತಿ. ಮೇಡಂ ಡೊನೇಶನ್ ಇಲ್ಲದೆ ಶಾಲೆಗೆ ಸೇರಿಸಿಕೊಂಡರು. ಅವನ ಬುದ್ಧಿವಂತಿಕೆಯನ್ನು ಮೆಚ್ಚಿ ಡಬಲ್ ಪ್ರಮೋಶನ್ ಸಿಗುವುದಿತ್ತು. ಆದರೆ....

ಕಮ್ಮಿಯಿಲ್ಲದಂತೆ ಡೊನೇಶನ್ ಕೊಟ್ಟರೆ ಮಾತ್ರ ಸೇರಿಸಿಕೊಳ್ಳಬಹುದೆಂದು ಹೇಳಿದಾಗ ನಾವು ಭೂಮಿಗಿಳಿದು ಹೋದೆವು.

ನನ್ನ ಮುಖದ ರಕ್ತವೆಲ್ಲ ಇಂಗಿ ಹೋದಂತೆ ನಾನು ಕುಳಿತೆ. ಕೊನೆಗೆ ಅಪ್ಪನೇ ಚೇತರಿಸಿಕೊಂಡು, ನಾವೆಷ್ಟು ಬಡವರೆಂಬುದನ್ನು ಬಗೆಬಗೆಯಾಗಿ ವರ್ಣಿಸಿದರು. ಯಾವ ಮಾತಿಗೂ ಕರಗದ ಆಕೆ ನನ್ನಪ್ಪ ಬಡಗಿಯೆಂದು ತಿಳಿದಾಕ್ಷಣ ತುಸು ಮೃದುವಾದರು. ನನ್ನ ಹಿಂದಿನ ತರಗತಿಯ ಅಂಕ ಪಟ್ಟಿಗಳನ್ನು ನೋಡುತ್ತ ಸಮಾಧಾನವಾದಂತೆ ತಲೆದೂಗಿದರು. ನನ್ನಪ್ಪನಂತೂ ನನ್ನ ಬುದ್ಧಿವಂತಿಕೆಯನ್ನು ಇನ್ನಿಲ್ಲದಂತೆ ವರ್ಣಿಸಿದರು. ಕೊನೆಗೆ ಮೇಡಂ,

"ಆಯಿತು ಸೀಟು ಕೊಡೋಣ, ಮಾಮೂಲಿಯಾಗಿ ಕೊಡಬೇಕಾದ ಒಂದು ಸಾವಿರವಷ್ಟೇ ಕೊಡಿ ಸಾಕು. ಆದರೆ ಒಂದು ಕಂಡೀಶನ್.''

"ಏನು?''

"ನಮ್ಮ ಶಾಲೆಗೆ ಒಂದಷ್ಟು ಡೆಸ್ಕು ಮತ್ತು ಬೆಂಚುಗಳಾಗಬೇಕು. ಸ್ವಲ್ಪ ರಿಯಾಯಿತಿ ಬೆಲೆಯಲ್ಲಿ ಮಾಡಿಕೊಡಲು ಸಾಧ್ಯವೆ?''

"ಓಹೋ ಅದಕ್ಕೇನು, ಖಂಡಿತಾ...'' ಅಪ್ಪ ಉತ್ಸಾಹದಿಂದ ಒಪ್ಪಿಕೊಂಡರು. ತಲೆ ಮೇಲೆ ಇರಿಸಿಕೊಂಡಿದ್ದ ಮಣಭಾರವನ್ನು ಕೆಳಗಿಳಿಸಿದಷ್ಟು ಹಗುರವಾಗಿ ನಾನು ನಿಟ್ಟುಸಿರು ಬಿಟ್ಟೆ! ಹೀಗೆ ನಾನು 'ವೈಟ್ ಫ್ಲವರ್' ಸ್ಕೂಲ್‌ನ ವಿದ್ಯಾರ್ಥಿಯಾದೆ. ನನ್ನ ಬದುಕಿನಲ್ಲಿ ತೆರೆದುಕೊಳ್ಳುತ್ತಿರುವ ಈ ಹೊಸ ಅಧ್ಯಾಯವನ್ನು ಅತ್ಯಂತ ನವಿರಾಗಿ ಬರೆಯಬೇಕೆಂದು ಅಂದೇ ದೃಢ ನಿರ್ಧಾರ ಮಾಡಿದೆ. ನನ್ನ ತರಗತಿಯ ಇತರ ವಿದ್ಯಾರ್ಥಿಗಳಿಂದ ನಾನು ಸ್ವಭಾವದಲ್ಲಿ ಭಿನ್ನವಾಗಿದ್ದೆ. ಅದಕ್ಕೆ ಮುಖ್ಯ ಕಾರಣ ನನ್ನ ವಯಸ್ಸು. ಎರಡು ವರ್ಷ ಶಾಲೆಗೆ ಹೋಗದೆ ಬದುಕಿನಲ್ಲಿ ನನ್ನನ್ನು ತೊಡಗಿಸಿಕೊಂಡದ್ದು ಇನ್ನೊಂದು ಕಾರಣ. ಇದರಿಂದಾಗಿ ನಾನು ವಯಸ್ಸಿಗೆ ಮೀರಿ ಪ್ರಬುದ್ಧನಾಗಿದ್ದೆ. ನನ್ನ ವಯಸ್ಸಿನ ಇತರ ಮಕ್ಕಳಂತೆ ನನಗೆ ತುಂಟಾಟದಲ್ಲಿ ಆಸಕ್ತಿಯಿರಲಿಲ್ಲ. ಎರಡು ವರ್ಷಗಳ ಹಿಂದೆ ಅತ್ಯಂತ ನಿರಾಶೆಯಿಂದ ಮರಳಿದ್ದು ನನಗಿಂದಿಗೂ ಚೆನ್ನಾಗಿ ನೆನಪಿದೆ. ಆಗ ಕಗ್ಗತ್ತಲಂತಿದ್ದ ನನ್ನ ಹೃದಯದಲ್ಲಿ ಮಹತ್ವಾಕಾಂಕ್ಷೆಯ ಚಿಕ್ಕ ಮೊಳಕೆಯಿತ್ತು. ಅದು ಇಂದು ಬೆಳೆದು ಹೆಮ್ಮರವಾಗಿತ್ತು.

ಬೆಳಗಿನ ಹೊತ್ತು ನಾನು ವೃತ್ತ ಪತ್ರಿಕೆಗಳನ್ನು ಮನೆ ಮನೆಗೆ ಹಂಚುವ ಕೆಲಸವನ್ನು ವಹಿಸಿಕೊಂಡೆ. ಸಂಜೆ ಅಪ್ಪನ ಕೆಲಸಕ್ಕೆ ನೆರವಾಗುತ್ತಿದ್ದೆ. ಹೆತ್ತವರ ಹೊರೆಯನ್ನು ಹೆಚ್ಚಿಸಬಾರದೆಂಬುದು ನನ್ನ ಹಂಬಲ. ಇನ್ನುಳಿದ ವೇಳೆಯನ್ನೇ ಹೊಂದಿಸಿಕೊಂಡು ಪಾಠಾಭ್ಯಾಸ ಮಾಡುತ್ತಿದ್ದೆ.

ನನ್ನ ತರಗತಿಯ ಶಿಕ್ಷಕಿ ತುಂಬ ಒಳ್ಳೆಯವರು. "ಹರಚಂದ್, ಸದಾ ಓದುತ್ತೀ, ಸ್ವಲ್ಪ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬಾರದೇನು?'' ಎಂದು ಮೃದುವಾಗಿ ಆಕ್ಷೇಪಿಸುತ್ತಿದ್ದರು. ಆದರೆ ಅದೇಕೋ ಓದು ಬಿಟ್ಟರೆ ಇನ್ನಾವುದರಲ್ಲೂ ನನಗೆ ಆಸಕ್ತಿಯೇ



ಮೂಡುತ್ತಿರಲಿಲ್ಲ.

ನಾನು ಪ್ರತಿಬಾರಿಯೂ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸುತ್ತಿದ್ದೆ. ಅದೂ ನೂರಕ್ಕೆ ಸಮೀಪದ ಅಂಕಗಳಲ್ಲಿ. ಮುತ್ತಿನಂತಹ ಅಕ್ಷರದ ನನ್ನ ಉತ್ತರ ಪತ್ರಿಕೆಯೆಂದರೆ ಶಿಕ್ಷಕಿಯರಿಗೆಲ್ಲ ಅಚ್ಚುಮೆಚ್ಚು. ಮೊದಲು ನನ್ನ ಉತ್ತರ ಪತ್ರಿಕೆಯನ್ನು ತಿದ್ದಿಯಾದ ಮೇಲೆ ಅದನ್ನೇ ಮಾದರಿಯಾಗಿ ಇಟ್ಟುಕೊಂಡು, ಇತರ ಪತ್ರಿಕೆಗಳನ್ನು ತಿದ್ದುವರು.

"ಹರಚಂದ್, ಒಂದು ತಪ್ಪೂ ಮಾಡುವುದಿಲ್ಲವಲ್ಲೋ ನೀನು, ಬೇರೆಯವರಿಗೆಲ್ಲ ಮಾರ್ಕ್ಸ್ ಸೇರಿಸುವುದು ಎಲ್ಲಿಗೆ ಎಂದು ಸಮಸ್ಯೆಯಾದರೆ, ನಿನ್ನ ಪೇಪರಿಂದ ಮಾರ್ಕ್ಸ್ ಕಳೆಯುವುದು ಹೇಗೆ ಎಂಬ ಸಮಸ್ಯೆ" ಎಂದು ಮೆಚ್ಚುಗೆಯಿಂದ ಹೇಳುತ್ತಿದ್ದರು. ನನ್ನ ಕ್ಲಾಸ್ ಟೀಚರ್ ಒಂದೊಂದು ಸಲ "ಬರೀ ಪುಸ್ತಕದ ಬದನೆಕಾಯಿ ಕಣೋ ನೀನು, ಸ್ವಲ್ಪ ನ್ಯೂಸ್‌ಪೇಪರ್ಸ್ ಎಲ್ಲ ಓದು. ಜನರಲ್ ನಾಲೆಡ್ಜ್ ಹೆಚ್ಚುತ್ತೆ" ಎನ್ನುತ್ತಿದ್ದುದೂ ಉಂಟು.

ಒಂದು ಸಲ ನಮ್ಮ ಮಿಸ್ "ಹರಚಂದ್, ಗೇಮ್ಸ್ ಪಿರಿಯಡ್‌ಲ್ಲೂ ಕ್ಲಾಸಲ್ಲಿ ಕೂತು ಅದೇನು ಓದ್ತಿಯಾ ಮಣ್ಣು, ಹೋಗು ಹೊರಗೆ ಹೋಗಿ ಆಟ ಆಡು, ಒಳ್ಳೇ ಕತ್ತೆ ಕಣೋ ನೀನು" ಎಂದರು.

"ಆ ಅಂಗಳದಲ್ಲಿ ಆಟ ಆಡೋದು ನನಗೆ ಬೇಜಾರು ಮಿಸ್. ಮೇಲಿನ ಮನೆಯವರೆಲ್ಲ ಒಂದೇ ಸಮನೆ ಕೆಳಗೆ ಕಸ ಎಸೀತಾರೆ. ಅಸಹ್ಯ, ಆ ಕಸದ ತೊಪ್ಪೆ ಮೇಲೆ ಯಾರು ಆಟ ಆಡ್ತಾರೆ." ನಾನು ತಾತ್ಸಾರದಿಂದ ಹೇಳಿದೆ.

"ಒಳ್ಳೇ ಮಹಾರಾಜ ಕಣೋ ಹರಚಂದ ನೀನು."

"ಏನು ಮಿಸ್, ಒಮ್ಮೆ ಕತ್ತೆ ಅಂತೀರಾ ಇನ್ನೊಮ್ಮೆ ಮಹಾರಾಜ ಅಂತೀರಾ."

"ಹಾಂ. ಅಂದ ಮೇಲೆ ನೀನು ಕತ್ತೆಗಳ ಮಹಾರಾಜ ಸರಿ ತಾನೆ?" ಎನ್ನುತ್ತ ಅವರು ಕಿಲಕಿಲನೆ ನಕ್ಕರು. ಆ ನಗುವಿನಲ್ಲಿ ನನ್ನ ಬಗ್ಗೆ ಅತಿಯಾದ ಅಭಿಮಾನವಿತ್ತೆಂಬುದು ನನಗೆ ಗೊತ್ತಿತ್ತು. ಆದ್ದರಿಂದ ಅವರ ಬೈಗುಳವೂ ನನಗೆ ಅಪ್ಯಾಯಮಾನವಾಗಿತ್ತು.

ನಮ್ಮ ಹೆಡ್‌ಮಿಸೆಸ್ ಬಾಯಿ ಬಹಳ ಜೋರು. ಆಕೆಗೂ ಮೇಲಿನ ಮನೆಗಳ ಜನರಿಗೂ ಆಗಾಗ ಮಾತಿನ ಚಕಮಕಿಯಾಗುವುದಿತ್ತು. ಬೇಕೆಂದೇ ಅವರು ಕೆಳಗೆ ಕಸ ಎಸೆಯುತ್ತಿದ್ದರು. ಆದರೆ ಅದರಿಂದಾಗಿ ಕಷ್ಟವಾಗುತ್ತಿದ್ದುದು ಆಫೀಸ್ ರೂಮ್ ಒಳಗೆ ಕುಳಿತಿರೋ ಮೇಡಂಗಳಿಗಲ್ಲ, ನಮಗೆ. ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ಬದಲಾಗುತ್ತಲೇ ಇರುವ ಶಿಕ್ಷಕಿಯರು, ಇಂತಹ ಸಂಗತಿಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಹೀಗೆ ಬದಲಾವಣೆ ಮಾಡಲೂ ಒಂದು ಕಾರಣವಿದೆಯಂತೆ. ನನ್ನಪ್ಪ ಹೇಳುತ್ತಿದ್ದರು. ಒಂದೇ ಶಿಕ್ಷಕಿಯನ್ನು ಬಹಳ ಕಾಲ ಇಟ್ಟುಕೊಂಡರೆ ಸಂಬಳ ಹೆಚ್ಚಿಸಬೇಕಾಗುವುದಲ್ಲವೇ.

ಒಂದು ದಿನ ನನ್ನ ಅಪ್ಪಾಜಿಗೆ ಯಾರೋ ಒಂದು ವಿಚಾರ ತಿಳಿಸಿದರು. ಯಾವುದೇ ವಿದ್ಯಾರ್ಥಿಯು, ಓದಿನಲ್ಲಿ ತುಂಬ ಚುರುಕಾ

ಗಿದ್ದು, ಆಯಾ ತರಗತಿಗೆ ಬೇಕಾದ್ದಕ್ಕಿಂತ ಹೆಚ್ಚು ವಯಸ್ಸಾಗಿದ್ದರೆ, ವರ್ಷದಲ್ಲಿ ಎರಡು ಬಾರಿ ಪ್ರೊಮೋಶನ್‌ಗೆ ಅರ್ಹನಾಗಿರುತ್ತಾನೆ. ಈ ಸಂಗತಿ ತಿಳಿದ ತಕ್ಷಣ ಅಪ್ಪಾಜಿ ಹೆಡ್‌ಮಿಸೆಸ್‌ರನ್ನು ಭೇಟಿಯಾದರು.

"ಅಂತಹ ಸೌಲಭ್ಯ ಇರುವುದೇನೋ ನಿಜ. ನೋಡೋಣ ನಾನು ವಿದ್ಯಾ ಇಲಾಖೆಯಲ್ಲಿ ವಿಚಾರಿಸುತ್ತೇನೆ. ಸಾಧ್ಯವಾದರೆ ಹರಚಂದ್‌ನಿಗೆ ಕೊಡಿಸೋಣ'' ಎಂದರವರು ಜೊತೆಗೆ.

"ನಾನು ಹೇಳಿದ ಕೆಲಸ ನೆನಪಿದೆ ತಾನೆ?'' ಎಂದು ಕೇಳಿದರು.

"ಇಲ್ಲದೆ ಏನು, ನೀವು ಯಾವಾಗ ಹೇಳುವಿರೋ ಆಗ ಪ್ರಾರಂಭಿಸಬಹುದು ಸ್ವಲ್ಪ ಅಡ್ವಾನ್ಸ್ ಬೇಕಾಗುತ್ತೆ.''

"ಅಡ್ವಾನ್ಸ್!'' ಆಕೆ ಹುಬ್ಬೇರಿಸಿದರು.

"ಹೌದು, ಕಚ್ಚಾವಸ್ತುವನ್ನು ಹೊಂದಿಸ ಬೇಕಲ್ಲ?''

"ಇರಬಹುದು, ಆದರೆ ಅಡ್ವಾನ್ಸ್ ಕೊಡಲಾರೆ ನಾನು. ನೀವೇ ಅಡ್ಜಸ್ಟ್ ಮಾಡಿ ಕೊಂಡು ಆದಷ್ಟು ಬೇಗ ಕೆಲಸ ಆರಂಭಿಸಿ. ಮುಂದಿನ ಜೂನ್‌ಗೆ ಬೆಂಚು ಮತ್ತು ಡೆಸ್ಕುಗಳು ರೆಡಿಯಾಗಿರಬೇಕು.''

"ಸರಿ ನಿಮ್ಮಿಷ್ಟ.'' ಅಪ್ಪ ಕುಗ್ಗಿದ ದನಿಯಲ್ಲಿ ಒಪ್ಪಿಕೊಂಡರು.

ಮಧ್ಯಾವಧಿ ಪರೀಕ್ಷೆ ಮುಗಿದಿತ್ತು. ತರಗತಿಯಲ್ಲಿ ಪೇಪರ್ ತಿದ್ದುತ್ತ ಕುಳಿತಿದ್ದ ನನ್ನ ಕ್ಲಾಸ್ ಟೀಚರ್‌ಗೆ ಹೆಡ್‌ಮಿಸೆಸ್‌ನಿಂದ ಕರೆ ಬಂತು. ನಮ್ಮ ಶಾಲೆಯ ಸ್ಟಾಫ್‌ರೂಂ ಎಂದು ಪ್ರತ್ಯೇಕ ಇಲ್ಲದ್ದರಿಂದ ಶಿಕ್ಷಕಿಯರು, ಆಯಾ ತರಗತಿಯಲ್ಲಿಯೇ ಪೇಪರ್ ಕರೆಕ್ಷನ್ ಕೆಲಸವನ್ನು ಮಾಡಬೇಕಾಗಿತ್ತು. ಹಿಂದಿರುಗಿ ಬಂದಾಗ ಟೀಚರ್ ಮುಖ ಆನಂದದಿಂದ ಅರಳಿತ್ತು.

"ಹರಚಂದ್, ನೀನು ಏಳನೆಯ ತರಗತಿಗೆ ಹೋಗಿ ಕುಳಿತುಕೋ. ನಿನಗೆ ಡಬ್ಬಲ್ ಪ್ರಮೋಶನ್ ಸಿಕ್ಕಿದೆ'' ಎಂದರು. ಎಲ್ಲ ವಿದ್ಯಾರ್ಥಿಗಳು ಅತ್ಯಂತ ಚಕಿತರಾಗಿ ನನ್ನತ್ತ ನೋಡತೊಡಗಿದರು. ಅವರ ದೃಷ್ಟಿಯಲ್ಲಿ ಮೆಚ್ಚುಗೆ ಮತ್ತು ಅಸೂಯೆಯ ಸಮ್ಮಿಶ್ರ ಭಾವವಿತ್ತು. ಸಂಭ್ರಮಾತಿಶಯದಿಂದ ಸನ್ನೆದೆ ಬಿರಿಯುವಂತಾಯ್ತು.

"Thank you miss'' ಎಂದವನೇ ಪುಸ್ತಕದ ಚೀಲವನ್ನು ಹೆಗಲಿಗೇರಿಸಿಕೊಂಡು ಎದ್ದುನಿಂತೆ. ಹಿಮಾಲಯವನ್ನು ಏರಿ ನಿಂತಷ್ಟು ಹೆಮ್ಮೆಯಿತ್ತು ನನ್ನ ಮುಖದಲ್ಲಿ.

ಈಗ ನನ್ನ ಜವಾಬ್ದಾರಿ ಹೆಚ್ಚಾಗಿತ್ತು. ಆರು ತಿಂಗಳ ಪಾಠಗಳನ್ನು ಅಭ್ಯಾಸ ಮಾಡಿಕೊಳ್ಳುವುದೆಂದರೆ ಸುಲಭವೇನಲ್ಲ. ನೋಟ್ಸುಗಳ ರಾಶಿಯೇ ಇತ್ತು. 'ವರ್ಕ್ ಬುಕ್ಸ್'ಗಳನ್ನೂ ಕಂಪ್ಲೀಟ್ ಮಾಡಬೇಕಾಗಿತ್ತು. ನಾನು ರಾತ್ರಿ ಒಂದು ಗಂಟೆಯವರೆಗೂ ಅಭ್ಯಾಸ ಮಾಡತೊಡಗಿದೆ. "ನಿನಗೇನು ಹುಚ್ಚುಗಿಚ್ಚು ಹಿಡೀತೇನೋ, ಐ. ಸಿ. ಎಸ್. ಪರೀಕ್ಷೆಗೆ ಕೂಡೋರು ಕೂಡ ನಿನ್ನಂತೆ ಓದಿ ಸಾಯಿಲಾರರು'' ಎಂದು ಅಮ್ಮ ಬೈದಳು. ಮನೆ ಪಾಠ ಹೇಳಿಸಿಕೊಳ್ಳಲು ನನ್ನಲ್ಲಿ ದುಡ್ಡಿರಲಿಲ್ಲವಾಗಿ ನನಗೆ ಅರ್ಥವಾಗದ ವಿಷಯಗಳನ್ನು

ಶಿಕ್ಷಕಿಯರಲ್ಲಿ ಕೇಳಿ ತಿಳಿದುಕೊಳ್ಳುತ್ತಿದ್ದೆ. ನನ್ನ ನಿರಂತರ ಸಾಧನೆಯ ಫಲವಾಗಿ ಮುಂದಿನ ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಳ್ಳುವುದು ಸಾಧ್ಯವಾಯಿತು. ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿಕೊಳ್ಳುವುದು ನನ್ನ ಏಕೈಕ ಗುರಿಯಾಗಿತ್ತು. ಅದಕ್ಕಾಗಿ ಸತತ ಅಭ್ಯಾಸದಲ್ಲಿ ತೊಡಗಿದೆ.

ಈ ಮಧ್ಯೆ ನನ್ನ ಅಪ್ಪಾಜಿಯನ್ನು ಕರೆಸಿದ ಹೆಡ್‌ಮಿಸೆಸ್ "ಹರಚಂದ್‌ನ ಪ್ರಮೋಶನ್ ಇನ್ನೂ ಕನಫರ್ಮ್ ಆಗಿಲ್ಲ. ಸದ್ಯಕ್ಕೆ ಅವನು ಏಳನೇ ತರಗತಿಯಲ್ಲಿರಲಿ. ಆದರೆ ಇಲಾಖೆಯಿಂದ ಒಪ್ಪಿಗೆ ದೊರೆಯದಿದ್ದರೆ ಅವನು ತನ್ನ ಹಿಂದಿನ ತರಗತಿಗೇ ಮರಳಬೇಕಾಗಬಹುದು'' ಎಂದರು.

"ದಯವಿಟ್ಟು ನೀವು ಸ್ವಲ್ಪ ಪ್ರಯತ್ನ ಮಾಡ್ಬೇಕು ಮೇಡಂ. ಅವನು ತುಂಬ ಚೆನ್ನಾಗಿ ಓದ್ತಾ ಇದ್ದಾನೆ.''

"ನೋಡೋಣ, ನೋಡೋಣ. ನಾನು ಹೇಳಿದ್ದ ಫರ್ನೀಚರ್ ಕೆಲಸ ಎಲ್ಲಿಯವರೆಗೆ ಆಗಿದೆ?''

"ಕೆಲಸ ನಡೀತಾ ಇದೆ.''

"ಸರಿ, ಅದನ್ನು ಬೇಗ ಮುಗಿಸಿಬಿಡಿ.''

ಆ ದಿನ ಅಪ್ಪಾಜಿ ಮನೆಗೆ ಮರಳಿದಾಗ ನಿರುತ್ಸಾಹಿಗಳಾಗಿದ್ದರು. "ಆಕೆಯ ಉದ್ದೇಶ ನನಗರ್ಥವಾಗುವುದಿಲ್ಲ. ನಾನು ಹರಚಂದ್‌ನ ಬಗ್ಗೆ ಮಾತಾಡಿದರೆ ಬೆಂಚು, ಡೆಸ್ಕುಗಳ ಬಗ್ಗೆಯೇ ಕೇಳ್ತಾಳೆ'' ಎಂದು ಅಮ್ಮನಲ್ಲಿ ಹೇಳಿದರು:

"ಸರಿ ಸರಿ ಅದನ್ನೊಮ್ಮೆ ಬೇಗ ಮುಗಿಸಿ, ಒಪ್ಪಿಸಿ ಕೈ ಮುಗೀರಿ. ನಮಗೂ ದುಡ್ಡಿಗ ಅಡಚಣೆ ಈಗ.''

"ಅದೇನೋ ನಿಜ. ಆದರೆ ಮೊದಲು ಒಪ್ಪಿಕೊಂಡ ಕೆಲಸ ಮೊದಲು ಮುಗಿಸಬೇಡ್ವೆ? ಈ ಮಹಾತಾಯಿ ಅಡ್ವಾನ್ಸ್ ಬೇರೆ ಕೊಟ್ಟಿಲ್ಲ.''

ಅಪ್ಪನ ನಿಯತ್ತು ನನಗೆ ಗೊತ್ತಿದ್ದ ಸಂಗತಿಯೇ. ಆದರೆ ಆ ನಿಯತ್ತು ನನ್ನ ಭವಿಷ್ಯಕ್ಕೆಲ್ಲಿ ಸಂಚಕಾರ ತಂದುಬಿಡುವುದೋ ಎಂಬ ಆತಂಕ ನನಗೆ. ಅಪ್ಪಾಜಿ ರಾತ್ರಿಯಿಡೀ ಕೂತು, ನಮ್ಮ ಮೇಡಂ ಒಪ್ಪಿಸಿದ ಕೆಲಸದಲ್ಲಿ ತೊಡಗಿದಾಗ, ನಮ್ಮದಿಯಾದರೂ 'ಅಯ್ಯೋ' ಎನಿಸದಿರಲಿಲ್ಲ.

ಅಂತಿಮ ಪರೀಕ್ಷೆಯ ಕೊನೆಯ ಪೇಪರನ್ನು ಬರೆದು ಮುಗಿಸಿದಾಗ, ಅತ್ಯಂತ ತೃಪ್ತಿಯೆನಿಸಿತು. ಈ ಬಾರಿ ನಾನು ತರಗತಿಯಲ್ಲಿ ಪ್ರಥಮ ಸ್ಥಾನ ಗಳಿಸಿಕೊಳ್ಳುವುದರಲ್ಲಿ ನನಗೆ ಸಂದೇಹವಿರಲಿಲ್ಲ. ನಾನು ಪರೀಕ್ಷಾ ಕೊಟಡಿಯಿಂದ ಹೊರಗೆ ಬರುತ್ತಿದ್ದಂತೆಯೇ ನನಗೆ ಹೆಡ್‌ಮಿಸೆಸ್ ಅವರಿಂದ ಕರೆಬಂತು. ಅಲ್ಲಿ ನನ್ನ ಅಪ್ಪಾಜಿಯನ್ನು ಕಂಡು ನನಗೆ ಆಶ್ಚರ್ಯವಾಯ್ತು. ಇಬ್ಬರ ಮುಖವನ್ನು ಗಮನಿಸಿದಾಗ ಬಹಳಷ್ಟು ಮಾತಿನ ಚಕಮಕಿ ನಡೆದಿದೆ ಎಂಬುದನ್ನು ನಾನು ಊಹಿಸಿದೆ. ಅಷ್ಟರಲ್ಲಿ ಹೇಳಿಕಳಿಸಿದಂತೆ ನನ್ನ ಕ್ಲಾಸ್ ಟೀಚರ್ ಕೂಡ ಅಲ್ಲಿಗೆ ಬಂದರು.

"ಮಿಸ್ ಸರಳ, ಹರಚಂದ್‌ನಿಗೆ ಜನರಲ್ ನಾಲೆಡ್ಜ್ ಏನೂ ಇಲ್ಲ ಎಂದು ಹೇಳಿದ್ದಿರಲ್ಲವೆ ನೀವು? ಈಗ ಅವನ

ಡಬ್ಬಲ್ ಪ್ರಮೋಶನ್‌ಗೆ ಇಲಾಖೆಯಿಂದ ಒಪ್ಪಿಗೆ ಸಿಗ್ತಾ ಇಲ್ಲ."

ನಮ್ಮ ಕ್ಲಾಸ್‌ಟೀಚರ್ ಗಲಿಬಿಲಿಯಿಂದ ಹೇಳಿದರು. "ಹಾಗೇನೂ ಇಲ್ಲ ಮೇಡಂ, ಹರಚಂದ್ ಈಗ ತುಂಬ ಇಂಪ್ರೂವ್ ಆಗಿದ್ದಾನೆ."

ಈ ಉತ್ತರದಿಂದ ಮೇಡಂಗೆ ಸಿಟ್ಟು ಬಂದಿರಬೇಕು. ಅವರ ಮುಖ ಕೆಂಪಾಯ್ತು. ಆದರೆ ಅವರಿಗಿಂತ ಹೆಚ್ಚು ಕೋಪ ಬಂದದ್ದು ನನ್ನ ಅಪ್ಪಾಜಿಗೆ. "ಮೇಡಂ, ನೀವು ಮಾಡುತ್ತಿರುವುದು ಬ್ಲಾಕ್ ಮೈಲ್, ಗೊತ್ತೇನು? ಮಜೂರಿಯನ್ನೂ ಬಿಟ್ಟುಕೊಟ್ಟು ಕೇವಲ ಕಚ್ಚಾವಸ್ತುವಿನ ಬೆಲೆಯನ್ನಾದರೂ ಕೊಡಿ ಎಂದು ನಾನು ಕೇಳಿದ್ದು, ಅದಕ್ಕೆ ಉತ್ತರ ಕೊಡುವ ಬದಲು ಹರಚಂದ್‌ನ ಬಗ್ಗೆ ಏಕೆ ಹೇಳುತ್ತಿದ್ದೀರಿ, ಏನಿದರ ಅರ್ಥ? ಡೆಸ್ಕು, ಬೆಂಚುಗಳನ್ನು ನಾನು ನಿಮಗೆ ದಾನ ಮಾಡಬೇಕೇನು, ನಾನೇನು ಕುಬೇರನೆ, ದಾನಶೂರ ಕರ್ಣನೆ, ಹರಚಂದ್‌ನ ಪ್ರಮೋಶನ್‌ಗಾಗಿ ಅಷ್ಟು ದುಬಾರಿ ಬೆಲೆಯೆ, ಬೇಕಾಗಿಲ್ಲ ಮೇಡಂ. ಅವನಿಗೆ ಯೋಗ್ಯತೆಯಿದೆ, ಹಣದಿಂದ ಪಡೆಯಬೇಕಾಗಿಲ್ಲ" ಎಂದು ಬಿಟ್ಟರು.

ಕೋಪದಿಂದ ಮೇಡಂ ಮುಖ ಗಡುಸಾಯ್ತು. ಚೆಕ್ ಪುಸ್ತಕ ಸಶಬ್ದವಾಗಿ ಕೈಲಿ ಹಿಡಿದವರೇ ಸರಸರನೆ ಬರೆದು "ತಗೊಳ್ಳಿ ಬ್ಯಾಂಕಿನಿಂದ ನಿಮ್ಮ ಹಣ ಕಲೆಕ್ಟ್ ಮಾಡಿಕೊಳ್ಳಿ. ನಮಗೆ ಬೇಕಾಗಿಲ್ಲ" ಎಂದು ಹೇಳಿದರು. ಚೆಕ್ಕು ಕೈಲಿ ಹಿಡಿದವರೇ ದುರ್ದಾನ ತೆಗೆದುಕೊಂಡವರಂತೆ ನನ್ನಪ್ಪ ಹೊರಗೆ ನಡೆದರು. ನಾನು ಪೆಚ್ಚಾಗಿ ನಿಂತಾಗ "ಹರಚಂದ್, ಯೂ ಕೆನ್ ಗೋ" ಎಂದರು ಮೇಡಂ.


ನನ್ನನ್ನೇಕೆ ಕರೆಸಿದರೋ ಗೊತ್ತಾಗದೆ ಭಾರವಾದ ಹೆಜ್ಜೆಯೊಡನೆ ಬಾಗಿಲು ದಾಟುತ್ತಿದ್ದಂತೆಯೇ 'ಮೇಡಂ'ರವರ ಗೊಣಗುವಿಕೆ ನನಗೆ ಕೇಳಿಸಿತು. "ಐ ವಿಲ್ ಟೀಚ್ ಹಿಮ್ ಎ ಲೆಸನ್."

ಎಷ್ಟೋ ಹೊತ್ತು ಏನೂ ತಿಳಿಯದವನಂತೆ ನಿಂತಿದ್ದ ನಾನು ಅನಂತರ, ನನ್ನ ಕ್ಲಾಸ್ ಟೀಚರನ್ನು ಭೇಟಿಯಾಗಲು ಹೋದೆ. ಅವರ ಮೋರೆ ಕಳೆಗುಂದಿತ್ತು. ಹೊಸದಾಗಿ ಸೇರಿದ್ದ ನನ್ನ ಹೆಸರನ್ನು ಆರನೆಯ ತರಗತಿಗೆ ಮತ್ತೆ ವರ್ಗಾಯಿಸುವ ಕೆಲಸದಲ್ಲಿ ತಲ್ಲೀನರಾಗಿದ್ದರು.

ನನ್ನ ತಲೆ ಗಿರ್ರೆಂದಿತು. ಎಂತಹ ಹೃದಯ ಹೀನತೆ! ಹೋಗಿ 'ಮೇಡಂ'ಹತ್ರ ಜಗಳವಾಡಲೆ, ಏನು ಪ್ರಯೋಜನ, ಇಲಾಖೆಯಿಂದ ಒಪ್ಪಿಗೆ ದೊರೆಯಲಿಲ್ಲ ಎಂದು ತಣ್ಣಗೆ ನುಡಿಯಬಹುದು. ಸ್ವರ್ಗದ ಹಾದಿ ತೋರಿಸಿ, ಪಾತಾಳಕ್ಕೆ ತಳ್ಳುವ ಹಕ್ಕನ್ನು ಈ ಮೇಡಂಗೆ ಕೊಟ್ಟವರು ಯಾರು? ನನ್ನನ್ನು ನೋಡಿದವರೇ "ಹರಚಂದ್!" ಎಂದು ಉದ್ಗರಿಸಿದರು ನನ್ನ ಟೀಚರ್. ಮುಂದೆ ಅವರಿಂದ ಏನೂ ಹೇಳಲಾಗಲಿಲ್ಲ. ಅಸಹಾಯಕರಾಗಿದ್ದ ಅವರ ಕಂಗಳು ತುಂಬಿಬರತೊಡಗಿದ್ದವು.

ಚಿನ್ನದ ಪುತ್ಥಳಿ

ಧಾರಾವಾಹಿ—೫



ಎಚ್. ಕೆ. ಅನಸೂಯ ಸಂಪತ್

"ಸರಿಯಮ್ಮ ಬರುತ್ತೀವಿ." ಎದ್ದು ನಿಂತರು.

"ಇರಿ" ಎಂದು ಒಳಗೆ ಹೋದ ಆಕೆ ಎಲ್ಲರಿಗೂ ಬೋರ್ನ್‌ವಿಟಾ ತಂದುಕೊಟ್ಟರು.

"ಇದೆಲ್ಲ ಏಕೆ?" ಕುಮುದಮ್ಮ ನುಡಿದರು.

"ನಿಮ್ಮತ್ತೆ ಇಲ್ಲವಾ ಪರಿಮಳಾ?"

"ಇಲ್ಲ. ಅವರ ಮಗಳ ಮನೆಗೆ ಹೋಗಿದ್ದಾರೆ. ನಾಳೆ ಬರುತ್ತಾರೆ."

"ಹೌದಾ, ಇದ್ದಿದ್ದರೆ ಇಷ್ಟು ಹೊತ್ತಿಗೆ ಎಷ್ಟು ಮಾತನಾಡುತ್ತಿದ್ದರೋ."

"ಹ್ಞಂ ಅವರು ಹಾಗೇ, ಅವರಿಗೆ ಜನ ಬೇಕು."

"ನಾವಿನ್ನು ಬತ್ತೀವಿ." ವರ್ಷ ಎದ್ದು ನಿಂತಳು.

ಪರಿಮಳಾ ಮೂರು ಜನರಿಗೂ ತೆಂಗಿನಕಾಯಿ ಇಟ್ಟು ಎಲೆ ಅಡಿಕೆ ಕೊಟ್ಟಳು.

ಎಲ್ಲರೂ ಅವಳಿಗೆ ಮತ್ತೊಮ್ಮೆ ಹೇಳಿ ಹೊರಟರು.

ರಸ್ತೆಯಲ್ಲಿ ಬರುವಾಗ ಕುಮುದಮ್ಮ ಪರಿಮಳಾಳನ್ನು ಮನಸಾರೆ ಹೊಗಳಿದರು. ವರ್ಷಳಿಗೂ ಆಕೆಯ ನಡತೆ ಇಷ್ಟವಾಗಿತ್ತು.

"ಅವರತ್ತೆ ಸಾವಿತ್ರಮ್ಮನನ್ನು ನೀವು ನೋಡಬೇಕು. ತುಂಬಾ ಒಳ್ಳೆಯ ಹೆಂಗಸು."

"ಹೌದಾ?" ವರ್ಷ ಉದ್ಗಾರವೆಳೆದಳ

"ಎಷ್ಟು ಜನ ಮಕ್ಕಳು ಅವರಿಗೆ?"

"ಪರಿಮಳಾಳ ಗಂಡ ಪ್ರಸಾದ್ ಹಿರಿ ಮಗ. ಅವನ ಅನಂತರ ಪ್ರಭಾ. ಅವಳ ಮದುವೆಯಾಗಿದೆ. ಕೊನೆಯವನೇ ವರುಣ್. ಅವನಿ ಮದುವೆಯಾಗಬೇಕು."

"ಸರಿಯಮ್ಮ" ಎಂದರು ಕುಮುದಮ

ವರ್ಷ ಮರುದಿನದಿಂದಲೇ ಕೆಲಸ ಹೋಗಲಾರಂಭಿಸಿದಳು.

ಶರತ್‌ನನ್ನು ಪರಿಚಯಿಸಿದ ಪರಿಮ ಅವರಿಬ್ಬರನ್ನು ಬಿಟ್ಟು ಒಳಗೆ ಹೋದಳು.

ಶರತ್ ತುಂಟನಾದರೂ ಜಾಣ. ಅವಳ ಅವನು ತುಂಬ ಹಿಡಿಸಿದ.

"ಮಿಸ್ ನನಗೆ ಕನ್ನಡ ಚೆನ್ನಾಗಿ ಹೇ ಕೊಟ್ಟು ಬಿಡಿ. ಈ ಸಾರಿ ನನಗೆ ಫಸ್ಟ್ ರ್‍ಯಾಂ ಬರಬೇಕು" ಎಂದ.

"ಆಗಲಿ ಮರಿ, ನಿನಗೆ ಕಲಿಯ ಆಸಕ್ತಿಯಿದೆ. ಚೆನ್ನಾಗಿ ಹೇಳಿಕೊಡ್ತೀನಿ."

ಅವಳು ಮೊದಲಿನಿಂದ ಪ್ರಾರಂಭಿಸಿದ ಅಕ್ಷರಗಳನ್ನೆಲ್ಲ ಬರೆಯುವಂತೆ ಹೇಳಿದಾಗ ಅವ ತಪ್ಪಿಲ್ಲದೆ ಬರೆದ.

"ಮಿಸ್ ನೀವು ಮಾತ್ರ ನನಗೆ ಹೋಂವರ ಕೊಡಬೇಡಿ. ಸ್ಕೂಲಿನದೇ ತುಂಬ ಇರುತ್ತೆ" ಎಂ

"ಆಯಿತು ಮರಿ. ನಾಳೆ ಕಾಗು ಬರೆಸುತ್ತೇನೆ. ಇವತ್ತಿಗೆ ಇಷ್ಟು ಸಾಕು" ಎಂದ

"ಥ್ಯಾಂಕ್ಸ್ ಮಿಸ್."

ಆ ಹೊತ್ತಿಗೆ ವರುಣ್ ಮಹಡಿಯಿಂ ಕೆಳಗಿಳಿದು ಬಂದ.

"ಅಂಕಲ್" ಓಡಿ ಹೋಗಿ ಅವನಿಗೆ ಜೋ ಬಿದ್ದ ಶರತ್.

"ಮರಿ ಆಗಲೇ ಎದ್ದುಬಿಟ್ಟಿದ್ದೀಯಾ?"

"ಹ್ಞಂ ಅಂಕಲ್."

"ನಾನಿನ್ನು ಬರ್ತೀನಮ್ಮ." ವರ್ಷ ನುಡಿದ

ಇವಳಾರು ಹೊಸಬಳು ಈ ಮನೆಗೆ ಬಂದಿದ್ದಾಳೆ ಅಚ್ಚರಿಯಿಂದ ಅವಳನ್ನೇ ಆಪಾದಮಸ್ತಕ ನೋಡಿದ.

ಅವಳಿಗೆ ಸಂಕೋಚವಾಯಿತು. ತನ್ನನ್ನೇ ನುಂಗುವಂತೆ ನೋಡುತ್ತಿದ್ದಾನೆ. ಎಂತಹ ದುರಹಂಕಾರ ಎನಿಸಿತು.

ವರುಣ್ ಅವಳನ್ನು ಕಣ್ಣಿನಲ್ಲಿಯೇ ತುಂಬಿಕೊಂಡ.

ಎತ್ತರದ ನಿಲುವಿನ, ದುಂಡುಮೊಗದ ದಂತವರ್ಣದ ಆಕರ್ಷಕ ಮೈಕಟ್ಟಿನ ಚೆಲುವೆ. ಆಹ ಎಂತಹ ಸೌಂದರ್ಯ. ತಾನು ಇದುವರೆಗೂ ಇಂತಹ ಸೌಂದರ್ಯದ ಗಣಿಯನ್ನು ನೋಡಿಲ್ಲ ಎಂದುಕೊಂಡು ಅವಳನ್ನು ಮತ್ತೊಮ್ಮೆ ನೋಡಿದ.

ಅವಳು ಮೈ ತುಂಬ ಸೆರಗು ಹೊದ್ದು ಸರಸರನೆ ಹೊರಟು ಹೋದಳು. ಅವಳು ಹೋಗುವವರೆಗೂ ಅವಳನ್ನೇ ದಿಟ್ಟಿಸುತ್ತ ನಿಂತ ವರುಣ್ ಅವಳು ಹೋಗುತ್ತಲೇ ವಾಸ್ತವಕ್ಕಿಳಿದ.

"ಅಂಕಲ್ ಏನು ಯೋಚನೆ ಮಾಡುತ್ತಿದ್ದೀರಿ?" ಶರತ್ ಅವನನ್ನು ಎಚ್ಚರಿಸಿದ.

"ಏನಿಲ್ಲ, ಏನಿಲ್ಲ." ತೊದಲಿದ ವರುಣ್.

"ಹಾಗಾದರೆ ನಾನು ಎಷ್ಟು ಮಾತನಾಡಿಸಿದರೂ ನೀವು ಏಕೆ ಮಾತನಾಡಲಿಲ್ಲ?"

"ಮಾತಾಡಿದೆನಲ್ಲ."

"ಹಾಗಾದರೆ ನಾನು ಏನು ಹೇಳಿದೆ ಅಂತ ಹೇಳಿ ನೋಡೋಣ."

"ಮರಿ, ನನ್ನನ್ನೇ ಪ್ರಶ್ನೆ ಮಾಡುತ್ತೀಯಾ?" ಅವನನ್ನು ಹತ್ತಿರಕ್ಕೆಳೆದು ಮುದ್ದಿಸಿದ.

"ಬಿಡಿ ಅಂಕಲ್. ಸ್ಕೂಲಿಗೆ ಹೊತ್ತಾಗುತ್ತೆ." ಶರತ್ ಕೊಸರಿದ.

"ಶರತ್, ಈಗ ಒಬ್ಬಳು ಹುಡುಗಿ ಹೋದಳಲ್ಲ. ಅವಳು ಯಾರು, ಏಕೆ ಬಂದಿದ್ದಳು?"

"ಯಾವ ಹುಡುಗಿ?"

"ಅದೇ ಕಣೋ ನೀನು ಅವಳ ಹತ್ತಿರ ಮಾತಾನಾಡುತ್ತ ಕುಳಿತಿದ್ದಿಯಲ್ಲ, ಆಮೇಲೆ ಅಮ್ಮನಿಗೆ ಹೇಳಿ ಹೋದಳಲ್ಲ."

"ಓಹ್ ಅವರಾ, ಅವರೇನು ಹುಡುಗೀನಾ?"

"ಮತ್ತೀನ್ನೇನು, ಹುಡುಗಿಯಲ್ಲದೆ ಮುದುಕಿಯೇನು ಅವಳು?"

"ಅವರು ನಮ್ಮ ಮಿಸ್ಸು." ಜಂಬದಿಂದ ಹೇಳಿದ ಶರತ್.

"ನಿಮ್ಮ ಮಿಸ್ಸಾ, ನಮ್ಮ ಮನೆಗೆ ಏಕೆ ಬಂದಿದ್ದರು, ಏನಾದರೂ ಕಂಪ್ಲೈಂಟ್ ಏನೋ?"

"ಹೋಗಿ ಅಂಕಲ್. ನಿಮಗೆ ಒಂದೂ ಸ್ವಲ್ಪವೂ ಗೊತ್ತಾಗುವುದಿಲ್ಲ. ಅವರು ನಮ್ಮ ಸ್ಕೂಲು ಮಿಸ್ಸಲ್ಲ, ಮನೆ ಮಿಸ್ಸು."

"ಅಂದರೆ?"

"ಅಂದರೆ ನನಗೆ ಪಾಠ ಹೇಳಿಕೊಡುವುದಕ್ಕೆ ಬಂದಿದ್ದರು. ನನಗೆ ಟೆಸ್ಟ್‌ನಲ್ಲಿ ಕನ್ನಡದಲ್ಲಿ ಕಡಿಮೆ ಮಾರ್ಕ್ಸ್ ಬಂದಿದ್ದಕ್ಕೆ ಅಮ್ಮಾ ಈ ಮಿಸ್ಸನ್ನ ಗೊತ್ತು ಮಾಡಿದ್ದಾರೆ. ನಾನು ಇನ್ನು ಮೇಲೆ ಕನ್ನಡ ಚೆನ್ನಾಗಿ ಕಲಿತು ಫಸ್ಟ್ ರ್‍ಯಾಂಕ್ ಬರ್ತೀನಿ ಅಂಕಲ್."

"ಹೌದಾ ಮರಿ" ಎಂದು ಅವನನ್ನು ಮುದ್ದಿಸಿದ. ವರುಣ್‌ಗೆ ಎಲ್ಲವೂ ಅರ್ಥವಾಯಿತು. ಆ ಹುಡುಗಿ ಹಾಗಾದರೆ ಪ್ರತಿದಿನ ಮನೆಗೆ ಬರುತ್ತಾಳೆ. ಪ್ರತಿ ದಿನವೂ ಬೆಳಿಗ್ಗೆ ಎದ್ದ ಕೂಡಲೇ ಆ ಸೌಂದರ್ಯ ಕಣ್ಣಿಗೆ ಹಿತ ನೀಡುತ್ತದೆ ಎನಿಸಿ

ಇಲ್ಲಿಯವರೆಗೆ...

ವರ್ಷ ಸುಂದರ ತರುಣಿ. ಬಡತನದ ಬೇಗೆಯಲ್ಲಿ ಬೇಯುತ್ತಿದ್ದರೂ ಕಾಲೇಜಿಗೆ ಹೋಗಿ ವಿದ್ಯೆ ಕಲಿಯುತ್ತಾಳೆ. ಗೆಳತಿಯ ಎದುರಿನಲ್ಲಿ ಸ್ವಾಭಿಮಾನಿಯಾಗಿ ಉಳಿಯುತ್ತಾಳೆ. ಮನೆಯಲ್ಲಿ ಮದುವೆಯ ಮಾತು ಬಂದಾಗ ನಿರಾಕರಿಸುತ್ತಾಳೆ.

...ಮುಂದೆ ಓದಿ

ಖುಶಿಯಾಯಿತು.

"ಶರತ್ ಬಾರೋ ಸ್ಕೂಲಿಗೆ ಹೊತ್ತಾಯಿತು." ಪರಿಮಳಾ ಕೂಗಿದಳು.

"ಹೊತ್ತಾಯಿತು ಅಂಕಲ್" ಎಂದು ಶರತ್ ಓಡಿದ.

ಅವನು ತಿಂಡಿ ತಿಂದು ಸಿದ್ಧವಾಗುವ ಹೊತ್ತಿಗೆ ವ್ಯಾನ್ ಬಂದಿತು. ಅವನು ಹೊರಟು ಹೋದ.

ಅವನನ್ನು ಕಳುಹಿಸಿ ಒಳ ಬಂದ ಪರಿಮಾಳಳಿಗೆ ಸೋಫಾದ ಮೇಲೆ ಸುಮ್ಮನೆ ಕುಳಿತ ಮೈದುನನ್ನು ಕಂಡು ಆಶ್ಚರ್ಯವಾಯಿತು.

"ವರುಣ್ ಇದೇನಿದು, ಸುಮ್ಮನೆ ಕುಳಿತಿದ್ದಿ."

"ಓಹ್ ಮರೆತುಬಿಟ್ಟಿದ್ದೆ ಬಾಬೀ. ಹೊತ್ತಾಯಿತಲ್ಲವಾ? ಈಗಲೇ ಸ್ನಾನಕ್ಕೆ ಹೊರಟೆ."

"ನೀನೇ ಹೀಗಾದರೆ ಹೇಗೆ?"

"ಅಂದರೆ?"

"ಅಲ್ಲಪ್ಪ, ದೊಡ್ಡ ಐ. ಎ. ಎಸ್. ಆಫೀಸರ್. ನೀನೇ ಇಷ್ಟು ಸೋಮಾರಿಯಾದರೆ ಇನ್ನು ನಿನ್ನ ಸ್ಟಾಫ್ ಎಷ್ಟು ಸೋಮಾರಿಯಾಗಬಹುದು."

"ಓಹ್ ಆದಾ?" ಜೋರಾಗಿ ನಕ್ಕ.

"ಏಕೆ ನನ್ನ ಮಾತು ಕೇಳಿ ನಗು ಬರುತ್ತೇನು?"

"ಬಾಬೀ ಹೊರಗೆ ಆಫೀಸರ್, ಮನೆಯಲ್ಲಿ ಅಲ್ಲವಲ್ಲ. ಈಗ ನಿಮ್ಮ ಹತ್ತಿರ ಆಫೀಸರ್‌ಗಿರಿ ತೋರಿಸಿದರೆ ಕಿವಿ ಹಿಂಡುತ್ತೀರಿ."

"ಹಾಗಂತ ಮಾತನಾಡುತ್ತ ಕುಳಿತಿರು ಹೊತ್ತಾಗುತ್ತೆ."

"ಅಯ್ಯೋ ಸ್ನಾನಕ್ಕೆ ಹೊರಟೆ" ಎಂದು ಬಾತ್‌ರೂಮಿಗೆ ಓಡಿದ.

ಪರಿಮಳಾ ಅವನಿಗೆ ತಿಂಡಿ ರೆಡಿ ಮಾಡಲು ಹೊರಟಳು.

ಅವನು ಸ್ನಾನ ಮುಗಿಸಿ ಡ್ರೆಸ್ ಮಾಡಿಕೊಂಡು ಬರುವ ಹೊತ್ತಿಗೆ ತಿಂಡಿ ರೆಡಿಯಾಗಿತ್ತು.

ಹೊಗೆಯಾಡುವ ಇಡ್ಲಿ ಚಟ್ನಿ ನಿಧಾನವಾಗಿ ತಿನ್ನಲಾರಂಭಿಸಿದ.

"ಬಾಬೀ ನೀವೇ ಏಕೆ ಇಷ್ಟು ಓಡಾಡುತ್ತೀ[illegible] ನಾರಾಯಣ ಏನು ಮಾಡುತ್ತಿದ್ದಾನೆ."

"ಅವನೇ ತಿಂಡಿ ಮಾಡಿದ್ದು, ನಾ[illegible] ತಂದುಕೊಟ್ಟೆ ಅಷ್ಟೇ."

"ನೀವು ಏಕೆ ಆಯಾಸ ಮಾಡಿಕೊಳ್ಳಬೇ[illegible]"

"ಪರವಾಗಿಲ್ಲ ಬಿಡು."

"ಏನು ಬಾಬೀ ನೀವು, ದೊ[illegible] ಇಂಡಸ್ಟ್ರಿಯಲಿಸ್ಟ್ ಸದಾಶಿವನ್‌ರವರ ಫ್ಯಾಮಿಲಿ[illegible] ಹಿರಿಯ ಸೊಸೆ. ಗಂಡ ದೊಡ್ಡ ಆರ್ಕಿಟೆ[illegible] ಮೈದುನ ಐ. ಎ. ಎಸ್. ಆಫೀಸರ್. ಅಂತಹುದ[illegible] ನೀವು ದುಡಿಯುವುದೆಂದರೇನು. ಅದು [illegible] ಮನೆಯ ಘನತೆಗೆ ಕಡಿಮೆ."

"ಆಯಿತಪ್ಪ, ನಾನು ಯಾವ ಕೆಲಸಾ[illegible] ಮಾಡಲ್ಲ, ಸರೀನಾ."

"ನಿಮಗೆ ನಾನು ಹೇಳುತ್ತಲೇ ಇರುತ್ತಿ[illegible] ನೀವು ಮಾಡುತ್ತಲೇ ಇರುತ್ತೀರಿ."

"ಸರಿ ಈಗ ತಿಂಡಿ ತಿನ್ನು."

ಅವನು ತಿಂಡಿ ಮುಗಿಸಿದ.

"ಅಮ್ಮಾ ಇವತ್ತು ಬರಬಹುದಾ ಬಾಬೀ[illegible]"

"ಹ್ಞುಂ ಮಧ್ಯಾಹ್ನ ಬರಬಹುದು."

"ಇವತ್ತು ನಾನು ಊಟಕ್ಕೆ ಬರುವುದಿಲ್ಲ[illegible]"

"ಏಕೆ?"

"ಇವತ್ತು ಆಗಲ್ಲ ಬಾಬೀ, ಅಮ್ಮಾ ಬಂ[illegible] ಫೋನ್ ಮಾಡಿ."

"ಸರಿ."

ಅವನು ಹೊರಟು ನಿಂತ. ಅವ[illegible] ಬಾಗಿಲವರೆಗೂ ಬಂದು ಬೀಳ್ಕೊಟ್ಟಳು.

ಹಾಗಾದರೆ ಮಧ್ಯಾಹ್ನ ಮಾವ, ಗ[illegible] ಮಾತ್ರ ಊಟಕ್ಕೆ ಬರುವುದು. ಅಡುಗೆಯವ[illegible] ಯಾವ ಅಡುಗೆ ಮಾಡಬೇಕೆಂಬ ಬಗ್ಗೆ ಸೂ[illegible] ಕೊಡಲು ಒಳಗೆ ಹೋದಳು.

"ಇವತ್ತು ವರುಣ್ ಊಟಕ್ಕೆ ಬರೋ[illegible] ನಾರಾಯಣ."



"ಹೌದಾಮ್ಮ."

"ಹ್ಞುಂ" ನಾರಾಯಣನಿಗೆ ಖುಶಿಯಾದುದನ್ನು ಗಮನಿಸಿ ನಕ್ಕಳು.

"ಯಾಕಮ್ಮ ನಗುತ್ತೀರಿ?"

"ನಮ್ಮ ವರುಣ್‌ಗೆ ಅಡುಗೆ ಮಾಡಿ ಒಪ್ಪಿಸುವುದು ತುಂಬ ಕಷ್ಟ ಅಲ್ಲವಾ?"

"ಹೌದ್ರಮ್ಮ. ಎಲ್ಲದಕ್ಕೂ ಸ್ಟೇಟಸ್ ಅಂತಾರೆ. ತಿನ್ನುವುದಕ್ಕೂ ಎಂತಹ ಸ್ಟೇಟಸ್?"

"ಅವನು ಸ್ವಲ್ಪ ಹಾಗೇ, ಏನು ಮಾಡುವುದು?"

"ಮೊನ್ನೆ ನೀವು ಯಜಮಾನರ ಜೊತೆ ಹೋಗಿದ್ದಿರಮ್ಮ. ಆಗ ಊಟಕ್ಕೆ ಬಂದರು, ಬಡಿಸಿದೆ ನಾನು. ಅದೇನೋ ಟೇಬಲ್ ಮ್ಯಾನರ್ಸ್ ಅಂತೆ. ಅದರ ಬಗ್ಗೆ ಲೆಕ್ಚರ್ ಕೊಟ್ಟು ನೀನು ಅದೆಲ್ಲ ಕಲಿ ಎಂದರು."

"ಹ್ಞುಂ ಕಲಿತುಕೋ ನಾರಾಯಣ."

"ಹೋಗ್ರಮ್ಮ ನನಗ್ಯಾಕೆ ಅದೆಲ್ಲ. ನನಗೆ ವಯಸ್ಸಾಯಿತು. ಈ ವರುಣಪ್ಪನನ್ನ ಎಳೆ ಮಗುವಿನಿಂದ ಎತ್ತಿ ಆಡಿಸಿದ್ದೀನಿ. ನನಗೇ ಪಾಠ ಹೇಳಿ ಕೊಡುತ್ತಾರಲ್ಲ."

"ಅವನು ಹಾಗೇ, ತುಂಬ ಸಿಸ್ಟಮ್ಯಾಟಿಕ್. ಎಲ್ಲರೂ ಅವನಂತೆ ನಡೆಯಬೇಕು ಅನ್ನುತ್ತಾನೆ."

"ನನ್ನನ್ನು ಯಾವತ್ತೋ ಕೆಲಸದಿಂದ ತೆಗೆದು ಬಿಡುತ್ತಿದ್ದರು. ಆದರೆ ದೊಡ್ಡಮ್ಮಾವರು ಇರುವುದರಿಂದ ಸುಮ್ಮನಿದ್ದಾರೆ ಅಷ್ಟೇ."

"ನೀನು ತಿಳಿದುಕೊಂಡಿರುವಷ್ಟು ಕೆಟ್ಟವನಲ್ಲ ವರುಣ್. ಹೊರಗೆ ನಾಲ್ಕಾರು ಕಡೆ ಸುತ್ತಾಡಿರುತ್ತಾನೆ. ಆಧುನಿಕ ವಿಚಾರಗಳನ್ನು ತಿಳಿದುಕೊಂಡಿರುತ್ತಾನೆ. ಅದನ್ನೆಲ್ಲ ಮನೆಯಲ್ಲಿ ಅನುಷ್ಠಾನಕ್ಕೆ ತರುತ್ತಾನೆ ಅಷ್ಟೇ" ಎಂದು ನುಡಿದು ಹೊರಗೆ ಹೋದಳು.

ಅವನ ಮುಂದೆ ವರುಣ್‌ನನ್ನು ಸಮರ್ಥಿಸಿದ್ದರೂ ಅವನ ಸ್ವಭಾವ ಅವಳಿಗೆ ಚೆನ್ನಾಗಿ ಗೊತ್ತು. ಸದಾ ಪ್ರತಿಷ್ಠೆಗೆ ಎಲ್ಲಿ ಕುಂದು ಬರುವುದೋ ಎಂಬ ಕಳವಳ ಅವನಿಗೆ. ಯಾವಾಗಲೂ ಆ ಬಗ್ಗೆ ಜಾಗೃತನಾಗಿರುತ್ತಾನೆ.

ಜೊತೆಗೆ ತನ್ನ ಸುತ್ತಲಿನವರನ್ನೂ ಹಾಗಿರುವ ಪ್ರೇರೇಪಿಸುತ್ತಾನೆ. ದೊಡ್ಡಸ್ತಿಕೆ ಬೇರೆ ಜೊತೆ ಪ್ರಸಾದ್ ಸಹ ಅದೇ ಸ್ವಭಾವದವನಾದರ ವರುಣ್‌ನಷ್ಟಿಲ್ಲ. ಜೊತೆಗೆ ವರುಣ್‌ಗೆ ಇರು ಮತ್ತೊಂದು ದೌರ್ಬಲ್ಯವೆಂದರೆ ಮೂಗಿ ತುದಿಯಲ್ಲಿಯೇ ಇರುವ ಸಿಟ್ಟು

ಅವನ ಮಾತಿಗೆ ಸ್ವಲ್ಪ ವಿರುದ್ಧ ನಡೆದರ ಅವನು ಸಹಿಸಲಾರ. ಹೊಡೆಯುವಷ್ಟು ಕೋ ಅವನಿಗೆ. ತಾನು ಹೇಳಿದಂತೆ ಎಲ್ಲರೂ ಕೇಳಬೇ ತನ್ನ ಮಾತೇ ನಡೆಯಬೇಕು ಎನ್ನುವ ಅಹಂಭಾ ಕೊಂಚವೂ ತಗ್ಗುವ ಪ್ರಶ್ನೆಯೇ ಇಲ್ಲ ಅವನ ಅವಳು ಮದುವೆಯಾಗಿ ಆ ಮನೆಗೆ ಹೊಸದಾ ಸೊಸೆಯಾಗಿ ಬಂದ ಹೊಸದರಲ್ಲಿ ಅ ಸ್ವಭಾವದಿಂದ ಅವಳಿಗೆ ಬೇಸರವೇ ಆಗಿತ್ತು.


ಯಾವ ಕೆಲಸ ಮಾಡಿದರೆ ಮೈದು ಏನೆನ್ನುವನ್ನೋ ಎಂಬ ಭಯ. ದೊಡ್ಡ ಫ್ಯಾಮಿ ಯಿಂದ ಬಂದಿದ್ದ ಅವಳಿಗೆ ಎಲ್ಲ ವಿಚಾರ ಗೊತ್ತಿದ್ದರೂ ಏನೋ ಅಳುಕು. ಒಮ್ಮೆ ಅವರ ಇಲ್ಲದಿದ್ದಾಗ ಅವಳೇ ಬಡಿಸಿದ್ದಕ್ಕೆ,

"ಏನು ಅಷ್ಟು ಶಬ್ದ ಮಾಡುತ್ತೀರಿ, ನಿಮ ಟೇಬಲ್ ಮ್ಯಾನರ್ಸ್ ಗೊತ್ತಿಲ್ಲವೇ?" ಎಂ ರೇಗಿದ್ದ ನೇರವಾಗಿ.

ತಟ್ಟನೆ ಉತ್ತರಿಸುವಷ್ಟು ಕೋಪ ಬಂದಿದ್ದ ತಡೆದುಕೊಂಡಿದ್ದಳು. ಅನಂತರ ಅವನು ಸ ಎಂದಾಗಲೂ ಅವಳಿಗೆ ಕೇಳಿಸದೆ ಒಂದು ಸೌ ಮೊಸರು ಹೆಚ್ಚಿಗೆ ಹಾಕಿದ್ದಳು. ಅಷ್ಟಕ್ಕೇ ಅವ ಕೋಪಿಸಿಕೊಂಡು ಕೈತೊಳೆದು ಬಿಟ್ಟಿದ್ದ. ಅವ ಬೇಸರವಾಗಿ ಗಂಡನ ಹತ್ತಿರ ತನ್ನ ಮನಸ್ಸ ತೋಡಿಕೊಂಡಿದ್ದಳು.

"ಅವನು ಹಾಗೇ ಪರಿ, ನೀನೇನೂ ಬೇಜಾ ಮಾಡಿಕೊಳ್ಳಬೇಡ. ಅಮ್ಮ ಕೊನೆಯ ಮಗನೆಂ ಬಹಳ ಮುದ್ದಿನಿಂದ ಬೆಳೆಸಿಬಿಟ್ಟಿದ್ದಾ ಎಂದ.

(ಸಶೇ



'ಚುಕ್ಕೆ 18ರಿಂದ
8ರವರೆಗೆ



ಜಯಶ್ರೀ ಕೆ. ಜೋಗಳೇಕರ್
ಸಿರಸಿ

ಸೂಚನೆ

ರಂಗೋಲಿ ಚಿತ್ರಗಳನ್ನು ಕರಿಯ ಶಾಯಿ ಅಥವಾ ಪೆನ್ಸಿಲ್‌ಗಳಲ್ಲಿ ಮಾತ್ರ ಬರೆಯಿರಿ. ನೀಲಿ ಶಾಯಿಯಲ್ಲಿ ಬರೆಯಬೇಡಿ.

ರಂಗೋಲಿ ಚಿತ್ರಗಳೊಂದಿಗೆ ನಿಮ್ಮ ಪಾಸ್‌ಪೋರ್ಟ್ ಸೈಜಿನ ಕಪ್ಪು ಬಿಳುಪು ಛಾಯಾಚಿತ್ರವನ್ನು ಕಳುಹಿಸಲು ಮರೆಯದಿರಿ.


ರಂಗೋಲಿ

ಪ್ರತಿಯೊಂದೂ ಹತ್ತು ರೂಪಾಯಿ
ಬಹುಮಾನ ಪಡೆದಿದೆ



ಆಶಾ ಬಿ. ಜೆ.
ಹೆಗ್ಗಾರು

10 ಚುಕ್ಕೆ
10 ಸಾಲು



ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ-೧೨

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ
ರಾಮನಾಥಪುರ

ಇಳಂಗೋ ಮನೆಗೆ ಹಾಕಿದ್ದ ಬೀಗವನ್ನು ತೆಗೆಯುತ್ತ "ತಮ್ಮ ಕಂಪ್ಯೂಟರ್ ಕ್ಲಾಸ್‌ಗೆ ಹೋಗಿದ್ದಾನೆ, ಅಪ್ಪಾ ಅಂಗಡಿ ಸಾಮಾನು ತರಲು ಹೋಗಿದ್ದಾರೆ."

ಎರಡೂ ಬಾಗಿಲನ್ನು ಪೂರ್ತ ತೆರೆದು ಒಳಗೆ ಹೋಗಿ ಟ್ಯೂಬ್ ಲೈಟನ್ನು ಆನ್ ಮಾಡಿದ.

"ಕುಳಿತುಕೊಳ್ಳಿ" ಎಂದು ಬೆತ್ತದ ಕುರ್ಚಿಯನ್ನು ತೋರಿಸಿ, ಆಕೆ ಕುಳಿತ ಅನಂತರ ತಾನೂ ಆಕೆಯ ಎದುರಿನ ಚೇರಿನಲ್ಲಿ ಕುಳಿತು "ಈಗ ಕೇಳಿ ನಿಮ್ಮನ್ನು ಹೊಗಳಿ ಕಂಗ್ರಾಟ್ಸ್ ಹೇಳಿದ್ದೇಕೆಂದು."

"ಹೇಳಿ" ಎಂದಳು ನಿಧಾನವಾಗಿ.

"ನೀವು ಮದುವೆ ಆಗ್ತಾ ಇದ್ದೀರಲ್ಲ ಆದಕ್ಕೆ. ಮಾತ್ರವಲ್ಲ, ಪ್ರಪಂಚದಲ್ಲೇ ಅತಿ ಒಳ್ಳೆಯ ಚಿನ್ನದಂತಹ ಪತಿಯನ್ನು ಪಡೆಯಲಿರುವುದಕ್ಕೆ."

ಪದ್ಮಿನಿಗೆ ಅರ್ಥವಾಗಲಿಲ್ಲ. ಇವನಿಗೇನಾಯ್ತು? ನನಗೆ ವರ ಹುಡುಕುತ್ತಿರುವ ವಿಷಯ ಇವನಿಗೆ ಹೇಳಿದವರು ಯಾರಾಗಿರಬಹುದು. ಅಪ್ಪಾ ಏನಾದ್ರೂ ಹೇಳಿರಬಹುದೆ? ಈತ ನೋಡಿದ್ರೆ ಪತಿ, ಅದು ಇದೂಂತ ಏನೇನೋ ಹೇಳ್ತಾ ಇದ್ದಾನಲ್ಲ.

"ಇಳಂಗೋ ಅವ್ರೆ, ಸ್ವಲ್ಪ ವಿವರವಾಗಿ ಹೇಳಿದ್ರೆ ಪರವಾಗಿಲ್ಲ. ಅಪ್ಪಾ ನಿಮ್ಮ ಹ ಏನಾದ್ರೂ ಹೇಳಿದ್ರಾ?"

"ಇಲ್ಲವಲ್ಲ."

"ಅಮ್ಮಾ?"

"ನಿಮ್ಮ ಮನೆಯಿಂದ ಯಾ ಹೇಳಲಿಲ್ಲ."

"ಮತ್ತೆ ನಿಮಗೆ ಹೇಗೆ ಗೊತ್ತು?"

"ವಿಜಯಕುಮಾರ್ ಹೇಳಿದ."

"ಅದು ಯಾರು?"

"ಏನಪ್ಪ ನೀವು, ಹೀಗೂ ಮರೆಯು ದುಂಟೆ? ನಿಮಗೆ ನೋಡಿರುವ ವಿಜಯಕುಮಾರ್ ನನ್ನ ಕ್ಲೋಸ್ ಫ್ರೆಂಡ್. ನ ಭೇಟಿಯಾಗಿ ಮಾತನಾಡುತ್ತಿದ್ದಾಗ ಹೇ ಹುಡುಗಿ ಎಲ್ಲಿಯವಳೆಂದು ಕೇಳಿದೆ, ಅದ ಕೊಟ್ಟ. ಅರೆರೆ ಅನಪ ನಾವು ಬಾಡಿಗೆಗೆ ಇ ಮನೆಯ ಮಹಡಿಯ ಮನೆಯಲ್ಲೇ ಇದ ಎಂದೆ. ತಕ್ಷಣ ನಿಮ್ಮ ಬಗ್ಗೆ ವಿಚಾರಿಸಿದ. ನ ಒಂದೇ ವಾಕ್ಯದಲ್ಲಿ ಉತ್ತರಿಸಿದ್ದೆ. ನೀನು ಬ ಅದೃಷ್ಟವಂತ ಎಂದು."

"ಹಾಗಾ, ಬಹಳ ಸಂತೋಷ."

ಇಳಂಗೋ ಸುಮ್ಮನಾದ.

ಈತ ಬೇರೆ ಏನಾದರೂ ಉ

ಬರಬಹುದೆಂದು ಎದುರು ನೋಡುತ್ತಿರುವನೋ ಏನೋ? ಮುಖವೇಕೆ ಚಿಕ್ಕದಾಯಿತು, ನಾನು ನಾಚಿ ನಲಿಯಬೇಕಾಗಿತ್ತೆ ಅಥವಾ ಕುತೂಹಲದಿಂದ ಆತನ ಬಗ್ಗೆ ವಿಚಾರಿಸಬೇಕಾಗಿತ್ತೆ?

ಒಂದು ಮದುವೆ ಸೆಟಲ್ ಆಗಬೇಕಾದರೆ ಎಷ್ಟು ವಿಷಯಗಳಿವೆ. ಎಲ್ಲಕ್ಕಿಂತಲೂ ಮುಖ್ಯವಾದ ಎರಡು ವಿಷಯಗಳೆಂದರೆ ಗಂಡು ಹೆಣ್ಣನ್ನು ನೋಡಬೇಕು, ಹೆಣ್ಣು ಗಂಡನ್ನು ನೋಡಬೇಕು. ಇಬ್ಬರಿಗೂ ಒಪ್ಪಿಗೆಯಾಗಬೇಕು.

ಇವುಗಳ ಸಂಭವವಿಲ್ಲದೆಯೆ ದಳ್ಳಾಳಿ ಮೂಲಕ ವರನ ಮನೆಯವರೊಂದಿಗೆ ಮಾತುಕತೆ ನಡೆಯುತ್ತಿರುವ ಈ ಆರಂಭದ ಘಟ್ಟದಲ್ಲೇ, ಮುಖವನ್ನೇ ಕಾಣದ ಆ ವಿಜಯಕುಮಾರನ ಮೇಲೆ ನಾನು ಎಂತಾ ಕುತೂಹಲ ತೋರ್ಪಡಿಸಲಿ?

"ಮೇಡಂ, ಕೇಳ್ದೇಂತ ತಪ್ಪು ತಿಳಿಯಬೇಡಿ. ನಿಮಗೆ ಈಗ ಮದುವೆಯಾಗಲು ಇಷ್ಟವಿಲ್ಲವೆ?"

"ಹಾಗೇನೂ ಇಲ್ಲವಲ್ಲ, ನಾನು ಏನಾದ್ರು ಹೇಳಿದೆನ?"

"ಆದಕ್ಕಲ್ಲ, ನಿಮಗೆ ನೋಡಿರುವ ವರ ನನ್ನ ಕ್ಲೋಸ್ ಫ್ರೆಂಡ್ ಎಂದು ಹೇಳಿದ್ರೂ ಯಾವ ರಿಯಾಕ್ಷನ್ನೂ ತೋರಿಸಲಿಲ್ಲವಲ್ಲ."

"ನಮ್ಮ ಮದುವೆ ನಿಶ್ಚಯವಾದನಂತರ, ನಿಶ್ಚಯವಾಗಿರುವ ವರ ನನ್ನ ಕ್ಲೋಸ್ ಫ್ರೆಂಡ್ ಅಂದಿದ್ದರೆ, ನನ್ನೊಳಗೆ ಕುತೂಹಲ ಉಕ್ಕುತ್ತಿತ್ತು. ನನಗೆ ಪತಿಯಾಗಲಿರುವವರ ಅನಿಸಿಕೆಗಳು, ಅಭ್ಯಾಸಗಳು, ಅಭಿಪ್ರಾಯಗಳು ಹೀಗೆ ನಾನಾ ವಿಚಾರಗಳನ್ನೂ ನಿಮ್ಮಿಂದ ತಿಳಿಯಲು ಆಶಿಸುವೆ. ಈಗ ಜಾತಕ ನೋಡಿ ಚೆನ್ನಾಗಿದೆ ಅಂದಿದ್ದಾರೆ ಅಷ್ಟೇ ಸಾರ್. ಇನ್ನೂ ಎರಡು ಮನೆಯವರು ಒಬ್ಬರನ್ನೊಬ್ಬರು ಭೇಟಿಯಾಗಿ ಮಾತುಕತೆ ನಡೆಸಿಯೇ ಇಲ್ಲ."

"ಅರ್ಥವಾಗ್ತಾ ಇದೆ. ಅನಾವಶ್ಯಕವಾಗಿ ಗಾಳಿಗೋಪುರ ಕಟ್ಟುವುದು, ಆಮೇಲೆ ಏರುಪೇರಾದರೆ ದುಃಖಿಸುವುದಕ್ಕೆ ಬದಲು ಕುತೂಹಲ ತೋರ್ಪಡಿಸುವುದು ಬೇಡಾಂತ ಇದ್ದೀರ?"

"ಹೌದು. ನಾನಿನ್ನು ಬರ್ಲೆ" ಎಂದವಳೇ ಪದ್ಮಿನಿ ಎದ್ದಳು.

"ಅಯ್ಯೋ ಒಂದು ನಿಮಿಷ ಕುಳಿತುಕೊಳ್ಳಿ. ಇನ್ನು ಮುಂದೆ ಮುಖ್ಯವಾದ ಸಬ್ಜೆಕ್ಟ್‌ಗೆ ಬರ್‍ತಾ ಇದ್ದೇನೆ. ದಳ್ಳಾಳಿಯನ್ನು ಬಿಡಿ. ಅವರು ತಮ್ಮ ವರಮಾನಕ್ಕಾಗಿ ಬೇಕಾದಷ್ಟು ಹೇಳಬಹುದು. ಆದರೆ ನಾನು ಎರಡು ಕುಟುಂಬಕ್ಕೂ ಸೇರಿದವ. ನನಗೆ ಈಗ ಎರಡೂ ಕುಟುಂಬದ ಬಗ್ಗೆ ಚೆನ್ನಾಗಿ ಗೊತ್ತು. ವಿಜಯಕುಮಾರ್ ಮನೆಯವರೊಂದಿಗೆ ಏಳೆಂಟು ವರ್ಷಗಳ ಪರಿಚಯ. ನಿಮ್ಮ ಮನೆ, ಮನೆಯವರ ಬಗ್ಗೆ ಸ್ವಲ್ಪ ದಿನಗಳಲ್ಲೇ ಅರ್ಥ ಮಾಡಿಕೊಂಡೆ. ಎಲ್ಲರೂ ಒಳ್ಳೆಯವರು. ವಿಜಯನ ಮನೆಯವರು ವರದಕ್ಷಿಣೆಯ ಬಗ್ಗೆ ಕನಸಿನಲ್ಲೂ ಯೋಚಿಸುವುದಿಲ್ಲ. ಅದೆಲ್ಲ ಹೆಣ್ಣಿನ ಮನೆಯವರ ಇಷ್ಟ ಎಂದರು. ಆದ್ದರಿಂದ ಆದರ ಬಗ್ಗೆ ಯೋಚನೆ ಇಲ್ಲ ಈ ಮದುವೆಯಲ್ಲಿ. ಮೇಡಂ, ನಾನು ನಿಮ್ಮನ್ನು ನೋಡಿದ್ದೇನೆ, ಅವನನ್ನು ನೋಡಿದ್ದೇನೆ. ಇಬ್ಬರಿಗೂ ಸೆಂಟ್ ಪರ್ಸೆಂಟ್ ಪರ್ಫೆಕ್ಟ್ ಜೊತೆ. ಸೌಂದರ್ಯದಲ್ಲಿ ಮಾತ್ರವಲ್ಲ, ಎಜುಕೇಶನ್, ಗುಣಗಳು ಎಲ್ಲದರಲ್ಲೂ ಅಷ್ಟೇ. ನಿಮ್ಮೊಂದಿಗ ನಾನು ನೇರವಾಗಿ ಮಾತನಾಡದಿದ್ದರೂ, ನಿಮ್ಮ ಗುಣ, ಚಿಂತನೆಯ ಬಗ್ಗೆ ಕಾಲೋನಿ ಪೂರ್ತಿ ಹೊಗಳುತ್ತಾರೆ. ನಿಮಗೆ ವಿಜಯಕುಮಾರ್

ಇಲ್ಲಿಯವರೆಗೆ...

ವೈದೀಶ್ವರರವರದು ಅಚ್ಚುಕಟ್ಟಾದ ಸಂಸಾರ. ಹಿರಿಯ ಮಗಳು ಪದ್ಮಿನಿ ಹೊರಗೆ ದುಡಿಯುವವಳು. ಆಕೆ ತಮ್ಮ ತಂಗಿ ಚೂಟಿಯಾದ ವಿದ್ಯಾರ್ಥಿಗಳು. ಪದ್ಮಿನಿ ಸ್ವಾಭಿಮಾನಿ. ಆಕೆಗೆ ಮದುವೆಯ ಬಗ್ಗೆ ಏನೋ ಆತಂಕ. ...ಮುಂದೆ ಓದಿ

ಸರಿಯಾದ ಪಾರ್ಟ್ನರ್.''

"ಇಳಂಗೋ ಅವರೆ, ನನ್ನ ಮದುವೆಯ ಬಗ್ಗೆ ನಿಮಗೆ ಇದ್ದಕ್ಕಿದಂತೆ ಇಷ್ಟೊಂದು ಆಸಕ್ತಿ ಹುಟ್ಟಿರುವುದಕ್ಕೆ ಬಹಳ ಸಂತೋಷ. ಹಣಕಾಸು ವ್ಯವಹಾರ ಮನೆ ಮಠ ಎಲ್ಲದರಲ್ಲೂ ಸರಿ ಹೊಂದಬಹುದಲ್ಲವೆ. ಇದೆಲ್ಲ ಸರಿ, ಮುಖ್ಯವಾದ ವಿಷಯ ಒಂದಿದೆಯಲ್ಲ, ಅವರಿಗೆ ನಾನೂ ನನ್ನ ಗುಣಗಳೂ ಮೆಚ್ಚುಗೆಯಾಗಬೇಕು, ನನಗೆ ಅವರ ಗುಣ, ಅವರು ಮೆಚ್ಚುಗೆಯಾಗಬೇಕು ಅಲ್ಲವೆ?''

"ಅದನ್ನೇ ನಾನು ಹೇಳಲು ಬರ್ತಾ ಇರೋದು. ನೀವು ಹೇಳಿದ ಎರಡು ಪಾಯಿಂಟುಗಳಲ್ಲಿ ಒಂದು ಓಕೆ ಆಯ್ತು. ವಿಜಯಕುಮಾರ್‌ಗೆ ನೀವು ಮೆಚ್ಚುಗೆಯಾದಿರಿ. ಹೆಣ್ಣು ನೋಡುವುದಕ್ಕೂ ನಾನು ಬರುವ ಅವಶ್ಯಕತೆ ಇಲ್ಲ. ನೀವು ಹೋಗಿ ನಿಶ್ಚಯಿಸಿಕೊಂಡು ಬನ್ನಿ ಎಂದು ಅಪ್ಪ ಅಮ್ಮನಿಗೆ ಹೇಳಿಬಿಡಲೆ'' ಎಂದ.

ಪದ್ಮಿನಿ ಅರ್ಥವಾಗದವಳಂತೆ ಅವನನ್ನು ನೋಡಿದಳು.

"ಏನ್ ಹೇಳ್ತಾ ಇದ್ದೀರ ಸಾರ್. ಅವರು ಯಾವಾಗ ನನ್ನನ್ನು ನೋಡಿದ್ದಾರೆ?''

ಸಮಾಧಾನವಾಗಿ ತನ್ನ ಕೈಗಳೆರಡನ್ನು ಎದೆಗಾನಿಸಿ ಕಟ್ಟಿಕೊಂಡು,

"ನಿನ್ನೆ'' ಅಂದ ಇಳಂಗೋ.

"ಏನ್ ಸಾರ್ ಆಟ ಆಡ್ತಾ ಇದ್ದೀರ?''

"ಆಟ ಅಲ್ಲಾರಿ ನಿಜವಾಗ್ಲೂ ಹೇಳ್ತೇನೆ. ಸಂಪ್ರದಾಯವಾಗಿ ಮನೆಯಲ್ಲಿ ಹೆಣ್ಣು ನೋಡುವ ಶಾಸ್ತ್ರ ಇಷ್ಟವಿಲ್ಲವಂತೆ. ಒಂದು ಸ್ಥಳದಲ್ಲಿ ಎರಡು ಮನೆಯವರೂ ಭೇಟಿಯಾಗಿ ಮನ ಬಿಚ್ಚಿ ಮಾತನಾಡೋಣ ಎಂದು ನೀವೇ ಹೇಳಿದ್ದೀರ. ಅದನ್ನು ನಿಮ್ಮ ತಂದೆ ಮಧ್ಯಸ್ಥಿಕೆ ವ್ಯಕ್ತಿಯ ಮೂಲಕ ಹೇಳಿಸಿದ್ದಾರೆ?''

"ಹೌದು'' ಎಂದಳು ಆಶ್ಚರ್ಯದಿಂದ.

"ಅದರ ಬಗ್ಗೆ ಮನೆಯವರಿನ್ನೂ ಯಾವ ತೀರ್ಮಾನಕ್ಕೂ ಬಂದಿರಲಿಲ್ಲ. ನಮ್ಮ ಮನೆಯ ಮಹಡಿ ಮೇಲೆಯೇ ನೀವೂ ಇರುವುದಾಗಿ ಹೇಳಿದೊಡನೆ ವಿಜಯಕುಮಾರ್ ನನ್ನಿಂದೊಂದು ಸಹಾಯ ಅಂದು ಪದ್ಮಿನಿಯ ಆಫೀಸಿನ ಮುಂದೆ ಸಾಯಂಕಾಲ ಕಾಯುತ್ತ ನಿಲ್ಲೋಣ, ಆಕೆ ಹೊರಗೆ ಬರುವಾಗ ನನಗೆ ಆಕೆಯ ಗುರುತು ಹೇಳು, ಮೊದಲ ಇಂಪ್ರೆಶನ್‌ನಲ್ಲೇ ಆ ಹುಡುಗಿ ನನಗೆ ಮೆಚ್ಚುಗೆ ಆಗದಿದ್ದರೆ, ಎರಡು ಮನೆಯವರೂ ಭೇಟಿಯಾಗುವ ಅವಶ್ಯಕತೆಯೇ ಇರುವುದಿಲ್ಲ ಎಂದ. ಸರಿ ಎಂದು ನಿನ್ನೆ ನಿಮ್ಮ ಆಫೀಸಿನ ಮುಂದೆ ಇಬ್ಬರೂ ಭೇಟಿಯಾಗಿ, ನೀವು ಬೀಚ್ ಸ್ಟೇಶನ್‌ಗೆ ನಡೆದು ಹೋಗಿ ಹತ್ತಿದ್ದು, ಅದು ಹೊರಡುವವರೆಗೂ ಗಮನಿಸಿದೆವು. ನಿಮ್ಮನ್ನು ಕಂಡೊಡನೆ ಇಂಪ್ರೆಸ್ ಆದ. ಅವನು ಹೇಳಿದ ವಾಕ್ಯಗಳನ್ನು ಹಾಗೇ ಹೇಳಲೇ...'' ಎಂದು ಸ್ವಲ್ಪ ನಿಲ್ಲಿಸಿದ.

ಸ್ವಲ್ಪ ಭ್ರಮಿತಳಾದಂತೆ ಇಂಟರೆಸ್ಟ್‌ನಿಂದ ಕೇಳುತ್ತಿದ್ದ ಪದ್ಮಿನಿಗೆ ಆತ ಇಂಟರ್‌ವೆಲ್ ಕೊಟ್ಟಿದ್ದು ಸ್ವಲ್ಪ ಕೋಪವನ್ನು ತಂದಿತು.

ಅವನು ಹೇಳುತ್ತ ಬರುತ್ತಿದ್ದುದರಲ್ಲಿ ವಿಜಯಕುಮಾರ್ ಹೇಳಿದ್ದನೆಂದ ಆ ಪಾಯಿಂಟನ್ನು ಕೇಳುವ ಕುತೂಹಲವಾಯ್ತು 'ಯಾವುದಾದರೊಂದು ಕಾರಣದಿಂದ ಮೊದಲ ದೃಷ್ಟಿಯಲ್ಲೇ ಆ ಹೆಣ್ಣು ನನ್ನನ್ನು ಅಟ್ರಾಕ್ಟ್ ಮಾಡಲೇ ಇಲ್ಲವಾದರೆ ಕುಟುಂಬದವರ ಭೇಟಿಯನ್ನು ನಿಲ್ಲಿಸಬಹುದಲ್ಲ.'

ಈ ವಿಷಯವನ್ನು ಒಳಮನಸ್ಸು, ಶುದ್ಧ ಮನಸ್ಸು ಮಾತ್ರ ಆಲೋಚಿಸಲು ಸಾಧ್ಯ. ಡಜನ್ ಡಜನ್ ಆಗಿ ಹೆಣ್ಣು ನೋಡಿ ಸ್ಟೈಲಾಗಿ ತುಟಿಬಿರಿಯುವ ಗಂಡುಗಳ ಮಧ್ಯೆ ತಾನು ನೋಡುತ್ತಿರುವ ವಿಷಯವೂ ಆ ಹೆಣ್ಣಿಗೆ ತಿಳಿಯದಂತೆ, ನಾಜೂಕಾಗಿ ಆಕೆಯನ್ನು ನೋಡಿ ಮೊದಲ ಇಂಪ್ರೆಶನನ್ನು ಅಚ್ಚು ಹೊಡೆದುಕೊಂಡು ಹೋಗುವ ವಿಷಯ ಖಂಡಿತವಾಗ್ಲೂ ಈ ಹುಡುಗನ ದೊಡ್ಡ ಗುಣವೇ ಹೌದು.

"ಹೇಳಿ'' ಎಂದಳು ಪದ್ಮಿನಿ.



"ಅಬ್ಬಾ ಈಗಷ್ಟೇ ಸ್ವಲ್ಪ ಕುತೂಹಲ ಕಂಡಂತಾಯ್ತು. ಒಂದು ದೊಡ್ಡ ಕಂಪನಿಯಲ್ಲಿ ಅ ಅಸಿಸ್ಟೆಂಟ್ ಮ್ಯಾನೇಜರ್ ಆಗಿರುವ ಈಕೆ ಆಡಂಬರವಿಲ್ಲದೆ ಇಷ್ಟುಸಿಂಪಲ್ಲಾಗಿ, ಗಂಭೀರವಾಗಿ, ಅದೇ ಸಮಯ ನಡಿಗೆ, ನೋಟ ಎಲ್ಲದರಲ್ಲೂ ಸತ್ಯತೆ ಕಾಣುತ್ತಿದೆಯಲ್ಲ. ಕೆಲವರು ಹೆಜ್ಜೆ ಇಡುವುದಲ್ಲೇ ಅಯ್ಯೋ ಪಾಪ ಎನ್ನುವಂತೆ ಇರುತ್ತಾರೆ, ಇವರು ಬರುವಾಗ ಎದ್ದು ನಿಂತು ಗೌರವಿಸೋಣವೆಂದು ಮನಸ್ಸಾಗುತ್ತಿದೆ" ಎಂದ.

"ಇಳಂಗೋ ಅವರೆ, ನಿಮ್ಮ ಫ್ರೆಂಡ್ ನನ್ನನ್ನು ನೋಡಲು ಇಚ್ಛೆಸುವುದಾಗಿ ನನಗೊಂದು ರಿಂಗ್ ಮಾಡಿದ್ರೆ ಚೆನ್ನಾಗಿತ್ತಲ್ಲ. ಇಬ್ಬರೂ ಡೈರೆಕ್ಟಾಗಿ ನನ್ನ ಆಫೀಸಿಗೆ ಬಂದು ನನ್ನೊಂದಿಗೆ ಮಾತನಾಡಬಹುದಿತ್ತಲ್ಲ. ಅದನ್ನು ಬಿಟ್ಟು ಇದೇನು, ಮರೆಯಾಗಿ ನಿಂತು ವಾಚ್ ಮಾಡಿ..." ಎಂದಾಗ ಅವಳಲ್ಲಿ ಸ್ವಲ್ಪ ಕೋಪವೂ ಇತ್ತು.

"ಕ್ಷಮಿಸಬೇಕು, ವಿಜಯಕುಮಾರ್ ಹೇಳಿದ್ದೇನೋ ಹಾಗೇನೇ. ಆದರೆ ನಾನೇ ಅವನ ಯೋಚನೆಯನ್ನು ಬದಲಾಯಿಸಿದೆ."

"ಏಕೆ?"

"ನೀವು ಸರಿಯಾಗಿ ಮಾತನಾಡಿಸುವಿರೋ ಇಲ್ಲವೋ ಎಂಬ ಸಂದೇಹದಿಂದ. ನಾವು ಬಂದು ಪರಿಚಯಿಸಿಕೊಂಡಾಗ ಇದೆಲ್ಲ ಸಂಸಾರಿಕ ವಿಷಯ, ಮನೆಗೆ ಬಂದು ನಮ್ಮ ತಂದೆಯ ಹತ್ತಿರ ಮಾತನಾಡಿ ಎಂದುಬಿಟ್ಟರೆ ಅದು ದೊಡ್ಡ ಅವಮಾನವಲ್ಲವೆ?"

"ಛೇ ಛೇ ನಾನು ಯಾರಿಗೂ, ಯಾವಾಗಾಲೂ ಮುಖಕ್ಕೆ ಹೊಡೆದಂತೆ ಏನೂ ಹೇಳುವ ಸ್ವಭಾವದವಳಲ್ಲ."

"ಗೊತ್ತುರೀ, ಆದರೂ ಒಂದು ರೀತಿಯ ಅಂಜಿಕೆ. ಈಗ ವಿಜಯಕುಮಾರನಿಗೆ ಪೂರ್ಣ ತೃಪ್ತಿ. ಮಧ್ಯಸ್ಥರ ಮೂಲಕ ವಿಷಯ ತಿಳಿಸುತ್ತಾರೆ. ಆಗ ನೀವು ಅವನನ್ನು ಭೇಟಿಯಾಗಿ ನಿಮಗೂ ಒಪ್ಪಿಗೆಯಾದರೆ ಮಾತ್ರ ಈ ಮದುವೆ ಶೇಕಡ 99 ನಿಶ್ಚಯವಾದಂತೆಯೆ."

"ಲೆಟ್ ಅಸ್ ಸೀ."

ಸ್ವಲ್ಪ ಅಂಜುತ್ತಲೇ "ಆಫೀಸಿನ ನಿಮಗೆ ಸಪರೇಟ್ ರೂಂ ತಾನೆ?" ಎಂ ಇಳಂಗೋ.

"ಹೌದು."

"ನಾಳೆ ಬೆಳಿಗ್ಗೆ ನಿಮ್ಮನ್ನು ನೋಡಲ ಹೋಗೋಣವೆಂದ ವಿಜಯ. ತಮಗೆ ಯಾ ಆಕ್ಷೇಪಣೆಯೂ ಇಲ್ಲದಿದ್ದರೆ, ನಾವಿಬ್ಬರೂ ಬಂ ಪರಿಚಯ ಮಾಡುಕೊಳ್ಳುತ್ತೇವೆ. ಆಗ ನೀವಿಬ್ಬರ ಏನಾದರೂ ಪರ್ಸನಲ್ ಮ್ಯಾಟರ್ ಇದ್ದರೆ ಮಾತಾ ಅನಂತರ ಹಿರಿಯರ ಭೇಟಿಯಾಗಲಿ. ಈ ವಿಷ ಅವರಿಗೆ ತಿಳಿಸುವುದು ಬೇಡ. ನಿಮ್ಮ ಅಫ್ಸಿಯ ಕಸ್ಟಮರ್ಸನ್ನು ಸಂಧಿಸುವಂತೆ, ಇದು ನಿಮಗೆ ಎನಿಸಿದರೆ. ಕೇವಲ ಹತ್ತೇ ನಿಮಿಷದಲ್ಲಿ ಪೂ ತಿಳಿಯಲು ಸಾಧ್ಯವಿಲ್ಲ. ಆದರೆ ಕ್ಯಾರೆಕ್ಟರ್‌ನ ಬ ಊಹಿಸಬಹುದು. ಇದಕ್ಕೆ ಇಷ್ಟು ಸಮ ಬೇಕಾದಷ್ಟು. ಆತನ ಕ್ಯಾರೆಕ್ಟರ್‌ನ ಔಟ್‌ಲು ಬಗ್ಗೆ. ಏನ್ ಹೇಳ್ತೀರ?"

ಏನೂ ಹೇಳಲೂ ತೋಚದೆ ತಬ್ಬಿಬ್ಬಾದ ಏನು ಉತ್ತರಿಸುವುದು?

"ನಿಮಗೆ ಅಂಜಿಕೆಯಾದರೆ ಬೇಡ. ಹಿರಿಯ ಭೇಟಿಯಾಗುವಾಗಲೇ ನೀವು ಸಂಧಿಸಿದರೆ ಯಾ ಪ್ರಶ್ನೆಯೂ ಏಳುವುದಿಲ್ಲ. ನಾನು ಅವ ಎಲ್ಲವನ್ನೂ ಅರ್ಥವಾಗುವಂತೆ ಹೇಳುತ್ತೇನೆ. ನಿಮ ಇಷ್ಟ ಇಲ್ಲ ಎಂದು."

"ನೋ ನೋ" ಎಂದಳು ತಕ್ಷ "ಇದರಲ್ಲೇನು ತಪ್ಪು, ಧಾರಾಳವಾಗಿ ಕರೆತ ಹನ್ನೆರಡು ಗಂಟೆಯವರೆಗೂ ನಾನು ಬಿಜಿ. 1 ರಿಂದ 2 ಗಂಟೆ ಒಳಗೆ ಬರಹೇಳಿ. ನೀ ಹೇಳಿದ್ದಕ್ಕೆ ಒಂದು ಐಡಿಯಾ ಸಿಗಬಹುದ ಹೊತ್ತಾಯ್ತು, ನಾನಿನ್ನು ಹೊರಡುತ್ತೇನೆ" ಎಂ ಎದ್ದಳು ಪದ್ಮಿನಿ.

(ಸಶೇ

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.

* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.

* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.

* 'ಪದರಂಗ' 'ಚಾತ್ರ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.

* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.

* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.

* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 10–5–92.

* ನಿಮ್ಮ 'ಲಾಟರಿ ಟಿಕೆಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 17–4–92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೨೧

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ;

ಒಂದು ಪುಟದ ಮಿನಿ ಕಥೆ

ಹುಡುಕಾಟ

ವಿ. ಎಸ್. ಶ್ರೀನಿವಾಸ ಪ್ರಸನ್ನ

ಗೆಳೆಯ ಗಣೇಶನ ಮನೆಯ ಗೃಹ ಪ್ರವೇಶದಂದು ಚುರುಕಾಗಿ ಓಡಾಡುತ್ತಿದ್ದ ಚೈತನ್ಯ ಅಡುಗೆಯಿಂದ ಹಿಡಿದು ಅಲಂಕಾರದವರೆವಿಗಿನ ಎಲ್ಲ ಕೆಲಸಗಳಲ್ಲೂ ಸಕ್ರಿಯ ಪಾತ್ರ ವಹಿಸಿದ್ದ. ರಾತ್ರಿಯಾಗುತ್ತಿದ್ದಂತೆ ಅತಿಥಿಗಳ ಸಂಖ್ಯೆ ಕಡಿಮೆಯಾದಾಗ ತಾನೂ ಹೊರಡಲು ಅನುವಾಗಿ ಶರ್ಟ್ ಧರಿಸಿದ ಚೈತನ್ಯ ಮುಖ್ಯವಾದ ವಸ್ತುವೊಂದಕ್ಕಾಗಿ ಜೇಬಿಗೆ ಕೈ ಹಾಕಿದಾಗ ಅದರಲ್ಲಿದ್ದ ಕವರ್ ಮಾಯವಾಗಿರುವುದು ಕಂಡು ಬಂದಿತು.

ಕೆಲಸದ ಭರದಲ್ಲಿ ಅಂಗಿಯನ್ನು ಕಳಚಿ ಅಲ್ಲೇ ಇದ್ದ ಮೊಳೆಯೊಂದಕ್ಕೆ ತೂಗು ಹಾಕುವಾಗ ಜೇಬಿನಲ್ಲಿದ್ದ ವಸ್ತುವಿನ ಬಗ್ಗೆ ಗಮನ ಹರಿಸಬೇಕಿತ್ತು ಎಂಬುದನ್ನು ಮರೆತಿದ್ದನಾತ.

ಕವರ್ ಕಳೆದಿರುವ ವಿಷಯ ಒಬ್ಬರಿಂದೊಬ್ಬರಿಗೆ ಹರಡಿದಂತೆಲ್ಲ ಅಲ್ಲಿ ನೆರೆದಿದ್ದವರಿಂದ ಎಷ್ಟಿತ್ತು ದುಡ್ಡು? ಆಫೀಸಿನ ಕಾಗದವೇನಾದ್ರೂ ಇತ್ತ ಎಂಬ ಹತ್ತಾರು ಪ್ರಶ್ನೆಗಳು ಚೈತನ್ಯನನ್ನು ಮುತ್ತಿದವು. ಅವುಗಳಿಗೆಲ್ಲ ಉತ್ತರವನ್ನು ನೀಡುತ್ತ ತನ್ನ ಹುಡುಕಾಟವನ್ನು ಮುಂದುವರೆಸಿದ ಚೈತನ್ಯನಿಗೆ ತಾನು ಅಂಗಿಯನ್ನು ಇಟ್ಟಿದ್ದ ಕೊಟಡಿಗೆ ಹೋದಾಗ ಅಂಗಿಯ ಕಿಸೆಯಿಂದ ಹೊರಬಿದ್ದ ಕವರ್ ಕಸದ ಜೊತೆಯಲ್ಲಿ ಸೇರಿ ಹೋಗಿರಬಹುದೆಂದು ಊಹಿಸಿ ಕಸಕ್ಕಾಗಿ ಕಣ್ಣಾಡಿಸಿದಾಗ ಕೊಟಡಿ ಕ್ಲೀನಾಗಿರುವುದು ಕಂಡು ಅಚ್ಚರಿಯಾಯಿತು. ಸಂಜೆವರೆವಿಗೂ ಅಲ್ಲಿದ್ದ ಕ[illegible] ಗುಡಿಸಿದ್ದರಿಂದ ತೊಟ್ಟಿಯನ್ನು ಸೇರಿರಬಹು[illegible]ದೆಂದೆಣಿಸಿ ತೊಟ್ಟಿಯ ಅನ್ವೇಷಣೆಯಲ್ಲಿ ತೊಡಗಿದ ಚೈತನ್ಯ.

ಹೊಸ ಬಡಾವಣೆಯಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ಇದ್ದ ಮನೆಗಳ ಸುತ್ತಲೂ ಪಾರ್ಥೇನಿಯಂ ಗಿಡಗಳೇ ಹಬ್ಬಿಕೊಂಡಿದ್ದರಿಂದ ತೊಟ್ಟಿಯನ್ನು ಹುಡುಕಲಾಗದಾಯಿತು. ಕತ್ತಲಿನಲ್ಲಿ ಹುಡುಕಾಡಿ ಬೇಸತ್ತು ಭಾರವಾದ ಹೆಜ್ಜೆಯನ್ನಿಡುತ್ತ ನಡೆದಿದ್ದ ಚೈತನ್ಯನ ನೆರವಿಗೆ ಬಂದ ಪುಟ್ಟ ಹುಡುಗಿಯೊಂದು ತನ್ನ ತಾಯಿ ಹೊಸಮನೆಯಿಂದ ಕಸವನ್ನು ಗುಡಿಸಿ ತಂದು ಎಸೆದಿದ್ದ ಜಾಗದತ್ತ ಆತನನ್ನು ಕರೆದೊಯ್ದು ತೋರಿದಾಗ ಹುಡುಕಾಟಕ್ಕೆ ಮತ್ತ ಚಾಲನೆ ಬಂದಿತು. ಪಾರ್ಥೇನಿಯಂ ಗಿಡಗಳ ಮಡಿಲಲ್ಲಿ ಬೆಂಕಿಕಡ್ಡಿಯ ಬೆಳಕಲ್ಲಿ ಆ ಕವರ್ ಕಂಡು ಬಂದಾಗ ಚಕ್ಕನೆ ಅದರತ್ತ ಕೈ ಚಾಚಿದ ಚೈತನ್ಯ. ಗಣೇಶ ತನ್ನ ಮಗಳ ಚೈನ್ ಒಂದನ್ನು ಬೆಳಿಗ್ಗೆ ಕಾರ್ಯಕ್ರಮ ನಡೆಯುತ್ತಿದ್ದಾಗ ಮುರಿದು ಹೋಗಿದ್ದರಿಂದ ಅದನ್ನು ಜೋಪಾನವಾಗಿಸುವ ಸಲುವಾಗಿ ಇಟ್ಟುಕೊಂಡಿರುವಂತೆ ಹೇಳಿ ಚೈತನ್ಯನಿಗೆ ನೀಡಿದ್ದು ಆತ ಅದು ಕವರ್‌ನಲ್ಲಿ ಇದೆಯೋ, ಇಲ್ಲವೋ ಎಂಬುದನ್ನು ತಿಳಿಯುವ ಕಾತುರತೆಯಿಂದ ಆ ರೀತಿ ಚಕ್ಕನೆ ಕೈ ಹಾಕುವಂತೆ ಮಾಡಿತು. ಚಿನ್ನದ ಚೈನಿನೊಂದಿಗೆ ಹಣ, ರಸೀದಿ, ಪತ್ರಗಳು ಎಲ್ಲವೂ ಇದ್ದದ್ದು ನೆಮ್ಮದಿ ಮೂಡಿಸಿತು.

ಗಂಟೆಯ ಹಿಂದಷ್ಟೆ ರಸ್ತೆಯಲ್ಲಿ ಗಾಡಿಯ ಮೇಲೆ ಮಾರುತ್ತಿದ್ದ ಮಾವಿನ ಹಣ್ಣಿಗಾಗಿ ಹಣ ಬೇಕೆಂದು ಕೇಳಿ ತನ್ನ ಅಮ್ಮನಿಂದ ಏಟುತಿಂದಿದ್ದ ಆ ಪುಟ್ಟ ಹುಡುಗಿ ಕವರ್‌ನಲ್ಲಿ ಹಣವಿತ್ತೆಂದು ಜನರಾಡುತ್ತಿದ್ದ ಮಾತಿನಿಂದ ತಿಳಿದುಕೊಂಡರೂ ಅದನ್ನು ಪತ್ತೆ ಹಚ್ಚಿ ತಾನೇ ತೆಗೆದುಕೊಳ್ಳಲು ಪ್ರಯತ್ನ ಮಾಡದೆ ಚೈತನ್ಯನಿಗೆ ಅದರ ಜಾಗವನ್ನು ತೋರಿಸುವ ಮೂಲಕ ತನ್ನ ನಿಯತ್ತನ್ನು ಪ್ರದರ್ಶಿಸಿದ್ದಳು.


ಕಳೆದು ಹೋದ ಕೊಳಲು

ಕಳೆದು ಹೋಗಿದೆ ಕೊಳಲು
ನುಡಿಸಲಾಗದ ಬೆರಳು
ಹೃದಯದಾಳದಿ ಎಲ್ಲೋ
ಮಧುರ ರಾಗದ ನೆರಳು
ಮೂಕವೇದನೆಯಲ್ಲಿ
ನರಳುತಿರುವುದು ಕರುಳು.

ಕುಣಿವ ಗೋಪಿಯರಿಲ್ಲ
ಅವರ ನಗು ನಲಿವಿಲ್ಲ
ಗೋಕುಲದ ಮಣ್ಣಿನಲಿ
ಹೆಜ್ಜೆಗಳ ಗುರುತಿಲ್ಲ
ಹಾಲು ಬೆಣ್ಣೆಗಳಿಲ್ಲ
ಮಮತೆ ಕಣ್ಣುಗಳಿಲ್ಲ
ಗೋವುಗಳ ಕೊರಳಿನಾ
ಗಂಟೆ ಟಿಂಟಿಣಿಯಿಲ್ಲ.

ತುಂಟ ಮಕ್ಕಳ ಕೇಕೆ
ಆಟಪಾಟಗಳಿಲ್ಲ
ದೊಡ್ಡವರ ಹುಸಿಕೋಪ
ಪ್ರೀತಿ ಭಾವನೆಯಿಲ್ಲ
ವೇಣು ನಾದೋನ್ಮಾದ
ಸಮ್ಮೋಹನವು ಇಲ್ಲ
ಪ್ರೇಮ ಸೂತ್ರದಿ ಬೆಸೆವ
ಕೃಷ್ಣ ಕರುಣೆಯು ಇಲ್ಲ.

ಒಲವು ಚೆಲವುಗಳಿಂದ
ತುಳುಕಿತ್ತು ಆನಂದ
ಸುಳಿವ ಗಾಳಿಗಳಲ್ಲಿ
ಹರಡಿತ್ತು ಸುಗಂಧ
ಎಲ್ಲಿ ಹೋಯಿತ್ತೋ ಕಾಣೆ
ಮಧುರ ರಾಗದ ಕೊಳಲು
ನುಡಿಸಬಹುದೇ ಮತ್ತೆ
ಕರುಣೆ ಕೃಷ್ಣನ ಬೆರಳು?



ಸು. ರುದ್ರಮೂರ್ತಿ ಶಾಸ್ತ್ರಿ

ಧಾರಾವಾಹಿ – ೨೪

ಪ್ರೇಮ ಪರ್ವತ

ಬೇಲೂರು ರಾಮಮೂರ್ತಿ

ಪೆಟ್ಟುಸುಮಾರಾಗೇ ಬಿದ್ದಿದ್ರಿಂದ ರಮ್ಯಳಿಗೆ ಅಳು ಬಂತು. ಅವಳು ಮತ್ತೆ ಮಾತನಾಡಲಿಲ್ಲ.

ಶಿವೂ ಹಟ ಹಿಡಿದು ತಂದೆ ತಾಯಿಯರನ್ನು ಸಿನಿಮಾಕ್ಕೆ ಕರ್ಕೊಂಡೇ ಹೋದ. ಸಿನಿಮಾದಲ್ಲಿ ಕೂತಿದ್ದರೂ ರಮ್ಯ ಏನಾದರೂ ಅನಾಹುತ ಮಾಡ್ಕೊಂಡಿದ್ರೆ ಅನ್ನೋ ಯೋಚನೆ ಇದ್ದೇ ಇತ್ತು, ಸದ್ಯ ಹಾಗೇನೂ ಆಗಲಿಲ್ಲ.

ಬಾಗಿಲು ತಟ್ಟಿದಾಗ ರಮ್ಯಳೇ ಬಾಗಿಲು ತೆಗೆದಳು.

"ಸಿನಿಮಾ ಎಷ್ಟು ಚೆನ್ನಾಗಿತ್ತೂಂತೀಯ, ನೀನು ಬರಬೇಕಿತ್ತು" ಅಂದರು ಸಾವಿತ್ರಮ್ಮ.

ರಮ್ಯ ಊಟಕ್ಕೇಳಲಿಲ್ಲ. ಈಚೀಚೆಗೆ ಶಿವೂ ಅವಳನ್ನು ಊಟ ತಿಂಡಿಗೆ ಬಲವಂತ ಮಾಡೋದನ್ನು ನಿಲ್ಲಿಸಿ ಬಿಟ್ಟಿದ್ದ.

ಹುತ್ತಿಗೆಯವರೆಗೂ ರಗ್ಗು ಹೊದ್ದು ಮಲಗಿದ್ದಳು ರಮ್ಯ. ದೀಪವಾರಿಸಿ ಅವಳ ಪಕ್ಕ ಮಲಗಿದ.

ನಾಗಮಹಿಮೆ ಚಿತ್ರದ ನಾಗಕನ್ನಿಕೆಯ
ಮ್ಯ ಮಾಟ ಕಣ್ಮುಂದೆ ಬರ್‍ತಿತ್ತು. ಪಕ್ಕದಲ್ಲೇ ರ
ಮಲಗಿದ್ರೂ ಅವಳನ್ನು ಮುಟ್ಟಲು ಮನ
ಬರಲಿಲ್ಲ.

ಸಂಸಾರವನ್ನು ಯಾವ ರೀತಿ
ಮಾಡ್ಕೋಬೇಕು ಅನ್ನೋದನ್ನೇ ಯೋಚಿ
ಮಲಗಿದ.

ಶಿವೂ ತೋಟದ ಕೆಲಸಕ್ಕೆ ಹೋದ ಮೇ
ರಮ್ಯ ಕಿಟಕಿಯಿಂದಾಚೆ ನೋಡುತ್ತ ಕೂತಳ
ಮನೋಹರನ ನೆನಪಾಯಿತು. ಆಗೆಲ್ಲ ಕುಣಿಯು
ಜಿಗಿಯುತ್ತ ಮನೋಹರನ ಮನೆಗೆ ಓಡುತ್ತಿದ್ದ
ತಂದೆ ತಾಯಿ ಯಾವುದಕ್ಕೂ ಆಕ್ಷೇಪ
ಮಾಡುತ್ತಿರಲಿಲ್ಲ. ಬರ್‍ತಾ ಬರ್‍ತಾ ವಿಧಿಲೀಲೆಯೆ
ಬೇರೆ ಆಯಿತು. ಆದರೆ, ಆದರೆ ಮನೋಹ
ನೀನಿಲ್ದೆ ನನ್ನ ಬದುಕಿಲ್ಲ ಅಂದಿದ್ದೋನು ಅದ್ಹೇ
ಬೇರೆ ಹೆಣ್ಣನ್ನು ಮದುವೆಯಾದ. ತ
ಮದುವೆಯಾದ್ಮೇಲೆ ಅವನು ಇನ್ನೇನ
ಮಾಡಬಹುದಿತ್ತು, ಪ್ರಾಣ ಕಳ್ಕೋಬೇಕಿತ್ತೇ. ಆದ
ಆದಕ್ಕೆ ವಿರುದ್ಧ ಅವನು. ಆದರೆ ಅವನು ಈಚೆ
ಒಂದು ಸಾರಿಯಾದರೂ ಮುಖ ಕೊಟ್ಟು ಮಾತಾಡಿ
ಅಂದ್ರೆ ಅವನು ತನ್ನನ್ನು ಮರೆತಂತೆಯೇ, ಅವ
ಹೆಂಡ್ತಿ ಗರ್ಭಿಣಿ ಅಂದ್ರೆ ಅವನು ಅವಳನ
ಪ್ರೀತಿಸುತ್ತಿರಲೇಬೇಕು. ಅವನು ತನ್ನನ್ನು ಮರೆ
ಬದುಕು ಸುಂದರವಾಗುವಂತೆ ಮಾಡಿಕೊಂ
ತಾನಾದರೂ ಅವನ ಚಿಂತೆಯಲ್ಲೇ ಬೇಯುತ್ತಿರು
ಯಾವುದು ಸರಿ, ಯಾವುದು ತಪ್ಪು?

ಬಾಗಿಲು ಸದ್ದಾಯ್ತು. ಗೌರಮ್ಮ ಬ
ಬಂದರು.

"ನಿಂಗಿಷ್ಟವಾದ ನುಚ್ಚಿನುಂಡೆ ಮಾಡಿದ್ದೀ
ತಗೋ ರಮ್ಯ ತಿನ್ನಮ್ಮ" ಅಂದರು.

ನುಚ್ಚಿನುಂಡೆಯನ್ನೂ, ಅತ್ತೆಯನ್ನೂ ನೋ
ತಟ್ಟೆ ಕೈಗೆ ತಗೊಂಡು ಅಲ್ಲಿಟ್ಟಳು.

"ರಮ್ಯ ನಾನೇನು ನಿಂಗೆ ದೂರದೋಳ
ಅತ್ತೆಯಾಗಿ ಮೊದಲೂ ಸಂಬಂಧ ಇತ್ತು, ಈಗ

ಇದೆ. ನಿಂಗೇನಾದ್ರೂ ತೊಂದ್ರೆ ಆದ್ರೆ ನನ್ಹತ್ರ ಹೇಳ್ಕೊಮ್ಮ. ಸುಖವಾಗಿರೋ ಕಾಲದಲ್ಲಿ ಹೀಗೆ ಮಂಕು ಕವಿಸಿಕೊಂಡಿದ್ರೆ ಹೇಗೆ ಹೇಳು. ಅಕ್ಕಪಕ್ಕದ ಮನೆಯವರೆಲ್ಲ ಕೇಳ್ತಾರೆ ನಿಮ್ಮ ಸೊಸೆ ಮನೆ ಬಿಟ್ಟೇ ಬರಲ್ವಲ್ಲ, ಅಷ್ಟೊಂದು ಗಂಭೀರವೇ ಅಂತ. ನಾನೇನು ಉತ್ತರ ಹೇಳ್ಲಿ. ಇನ್ನೂ ಕೆಲವರು ಮನೆಗೆ ಸೊಸೆ ಬಂದು ವರ್ಷದ ಮೇಲಾಯ್ತು ಇನ್ನು ಯಾವಾಗ ನಿಮ್ಮನ್ಲಿ ಮಗುವಿನ ಅಳು ಶಬ್ದ ಕೇಳೋದು ಅಂತಾರೆ. ನೀನು ಹೀಗಿದ್ದೀಯಾಂತ ಶಿವೂ ಕೂಡ ತುಂಬ ಬೇಜಾರಾಗಿದ್ದಾನೆ. ನೀನು ಮೊದಲಿದ್ದ ಹಾಗೆ ಇರೋಕಾಗಲ್ವೇ ರಮ್ಯ.'' ಅಂತ ತುಂಬ ಕಳಕಳಿಯಿಂದ ಮಾತಾಡಿದರು.

ರಮ್ಯ ಅತ್ತೆ ಮುಖವನ್ನು ನೋಡಿದಳೇ ಹೊರತು ಮಾತಾಡಲಿಲ್ಲ. "ನಾವಿನ್ನು ಎಷ್ಟು ದಿವಸ ಇರ್ತೀವಿ ಹೇಳು. ಮುಂದೆ ಈ ಮನೇಲಿ ಬದುಕಿ ಬಾಳಬೇಕಾದವರು ನೀನು, ಶಿವೂ. ನಿಮ್ಮಾವ ಕೂಡ ನಿನ್ನ ವಿಚಾರದಲ್ಲಿ ತುಂಬಾ ಬೇಜಾರು ಮಾಡ್ಕೊಂಡಿದ್ದಾರೆ. ಒಟ್ನಲ್ಲಿ ಈ ಮನೇಲಿ ಯಾರೂ ಸುಖವಾಗಿಲ್ಲ'' ಅಂದು ಕಣ್ಣೀರು ಹಾಕ್ಕೊಂಡು ಹೋದರು.

ರಮ್ಯ ಅತ್ತೆ ಹೋದ ಮೇಲೆ ಬಾಗಿಲು ಹಾಕಿದಳು. ಶಿವೂ ಸಂಜೆ ಬಂದಾಗ ತಾಯಿ ಕೊಟ್ಟಿದ್ದ ತಿಂಡಿ ರಮ್ಯಳ ಕೋಣೇಲಿ ಹಾಗೇ ಇತ್ತು. ರಮ್ಯ ಕಥೆ ಪುಸ್ತಕ ಓದ್ತಾ ಕೂತಿದ್ದಳು. ಶಿವೂ ಕೋಪದಿಂದ 'ಅಮ್ಮಾ' ಅಂತ ಕರೆದ. ಗೌರಮ್ಮ ಏನಾಯ್ತೋ. ಅಂದ್ಕೊಂಡು ಓಡಿ ಬಂದರು.

ತಿಂಡಿ ತಟ್ಟೆ ತಾಯಿಗೆ ಕೊಡುತ್ತ,

"ಅಮ್ಮಾ ಇನ್ಮೇಲೆ ಈ ಮನೇಲಿ ಇವಳಾಗಿ ಕೇಳದೆ ತಿಂಡಿ, ಕಾಫಿ, ಊಟ ಏನೂ ಕೊಡಬೇಡ ಇವಳಿಗೆ. ನೀರೂ ಕೊಡಬೇಡ. ಉಪವಾಸ ಸತ್ರೆ ಬುದ್ಧಿ ಬರುತ್ತೆ. ಈ ವಯಸ್ಸಲ್ಲಿ ನೀನು ಒಲೆ ಮುಂದೆ ಕೂತ್ಕೊಂಡು ಹೆಣಗಿ ತಿಂಡಿ ಮಾಡೋದು, ಇವಳು ಅಹಂಕಾರದಿಂದ ಅದನ್ನ ಮೂಲೇಲಿ ಬಿಸಾಕೋದು. ದಿಮಾಕಿದ್ರೆ ಇವಳ ಹತ್ರಾನೇ ಇಟ್ಕೊಳ್ಳಿ. ಉಪವಾಸ ಸತ್ರೆ ದಿಮಾಕು ತನಗೆ ತಾನಾಗೇ ಇಳಿಯುತ್ತೆ'' ಅಂದ.

ರಮ್ಯ ಶಿವೂನ ಕಡೆ ಕ್ರೂರವಾಗಿ ನೋಡಿದಳು.

"ನಾನು ನೋಡ್ತಾನೇ ಇದ್ದೀನಿ, ಈ ಮನೆಗೆ ಕಾಲಿಟ್ಟಾಗಿನಿಂದ ಇದೇ ಗೋಳು. ಇವಳಿಂದಾಗಿ ನಾವ್ಯಾಕೆ ಗೋಳು ಅನುಭವಿಸಬೇಕು. ಅಮ್ಮಾ ಇವತ್ತೇ ಹೇಳ್ತಿದ್ದೀನಿ ಇವಳನ್ನು ಮನೆಗೆ ಸಾಗಹಾಕು, ನಂಗೆ ಬೇರೆ ಹೆಣ್ಣು ನೋಡು. ಸ್ವಲ್ಪ ನೆಮ್ಮದಿಯಾಗಾದ್ರೂ ಇರೋಣ'' ಅಂದ ಶಿವೂ.

ಶಿವೂನ ಎದುರಿಗೆ ಬಿರುಗಾಳಿಯಂತೆ ಬಂದು,

"ಮಾಡ್ಕೊಳ್ಳೀ ಯಾರು ಬೇಡಾಂತಾರೆ. ಬೇರೆ ಹೆಣ್ಣು ಮಾಡ್ಕೊಳೋ ಹಾಗಿದ್ರೆ ನನ್ನ ಬದುಕು ಯಾಕೆ ಹಾಳು ಮಾಡಿದ್ರಿ, ನನಗೇನು ಹೆದರಿಸ್ತೀರಾ.''

"ನನ್ನ ಬದುಕು ಹಾಳು ಮಾಡ್ತಿರೋಳು ನೀನು, ನಾನಲ್ಲ. ಒಂದು ದಿನಾನಾದ್ರೂ ಈ ಮನೇಲಿ ನೀನು ಸೊಸೆಯಾಗಿ ನಡ್ಕೊಂಡಿದ್ದೀಯ. ಅಮ್ಮನ ಕೈಲಿ ಅಡುಗೆ ತಿಂಡಿ ಮಾಡಿಸ್ತೀಯ, ನಾಚಿಕೆ ಆಗಲ್ವ ನಿಂಗೆ.''

ಗೌರಮ್ಮ "ಶಿವೂ ಸುಮ್ನಿರೋ, ಅವಳ ಮೇಲೆ ಯಾಕೆ ರೇಗ್ತೀಯ'' ಅಂದರು.

"ಇನ್ನೇನಮ್ಮ ಇವಳ ವರ್ತನೆಗೆ ಮಿತಿಯೇ ಇಲ್ವೇ. ನಾವು ಇವಳಿಗೆ ಏನು ಕಡಿಮೆ ಮಾಡಿದ್ದೀವಿ

ಇಲ್ಲಿಯವರೆಗೆ...

ರಮ್ಯ ಮತ್ತು ಮನೋಹರ್ ಬಾಲ್ಯ ಸ್ನೇಹಿತರಾಗಿ ಬೆಳೆದ ಪ್ರೇಮಿಗಳು. ರಮ್ಯ ಬಲವಂತದಿಂದ ಶಿವೂನ ಮಡದಿಯಾಗ ಬೇಕಾಯಿತು. ಆಗ ತನ್ನ ಭಗ್ನ ಪ್ರೀತಿಯಿಂದ ಅಪಾರ ನೋವು ಉಂಟಾಗುತ್ತದೆ. ದಾಂಪತ್ಯಕ್ಕೆ ಹೊಂದಿಕೊಳ್ಳಲು ಆಗುವುದಿಲ್ಲ.

...ಮುಂದೆ ಓದಿ

ಹೇಳು, ಸ್ವಲ್ಪನಾದ್ರೂ ತಗ್ಗಿ ಬಗ್ಗಿ ನಡೀಬೇಕು ಅನ್ನೋದರ ಅರಿವಿಲ್ಲಿದ್ರೆ ಇವಳು ಹೆಣ್ಣು ಕುಲಕ್ಕೇ ಅವಮಾನ.''

ಅಂದು ತಾಯೀನ ಕರೆದುಕೊಂಡು ಆಚೆ ಹೋದ ಶಿವೂ.

ತಾಯಿ ಮಗ ಹೋದೊಡನೆ ರಪ್ಪಂತ ಬಾಗಿಲು ಹಾಕಿದ್ದಳು ರಮ್ಯ. ಮತ್ತೆ ಯಾರೂ ಅವಳನ್ನ ಮಾತಾನಾಡಿಸಲಿಲ್ಲ. ಶಿವೂ ಊಟ ಮಾಡಿ ಬಂದು ಮಲಗಿದ. ರಮ್ಯ ಮಂಚ ಬಿಟ್ಟು ನೆಲದ ಮೇಲೆ ಮಲಗಿದ್ದಳು. ಶಿವೂ ಕೇರ್ ಮಾಡಲಿಲ್ಲ.

ಮರುದಿನ ಶಿವೂ ಕೆಲಸಕ್ಕೆ ಹೋದ ಮೇಲೆ ಗೌರಮ್ಮ ಬಂದು ರಮ್ಯಳನ್ನು ಸಮಾಧಾನ ಮಾಡಿದರು. ಬಲವಂತ ಮಾಡಿ ಕಾಫಿ ಕೊಟ್ಟರು, ಸ್ನಾನ ಮಾಡ್ಕೊಂಡ್ಬಾ ಅಂತ್ಹೇಳಿ ತಾವೇ ಮುಂದೆ ಕೂತು ತಿಂಡಿ ತಿನ್ನಿಸಿದರು.

"ರಮ್ಯ, ಶಿವೂ ನಿನ್ನೆ ಹಾಗೆಲ್ಲ ಮಾತಾಡ್ದ ಅಂತ ಬೇಜಾರ್ಮಾಡ್ಕೋಬೇಡಮ್ಮ. ಅವನು ಹೇಳಿದ್ರಲ್ಲೂ ನಿಜ ಇದೆ ಕಣೆ. ನನ್ ಹೆಂಡ್ತಿ ಹಾಗಿರ್ಬೇಕು, ಹೀಗಿರ್ಬೇಕು ಅಂತ ಅವನಿಗೂ ಆಸೆ ಇರಲ್ವ ಹೇಳು. ಸಮಸ್ಯೆ ಏನಾದ್ರೂ ಇದ್ರೆ ಬಗೆಹರಿಸ್ಕೋಬೇಕೇ ಹೊರತು ಹೀಗೆಲ್ಲ ಕೂತ್ರೆ ಏನು ಪ್ರಯೋಜನ ಹೇಳು'' ಅಂತ ತಿಳುವಳಿಕೆ ಮಾತು ಹೇಳಿದರು.

"ನಾನೇನ್ಮಾಡ್ಲಿ ಅತ್ತೆ, ನನ್ನ ಸ್ಥಿತೀನ ನೀವ್ಯಾರೂ ಅರ್ಥ ಮಾಡ್ಕೋತಾನೇ ಇಲ್ಲ. ಬದುಕಿರೋಕೂ ಆಗ್ತಿಲ್ಲ, ಸಾಯೋಕೆ ಮನಸ್ಸಿಲ್ಲ ಅಂತಾ ಸ್ಥಿತಿ.''

"ಸಾಕು ಸುಮ್ನಿರು, ಸಾಯೋಂತಾದ್ದೇನಾಗಿದೆ ನಿಂಗೆ. ಇನ್ನೂ ಎಳೇ ವಯಸ್ಸು, ಸುಖ ಪಡೋ ಕಾಲ್ದಲ್ಲಿ. ಒಂದ್ ಕೆಲ್ಸ ಮಾಡು ಆಗಿದ್ದೆಲ್ಲ ಆಗಿ ಹೋಯ್ತು. ಇನ್ಮೇಲಾದ್ರೂ ಅವನನ್ನು ಸುಖವಾಗಿಟ್ಕೊ. ಅವನು ಬರೋ ಹೊತ್ತಿಗೆ ಲಕ್ಷಣವಾಗಿರು, ಕಾಫಿ ಕೊಡು, ಅವನ ಜೊತೆ ಆನಂದವಾಗಿ ಹರಟೆ ಹೊಡಿ. ದೇವಸ್ಥಾನಕ್ಕೆ ಹೋಗಿ ಬ... ಮಧ್ಯಾಹ್ನದ ಹೊತ್ತು ನೀನೇ ಊಟ ತಗೊಂ... ಹೋಗು. ಅವನೇನು ಹೇಳಿದರೂ ಅದಕ್ಕೆ ಉತ್ತೇಜ... ಕೊಡು, ಅವನನ್ನ ಸುಖವಾಗಿ ನೋಡ್ಕೊ.''

ರಮ್ಯ ಅತ್ತೆ ಹೇಳೋ ಮಾತುಗಳನ್ನ... ಕೇಳಿಸಿಕೊಂಡಳು. "ಬರ್ತೀನಮ್ಮ ಅಡುಗೆ ಕೆಲ... ಇದೆ'' ಅಂದು ಅವಳು ತಿಂದಿದ್ದ ತಿಂಡಿ ತಟ್ಟೆ ಕಾಫಿ ಲೋಟ ತಗೊಂಡು ಹೋದರು.

ದಪ್ಪಂತ ಹಾಸಿಗೇಲಿ ಬಿದ್ದು ಅತ್ತ... ರಮ್ಯ.

ಮುಂದಿನ ದಿನಗಳಲ್ಲಿ ರಮ್ಯ ಸ್ವಲ್ಪವಾದರ... ಬದಲಾವಣೆಯಾಗಬಹುದೆಂದು ಅಂದುಕೊಂಡಿದ್ದ... ಗೌರಮ್ಮ. ಆದರೆ ಅವರ ನಿರೀಕ್ಷೆ ಸುಳ್ಳಾಯಿತು.

ಶಿವೂ ಅವಳನ್ನು ಮಾತಾಡಿಸೋದು ಬಿಟ್... ಎಷ್ಟೋ ದಿನಗಳಾಗಿದ್ದವು.

ಅವಳಿಗೆ ಬುದ್ಧಿ ಇಲ್ಲ ಅಂದ್ರೆ ತನಗು... ಬುದ್ಧಿ ಇಲ್ವೆ ಅಂದ್ಕೊಂಡು ರಾತ್ರಿ ರಮ್ಯ ಅಂ... ಮೃದುವಾಗಿ ಕರೆದು ಅವಳನ್ನು ತೊಡೆ ಮೇ... ಕೂರಿಸಿಕೊಂಡ. ಮುಂಗೂದಲು ಸವರಿ ಕನ್ನೆ... ಮುತ್ತಿಟ್ಟು "ಇಷ್ಟೊಂದು ಹಟ ಮಾಡಿದ್ರೆ ಹೇಗೆ'' ಅಂದು ಬಿಗಿಯಾಗಿ ತಬ್ಬಿಕೊಂಡ.

ಅವನ ಕ್ರಿಯೆಗೆ ಅಡ್ಡಿಯುಂಟು ಮಾಡದಿದ್ದರೂ ಅವಳು ಉತ್ತೇಜನ ಕೊಡಲಿಲ್ಲ.

ಅವಳಲ್ಲಿ ಒಂದು ಕುಡಿ ಅರಳಿದ... ಅದರಿಂದಲಾದರೂ ಅವಳು ಸರಿಹೋ... ಬಹುದೇನೋ ಅನ್ನೋ ಆಶಾಭಾವನೆಯಿಂದ ಶಿವ... ಸಮಯ ಸಿಕ್ಕಾಗಲೆಲ್ಲ ಅವಳನ್ನು ಕೂಡಿದ. ಆದ... ದಾಂಪತ್ಯದ ಸವಿ ಮಾತ್ರ ಇರಲಿಲ್ಲ.

ಆ ರಾತ್ರಿ ಶಿವೂ ಅವಳ ಹತ್ತಿರ ಬಂದಾ... ರಮ್ಯ ಹೇಳಿದಳು "ನಾನು ನಾಳೆ ಅಮ್ಮ... ಮನೆಗೆ ಹೋಗ್ತೀನಿ'' ಶಿವೂ ಕೇಳಿದ "ಇದ್ಯಾ... ಹೋಗ್ತೀನಿ ಅಂತಿದ್ದೀಯ, ವಾಪಾಸು ಬರೋ... ಅಂತ್ಲೇನು.''

ರಮ್ಯ ಕ್ರೂರವಾಗಿ ಶಿವೂ ಕಡೆ ನೋಡಿ,



"ಹೌದ್ರಿ ವಾಪಾಸು ಬರಲ್ಲ ಅಂತಾನೇ ಅಂದ್ಕೊಳ್ಳಿ, ಬೇರೆ ಮದುವೆ ಮಾಡ್ಕೊಳ್ಳಿ. ಸುಖವಾಗಿರಿ, ನನ್ನ ಚಿಂತೆ ನಿಮಗೇಕೆ'' ಅಂತ ಗಟ್ಟಿಯಾಗಿ ಕಿರುಚಿದಳು.

ರಾಮ ರಾಮ ಅಂತ ತಲೆ ಚಚ್ಚಿಕೊಂಡ ಶಿವೂ.

ಸುಕನ್ಯಳಿಗೆ ಹೆರಿಗೆಯ ದಿನ ಸಮೀಪಿಸಿತ್ತು. ವಂದನ ಇದ್ದಿದ್ರಿಂದ ಅವಳಿಗೆ ಕೆಲಸದ ಹೊರೆ ಯಾವುದೂ ಬೀಳಲಿಲ್ಲ, ಮೊದಲನೆಯ ಹೆರಿಗೆ ತವರಿನಲ್ಲೇ ಆಗಬೇಕೆಂದಿದ್ದರೂ ಮನೋಹರ್ ಇಲ್ಲೇ ಆಗ್ಲಿ, ಇಲ್ದಿದ್ರೆ ನಾನು ಒಂಟಿಯಾಗ್ತೀನಿ ಅಂದಿದ್ದ.

ಆ ದಿನ ಸುಕನ್ಯ ಬಯಸಿದಳು ಅಂತ ಕೊಬ್ಬರಿ ಮಿಠಾಯಿ ಮಾಡಿದ್ದರು ವಂದನ. ಕೋಣೆಯಲ್ಲಿ ಕೂತು ಅವಳಿಗೊಂದು ಚೂರು ತಿನ್ನಿಸಿ ತಾನೊಂದು ಚೂರು ತಿನ್ನಿಸಿಕೊಂಡು ಆನಂದವಾಗಿದ್ದ ಮನೋಹರ್. ಮಗು ಬರೋ ದಿನಗಳು, ಬಂದಾದ ಅನಂತರದ ದಿನಗಳನ್ನು ನೆನೆಸಿಕೊಂಡು ಸುಖದ ದಿನಗಳ ನಿರೀಕ್ಷೆಯಲ್ಲಿದ್ದರು ಇಬ್ಬರೂ.

ಕೋಣೆಗೆ ಬಂದ ವಂದನ,

"ಯಾರೋ ಬಂದಿದ್ದಾರೆ'' ಅಂದರು.

ಯಾರು ಅಂದುಕೊಂಡು ಹೊರಬಂದ ಮನೋಹರ್. ಹಿಂದೆಯೇ ಬಂದಳು ಸುಕನ್ಯ.

ಬಾಗಿಲಿನಲ್ಲಿ ನಿಂತಿದ್ದ ರಮ್ಯಳನ್ನು ಗುರುತು ಹಿಡಿಯೋದೇ ಅಸಾಧ್ಯವಾಯ್ತು. ತೀರಾ ಬಿಳುಚಿಕೊಂಡು ಹೋಗಿದ್ದಳು. ಮಸುಕಾಗಿದ್ದ ಸೀರೆ ಉಟ್ಟು ಮುಖಕ್ಕೆ ಯಾವ ಅಲಂಕಾರವೂ ಇಲ್ಲದೆ ಇದ್ದಳು. ಅವಳು ಈ ಹಿಂದೆ ಈ ಮನೆಗೆ ಬರ್ತಿದ್ದಾಗ ಲಕ್ಷಣವಾಗಿ ಅಲಂಕರಿಸಿಕೊಂಡು ಬರ್ತಿದ್ದಳು.

ಅಚ್ಚರಿಯಿಂದ "ರಮ್ಯ ಬಾ'' ಅಂದ. ರಮ್ಯಳ ದೃಷ್ಟಿ ಸುಕನ್ಯಳ ಮೇಲಿತ್ತು.

"ಬಾ ರಮ್ಯ, ಅಲ್ಲೇ ನಿಂತೆಯೇಕೆ. ಇವ ನನ್ನ ಹೆಂಡತಿ ಸುಕನ್ಯ, ಸುಕನ್ಯ ಇವಳು ರಮ ಅಂತ ಪರಿಚಯಿಸಿದ.

ರಮ್ಯಳ ವಿಚಾರವಾಗಿ ಚಾಚೂ ತಪ್ ತಿಳಿಸಿದ್ದ ಸುಕನ್ಯಳಿಗೆ. ಆದ್ದರಿಂದ ಮನೋ ರಮ್ಯ ಅಂದೊಡನೆ ಅವಳಿಗೆ ಗೊತ್ತಾಯ್ತು.

ಸುಕನ್ಯ ರಮ್ಯಳ ಹತ್ತಿರ ಬಂದು ತೋ ಹಿಡಿದು "ಬನ್ನಿ ಕೂತ್ಕೊಳ್ಳಿ'' ಅಂದಳು.

ಸುಕನ್ಯಳ ತಾಯ್ತನದ ಕುರುಹನ್ನೇ ನೋಡು ಕುರ್ಚಿಲಿ ಕೂತಳು ರಮ್ಯ.

"ಯಾವಾಗ ಬಂದೆ ರಮ್ಯ, ಯಜಮಾನ ಬಂದಿದ್ದಾರಾ?'' ಅಂತ ಕೇಳಿದ.

"ಇಲ್ಲ, ಒಬ್ಬೇ ಬಂದಿದ್ದೀನಿ.''

ವಂದನ ಕೊಬ್ರಿ ಮಿಠಾಯಿ ತಂದುಕೊಟ್ಟ

"ಬೇಡ, ನಾನು ಸಿಹಿ ತಿನ್ನೋದು ಬಿಟ್ಟಿದ್ದೀ

"ಕಾಫಿ ಕುಡೀತೀರಾ?''

"ಸಕ್ಕರೆ ಇಲ್ಲದೆ.''

ಮನೋಹರ್ ಅಚ್ಚರಿಯಿಂದ,

"ಇದ್ಯಾವಾಗಿಂದ ರಮ್ಯ ಇದೆಲ್ಲ?'' ಅ ಕೇಳಿದ.

ಹಿಂದಿನ ಸ್ನೇಹ, ಏನಾದ್ರೂ ಮಾತಾಡ್ಕೊ ಅಂದುಕೊಂಡು ಸುಕನ್ಯ 'ಬಂದೆ' ಅಂದು ಅಲ್ಲಿಂ ಹೊರಟಳು.

"ಹೇಳು ರಮ್ಯ ಹೇಗಿದ್ದೀಯ.''

"ನೋಡಿದ್ರೆ ಗೊತ್ತಾಗುತ್ತಿಲ್ವ?''

"ಗೊತ್ತಾಗ್ತಿದೆ. ಆದರೆ ಏಕೆ, ಯಾರ ಮೆಚ್ಚಿಸೋಕೆ ಅಥವಾ ಯಾರ ಹೊಟ್ಟೆ ಉರಿಸೋ ಹೀಗೆ?''

"ಬದುಕಲ್ಲಿ ಆಸಕ್ತಿ ಕಳ್ಕೊಂಡೋರ ಇರೋದು ಹೀಗೇ.''

"ಅದು ನಿನ್ನ ಭ್ರಮೆ ರಮ್ಯ.''

"ಭ್ರಮೆಯಲ್ಲ ವಾಸ್ತವ. ನೀವಂತೂ ನನ್ ಸಂಪೂರ್ಣವಾಗಿ ಮರೆತು ಸುಕನ್ಯ ಜೊ ಆನಂದವಾಗಿದ್ದೀರ. ಆದರೆ ನಾನು...''

(ಸಶೇ

'ರಾಗಸಂಗಮ' ಲಾಟರಿ ಡ್ರಾ-೧೧೮

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1319 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಸಿ. ಪಿ. ಕುಸುಮ ಪ್ರಕಾಶ್,** 521, 15ನೇ ಮುಖ್ಯರಸ್ತೆ,, 8ನೇ ಅಡ್ಡರಸ್ತೆ, ಸರಸ್ವತೀಪುರಂ, ಮೈಸೂರು – 570 009.
2. **ಎಂ. ಕೃಷ್ಣ ಆಚಾರಿ, ಹಿರ್ಗುಂಡ**–574101, ಜಾರ್ಕಳಗ್ರಾಮ, ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
3. **ಎಸ್. ನಾಗರಾಜ ನಾಯಕ,** ಸರ್ಕಾರಿ ಪ್ರೌಢಶಾಲೆ, **ಕೆರೆಹಳ್ಳಿ** – 577 419, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
4. **ಆರ್. ಎಸ್. ನಿಶ್ಚಿತ,** C/o ಲಿಂಗಯ್ಯ, 650, 9ನೇ 'ಡಿ' ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಆರ್. ಪಿ. ಸಿ. ಲೇಔಟ್, ವಿಜಯನಗರ 2ನೇ ಹಂತ, **ಬೆಂಗಳೂರು** – 560 040.

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 17–4–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ರೇಖಾ ಕಾಖಂಡಕಿ ಅವರ

ಪಯಣದ ಹಾದಿ

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

'ಕೆಎಸ್ನಾರ್'ರವರಿಂದ ಉತ್ತರಕ್ಕೆ ಅರ್ಹವೆನಿಸಿಕೊಂಡ ಈ ಕೆಳಗಿನ ಎ

ಪ್ರಶ್ನೋತ್ತರ

'ಕೆಎಸ್ನಾರ್'

* ಕೆ. ಲೋಕೇಶ್, ಅಥಣಿ

ಅಂಕಲ್ ನಾನು ಇಲ್ಲಿಯವರೆಗೆ 99 ಪ್ರಶ್ನೆಗಳನ್ನು ಕೇಳಿದೆ, ಉತ್ತರ ಕೊಡಲಿಲ್ಲ. ಇದು 100ನೇ ಪ್ರಶ್ನೆ. ಉತ್ತರ?

– ಒಂದು ಶತಕದ ಸಾಧನೆ ಮುಗಿಯಿತೆಂದು ತೃಪ್ತಿಪಟ್ಟುಕೊಳ್ಳಿ.

* ವಿ. ಗಂಗಾಧರ್, ಬೆಳಕವಾಡಿ

ಹಾಲಿಗೆ ನೀರು ಹಾಕಿದ ಕೂಡಲೇ ಒಡೆದು ಹೋಗುವಂತಿದ್ದರೆ?

– ಗವುಳಿಗರ ಬಾಳು ಕಷ್ಟವಾಗುತ್ತಿತ್ತು.

* ಪದ್ಮ ಬಿ. ವಿ; ಶಿವಮೊಗ್ಗ

ಈಗಿನ ಪರೀಕ್ಷೆಯಲ್ಲಿ ಹುಡುಗಿಯರೇ ಉತ್ತೀರ್ಣರಾಗುವುದು ಜಾಸ್ತಿ. ಕಾರಣವೇನು?

– ಗಮನ ಗಂಡಸರಂತೆ ನಾನಾ ದಿಕ್ಕುಗಳಲ್ಲಿ ಹರಿಯುವುದಿಲ್ಲವಾದ್ದರಿಂದ.

* ಮುರುಳೀಧರ ಕೆ. ಎಸ್; ಮಂಗಳೂರು

ಮಿತ್ರನ ಮೂರನೇ ಮದುವೆಯ ಆಹ್ವಾನ ಪತ್ರಿಕೆ ಬಂದಿದೆ. ಹೋಗಲೆ?

– ಯಾವ ಕಾರಣದಿಂದ ಮೂರನೇ ಮದುವೆ ಎಂಬುದನ್ನು ಅರಿತು ಸೂಕ್ತವಾದರೆ ಹೋಗಿ ಹಾರೈಸಿ ಬನ್ನಿ.

* ಎಲ್. ರಮೇಶ, ಲಕ್ಕೂರು

ಮರಣ ಹೊಂದಿದವರಿಗೇಕೆ ಬಿರುದುಗ[ಳನ್ನು] ಕೊಡುತ್ತಾರೆ?

– ಬದುಕಿರುವವರಿಗೆ ಕೊಟ್ಟಾಗ ಬೇಡವೆ[ನ್ನು]ಬಿಟ್ಟರೆ?

* ಬಿ. ಗೋವಿಂದರಾಜ್, ಮಾಂಬಳ್ಳಿ

ಪ್ರತಿಯೊಬ್ಬರೂ ಲಂಚವನ್ನೇ ಕೇಳುವ[...] ಲಂಚವನ್ನು ಪಡೆಯದ ಬೆರಳೆಣಿಕೆಯಷ್ಟು ಜನ[...] ಏನೆಂದು ಕರೆಯಬೇಕು?

– ಬದುಕಲು ಬಾರದವರೆಂದು ಹೇ[...] ತಪ್ಪಾಗಲಾರದು. ಆದರೂ ಶಿಸ್ತಿನ ಬ[...] ಮುಖಂಡರವರು.

* ಆರ್. ಮಾನಸ, ಶ್ರೀರಂಗಪಟ್ಟಣ

ಪತ್ನಿಯ ಪ್ರೀತಿಯನ್ನು ಸಂಶಯಿಸೋ[...] ನ್ಯಾಯವೇ ಅಂಟೀ?

– ಪ್ರೀತಿಯನ್ನು ಸಂಶಯಿಸುವ[...] ಅಪರಾಧೀ ಮನೋಭಾವದವರು.

* ಚಂಪಾ ಶ್ರೀಕಾಂತ್, ಬೆಂಗಳೂರು

ಈಗಿನ ಕಾಲದ ಹುಡುಗರು ತ[...] ಸ್ಥಿತಿವಂತರಲ್ಲದಿದ್ದರೂ ಕಾರು, ಬಂಗಲೆ ಕೊ[...] ಮಾವನ ಮಗಳನ್ನೇ ಆರಿಸಲು ಕಾರಣವೇ[...]

– ತನ್ನಿಂದ ಸಾಧ್ಯವಾಗದ್ದನ್ನು ಪರ[...] ಬಯಸುವ ಕೀಳುತನ.

* ಸುರೇಶ್, ಗಂಗಾನಗರ

ಗುಡಿಯಲ್ಲಿ ಇರುವ ದೇವರಿ[...] ಪೂಜಾರಿಗೂ ವ್ಯತ್ಯಾಸವೇನು?

– ಅವರ ಹೆಸರಿನಿಂದ ಬದುಕುತ್ತಿ[...] ವ್ಯಕ್ತಿ.

* ಕೃಷ್ಣಮೂರ್ತಿ,
ಹುಣಸೂರು

ಸಾವಿನ ಭಯವನ್ನು ಗೆಲ್ಲುವುದು ಹೇಗೆ?

– ಆತ್ಮತೃಪ್ತಿಗೆ ಅಭ್ಯಾಸ ಮಾಡಿಕೊಂಡರೆ ಸಾವಿನ ಭಯ ದೂರವಾಗುವುದರಲ್ಲಿ ಸಂಶಯವಿಲ್ಲ.

* ಎಸ್. ಸುನೀತಾ,
ಬೆಂಗಳೂರು

ಮದುವೆಗೆ ಮುಂಚೆ ನನ್ನನ್ನು ಜಿಂಕೆ ಎನ್ನುತ್ತಿದ್ದ ನನ್ನವರು, ಈಗ ಎಮ್ಮೆ ಎನ್ನಲು ಕಾರಣ?

– ನಿಮ್ಮ ಹಿಂದಿನ ಫೋಟೋ ಇದ್ದರೆ ತೆಗೆದು ಹೋಲಿಸಿ ನೋಡಿಕೊಳ್ಳಿ.

* ಹನುಮೇಶ ಮಾ. ಜಗ್ಗಲ್,
ಮಂಗಳೂರ


ವಕೀಲನ ಕಾಯಕಕ್ಕಿರುವ ಬೆಲೆಗೂ ಕ್ಷೌರಿಕನ ಕಾಯಕಕ್ಕಿರುವ ಬೆಲೆಗೂ ಏನು ವ್ಯತ್ಯಾಸ?



– ಮಾತಿನ ಚಮತ್ಕಾರಕ್ಕೂ ಕೈಯ ಚಮತ್ಕಾರಕ್ಕೂ ಇರುವ ವ್ಯತ್ಯಾಸ.

* ಚಂದ್ರಶೇಖರ ಹಳಿಸಗರ,
ಶಹಾಪೂರ

ಪ್ರತಿಯೊಂದು ಜಾಹೀರಾತಿಗೂ ಹೆಣ್ಣನ್ನೇ ಏಕೆ ಉಪಯೋಗಿಸುತ್ತಾರೆ?



– ಹೆಣ್ಣನ್ನು ಹೆಣ್ಣೂ ನೋಡುತ್ತಾಳೆ, ಗಂಡೂ ನೋಡುತ್ತಾನೆ.

* ಅರುಣ್ ಆರ್;
ಪುತ್ತೂರು

ನಮ್ಮ ದೇಶದ ಪ್ರಧಾನಿಗಳು ಸಾಧಾರಣವಾಗಿ ಭಾರತದ ಸಾಂಪ್ರದಾಯಿಕ ಉಡುಗೆಯಲ್ಲಿದ್ದು, ವಿದೇಶದ ಮಂತ್ರಿಗಳನ್ನು ಭೇಟಿಯಾಗುವಂತಹ ಸಂದರ್ಭಗಳಲ್ಲಿ ಮಾತ್ರ ಸೂಟ್ ಧರಿಸುವ ರಹಸ್ಯವೇನು?

– ವಿದೇಶೀ ಅತಿಥಿಗಳಿಗೆ ಕೊಡುವ ಗೌರವ.

* ಶಶಿಕಲಾ,
ಮುಂಬಯಿ

ದೇವರನ್ನು ನೋಡಬೇಕೆನ್ನಿಸಿದೆ. ಏನು ಮಾಡಲಿ?

– ನಿಜವಾಗಿಯೂ ಕಷ್ಟ ಪಡುವವರಿಗೆ ಸಹಾಯ ಮಾಡಿ, ಅರಳುವ ಅವರ ಮುಖವನ್ನು ನೋಡಿ.

* ಮಕ್ಕಳ ಕಥೆ

ಮನೆಕೆಲಸ

ಎಂ. ಶಿವಾಜಿರಾವ್

ಒಂದು ಗ್ರಾಮದಲ್ಲಿ ಒಬ್ಬ ರೈತನಿದ್ದನು. ಅವನು ತೋಟಕ್ಕೆ ಹೋಗಿ ಬೆಳಗ್ಗಿನಿಂದ ಸಂಜೆಯವರೆಗೆ ದುಡಿಯುತ್ತಿದ್ದನು. ಅವನ ಹೆಂಡತಿ ಮನೆಯ ಕೆಲಸವನ್ನು ನಿಭಾಯಿಸುತ್ತಿದ್ದಳು.

"ನಿನ್ನ ಕೆಲಸ ಬಹಳ ಆರಾಮ, ಮನೆಯಲ್ಲಿ ಹಾಯಾಗಿರುತ್ತೀಯೆ. ನಾನಾದರೋ ಬಿಸಿಲಲ್ಲಿ ಹೋಗಿ ದುಡಿಯಬೇಕು'' ಎಂದು ರೈತನು ಪ್ರತಿದಿನ ಹೆಂಡತಿಗೆ ಹೇಳುತ್ತಿದ್ದನು. ಪ್ರತಿದಿನವೂ ಅವನು ಹೀಗೆಯೇ ಹೇಳುತ್ತಿರಲು ಅವನ ಹೆಂಡತಿಗೆ ಬೇಸರವಾಗಿ ಹೋಯಿತು. "ನಾಳೆ ನಾನು ತೋಟಕ್ಕೆ ಹೋಗುತ್ತೇನೆ. ನೀನು ಮನೆಯಲ್ಲಿಯೇ ಇದ್ದು ನನ್ನ ಕೆಲಸವನ್ನು ನಿಭಾಯಿಸು'' ಎಂದು ಅವಳು ಗಂಡನಿಗೆ ಹೇಳಿದಳು.

"ಓಹೋ, ಅದಕ್ಕೇನು, ಮನೆಯಲ್ಲಿ ತಣ್ಣಗೆ ಕುಳಿತಿರಬಹುದು.'' ರೈತನು ನುಡಿದನು.

"ಹಾಗೇ ಮಾಡು.''

ಮಾರನೆಯ ದಿನ ರೈತನ ಹೆಂಡತಿ ತೋಟಕ್ಕೆ ಹೊರಟಳು. ಹೋಗುವಾಗ "ಅನ್ನ ಮಾಡಿಡಿ. ಕೊಟ್ಟಿಗೆಯಲ್ಲಿರುವ ಹಸುವಿಗೆ ಹುಲ್ಲು ಹಾಕಿ. ಹಾಲನ್ನು ಕಾಯಿಸಿ, ಇಲ್ಲದಿದ್ದರೆ ಒಡೆದು ಹೋಗುತ್ತದೆ. ಎಲ್ಲವೂ ಜ್ಞಾಪಕ ಇದೆ ತಾನೆ?''

"ಓಹೋ, ಜ್ಞಾಪಕ ಇದೆ. ಮನೆಯ
ತಣ್ಣಗೆ ಕುಳಿತು ಬೇಕಾದಷ್ಟು ಕೆಲ
ಮಾಡಬಹುದು. ನೀನು ಹೋಗು.''


ರೈತನ ಹೆಂಡತಿ ತೋಟಕ್ಕೆ ಹೋದಳ
ಮೊದಲು ಯಾವ ಕೆಲಸ ಮಾಡಲಿ ಎಂ
ಯೋಚಿಸುತ್ತ ರೈತನು ಅನ್ನ ಮಾಡಿಬಿಡುವು
ಒಳ್ಳೆಯದು ಎಂದು ಯೋಚಿಸಿ ಒ
ಹೊತ್ತಿಸಿದನು. ಹಸೀ ಸೌದೆ, ಉರಿಯ
ಇಲ್ಲ. ಊದು ಕೊಳವೆಯಿಂದ ಊದಿ ಊ
ಸಾಕಾಯಿತು. ಕಣ್ಣಲ್ಲಿ ನೀರು ಬಂದಿತ
ಹೋಗಲಿ ಹಸುವಿಗೆ ಹುಲ್ಲು ಹಾಕೋ
ಎಂದು ಕೊಟ್ಟಿಗೆಗೆ ಹೋದನು. ಅ
ಹೊತ್ತಿಗೆ ಹಸು ಅಂಬಾ, ಅಂಬಾ ಎಂ
ಕೂಗಿಕೊಳ್ಳಲಾರಂಭಿಸಿತ್ತು. ಹಸುವಿಗೆ ಹು
ಹಾಕಿ ಬಂದನು. ಬಾವಿಯಿಂದ ನೀ
ತಂದಿಲ್ಲದಿರುವುದು ನೆನಪಾಯಿತು. ಹೋ
ಬಾವಿಯಿಂದ ನೀರು ತಂದನು. ಪುನಾ ಒ
ಹೊತ್ತಿಸಲು ಯತ್ನಿಸಿದನು. ದಪ್ಪಗಿ
ಸೌದೆಯನ್ನು ಚೂರು ಚೂರುಗಳನ್ನಾ
ಸಿಗಿಯಬೇಕಾಗಿತ್ತು. ಸಿಗಿಯಲು ಕುಳಿತನ
ಅಷ್ಟು ಹೊತ್ತಿಗೆ ಹುಲ್ಲು ತಿಂದು ಮುಗಿಸಿ
ಹಸು ನೀರಿಗಾಗಿ ಅಂಬಾ ಎಂ
ಕೂಗಲಾರಂಭಿಸಿತು. ಓಡಿಹೋಗಿ ಎರ
ಕೊಡ ನೀರು ಸೇದಿ ಬಾನೆಯಲ್ಲಿ ಸುರಿದನ

ಇನ್ನೂ ಒಲೆ ಹೊತ್ತಿಸಿರಲಿಲ್ಲ
ಮಧ್ಯಾಹ್ನದ ಹೊತ್ತಾಗಿತ್ತು. ಪುನಾ ಒ
ಹೊತ್ತಿಸಲು ಕುಳಿತನು. ಅರ್ಧ ಗಂಟೆ ಊದಿ
ನಂತರ ಒಲೆ ಹೊತ್ತಿಕೊಂಡಿತು. ಮೊದ
ಅನ್ನಕ್ಕಿಡಲೋ, ಹಾಲು ಕಾಯಿಸಲೊ ಎಂ
ಯೋಚಿಸಿ ಮೊದಲು ಅನ್ನಕ್ಕಿಡೋಣ ಎಂ
ಒಂದು ಪಾತ್ರೆಯಲ್ಲಿ ನೀರು ಹಾ
ಅನ್ನಕ್ಕಿಟ್ಟನು. ನೀರು ಕುದಿಯಲು ಅಕ್ಕಿ ಹಾ
ದನು. ಅವಸರದಲ್ಲಿ ಅಕ್ಕಿ ಆರಿಸಲ

ತೊಳೆಯಲು ಮರೆತುಬಿಟ್ಟನು. ಪುನಾ ಹಸು ಅಂಬಾ ಎಂದಿತು. ಹಾಳಾದ ಪ್ರಾಣಿ ಎಂದು ಬೈದುಕೊಳ್ಳುತ್ತ ಬಾವಿಯಿಂದ ಇನ್ನೆರಡು ಕೊಡ ನೀರು ಸೇದಿ ಹಾಕಿದನು. ಅಷ್ಟರಲ್ಲಿ ಅನ್ನ ಬೇಯುತ್ತಿರುವುದು ಕಾಣಿಸಿತು. ಓಡಿ ಹೋಗಿ, ಉರಿಯನ್ನು ಕಡಿಮೆ ಮಾಡಿ ಹೊರಗೆ ಬಂದನು. ಕೋಳಿಗಳಿಗೆ ಕಾಳು ಹಾಕಿಲ್ಲದಿರುವುದು ನೆನಪಾಯಿತು. ಕಾಳುಗಳನ್ನು ತೆಗೆದುಕೊಳ್ಳಲು ಕೊಟ್ಟಿಗೆಗೆ ಹೋದನು. ಅಲ್ಲಿ ಹಸುವು ಹುಲ್ಲನ್ನು ತಿಂದು, ನೀರು ಕುಡಿದು ಪುನಾ ಅಂಬಾ ಎನ್ನುತ್ತಿತ್ತು.

ಏನೋ ನೆನಪಾಗಿ ಅಡುಗೆ ಮನೆಗೆ ಓಡಿ ಬಂದನು. ಕೋಳಿ ತನ್ನ ಮರಿಗಳೊಂದಿಗೆ ಅನ್ನದ ಪಾತ್ರೆಗೆ ಬಾಯಿ ಹಾಕಿ ಅಗುಳುಗಳನ್ನು ಹೆಕ್ಕಿ ತಿನ್ನುತ್ತಿತ್ತು.

"ಹಾಳಾದವು!" ಎಂದು ಕೋಳಿ ಮತ್ತು



ಅದರ ಮರಿಗಳನ್ನು ಬೈದುಕೊಳ್ಳುತ್ತ, ಅವುಗಳನ್ನು ಹೊರಗೆ ಓಡಿಸಿದನು. ಓಹೋ ಹಾಲಿನ ನೆನಪಾಯಿತು. ಪುನಾ ಅಡುಗೆ ಮನೆಗೆ ಹೋದನು. ಕಾಯಿಸದೆ ಇದ್ದುದರಿಂದ ಹಾಲು ಒಡೆದು ಹೋಗಿತ್ತು. ಸಾಯಂಕಾಲ ಹೆಂಡತಿ ಮನೆಗೆ ಬಂದಳು. ವಿಷಯ ತಿಳಿದು ನಕ್ಕಳು.

"ಮನೆಕೆಲಸ ಸುಲಭವೆಂದು ಹೇಳಿದಿರಿ. ಯಾವ ಜವಾಬ್ದಾರಿಯೂ ಸುಲಭವಲ್ಲ" ಎಂದು ಗಂಡನಿಗೆ ಹೇಳಿದಳು.

ಡಬ್ಬ ಹುಡುಕಿದನು. ಕಾಳಿನ ಡಬ್ಬ ಸಿಗಲಿಲ್ಲ. ಹಾಳಾದವಳು ಎಲ್ಲಿ ಇಟ್ಟುಬಿಟ್ಟಳೋ ಎಂದು ಬೈದುಕೊಳ್ಳುತ್ತ ಪುನಾ, ಪುನಾ ಹುಡುಕ ತೊಡಗಿದನು. ಅನ್ನ ಬೇಯುವುದು ನೆನಪಾಯಿತು. ಓಡಿಹೋಗಿ ಅನ್ನದ ಪಾತ್ರೆ ಇಳಿಸಿದನು. ಅವಸರದಲ್ಲಿ ಬಿಸಿ ಪಾತ್ರೆಯನ್ನು ಕೈಯಲ್ಲೇ ಹಿಡಿದು ಕುಕ್ಕಿದನು. ಬೆರಳುಗಳು ಸುಟ್ಟು ಹೋದವು.

ಅಷ್ಟರಲ್ಲಿ ಕೋಳಿಗಳು ಹಸಿವಿನಿಂದ ಕೂಗಿಕೊಳ್ಳತೊಡಗಿದವು. ಇರು ಸ್ವಲ್ಪ ಎಂದು

ಸಿನಿ ಬಿಟ್ಸ್

ರೂಪಿಣಿ :
ಕನ್ನಡದ ಲಕ್ಕಿ ಹೀರೋಯಿನ್ ಈಗ 'ಬಿಜಿ'

ಮೂಲ ಮರಾಠಿಯವರಾಗಿ ಕೋಮಲ ಉಸ್‌ಗಾವ್‌ಕರ್ ಎನ್ನುವ ಹೆಸರಿನ ಹುಡುಗಿ ಕನ್ನಡದ 'ಒಲವಿನ ಆಸರೆ' ಚಿತ್ರದ ಮೂಲಕ

ಆಸರೆ' ಯಶಸ್ವಿ ಚಿತ್ರವೆಂದು ಅನ್ನಿಸಿಕೊಂ
ಈ ಚಿತ್ರದ ನಂತರ ರೂಪಿಣಿ ದೇವ,
ಹಾಡಿತು ಕೋಗಿಲೆ, ನೀನು ನಕ್ಕರೆ ಹಾಲು'ಸ
ಚಿತ್ರದಲ್ಲಿ ವಿಷ್ಣುಗೆ ಜೋಡಿಯಾಗಿ ಅಭಿ
ಸಿದರು. ಅಂಬರೀಶ್ ಜೊತೆಯಲ್ಲಿ 'ಮ
ಹೂವೇ' ಚಿತ್ರದಲ್ಲಿ ಆಕೆ ನಾಯಕಿ
ಅಭಿನಯಿಸಿದ್ದರೂ ಈ ಚಿತ್ರ ಈ
ಬಿಡುಗಡೆಯಾಗಿಲ್ಲ. ಈಗ 'ರಾಜಾಧಿ
ಚಿತ್ರವನ್ನು ಮುಗಿಸಿರುವ ರೂಪಿಣಿ ವಿಷ್ಣು ಜ



ವಿಷ್ಣುವರ್ಧನ್‌ಗೆ ನಾಯಕಿಯಾಗಿ ನಂತರ ದಾಕ್ಷಿಣಾತ್ಯ ಚಿತ್ರರಂಗದಲ್ಲಿ ವಿಪರೀತ 'ಬಿಜಿ' ಎನಿಸಿದರು. ಆಕೆಗೆ ತಮಿಳು ಚಿತ್ರಗಳಲ್ಲಿ ರಜನೀಕಾಂತ್ ಹಾಗೂ ಕಮಲಹಾಸನ್ ಅವರೊಂದಿಗೆ ನಾಯಕಿಯಾಗಿ ಅಭಿನಯಿಸುವ ಅವಕಾಶ ಸಿಕ್ಕಿತು. 'ಒಲವಿನ

'ರವಿವರ್ಮ' ಚಿತ್ರದಲ್ಲೂ ಮುಖ್ಯ ಪಾತ್ರವೊಂದ
ಕಾಣಿಸಿಕೊಂಡಿದ್ದಾರೆ. ಅಂಬರೀಶ್ ಜೊ
'ಸಪ್ತಪದಿ' ಚಿತ್ರದಲ್ಲೂ ಹಾಗೂ ರವಿಚಂದ್ರ
ನಟಿಸಿ ನಿರ್ದೇಶಿಸುತ್ತಿರುವ 'ಗೋಪಿಕೃ
ಚಿತ್ರದಲ್ಲೂ ನಟಿಸುತ್ತಿರುವ ರೂ

ಇಲ್ಲಿಯವರೆಗೂ ಹೆಚ್ಚಾಗಿ ಗ್ಲ್ಯಾಮರ್ ಪಾತ್ರಗಳಲ್ಲೇ ಕಾಣಿಸಿಕೊಂಡವರು, "ಬಹುಶಃ 'ಸಪ್ತಪದಿ' ಚಿತ್ರ ಬಿಡುಗಡೆಯಾದ ನಂತರ ನನ್ನ 'ಇಮೇಜ್' ಬದಲಾಗಬಹುದು. ಈ ವಿಭಿನ್ನ ಪಾತ್ರದಲ್ಲಿ ಜನರು ನನ್ನನ್ನು ಒಪ್ಪಿಕೊಂಡು ಚಿತ್ರ ಯಶಸ್ವಿಯಾದರೆ ನನ್ನ ವೃತ್ತಿ ಜೀವನದಲ್ಲಿ ಒಂದು ಬದಲಾವಣೆಯಾಗಬಹುದು. ಆಗ ಭಾವಪೂರ್ಣ ಪಾತ್ರಗಳಿಗೂ ನನ್ನನ್ನು ಆರಿಸಬಹುದು'' ಎಂದು ರೂಪಿಣಿ ಹೇಳುತ್ತಾರೆ. 'ರಾಜಾಧಿರಾಜ' ಹಾಗೂ 'ರವಿವರ್ಮ' ಚಿತ್ರಗಳಲ್ಲೂ ಎರಡು ಬೇರೆ ಬೇರೆ ರೀತಿಯ ಪಾತ್ರಗಳಲ್ಲಿ ರೂಪಿಣಿ ಕಾಣಿಸಿಕೊಳ್ಳುತ್ತಿದ್ದಾರೆ. ಅಂದಹಾಗೆ 'ರವಿವರ್ಮ' ಹಾಗೂ 'ಗೋಪಿಕೃಷ್ಣ' ಎರಡೂ ಚಿತ್ರಗಳು ತಮಿಳು ಚಿತ್ರಗಳ ರೀಮೇಕ್ ಆಗಿವೆ. (ಬ್ರಹ್ಮ ಹಾಗೂ ನಡಿಗನ್ ಚಿತ್ರಗಳು) ಅಂದಹಾಗೆ ಮೂಲ ತಮಿಳು ಚಿತ್ರದಲ್ಲಿ ಖುಶ್‌ಬೂ ನಿರ್ವಹಿಸಿದಂತಹ ಪಾತ್ರದಲ್ಲೇ ರೂಪಿಣಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗ ತಮಿಳು ಚಿತ್ರರಂಗದಲ್ಲಿ ಖುಶ್‌ಬೂ ನಂಬರ್ ಒನ್ ಸ್ಥಾನ ಪಡೆದ ನಾಯಕಿಯಾಗಿದ್ದು ರೂಪಿಣಿ ಆಕೆಗೆ ಪೈಪೋಟಿ ನೀಡುವುದು ಸಾಧ್ಯವಿಲ್ಲದಂತಾಗಿದೆ.

ಅಂದ ಹಾಗೆ ರೂಪಿಣಿ ಈಚೆಗೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ತನ್ನನ್ನು ಆಧರಿಸಿದ ಕನ್ನಡ ಚಿತ್ರ ಪ್ರೇಮಿಗಳಿಗೆ ಹಾಗೂ ಆಕೆಯ ಅಭಿಮಾನಿಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದರು. 'ಅಭಿಮಾನಿಗಳ ಆಶೀರ್ವಾದವಿದ್ದರೆ ಇನ್ನೂ ಒಳ್ಳೊಳ್ಳೆಯ ಚಿತ್ರಗಳಲ್ಲಿ, ಪಾತ್ರಗಳಲ್ಲಿ ಅಭಿನಯಿಸಿ ಜಯಶಾಲಿಯಾಗುವ ಭರವಸೆ ನನಗಿದೆ' ಎನ್ನುತ್ತಾರೆ ರೂಪಿಣಿ.

ಸುನಿಲ್ : ಮಾಲಾಶ್ರೀ ನೆರಳಿನಲ್ಲಿ

'ಶೃತಿ' ಚಿತ್ರದ ಮೂಲಕ ನಾಯಕನಾಗಿ 'ಎಸ್ಟಾಬ್ಲಿಷ್' ಆದ ಸುನಿಲ್ ಬಹಳ ಬೇಗನೆ ಬೇಡಿಕೆ, ಜನಪ್ರಿಯತೆಯನ್ನು ಗಳಿಸಿದರು. ಕೈತುಂಬ ಕೆಲಸವಿದ್ದಾಗ ಕೊಟ್ಟ ಕಾಲ್‌ಶೀಟ್‌ಗೆಲ್ಲ ಸರಿಯಾಗಿ ಹಾಜರಾಗದ ಸುನಿಲ್ ಬಗ್ಗೆ ಕೆಲವು ದೂರುಗಳು ಬಂದದ್ದೂ ನಿಜ. ಆದರೆ ಸುನಿಲ್ ಅವರಂತಹ ತರುಣ ನಾಯಕ ನಟ ಈ ಸಣ್ಣಪುಟ್ಟ ದೋಷಗಳನ್ನು ನಿವಾರಿಸಿಕೊಂಡು ತಮ್ಮ ವೃತ್ತಿಯನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗಬಹುದಾಗಿತ್ತು.



ಜಾನಕಿರಾಂ ಹಾಗೂ ಸಮೀವುಲ್ಲಾ ಅವರಂತಹ ಹಿರಿಯ ನಿರ್ಮಾಪಕರಿಗೂ ಸುನಿಲ್ ಸಮಸ್ಯೆಯಾಗಿಬಿಟ್ಟರು. ಈಗ ಸುನಿಲ್ ಮತ್ತೊಂದು ರೀತಿಯಲ್ಲಿ ಸುದ್ದಿಯಾಗುತ್ತಿದ್ದಾರೆ. ತಾರೆ ಮಾಲಾಶ್ರೀ ತಮ್ಮ ಮಾರ್ಕೆಟ್ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿರುವಂತೆಯೇ ಸುನಿಲ್‌ಗೆ ಮೊದಲಿಗಿಂತ ಹೆಚ್ಚಾಗಿ ಹತ್ತಿರವಾಗುತ್ತಿದ್ದಾರೆ. ವೃತ್ತಿ ಮಟ್ಟ ಮೀರಿರುವ ಅವರ ನಡುವಿನ ಸಂಬಂಧ ಹಲವಾರು ರೀತಿಯಲ್ಲಿ

ಉದ್ಯಮದಲ್ಲಿ ಪಿಸುಮಾತಿಗೆ ಕಾರಣವಾಗಿದೆ. ಈಗ ಸುನಿಲ್ ಅವರು ಹೆಚ್ಚಾಗಿ ಮಾಲಾಶ್ರೀ ಅಭಿನಯದ ಚಿತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಮಾಲಾಶ್ರೀಯ ಶಿಫಾರಸು ಕಾರಣ ಎಂದು ಹೇಳಲಾಗುತ್ತಿದೆ.

ಸುನಿಲ್ ಅವರು ಈಗ ಸ್ವಂತ ಹಾದಿಯನ್ನು ಹಿಡಿದು ತಮ್ಮ ವೈಯಕ್ತಿಕ ಪ್ರತಿಭೆಯನ್ನು ತೋರಿಸದಿದ್ದರೆ ಅವರು ಮುಂದೆ ಬೆಳೆಯುವುದು ಕಷ್ಟವಾಗಬಹುದು.

ಜಗ್ಗೇಶ್, ಪ್ರಿಯಾಂಕ ಯಶಸ್ಸಿನ ನಿರೀಕ್ಷೆ

ಇನ್ನು ಕೆಲವೇ ದಿನಗಳಲ್ಲಿ ಜಗ್ಗೇಶ್ ಮೊತ್ತಮೊದಲ ಬಾರಿಗೆ ನಾಯಕನಾಗಿ ನಟಿಸುತ್ತಿರುವ 'ಭಂಡ ನನ್ನ ಗಂಡ' ಬಿಡುಗಡೆಯಾಗಲಿದೆ. ರಾಜ್‌ಕಿಶೋರ್ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಜಗ್ಗೇಶ್‌ಗೆ ಅಭಿನಯ ಪ್ರದರ್ಶನಕ್ಕೆ ಸಾಕಷ್ಟು ಅವಕಾಶಗಳಿವೆ. ಈ ಚಿತ್ರದಲ್ಲಿ ಜಗ್ಗೇಶ್‌ಗೆ ಪಿಂಕಿ (ಪ್ರಿಯಾಂಕ) ನಾಯಕಿ.

ಕಳ್ಳಮಳ್ಳ, ಕಾಲಚಕ್ರ, ಹಾಗೂ ಮಲ್ಲಿಗೆಹೂವೇ ಚಿತ್ರಗಳಲ್ಲಿ ಅಭಿನಯಿಸಿದ ನಂತರ ಪ್ರಿಯಾಂಕ ಈಗ 'ಭಂಡ ನನ್ನ ಗಂ ಚಿತ್ರದಲ್ಲಿ ಜಗ್ಗೇಶ್ ಅವರೊಂದಿಗೆ ಹಾಗ 'ಝೇಂಕಾರ' ಚಿತ್ರದಲ್ಲಿ ಕುಮಾರ್ ಬಂಗಾರ ಅವರೊಂದಿಗೆ ನಾಯಕಿಯಾಗಿ ನಟಿಸುತ್ತಿದ್ದಾ 'ಭಂಡ ನನ್ನ ಗಂಡ' ಯಶಸ್ಸು ಪಡೆದರೆ ಪ್ರಿಯಾ ಕನ್ನಡ ಚಿತ್ರರಂಗದಲ್ಲಿಯೇ ನೆಲೆಯೂ ಬಹುದು.

ಜಗ್ಗೇಶ್ ಅವರು 'ತರ್ಲೆ ನನ್ಮಗ' ಚಿತ್ರದಲ ಈಗ ನಾಯಕನಾಗಿ ಅಭಿನಯಿಸಿದ್ದಾರೆ.

○ ಸ್ವಣ



ಕ್ರೀಡಾಂಗಣ

ಪಾಕಿಸ್ತಾನ : ಕ್ರಿಕೆಟ್‌ನ ವಿಶ್ವ ಚಾಂಪಿಯನ್

ಇಮ್ರಾನ್ ಖಾನ್:

ವಿಶ್ವದ ಅತ್ಯುತ್ತಮ ನಾಯಕ , ಆಲ್‌ರೌಂಡರ್

ಮೊನ್ನೆ ಆಸ್ಟ್ರೇಲಿಯಾದಲ್ಲಿ ಮುಕ್ತಾಯಗೊಂಡ ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಾಕಿಸ್ತಾನ ತಂಡ ಗೆಲುವು ಸಾಧಿಸಿ ಪ್ರಶಸ್ತಿ ಪಡೆದು ಗಮನಾರ್ಹ ಸಾಧನೆ ಮಾಡಿದೆ. ಪಾಕಿಸ್ತಾನ ಈ ಬಾರಿಯ ವಿಶ್ವಕಪ್‌ನಲ್ಲಿ ಆಡಿದ ಆರಂಭದ ಪಂದ್ಯಗಳಲ್ಲಿ ಅತಿ ನೀರಸ ಪ್ರದರ್ಶನ ನೀಡಿತು. ಆಗ ಪಾಕಿಸ್ತಾನ ಪ್ರಶಸ್ತಿ ಗಳಿಸುತ್ತದೆ ಎಂದು ಯಾರೂ ಊಹಿಸಲು ಸಾಧ್ಯವಿರಲಿಲ್ಲ. ಆದರೆ ಮೊದಲ ಐದು ಪಂದ್ಯಗಳಲ್ಲಿ ನೀರಸ ಪ್ರದರ್ಶನ ನೀಡಿದ ಪಾಕಿಸ್ತಾನ ಆಟಗಾರರು ನಂತರದ ಐದು ಪಂದ್ಯಗಳಲ್ಲಿ ರಣಕಲಿಗಳಂತೆ ಆಡಿದರು. ಪಾಕಿಸ್ತಾನ ವಿಶ್ವಕಪ್ ಸ್ಪರ್ಧೆಯಲ್ಲಿ ಗೆಲುವು ಸಾಧಿಸಲು ಇಮ್ರಾನ್ ಖಾನ್ ಅವರ ಸ್ಫೂರ್ತಿದಾಯಕ ನಾಯಕತ್ವವೇ ಕಾರಣವಾಯಿತು. ತಮ್ಮ ತಂಡದ ಯುವ ಆಟಗಾರರನ್ನೆಲ್ಲ ಬೆನ್ನು ತಟ್ಟುತ್ತ ಹುರಿದುಂಬಿಸಿ ಅವರಲ್ಲಿರುವ ಶ್ರೇಷ್ಠ ಪ್ರತಿಭೆಯನ್ನು ಹೆಕ್ಕಿ ತೆಗೆದ ಇಮ್ರಾನ್ ಎಲ್ಲರ ನಿರೀಕ್ಷೆಗಳನ್ನು ಹುಸಿ ಮಾಡಿ ಪಾಕಿಸ್ತಾನ ತಂಡ ಗೆಲ್ಲುವಂತೆ ಮಾಡಿದರು.

ಇಮ್ರಾನ್ ಖಾನ್‌ಗೆ ಈ ಬಾರಿಯ ವಿಶ್ವಕಪ್ ಗೆಲುವು ಅತ್ಯಾಕರ್ಷಕವಾಗಿತ್ತು. ಅವರು ತಮ್ಮ ತಾಯಿಯ ನೆನಪಿಗಾಗಿ ಲಾಹೋರ್‌ನಲ್ಲಿ ಕ್ಯಾನ್ಸರ್ ಆಸ್ಪತ್ರೆಯೊಂದನ್ನು ಕಟ್ಟಿಸಲು ನಿರ್ಧರಿಸಿದ್ದರು. ಈ ಗೆಲುವಿನಿಂದ ಇಮ್ರಾನ್ ಅವರ ಹಣ ಸಂಗ್ರಹಣೆಯ ಕೆಲಸ ಸುಲಭವಾಗಿ ಅವರು ತಮ್ಮ ಗುರಿ ಸಾಧಿಸಿಕೊಳ್ಳಬಹುದಾಗಿದೆ. ○ಕ್ರೀಡಾಪ್ರಿಯ



ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 12–4–92ರಿಂದ
ಶನಿವಾರ 18–4–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಖಿ, ಖು, ಖೆ, ಖೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಞ, ಝ, ಥ, ದೆ, ದೊ, ಚ, ಚಿ

ಮೇಷ

ವ್ಯಾಪಾರೋದ್ಯಮವು ಮುಂದಿಟ್ಟ ಹೆಜ್ಜೆ ಹಿಂದಿಡುವುದಿಲ್ಲ. ಆದರೆ ಮಾಡಬೇಕಾದ ಕೆಲಸಗಳನ್ನು ತುಸು ಮುಂದೂಡಿದರೂ ಅಡಚಣೆಗಳು ಹೆಚ್ಚುವವು. ಆದ್ದರಿಂದ ಎಚ್ಚರಿಕೆಯ ನಡೆ ಅತ್ಯಗತ್ಯ. ಹಣಕಾಸು ತೃಪ್ತಿಕರ. ಆದರೂ ಕೆಲವೊಮ್ಮೆ ಬಿಕ್ಕಟ್ಟು ಕಾಡಬಹುದು. ಕುಟುಂಬದಲ್ಲಿ ನಿಮ್ಮ ಮಾತಿಗೆ ಮರ್ಯಾದೆ ಹೆಚ್ಚುತ್ತದೆ. ಉದ್ಯೋಗದಲ್ಲಿರುವವರಿಗೆ ಅನ್ಯರ ಸಹಾಯ ಹಸ್ತ ಸಿಗುತ್ತಿದೆ.

ವೃಷಭ

ವ್ಯಾಪಾರೋದ್ಯಮದಲ್ಲಿ ಒಳ್ಳೆಯ
ಫಲಗಳೇ ಕಂಡುಬಂದರೂ ಹೆಚ್ಚಿನ ಅಲೆದಾಟ
ಶ್ರಮಗಳು ಹೊರೆಯಾಗುತ್ತವೆ. ಕೆಲವರಿಗೆ
ಸ್ನೇಹಿತರ ಕಾರಣದಿಂದಾಗಿ ಒಂದು ದಾರಿ
ತೆರೆದುಕೊಳ್ಳಬಹುದು. ಹಣಕಾಸಿನ ವಿಷಯದಲ್ಲಿ
ಯಾವುದೇ ರೀತಿಯ ತೊಂದರೆ ಇರಲಾರದು
ಹಲವು ಮೂಲಗಳಿಂದ ಹಣ ಹರಿದು ಬರುತ್ತದೆ
ಕುಟುಂಬದಲ್ಲಿ ಅಳತೆ ಮೀರಿದ ದುಡಿಮೆ ಇರುತ್ತದೆ

ಮಿಥುನ

ವ್ಯಾಪಾರೋದ್ಯಮ ರಂಗದಲ್ಲಿ ತುಸು
ಮುನ್ನಡೆ ಮತ್ತು ಶಾಂತಿ ಕಾಣುವಿರಿ. ಯಾ
ಕಾರ್ಯವನ್ನು ಬೇಕಾದರೂ ಸಾಧಿಸಬಲ್ಲೆ ಎಂ
ನಂಬಿಕೆ ಒಡಮೂಡುತ್ತದೆ. ಹೊರ ವ್ಯವಹಾರದ
ಲಾಭವಿದೆ. ಹಣಕಾಸಿನ ಸ್ಥಿತಿ ಅಭಿವೃದ್ಧಿ ಕಾಣುತ್ತ
ಮನೆಯಲ್ಲಿ ಯಾರಾದರೊಬ್ಬರ ದೇಹಾರೋ
ಕೆಟ್ಟು ಖರ್ಚು ನಿಮಗೆ ಬೀಳುತ್ತದೆ. ಮನೆಯ
ಎಲ್ಲವೂ ಎಣಿಸಿದಂತೆ ನಡೆಯುವುದಿಲ್ಲ. ಕಿರಿಕಿ
ಇರುತ್ತದೆ.

ಕಟಕ

ಉದ್ಯಮ ರಂಗದಲ್ಲಿ ಮುನ್ನಡೆಯ ಫಲಗ
ಗೋಚರಿಸುತ್ತಿದೆ. ಸ್ವಲ್ಪ ಅಲೆದಾಟ ಜೋರಾಗಿಯೆ
ಇರುತ್ತದೆ. ವ್ಯಾಪಾರದಲ್ಲಿ ಬೇರೆಯವರನ್ನು ನಂ
ಮಾಡುವ ಕೆಲಸದಲ್ಲಿ ಭಾರೀ ಎಚ್ಚರಿ
ತೋರಿಸಬೇಕು. ಆರ್ಥಿಕ ಸ್ಥಿತಿ ತೃಪ್ತಿಕರ. ಮನೆಯ
ಶುಭಕಾರ್ಯವೊಂದು ನಡೆಯುತ್ತದೆ. ಕುಟುಂ
ಜೀವನದಲ್ಲಿ ಜಯದ ಹಾದಿಯೇ ಕಾಣಬರುತ್ತಿ
ಪ್ರಯಾಣಗಳಿಂದ ಒಳ್ಳೆ ಲಾಭ ಉಂಟು.

ಸಿಂಹ

ಉದ್ಯಮ ರಂಗದಲ್ಲಿ ಸ್ವಲ್ಪ ಹೆಚ್ಚಿ
ಅಲೆದಾಟ, ಶ್ರಮಗಳು ಉಂಟಾಗುತ್ತ
ಸ್ನೇಹಿತರಿಂದಾಗಿ ಖರ್ಚುಗಳು ಹೆಚ್ಚುತ್ತವೆ. ಹೊ
ವ್ಯವಹಾರದಲ್ಲಿ ಕೆಲವು ಅಡಚಣೆಗಳು ಉಂಟ

ಎಲ್ಲ ವಿಷಯಗಳಲ್ಲೂ ತುಸು ನಿಧಾನವಾಗಿ ಯೋಚಿಸಿ ಮುಂದಡಿಯಿಡಿ. ಕುಟುಂಬದಲ್ಲಿ ಕೆಲವು ಮನಸ್ತಾಪಗಳು ಕಿರಿಕಿರಿ ತರುತ್ತವೆ. ಕೆಲವರು ಹಳೆಯ ವ್ಯವಹಾರ ಬಿಟ್ಟು ಹೊಸತು ಹಿಡಿದರೆ ಒಳಿತು.

ಕನ್ಯಾ

ಉದ್ಯಮ ರಂಗದಲ್ಲಿ ಅನುಕೂಲ ಸ್ಥಿತಿಯೇ ಕಾಣಬರುತ್ತಿದೆ. ಪೂರ್ವಜರ ಸ್ವತ್ತು ನಿಮ್ಮನ್ನು ಹುಡುಕಿ ಬರುತ್ತದೆ. ವ್ಯಾಪಾರದಿಂದ ಅಭಿವೃದ್ಧಿ, ಪ್ರಯಾಣದೊಂದಿಗೆ ಕೂಡಿ ಬರುತ್ತದೆ. ಹಣಕಾಸಿನ ವಿಷಯದಲ್ಲಿ ಹಲವು ಅಡೆತಡೆಗಳಿದ್ದರೂ ಮೂಲ ಧನಕ್ಕೇನು ತೊಂದರೆಯಿಲ್ಲ. ಹೊರ ವ್ಯವಹಾರದಲ್ಲಿ ಕೆಲವು ವಂಚನೆಗಳಾಗುವ ಸಂಭವವುಂಟು. ಉದ್ಯೋಗದಲ್ಲಿ ತೊಂದರೆಗಳು ಹೆಚ್ಚು.

ತುಲಾ

ಉದ್ಯಮದಲ್ಲಿ ಒಂದು ಶಾಂತ ಸ್ಥಿತಿ ತೋರಿಬರುತ್ತದೆ. ಅನಿರೀಕ್ಷಿತವಾದ ಲಾಭಗಳನ್ನು ಕಾಣುವಿರಿ. ವ್ಯಾಪಾರದಲ್ಲಿ ಅನುಕೂಲ ಬಂದೇ ಬಿಟ್ಟೀತು. ಹಣಕಾಸಿನ ಗಂಟಿಗೆ ಅಡೆತಡೆಯೇನೂ ಇರಲಾರದು. ಕುಟುಂಬ ಜೀವನ ತೃಪ್ತಿ ತುಂಬಿದ್ದಾಗಿರುತ್ತದೆ. ದಾಂಪತ್ಯ ಬದುಕಿನಲ್ಲಿ ಕೆಲವು ರೀತಿಯ ಕಕ್ಕಾಬಿಕ್ಕಿಗಳಿದ್ದರೂ ಸುಖಕ್ಕೆ ತಡೆಯಿಲ್ಲ; ಉದ್ಯೋಗದಲ್ಲಿ ಕೆಲಸದ ಭಾರ ಹೆಚ್ಚಿದ್ದರೂ ಲಾಭವಿದೆ.

ವೃಶ್ಚಿಕ

ಉದ್ಯಮ ರಂಗದಲ್ಲಿ ಹೆಚ್ಚಿನ ಆಕ್ಕರೆ ತೋರಿ ಕಾರ್ಯವೆಸಗಬೇಕಾಗಿದೆ. ವಿರೋಧಿಗಳ ಎದುರು ಮತ್ತು ಹೊಟ್ಟೆ ಕಿಚ್ಚಿನವರ ಎದುರು ನೀವು ಸೆಣಸಾಡಬೇಕಾಗುತ್ತದೆ. ಹಣಕಾಸಿನ ವಿಷಯದಲ್ಲಿ ಎಣಿಸಿದ್ದನ್ನು ಮಾಡಲು ನೀವು ಶಕ್ತರಾಗುವಿರಿ. ಆಗತ್ಯವಾದ ಹಣಕಾಸು ಸಕಾಲದಲ್ಲಿ ಸಿಗುತ್ತದೆ. ಸಂಸಾರದಲ್ಲಿ ಪ್ರಯತ್ನದಿಂದ ಕೆಲವು ಅದೃಷ್ಟ ತಿರುವುಗಳನ್ನು ಕಾಣಬಹುದು.

ಧನುಸ್ಸು

ಉದ್ಯಮದಲ್ಲಿ ಒಳ್ಳೆಯ ಫಲಗಳೇ ಎದ್ದು ಕಾಣುತ್ತಿವೆ. ವ್ಯವಹಾರ ಒಳಿತಿನೊಡನೆ ವಿಶೇಷ ಲಾಭವನ್ನೂ ಕಾಣುವಿರಿ. ಹಣಕಾಸಿನ ಚೀಲ ದಪ್ಪಗಾಗುತ್ತದೆ. ಹಳೆಯ ಸಾಲ ವಸೂಲಾಗುತ್ತದೆ. ಕುಟುಂಬ ಜೀವನದಲ್ಲಿ ಭಾರೀ ಎಚ್ಚರಿಕೆಯಿಂದ ತಕರಾರುಗಳನ್ನು ಬೆಳೆಸದೆ ವ್ಯವಹರಿಸಬೇಕು. ಉದ್ಯೋಗದಲ್ಲಿರುವವರು ಮನಸ್ತಾಪ ಕಾರಣವಾಗಿ ಕೆಲವು ತೊಂದರೆಗಳನ್ನು ಸಂಧಿಸುತ್ತರಾದರೂ ಗೆಲ್ಲುವರು.

ಮಕರ

ವ್ಯಾಪಾರೋದ್ಯಮ ರಂಗದಲ್ಲಿ ತುಂಬ ಚುರುಕಿನ ಕಾಲವಿದು. ನಿಮ್ಮ ದುಡಿಮೆಗೆ ತಕ್ಕ ಪ್ರತಿಫಲ ಸಿಗದೆ ಹೋಗದು. ಹಣಕಾಸಿನ ಪರಿಸ್ಥಿತಿಯಲ್ಲಿ ಬದಲಾವಣೆಯೇನೂ ಇಲ್ಲ. ಕುಟುಂಬದಲ್ಲಿ ನಿಮ್ಮ ಮೇಲೆ ಇನ್ನೂ ಹೆಚ್ಚಿನ ಜವಾಬ್ದಾರಿ ಬೀಳುತ್ತದೆ. ಮನೆಯಲ್ಲಿ ಶುಭಕಾರ್ಯವೊಂದು ನಡೆಯುತ್ತದೆ. ಇದರಿಂದ ಖರ್ಚು ಹೆಚ್ಚಿದರೂ ತೊಂದರೆಯೇನಲ್ಲ. ನೆರೆಹೊರೆಯಲ್ಲಿ ಸಹಕಾರವುಂಟು.

ಕುಂಭ

ಉದ್ಯಮದಲ್ಲಿ ಮುನ್ನಡೆ ಕಾಣುತ್ತಿದೆ. ಅಲೆದಾಟ ಹೆಚ್ಚಿದರೂ ಒಳ್ಳೆ ರೀತಿಯ ಲಾಭವನ್ನೇ ಗಳಿಸುವಿರಿ. ಕೆಲಸದವರಿಂದ ಒಳಿತಾಗುತ್ತದೆ. ಹಣಕಾಸಿನ ಗಂಟು ನಿರ್ಬಂಧದಲ್ಲಿ ತುಸು ಒದ್ದಾಡುತ್ತದೆ. ಆದರೂ ನಿಭಾಯಿಸಲು ನೀವು ಸಮರ್ಥರು. ಬಂಧು ಬಾಂಧವರೆಲ್ಲ ಸೇರಿ ಪ್ರಯಾಣ ಹೋಗಿ ಬರುವಿರಿ. ಕೊಡು ಕೊಳ್ಳುವುದರಲ್ಲಿ ಒಂದು ತಕರಾರು ಏಳಬಹುದು.

ಮೀನ

ಉದ್ಯಮದಲ್ಲಿ ನೀವು ಒಂದೊಂದೇ ಹೆಜ್ಜೆ ಮುನ್ನಡೆಯುತ್ತಿರುವುದು ಸ್ಪಷ್ಟವಾಗುತ್ತಿದೆ. ಹಣಕಾಸಿನ ವಿಷಯದಲ್ಲಿ ಆಗುವ ಒಂದು ಮಾರ್ಪಾಟು ಅಂತ್ಯದಲ್ಲಿ ನಿಮಗೆ ಅನುಕೂಲ ತರುತ್ತದೆ. ದೂರ ಪ್ರಯಾಣ ಅನಿವಾರ್ಯವಾಗುತ್ತದೆ. ಕುಟುಂಬ ಜೀವನದಲ್ಲಿ ಶಾಂತಿ ನೆಮ್ಮದಿ ಉಂಟು. ತಾಯಿ ಕುಟುಂಬದಿಂದ ಅನುಕೂಲ ಸಿಗುತ್ತದೆ. ಉದ್ಯೋಗದಲ್ಲಿ ಸಂಪಾದನೆ ಹೆಚ್ಚುವ ಅವಕಾಶವುಂಟು.

ನಿಮ್ಮ ಪತ್ರಗಳು

ಕರೇಗೌಡ್ರ ಹಾಲಪ್ಪ,
ನರಸಾಪುರ

29–3–92ರ 'ರಾಗ ಸಂಗಮ' ಸಂಚಿಕೆಯಲ್ಲಿ ವನಿತಾ ವಾಸುರವರ ಮುಖಪುಟ ಬಹಳ ಸುಂದರವಾಗಿ ಮೂಡಿಬಂದಿದೆ.

ಕುಮುದ ಅವರ 'ಬಲಿ' ಸಂಪೂರ್ಣ ಕಾದಂಬರಿ ಬಹಳ ಚೆನ್ನಾಗಿ ಮೂಡಿಬಂದಿದೆ. ಓದುಗರ ಮನಕ್ಕೆ ನೇರವಾಗಿ ತಾಗುತ್ತದೆ.

ಸುಮಂಗಳ ಪದ್ಮಾಶಾಲಿ,
ಮಣಿಪಾಲ

ಕುಮುದ ಅವರು ಬರೆದ 'ಬಲಿ' ಕಾದಂಬರಿಗೆ ನನ್ನ ಹೃದಯ ಸ್ಪಂದಿಸಿತು. ವಾಸಂತಿಯ ಬಾಳಿನ ಲ್ಲಾದ ಅನ್ಯಾಯಕ್ಕೆ ಮನ ಕರಗಿತು. ಬಾಳಿನಲ್ಲಿ ದೊಡ್ಡ ನೋವನ್ನು ಕಂಡು ಕೊನೆಗೂ ಬಲಿಯಾಗಿ ನಮ್ಮನ್ನು ಕಣ್ಣೀರು ಮಿಡಿಯುವಂತೆ ಮಾಡಿದ ಪಾತ್ರವದು.

ಸುರೇಶ ಪೂಜಾರಿ,
ನಾಸಿಕ್

ಕುಮುದ ಅವರ ಸಂಪೂರ್ಣ ಕಾದಂಬರಿ 'ಬಲಿ' ತುಂಬ ಸೊಗಸಾಗಿ ಮೂಡಿ ಬಂದಿತ್ತು. ಧಾರಾವಾಹಿಗಳು ತುಂಬ ಸುಂದರವಾಗಿ ಮೂಡಿ ಬರುತ್ತಿದೆ.

ಎನ್. ಸಿ. ಉಮೇಶ,
ಸವಳಂಗ

ನಟಿ ವನಿತಾ ವಾಸು ಅವರ ಮುಖಪುಟ 'ರಾಗಸಂಗಮ'ಕ್ಕೆ ಕಳೆ ತಂದಿತ್ತು. ಕುಮುದ ಅವರ ಸಂಪೂರ್ಣ ಕಾದಂಬರಿ 'ಬಲಿ' ಉತ್ಪ್ರೇಕ್ಷಿತವಾಗಿತ್ತು. ಮತ್ತು ಸಿನಿಬಿಟ್ಸ್ ವಿಭಾಗದಲ್ಲಿ ಗಾನ ಗಂಧರ್ವ ಡಾ. ರಾಜ್‌ರವರ 'ಜೀವನ ಚೈತ್ರ' ಸಿನಿಮಾ ವಿಚಾರ ತಿಳಿದು ತುಂಬ ಸಂತಸವಾಯಿತು. 'ಮದುವೆ ಮನೆಯಲ್ಲೊಂದು ಪ್ರೇಮ ಪ್ರಕರಣ' ನೀಳ್ಗತೆ ಅತ್ಯುತ್ತಮವಾಗಿತ್ತು.

ಎ. ಅಬುಬಕ್ಕರ್,
ಅನಿಲಕಟ್ಟೆ

ವನಿತಾ ವಾಸುರವರ ಮುಖಪುಟದ 'ರಾಗಸಂಗಮ' ತುಂಬ ಮುದ್ದಾಗಿತ್ತು.

ಕುಮುದ ಅವರ 'ಬಲಿ' ಸಂಪೂರ್ಣ ಕಾದಂಬರಿ ಬಹಳ ಅರ್ಥಪೂರ್ಣವಾಗಿತ್ತು.

ಮಂಜುನಾಥ ಉಡುಪ ಬರೆದ 'ಕಳವು' ಮಿನಿಕಥೆ ಉತ್ತಮವಾಗಿ ಮೂಡಿಬಂದಿದೆ.

ಎಸ್. ವಿ. ಸುಂದರಮ್ಮ
ಕೋಟಿಗುಡ್ಡ

ಮುಖಪುಟ ಚೆನ್ನಾಗಿ[...] ಮಂಜುನಾಥ ಉಡುಪರ ಒಂ[...] ಪುಟದ ಮಿನಿಕಥೆ 'ಕಳ[...] ಚೆನ್ನಾಗಿದೆ. ಹೊಸ ಧಾರಾವಾ[...] 'ಚಿನ್ನದ ಪುತ್ಥಳಿ' ಚೆನ್ನಾ[...] ಮೂಡಿ ಬರುತ್ತಿದೆ.

ಡಿ. ರಂಜಿತಾ,
ಮೈಸೂರು

ಕೆಂಗೇರಿ ಹೆಚ್. ನರಸಿಂ[...] ಮೂರ್ತಿಯವರು ಬರೆ[...] 'ಹಗಲುಗನಸುಗಳ ಹೊಸೆಯು[...]ತ್ತಿದ್ದೇನೆ' ಕವನ ವಾಸ್ತವತೆಯಿಂ[...] ಕೂಡಿದ್ದು, ಈ ರೀತಿಯ ಹಗಲ[...] ಗನಸುಗಳನ್ನು ಪ್ರತಿಯೊ[...] ಯುವಕ, ಯುವತಿಯರು ಒಮ್ಮೆ[...] ಯಾದರೂ ಹೊಸೆದು ಕು[...] ಪಟ್ಟಿರುತ್ತಾರೆ. ಅಂತವರಲ್ಲಿ ನಾನ[...] ಸಹ ಒಬ್ಬಳು. ಬರೆದವರಿ[...] ವಂದನೆಗಳು.


ಬಿ. ಎ. ಮೋಹನ್,
ಸೋಮವಾರಪೇಟೆ

ಶೇಷಗಿರಿ ಪಂಚಾಂಗ[...]ರವರ ನೀಳ್ಗತೆ 'ಮದುವೆ ಮನೆಯ[...]ಲ್ಲೊಂದು ಪ್ರೇಮ ಪ್ರಕರಣ[...] ಚೆನ್ನಾಗಿತ್ತು. ಒಂದು ಪುಟ[...] ಮಿನಿಕಥೆ 'ಕಳವು' ಎಲ್ಲೊ[...] ಓದಿದಂತಿತ್ತು.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53



"ಮೂರ್ಖ ಹಿಂದುಳಿದ ವರ್ಗದವನಾಗಿದ್ದೂ ಕಷ್ಟಪಟ್ಟು ಓದ್ತಿದ್ದಾನೆ."



"ವಿದ್ಯಾರ್ಥಿ ಡಾಕ್ಟರುಗಳು ಬರೋ ಹೊತ್ತಾಯ್ತು ಕೆಂಪಣ್ಣಾ, ಲ್ಯಾಟ್ರಿನ್ ಒಳಗೆ ಅಡಗಿಕೊಳ್ಳೋಣ ಬಾ."

ಹಾಸ್ಯ ಸಂಗಮ



"ಪ್ರಶ್ನೆ ಪತ್ರಿಕೆ ಸಿಕ್ಕಿಬಿಡ್ತಾ? ಛೇ, ಓದಿ ಸುಮ್ಮನೆ ಸಮಯ ಹಾಳು ಮಾಡಿಕೊಂಡೆನಲ್ಲಾ."



"ಆಸ್ಪತ್ರೆ ಬಿಲ್ ಕಟ್ಟೋಕೆ ನನ್ನ ಹತ್ರ ದುಡ್ಡಿಲ್ಲ ಸಾರ್, ಪೇಶೆಂಟ್‌ನ ಇಲ್ಲೇ ಬಿಟ್ಟು ಹೋಗ್ತೀನಿ."